ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ದಿನಾಂಕ ೧೫ನೇ ಮಾರ್ಚಿ ೧೯೮೪. ಫಾಲ್ಗುಣ ೨೫, ೧೯೦೫ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರಾದ (ಶ್ರೀ ಡಿ. ಬಿ. ಚಂದ್ರೇಗೌಡರವರು) ಪೀಠವನ್ನು ಅಲಂಕರಿಸಿದ್ದರು]

ವಿತ್ತೀಯ ಕಾರ್ಯಕಲಾಪಗಳು

೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಅನುದಾನುಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮತಕ್ಕೆ ಹಾಕುವುದು

DEMAND NO. 4—FISHERIES

SRI RAJAVARDHAN (Minister of State for Fisheries).—Sir, on the recommendation of the Governor, I beg to move :

> "That a sum not exceeding Rs. 4,26,63,000 on Revenue Account and Rs. 1,73,35,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Fisheries".

The Question was proposed

DEMAND NO. 7.—SMALL SCALE INDUSTRIES

SRI S. R. BOMMAI.—Sir, on the recommendation of the Governor I beg to move :

> "That a sum not exceeding Rs. 21,64,72,000 on Revenue Account and Rs. 10,35,35,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of Small Scale Industries"

The Question was proposed

DEMAND NO. 14—TAXES ON INCOME PROFESSIONS, SALES AND OTHER SERVICES

SRI RAMAKRISHNA HEGDE (Chief Minister).—Sir, on the recommendation of the Governor, I beg to move.

"That a sum not exceeding Rs. 3,48,70,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Taxes on Income, Professions, Sales and other Services"

DEMAND NO. 15—INSURANCE TREASURY AND ACCOUNTS ADMINISTRATION

Sir, on the recommendation of the Governor, I beg to move:

"That a sum not exceeding Rs. 6,49,99,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Insurance Trasury and Accounts Administration."

DEMAND NO 16—PENSION AND OTHER RETIREMENT BENEFITS

Sir, on the recommendation of the Governor, I beg to move:

"That a sum not exceding Rs. 1,09,25,00,000 on Revenue Account be granted to the Government to defray the charges which will come in course of payment during the financial year ending 31st day of March, 1985 in respect of Pension and Other Retirement Benefits."

DEMAND NO. 17—LOANS TO GOVERNMENT SERVANTS AND MISCELLANOUS LOANS

SIR on the recommendation of the Governor, I beg to move:

"That a sum not exceeding Rs. 33,49,00,000 on Capital account be granted to the Government to defray the charges which will come in course of payment during the financial year ending 31st day of March 1985 in respect of Loans to Government Servants and Miscellaneous Loans".

DEMAND NO. 18—MISCELLANEOUS GENERAL SERVIC

Sir, on the recommendation of the Governor, I beg to move:

"That a sum not exceeding Rs 7,52,73,000 on Revenue Account and Rs. 2,80,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Miscelloaneous Genreal Services".

DEMAND NO. 22—TAXES ON VEHICLES

Sir, on the recommendation of the Governor, I beg to move :

"That a sum not exceeding Rs. 2,99,90,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Taxes on Vehicles".

DEMAND NO. 23—POLICE AND FIRE SERVICES

Sir, on the recommendation of the Governor, I beg to move :

"That a sum not exceeding Rs. 71.38,09,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Police and Fire Services".

DEMAND NO. 24—JAILS

Sir, on the recommendation of the Governor, I beg to move :

"That a sum not exceeding Rs. 3,04.69,000 on Revenue Account be granted to the Government to defray the charges which will come in coure of payment during the financial year ending 31st day of March 1985 in respect of Jails".

The Question was proposed

DEMAND NO. 27.—MEDICAL SERVICES AND FAMILY WELFARE

SRI P.G.R. SINDHIA.–Sir, on the recommendation of the Governor I beg to move :

"That a sum not exceeding Rs. 1,09.21,96,000 on Revenue Account and Rs. 1,42,00,000 on capital account be granted to the Government to defray the charges which will come in course of payment during the financial year ending 31st day of March 1985 in respect of Medical Services and Family Welfare".

DEMAND NO. 28.—PUBLIC HEALTH

Sir, on the recommendation of the Governor, I beg to move :

"That a sum not exceeding Rs. 23,25,05,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Public Health".

The Question was proposed

DEMAND No. 36.—ELECTIONS

Sri RAMAKRISHNA HEGDE (Chief Minister).—Sir, on the recommendation of the Governor, I beg to move :

"That a sum not exceeding Rs. 2,68 00,000 on Revenue Account be granted to the Government to defray the charges whichwill come in course of payment during the financial year ending 31st day of March, 1985 in respect of Elections".

DEMAND NO. 37—GOVERNOR, MINISTERS AND PUBLIC SERVICE COMMISSION

Sir, on the recommendation of the Governor. I beg to move :

"That a sum not exceeding Rs. 86,26,000 on Revenue Account be granted to the Government to defray the charges which will come in course of payment during the financial year ending 31st day of March, 1985 in respect of Governor, Ministers and Public Service Commisson".

DEMAND No. 38—SECRETARIAT

Sir, on the recommendation of the Governor, I beg tomove :

"That a sum not exceeding Rs. 7,78,42,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Secretariat".

DEMAND No. 39—DISTRICT ADMINISTRATION

Sir, on the recommendation of the Governor. I beg to nove :

"That a sum not exceeding Rs. 11,98,70 000 on Revrnue Account be granted to the Government to defray the charges which will come in coure of payment during the financial year ending 31st day of March 1985 in respect of District Administration".

DEMAND No. 40—MISCELLANEOUS DEMANDS OF CHIEF MINISTER

Sir, on the recommendation of the Governor, I beg to move :

"That a sum not exceeding Rs. 7,80,46,000 on Revenue Account and Rs. 2,[illegible]0,14,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of "Miscellanous Demands of Chief Minister".

DEMAND NO. 41—DEMANDS OF PLANNING DEPARTMENT

Sir, on the recommendation of the Governor, I beg to move :

"That a sum not exceeding Rs. 10,59,84,000 on Revenue Account and Rs. 12,00,000 on Capital Account be granted to the Government to defray the charges which will come in course of payment during the financial year ending 31st day of March, 1985 in respect of Area Development District Level Sub Plan etc"

The Question was proposed

DEMAND NO. 5.—INDUSTRIES

(EXCLUDING SMALL SCALE INDUSTRIES AND SERICULTURE)

SRI S. R. BOMMAI (Minister for Industries).—Sir, on the recommendation of the Governor I beg to move :

"That a sum not exceeding Rs. 11,01,68,000 on Revenue Account and Rs. 10,18,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Industries, (Excluding Small Scale Industries and Sericulture)".

DEMAND NO. 6—MINES AND GEOLOGY

Sir, on the recommendation of the Governor, I beg to move :

"That a sum not exceeding Rs. 6,16,43,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Miners and Geology".

The Question was proposed

MR. SPEAKER.—All the demands are before the House for discussion. We have also calculated the time. For the information of the House Congress-I gets 175 minutes, BJP gets 40 minutes, CPI gets 10 minutes, CPM gets 10 minutes, Independents get 30 minutes, Janata gets 215 minutes including the reply.

SRI M. S. KRISHNAN.—How can we finish of all the demands in 10 minutes ? We are supposed to speak on Industries. We have to finish Chief Minister's demands, Health Department.

ಶ್ರೀ ಎಸ್ ಆರ್. ಬೊಮ್ಮಾಯಿ.—ನಮ್ಮ ಜನತಾ ಪಕ್ಷದ ಸದಸ್ಯರಿಗೆ ಕಾಲ ಕಡಿಮೆ ಮಾಡಿ ಬಾಕಿ ಸದಸ್ಯರಿಗೆ ಹೆಚ್ಚಿಗೆ ಕೊಡಿ.

SRI M. S. KRISHNAN.—You can carry on. I have no objection.

ಅಧ್ಯಕ್ಷರು.—ನಮ್ಮ ಲೆಕ್ಕಾಚಾರದ ಪ್ರಕಾರ ೫ ಗಂಟೆಯವರೆಗೆ ಮಾಡಿದ್ದೇವೆ ಹೆಚ್ಚು ಕಾಲ ಕುಳಿತರೆ ಹೆಚ್ಚು ಸಮಯ ಸಿಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಒಬ್ಬೊಬ್ಬರಿಗೆ ಒಂದೊಂದು ಡಿಮ್ಯಾಂಡ್‌ನಲ್ಲಿ ಒಂದೊಂದು ನಿಮಿಷ ಸಿಗುತ್ತದೆ.

MR. SPEAKER.—I have no objection if the House wants to sit up to 12 O' Clock. You will gain by that time. Now, the Hon Leader of Oppositon to initiate.

† ಶ್ರೀ ಎಂ. ವೀರಪ್ಪ ಮೊಯಿಲಿ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಕೈಗಾರಿಕೆಗೆ ಸಂಬಂಧಪಟ್ಟಿದ್ದು, ಆರೋಗ್ಯ, ಗೃಹಖಾತೆ ಮತ್ತು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಂಥ ಎಲ್ಲಾ ಖಾತೆಗಳ ಬೇಡಿಕೆಗಳನ್ನು ಇಟ್ಟಿದ್ದಾರೆ. ಈಗ ಸಮಯದ ಮಿತಿಯನ್ನೂ ಕೂಡ ತಾವು ಹಾಕಿಬಿಟ್ಟಿದ್ದೀರಿ. ಆದುದರಿಂದ ಇವತ್ತು ನಮ್ಮ ಕೆಲಸ ಬಹಳ ಕಷ್ಟವಾಗಿದೆ. ನಾವೂ ಕೂಡ ಕೆಲವು ಸಾರಿ ಆಲೋಚನೆ ಮಾಡಬೇಕಾದ್ದಿದೆ. ಈ ಸಾರಿ ಸದನದಲ್ಲಿ ನಡೆವಳಿಕೆ ಏನು ನಡೆದಿದೆ ಅದನ್ನು ನೋಡಿದರೆ ಇವತ್ತು ಪೂರ್ತಿ ಬಡ್ಜೆಟ್ಟಿನ ಬೇಡಿಕೆಗಳನ್ನೇ ಚರ್ಚೆ ಮಾಡುತ್ತಾ ಇದ್ದೇವೆ. ಇದು ಒಳ್ಳೆಯ ಪರಂಪರೆ. ಆದರೆ ಇಂತಹ ಸಂದರ್ಭದಲ್ಲಿ ಸದನವನ್ನು ಜಾಗ್ರತೆ ಕರೆದುಬಿಟ್ಟರೆ ಸದಸ್ಯರಿಗೆ ಉಪಕಾರವಾಗುತ್ತದೆ. ಏಕೆಂದರೆ ನಾವು ಅಸಹಕಾರ ಮಾಡಿದರೆ ತಾವು ಕಾಯುತ್ತಾ ಇರುತ್ತೀರಿ

ಶ್ರೀ ರಾಮಕೃಷ್ಣ ಹೆಗಡೆ.—ಜನವರಿ ೧೦ರಿಂದ ಕುಳಿತುಕೊಳ್ಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮಗೆ ಏನಾಯಿತು ಅಂದರೆ ರಾಜ್ಯಪಾಲರ ನಿರ್ಣಯದ ಮೇಲೆ ಮಾತನಾಡಬೇಕಾಗಿ ಬಂತು, ಆಮೇಲೆ ಜನರಲ್ ಬಜೆಟ್ ಮೇಲೆ ಮಾತನಾಡಬೇಕಾಗಿ ಬಂತು. ಈಗ ಮೂರನೇ ಸಾರಿ ಮಾನ್ಯ ಮುಖ್ಯ ಮಂತ್ರಿಗಳ ಬೇಡಿಕೆ ಮೇಲೆ ನಾವು ಮಾತನಾಡಬೇಕಾಗಿ ಬಂತು. ನನಗೆ ಏನು ಭಯ ಇತ್ತು ಅಂದರೆ ವಿಷಯ ಯಾವುದು ಸಿಗುವುದಿಲ್ಲ ಎನ್ನುವ ಭಾವನೆ ಇತ್ತು. ಜನವರಿ, ಫೆಬ್ರವರಿ ಹಾಗೂ ಮಾರ್ಚಿ ಈ ಎರಡೂವರೆ ತಿಂಗಳ ಅವಧಿಯಲ್ಲಿ ಹಿಂದೆ ಮಾತನಾಡಿದ್ದನ್ನೇ, ಪುನರಪಿ ಮಾಡಿದಂತಾಗುತ್ತದೆ ಎನ್ನುವ ಅಂಜಿಕೆ ಇತ್ತು. ಆದರೆ ಇನ್ನೂ ೩-೪ ಭಾಷಣಗಳಿಗಾಗುವಷ್ಟು ವಿಷಯವನ್ನು ಸರ್ಕಾರದವರು ವಿರೋಧಪಕ್ಷದವರಿಗೆ ಒದಗಿಸಿಕೊಟ್ಟಿದ್ದಾರೆ. ಚರ್ಚೆಯ ಮಟ್ಟಿಗೆ ಸಾಕಷ್ಟು ವಿಚಾರಗಳನ್ನು ನೀಡಿರುವುದಕ್ಕಾಗಿ ವಿಶೇಷವಾಗಿ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಆರೋಗ್ಯ ಇಲಾಖೆಯ ಮಟ್ಟಿಗೆ ಹೇಳುವುದಾದರೆ, ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರದ ಪ್ರಶ್ನೆ ಮುಖ್ಯವಲ್ಲ. ಕಳೆದ ೩೦-೩೫ ವರ್ಷಗಳಿಂದ ಅಪವಾದ ಇರಬಹುದು. ಸಾಮಾನ್ಯವಾಗಿ ಜನತೆಯ ಆರೋಗ್ಯವನ್ನು ನೋಡತಕ್ಕ ಈ ಇಲಾಖೆ, ಸಚಿವರಿಂದ ಹಿಡಿದು, ಕಾರ್ಯದರ್ಶಿಗಳಿಂದ ಹಿಡಿದು ನಿರ್ದೇಶಕರಾದಿಯಾಗಿ ಸರಿಯಾಗಿ ತಮ್ಮ ಕಾರ್ಯನಿರ್ವಹಣೆ ಮಾಡಿಲ್ಲವೆಂದು ಹೇಳಿದರೆ ಸತ್ಯಕ್ಕೆ ಅಪಚಾರವಾಗಿಲ್ಲವೆಂದು ಹೇಳುತ್ತೇನೆ. ಕೆಲವು ಮಂತ್ರಿಗಳು, ಕಾರ್ಯದರ್ಶಿಗಳು ಒಳ್ಳೆಯದನ್ನು ಮಾಡಿದವರು ಇರಬಹುದು. ಸಾಮಾನ್ಯವಾಗಿ ಅದರಿಂದ ಯಾವುದೇ ರೀತಿಯ ಒಂದು ಪರಿಣಾಮ ಈ ಇಲಾಖೆಯ ಮೇಲೆ ಆಗಿಲ್ಲವೆಂದು ಹೇಳುತ್ತೇನೆ. ಇದು ಬಹಳ ಪ್ರಾಮುಖ್ಯವಾದಂಥ ಇಲಾಖೆ, ೨೦೦೦ ಇಸವಿಯೊಳಗೆ ಆರೋಗ್ಯ ವಿಚಾರದಲ್ಲಿ ದೊಡ್ಡ ಚಳುವಳಿ ಮಾಡಬೇಕು. ಈ ಒಂದು ಇಲಾಖೆಗೆ ಪ್ರಪಂಚ ಆರೋಗ್ಯ ಸಂಸ್ಥೆಯಿಂದ, ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಕೊಡುತ್ತಿದ್ದಾರೆ. ಈ ಇಲಾಖೆ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕಾಗಿತ್ತೋ, ಅದಕ್ಕೆ ಕೊಡುತ್ತಿಲ್ಲ ಪ್ರಿವೆಂಟೀವ್ ಮೆಜರ್ಸ್‌ಗೆ ಆದ್ಯತೆ ಕೊಡುತ್ತಿಲ್ಲ. ಇವತ್ತು ಅಶುದ್ಧವಾದ ನೀರು ಕುಡಿದು ರೋಗಕ್ಕೆ ತುತ್ತಾಗುವಂಥ ೫೦ ಪರ್ಸೆಂಟ್ ಜನರನ್ನು ಬದುಕಿಸುವುದಕ್ಕೆ ಸಾಧ್ಯವಿತ್ತು. ಅದನ್ನು ಮಾಡಿಲ್ಲ ಬರೀ ಮೆಡಿಕಲ್ ಕಾಲೇಜುಗಳನ್ನು ವಿಸ್ತರಿಸುವುದರಿಂದ, ಸೀಟು ಕೊಡುವುದರಿಂದ ಉಳಿದಂಥ ೧೬ ಪಟ್ಟಣಗಳಲ್ಲಿ ಎಲ್ಲಿಗೂ ಆರೋಗ್ಯದ ಲಾಭವನ್ನು ಕೊಡುವುದಕ್ಕೆ ಖಂಡಿತವಾಗಿಯೂ ಆಗುವುದಿಲ್ಲ. [illegible] ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಡಿಸಿನ್ ಅಂಡ್ ಹೈಜಿನ್' ನಂತ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ತಾತ್ಕಾಲಿಕ ಬರತಕ್ಕಂಥ ರೋಗವನ್ನು ತಡೆಗಟ್ಟಬೇಕೆಂದು ಹಿಂದಿನಿಂದಲೂ ಒಂದು ಪ್ರೊಪೋಸಲ್ ಇತ್ತು. ಈಗ ಅವಕ್ಕೆ ಕ್ಲಿಪ್ತ ಸಮಯ ಬಂದಿದೆ. ಇಂಥ ಸಂಸ್ಥೆಯನ್ನು ಮಾಡುವುದರಿಂದ, ಅವಕ್ಕೆ ಜಾಗತಿಕ

ಆರೋಗ್ಯ ಸಂಸ್ಥೆಯಿಂದ, ಕೇಂದ್ರ ಸರ್ಕಾರದಿಂದ, ಇನ್ನಿತರ ಬೇರೆ ಬೇರೆ ಸಂಸ್ಥೆಗಳಿಂದಲೂ ಸಹಾಯ ಬರುತ್ತದೆ. ಇದರ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು, ಇಲ್ಲು ಕೂಡ ಅಂಥ ಒಂದು ಸಂಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈಗ ಕಲ್ಕತ್ತಾದಲ್ಲಿ ಅಂಥ ಸಂಸ್ಥೆ ಇದೆ. ಇನ್ನು ಕುಟುಂಬ ಯೋಜನೆಯಲ್ಲಿ ೧೯೭೪-೭೫ನೇ ಇಸವಿಯಲ್ಲಿ ನಮ್ಮ ರಾಜ್ಯ ಪ್ರಥಮ ಸ್ಥಾನದಲ್ಲಿತ್ತು. ಆದರೆ, ವರ್ಷ ಕಳೆದಂತೆ ಹಿಂದೆ ಬೀಳುತ್ತಿದ್ದೇವೆ. ಕುಟುಂಬ ಯೋಜನೆ ಸರಿಯಾಗಿ ಅನುಷ್ಠಾನಕ್ಕೆ ತರದಿದ್ದರೆ, ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳೂ ಪರಿಣಾಮಕಾರಿಯಾಗುವುದಿಲ್ಲವೆಂದು ಹೇಳುತ್ತೇನೆ. ತಾವು ಕಾರ್ಯದರ್ಶಿಗಳು ಮತ್ತು ಡೈರೆಕ್ಟರುಗಳ ಮಿತಿಯಲ್ಲಿ ಕಾರ್ಯಕ್ರಮ ಇಟ್ಟು ಕೊಳ್ಳಬಾರದು, ಶಾಸಕರು ಹಾಗೂ ಪರಿಣಿತರಿಂದ ಕೂಡಿದ ಒಂದು ಸಮಿತಿಯನ್ನು ಮಾಡಿ, ಕುಟುಂಬ ಯೋಜನೆ ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಆದಷ್ಟು ಒಂದು ಹೆಜ್ಜೆ ಮುಂದೆ ಹೋಗುವಂತೆ ಮಾಡುವ ಕಡೆಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮಂಗನಕಾಯಿಲೆ ಬಗ್ಗೆ ಹೇಳುವುದಾದರೆ, ಇದು ಶಿವಮೊಗ್ಗ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡುತ್ತಿದೆ. ೧೯೭೭ನೇ ಇಸವಿಯಲ್ಲಿ ಇದನ್ನು ತಡೆಗಟ್ಟುವುದಕ್ಕಾಗಿ ಸೂಕ್ತ ವ್ಯಾಕ್ಸಿನೇಷನ್ನುಗಳನ್ನು ತಯಾರುಮಾಡತಕ್ಕ ಕಾರ್ಖಾನೆಯೊಂದನ್ನು ಮಾಡಬೇಕೆಂಬ ಪ್ರೊಪೋಸಲ್ ಇದ್ದರೂ ಕೂಡ ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಿಲ್ಲ. ಇದನ್ನು ಮಾಡುವುದಕ್ಕೆ ಹೊರದೇಶದಿಂದ ಆಮದು ಮಾಡಿಕೊಳ್ಳುವಂಥ ಸಲಕರಣೆಗಳಾಗಲೀ ಯಂತ್ರೋಪಕರಣಗಳಾಗಲೀ ಇರಲಿಲ್ಲ. ಅದಕ್ಕೆ ಬೇಕಾದಂಥ ಜ್ಞಾನ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ವೈರಾಲಜಿ ಸಂಸ್ಥೆ ಪೂಣೆಯಲ್ಲಿ ಏನಿದೆ ಅಲ್ಲಿ ಸಿಗುತ್ತಿತ್ತು. ೨-೩ ಲಕ್ಷ ಖರ್ಚು ಮಾಡಿದ್ದರೆ ಈ ಒಂದು ಕಾರ್ಖಾನೆ ಪ್ರಾರಂಭವಾಗುತ್ತಿತ್ತು, ಅದನ್ನು ಮಾಡದೇ ಇರುವುದನ್ನು ನೋಡಿದರೆ ನಮ್ಮ ಆರೋಗ್ಯ ಇಲಾಖೆಯ ಕಾರ್ಯ ವೈಖರಿ ಏನೆಂಬುದು ನಮಗೆ ಗೊತ್ತಾಗುತ್ತದೆ. ನಮ್ಮ ದೃಷ್ಟಿಕೋನವನ್ನು ಬರೀ ಮೆಡಿಕಲ್ ಕಾಲೇಜಿಗೆ ಮಾತ್ರ ಸೀಮಿತಗೊಳಿಸಿದಂತಾಗಿದೆ. ಇದನ್ನು ನೋಡಿ ನಮ್ಮ ಜನಕ್ಕೆ ತಲೆ ತಿರುಗುವಂತಾಗಿದೆ, ಬೆಳ್ತಂಗಡಿಯಲ್ಲಿ ಈ ಒಂದು ಕಾಯಿಲೆ ಪ್ರಾರಂಭವಾದ ಕೂಡಲೇ ನಿರ್ಣಯ ತೆಗೆದುಕೊಂಡಿದ್ದರೂ ಒಂದು ವರ್ಷದೊಳಗೆ ಇದನ್ನು ಪ್ರಾರಂಭ ಮಾಡಬಹುದಾಗಿತ್ತು, ಈಗಲಾದರೂ ಸರ್ಕಾರದವರು ಇದರ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕ್ಯಾಪಿಟೇಷನ್ ಫೀ ಬಗ್ಗೆ ಸಾಕಷ್ಟು ವ್ಯಾಖ್ಯಾನ ಈ ಮನೆಯಲ್ಲಿ ಆಗಿದೆ. ಆದರೆ, ಈ ಸದನವನ್ನು ತಪ್ಪುದಾರಿಗೆ ಎಳೆಯುವಂಥ ಕೆಲಸವನ್ನು ಸಚಿವರಾಗಲೀ, ಅಧಿಕಾರಿಗಳಾಗಲೀ ಮಾಡಬಾರದು. ನನಗೆ ಯಾವ ಸಂಸ್ಥೆಯ ಮೇಲೂ ಪ್ರೆಜ್ಯೂಡೀಸ್ ಇಲ್ಲ. We should not play fraud on the people or on this House. ಏಕೆಂದರೆ, ಕಳೆದಬಾರಿ ಕೂಡ ಹೇಳಿದ್ದೇನೆ. ಕೆ.ಎಂ.ಸಿ. ಮಣಿಪಾಲ್ ಒಂದೇ ಸಂಸ್ಥೆ, ಮಣಿಪಾಲ್ ಸೆಕ್ಷನ್ ಮತ್ತು ಮಂಗಳೂರು ಸೆಕ್ಷನ್ ಬೇರೆ ಬೇರೆ ಇದೆ ಒಂದೇ ಕಾಲೇಜೆಂದು ಟ್ರೀಟ್ ಮಾಡಿದ್ದಾರೆ. ಹಿಂದೆ ನಾವು ಏನು ನಿರ್ಣಯ ತೆಗೆದುಕೊಂಡಿದ್ದೆವು, ನೀವು ಅದೇ ನಿರ್ಣಯವನ್ನು ತೆಗೆದುಕೊಂಡಿದ್ದೀರೆಂದು ಹೇಳಿದ್ದೀರಿ. I could have moved privilege Motion against the Hon. Minister. I thought he is an young Minister. He would not have been fed with proper information.

ಆದುದರಿಂದ ಪ್ರಿವಿಲೇಜ್‌ನಂಥ ದೊಡ್ಡ ಪ್ರಹಾರವನ್ನು ಸಚಿವರ ಮೇಲೆ ಏತಕ್ಕೆ ಮಾಡುವುದು ಎಂದು ತರಲಿಲ್ಲ. ಅದೂ ಇತ್ತೀಚೆಗೆ ನಡೆದಿರತಕ್ಕದ್ದು, ಬಹಳ ಸಮಯವೇನೂ ಆಗಿಲ್ಲ. ಮಣಿಪಾಲ್‌ನ ಕಸ್ತೂರಬಾ ಮೆಡಿಕಲ್ ಕಾಲೇಜಿಗೆ ಸೇರಿದ ಮೆಡಿಕಲ್ ಡೈರೆಕ್ಟರ್‌ರವರು ಹೊಸ ದೆಹಲಿಯಲ್ಲಿರತಕ್ಕ ಮೆಡಿಕಲ್ ಕೌನ್ಸಿಲ್ಲಿನ ಕಾರ್ಯದರ್ಶಿಯವರಿಗೆ ಕರೆಸ್ಪಾಂಡ್ ಮಾಡಿದ್ದಾರೆ, ಅವರು ಎಷ್ಟರ ಮಟ್ಟಿಗೆ ಮಾಡಿದ್ದಾರೆಂಬುದನ್ನು ತಾವು ನೋಡಬಹುದು. They are playing fraud and you also abet this fraud. ಅಡ್ಮಿಷನ್ ಬಗ್ಗೆ ಏನು ಹೇಳಿದ್ದಾರೆಂದರೆ I have got a letter addressed to the Secretary, Medical Concil of India, New Delhi by the Medical Director, Kasturba Medical College, Manipal. It reads.

"With rerfernce to the above subject we are furnishing here below the information sought by you regarding admission to the First MBBS course ie., Anatomy, Biochemistry psychology during the academic year 1983-84,"

This is the letter dated 23-1-84 written perhaps when we were discussing the Capitation Fee Bill. ಆ ಬಿಲ್ಲಿನ ಬಗ್ಗೆ ಚರ್ಚೆ ಮಾಡುವಾಗ ಕಮ್ಯುನಿಕೇಷನ್ ಹೋಗಿದೆ. ಅದರಲ್ಲಿ ಏನು ಹೇಳುತ್ತಾರೆಂದರೆ ಮಣಿಪಾಲ್ ಸೆಕ್ಷನ್‌ನಲ್ಲಿ ಹುಡುಗರು ೮೨ ಮತ್ತು ಹುಡುಗಿಯರು ೭೨ ಅಂದರೆ ಒಟ್ಟು ೧೫೪, ಮಂಗಳೂರು ಸೆಕ್ಷನ್‌ನಲ್ಲಿ ಹುಡುಗರು ೧೦೦ ಮತ್ತು ಹುಡುಗಿಯರು ೪೦ ಅಂದರೆ ಒಟ್ಟು ೧೪೦. ಹೀಗಾದರೆ ಒಂದೇ ಕಾಲೇಜು ಹೇಗೆ ಆಗುತ್ತದೆ ತಾವು ಏತಕ್ಕೆ ಸರ್ಟಿಫಿಕೇಟ್ ಕೊಡುವುದಕ್ಕೆ ಹೋಗುತ್ತೀರಿ. ಇದು ಹೋಗಿರತಕ್ಕ ಕಮ್ಯುನಿಕೇಷನ್. ಆದುದರಿಂದ ಇವತ್ತು ಸತ್ಯವನ್ನು ಮರೆಮಾಚುತ್ತಿದ್ದೀರಿ ಪ್ರಯತ್ನವನ್ನು ಯಾರೂ ಕೂಡ ಮಾಡಬಾರದೆಂದು ಹೇಳುತ್ತೇನೆ. If you still hold or maintain that it is one College I have no option except to move a privilege motion. ಆದುದರಿಂದ ದಯಮಾಡಿ ಇದರ ಬಗ್ಗೆ ಸದನಕ್ಕೆ ಕೊಡತಕ್ಕ ಮಾಹಿತಿಯನ್ನು ಮರೆಮಾಚಲಿಕ್ಕೆ ಹೋಗಬೇಡಿ ಎಂದು ಹೇಳುತ್ತೇನೆ. ಇನ್‌ಟೇಕ್ ವಿಚಾರದಲ್ಲಿ ಏನಾಗಿದೆ ಎಂದರೆ ೧೬೦ ಸೀಟುಗಳನ್ನು ಮಣಿಪಾಲ್ ಸೆಕ್ಷನ್‌ಗೆ ಕೊಡುವ ಬಗ್ಗೆ ಮೆಡಿಕಲ್ ಕೌನ್ಸಿಲ್ ಅಪ್ರೂವಲ್ ನೀಡಲಿಲ್ಲ. ಒಮ್ಮೆಗೇ ೧೦೦-೧೫೦ ಸೀಟುಗಳನ್ನು ಜಾಸ್ತಿ ಮಾಡಿದ್ದಾರೆ. ಮಂಗಳೂರು ಸೆಕ್ಷನ ನಲ್ಲಿ ೧೪೦ ಎಂದು ಮಾಡಿದ್ದಾರೆ, ಆದರೆ ವಾಸ್ತವವಾಗಿ ಅಲ್ಲ. ಕೂಡ ೧೩೦ ಇವೆ, ಆದರೂ ೧೦ ಸೀಟುಗಳನ್ನು ಜಾಸ್ತಿ ಮಾಡಿ ಅಡ್ಮಿಟ್ ಮಾಡಿದ್ದಾರೆ. ಹೀಗಾದರೆ ಆ ಕಾಲೇಜುಗಳ ಮೇಲೆ ಸರ್ಕಾರದ ಹತೋಟಿ ಏನಿದೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಮಾತ್ರ ಯಾವಾಗಲೂ ಹೆಚ್ಚಿನ ಸೀಟುಗಳಿಗೆ ಮಂಜೂರಾತಿ ನೀಡಿಲ್ಲ. ಇದೇ ಪ್ರಕಾರ ಬೇರೆ ಕಾಲೇಜುಗಳಲ್ಲೂ ಇರಬಹುದು. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಇದರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕು. ಕ್ಯಾಪಿಟೇಷನ್ ಫೀ ಏನು ತೆಗೆದುಕೊಳ್ಳುತ್ತಾರೆ ಅದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಿ. ಇಲ್ಲದಿದ್ದರೆ ಮೋಸ ವಂಚನೆಗೆ ಕೊನೆ ಎಲ್ಲಿದೆ ? ಈ ರೀತಿ ಮಾಡತಕ್ಕದ್ದನ್ನು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಬಹುದೆ ? You have to enquire as to what extent these medical colleges are cheating the people, playing fraud upon them. I would say all these private medical colleges are doing very big lobby ಅದನ್ನು ನಮ್ಮ ಮೇಲೆ ಕೂಡ ಪ್ರಚಾರ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ. Thy will try to coerce and intimidate us also. ಇದೆಲ್ಲ ಮಾಡುತ್ತಾರೆ. ಆದರೆ ಇವತ್ತು ಮಾನವೀಯತೆಯ ದೃಷ್ಟಿಯಿಂದ ನಾವು ಅದನ್ನು ಎದುರಿಸಬೇಕಾಗಿದೆ. we connot be cowed down or surrender to the wishes of the vested interests. You have surrendered totaloy them. ಬೇರೆ ಬೇರೆ ಕ್ಷೇತ್ರಗಳಲ್ಲೂ ವೆಸ್ಟೆಡ್ ಇಂಟರೆಸ್ಟ್ ಇವೆ. ಆದರೆ ಈ ಕ್ಷೇತ್ರದಲ್ಲಿ ವ್ಯಾಪಕವಾಗಿದ್ದಾರೆ. ಅದನ್ನು ಎದುರಿಸತಕ್ಕ ಶಕ್ತಿ ನಿಮ್ಮಲ್ಲಿ ಇಲ್ಲವೆಂದು [illegible] ಹೆಚ್ಚಿನ [illegible] ತಾವು ಇಡಬೇಕಾಗು [illegible] ಮತ್ತು [illegible] ಕೂಡ [illegible] ದೊಡ್ಡ [illegible] ಹಾಗೆ [illegible] ಬೇರೆ ದೊಡ್ಡ ಕಾಲೇಜುಗಳಿಗೆ ಅಭ್ಯಾಸ ಮಾಡಲಿಕ್ಕೆ ಅವಕಾಶ ಇದೆ. ಈ ದಿಸೆಯಲ್ಲಿ ನಿಮ್ಮ ದೃಷ್ಟಿ ಇರಬೇಕಾಗುತ್ತದೆ. ನಿಮ್ಮ ದೃಷ್ಟಿ ಕೇವಲ ಜನರ ಮೇಲೆ ಅಥವಾ ವಿದ್ಯಾರ್ಥಿಗಳ ಮೇಲೆ ಅಲ್ಲ. ನಿಮ್ಮ ದೃಷ್ಟಿ ಯಾರ ಮೇಲೆ ಇರಬೇಕೆಂದರೆ ಯಾರು ಹಣ ಮಾಡುತ್ತಾರೆ ಅವರ ಮೇಲೆ ಇರಬೇಕು. ನಿಮ್ಮ ದೃಷ್ಟಿಕೋನ ಈ ರೀತಿ ಬದಲಾವಣೆ ಆಗಬೇಕಾಗಿದೆ. ಈಗ ಇರತಕ್ಕ ನಿಮ್ಮ ದೃಷ್ಟಿಕೋನ

ದಿಂದ ಜನರ ಹಿತಾಸಕ್ತಿ ಸಾಧನೆಯಾಗುತ್ತಿಲ್ಲವೆಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗಿದೆ. ಇನ್ನು ಆಸ್ಪತ್ರೆಗಳ ಬಗ್ಗೆ ಹೇಳುವುದಾದರೆ, ನಾನು ಟೀಚಿಂಗ್ ಆಸ್ಪತ್ರೆಗಳ ಬಗ್ಗೆ ಹೇಳಬಯಸುತ್ತೇನೆ. ಮೆಡಿಕಲ್ ಕೌನ್ಸಿಲ್‌ನ ರೂಲ್ಸ್ ಪ್ರಕಾರ ವರ್ಷಕ್ಕೆ ೧೦೦ ಅಡ್ಮಿಷನ್ ತೆಗೆದುಕೊಳ್ಳಬೇಕೆಂದು ಇದೆ. ಅಂದರೆ ೧.೭ ಬೆಡ್ಸ್ ಪ್ರಕಾರ ತೆಗೆದುಕೊಳ್ಳತಕ್ಕದು. ಇದಕ್ಕೆ ಏನೇನು ಅವಶ್ಯಕತೆ ಇರಬೇಕೆಂಬುದನ್ನು ಇಲ್ಲಿ ಸ್ಪಷ್ಟವಾಗಿ ಕಾಣಿಸಿರುವುದರಿಂದ ಅದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. It may be distributed for the purposes of clinical teaching under different discipline. It is not the question of luxury It is the question of honesty that we have to implement it. ಈ ಫಾರ್ಮುಲವನ್ನು ನಾವು ಅನ್ವಯ ಮಾಡಬೇಕಾಗುತ್ತದೆ. ಇದನ್ನು ನಾವು ಅನುಷ್ಠಾನ ಮಾಡದಿದ್ದರೆ ಏನಾಗುತ್ತದೆಂಬ ವಿವರಕ್ಕೆ ನಾನು ಆಮೇಲೆ ಬರುತ್ತೇನೆ. ಇತ್ತೀಚೆಗೆ ಏನು ಮಾಡಿದ್ದೀರೆಂದರೆ ಬೌರಿಂಗ್ ಆಸ್ಪತ್ರೆಯನ್ನು ಪ್ರೈವೇಟ್ ಮ್ಯಾನೇಜ್‌ಮೆಂಟಿಗೆ ಕೊಡುವ ನಿರ್ಧಾರ ಮಾಡಿದ್ದೀರಿ. ಇಂಡಿಯನ್ ಮೆಡಿಕಲ್ ರೂಲ್ಸ್ ಪ್ರಕಾರ ಈ ಒಂದು ಆಸ್ಪತ್ರೆಯನ್ನು ಎರಡು ಕಾಲೇಜುಗಳಿಗೆ ಕೊಡುವುದಕ್ಕಾಗುವುದಿಲ್ಲ. ಕೊಟ್ಟರೆ ಆ ಕಾಲೇಜುಗಳನ್ನು ಡೀರೆಕಗ್ನೈಸ್ ಮಾಡಬೇಕಾಗುತ್ತದೆ. ವೈದ್ಯರನ್ನು ಕಳುಹಿಸುತ್ತೇವೆಂದರೆ ಆ ಪ್ರಶ್ನೆ ಪ್ರತ್ಯೇಕ. It is not the question of re presentation of doctors, Don't produce them, We should main tain the standards. That is important. ಇಂಡಿಯನ್ ಮೆಡಿಕಲ್ ಕೌನ್ಸಿಲ್ಲಿನ ರಿಕ್ವೈರ್‌ಮೆಂಟ್ ಪ್ರಕಾರ ಮಾಡಬೇಕು. ಅಲ್ಲಿಗೆ ವೈದ್ಯರಲ್ಲದೆ ಬೇರೆ ಯಾರು ಹೋಗುತ್ತಾರೆ ? ಅವರು ಕೂಡ ಕೆಲವು ಮನವಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ, ಎರಡು ಕಾಲೇಜುಗಳಿಗೆ ಈ ಒಂದು ಆಸ್ಪತ್ರೆಯನ್ನು ಕೊಡುವುದಕ್ಕಾಗುವುದಿಲ್ಲ. ವೈದ್ಯಕೀಯ ಪದವೀಧರ ವಿದ್ಯಾರ್ಥಿಗಳು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ತರಬೇತಿ ಪಡೆದುಕೊಳ್ಳಬೇಕು ಇದರಿಂದ ಏನಾಗುತ್ತದೆಂದರೆ, ಆ ಎರಡು ಮೆಡಿಕಲ್ ಕಾಲೇಜುಗಳಿಗೆ ಸಹಾಯ ಮಾಡುವುದಕ್ಕೆ ಹೋಗಿ ಯಾರು ಮೆರಿಟೆಡ್ ಸ್ಟೂಡೆಂಟ್ಸ್ ಇದ್ದಾರೆ, ಯಾರು ರಿಸರ್ವೇಷನ್ ಸ್ಟೂಡೆಂಟ್ ಇದ್ದಾರೆ ಅವರ ಪರಿಸ್ಥಿತಿ ದುಸ್ಥಿತಿಯಾಗುತ್ತದೆ. ಇದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಚೆನ್ನಾಗಿ ನಡೆಯುತಕ್ಕ ಸರ್ಕಾರೀ ಕಾಲೇಜುಗಳು ಡೀರೆಕಗ್ನೈಸ್ ಆಗತಕ್ಕ ಪರಿಸ್ಥಿತಿಗೆ ತಂದಿಟ್ಟಿದ್ದೀರಿ. There is total confusion. Where you going to land these students. God alone knows. So many doctors produced here go to the other States. ಈ ರೀತಿ ಆದರೆ, ನಾಳೆ ದಿವಸ ವೈದ್ಯರು ಧಾಳಿ ನಡೆಸತಕ್ಕ ಪರಿಸ್ಥಿತಿ ಬರುತ್ತದೆ ಆದುದರಿಂದ ಇದನ್ನು ತಕ್ಷಣ ನಿಲ್ಲಿಸಬೇಕಾಗಿದೆ. ವಾಣಿವಿಲಾಸ, ವಿಂಟೋ ಮತ್ತು ವಿಕ್ಟೋರಿಯ ಆಸ್ಪತ್ರೆಗಳಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಬೆಡ್ ಸ್ಟ್ರೆಂತ್ ಇದೆ. ಕಾಲೇಜಿನಲ್ಲಿ ಕೂಡ ಸರಿಯಾದ ವ್ಯವಸ್ಥೆ ಇಲ್ಲದೆ ಈ ಆಸ್ಪತ್ರೆಗಳು ಇವತ್ತು ಸಾಕಷ್ಟು ತೊಂದರೆಯನ್ನು ಅನುಭವಿಸತಕ್ಕ ಪರಿಸ್ಥಿತಿ ಇದೆ.

ಇನ್ನು ಪರೀಕ್ಷೆಗಳ ವಿಚಾರದಲ್ಲಿ ಹೇಳುತ್ತೇನೆ. ಮೆಡಿಕಲ್‌ನಲ್ಲಿ ಅಂಡರ್ ಗ್ರ್ಯಾಜುಯೇಟ್ ಮತ್ತು ಪೋಸ್ಟ್ ಗ್ರ್ಯಾಜುಯೇಟ್ ಪರೀಕ್ಷೆಗಳ ವಿಚಾರ ನಾನು ಹೇಳುವುದು. ಇಲ್ಲಿ ೫೦ ಅಂಕಗಳಲ್ಲಿ ಥಿಯರಿಯಲ್ಲಿ ಸಿಗುತ್ತದೆ. ಈ ಅಂಕಗಳಲ್ಲಿ ಮ್ಯಾನಿಪುಲೇಟ್ ಮಾಡುವುದಕ್ಕಾಗುವುದಿಲ್ಲ. ಆದರೆ ೫೦ ಅಂಕಗಳ ಓರಲ್‌ಗೆ ಇಟ್ಟಿದ್ದಾರೆ. ಥಿಯರಿಯಲ್ಲಿ ಸೊನ್ನೆ ಅಂಕಗಳನ್ನು ಗಳಿಸಿದರೂ ಕೂಡ ಓರಲ್‌ನಲ್ಲಿ [illegible] ಪಾಸಾಗುವುದಕ್ಕೆ ಅವಕಾಶವಿದೆ. ಏಕೆಂದರೆ [illegible] ೫೦ ಅಂಕಗಳು. ಥಿಯರಿಯಲ್ಲಿ ಸೊನ್ನೆ ಅಂಕ ಪಡೆದರೂ ಓರಲ್‌ನಲ್ಲಿ ೫೦ ಅಂಕಗಳನ್ನು ಪಡೆದು ಪಾಸಾಗುತ್ತಾರೆ. ಅನೇಕ ಮಂದಿ ಡಾಕ್ಟರುಗಳಿಗೆ ೫೦ಕ್ಕೆ ೫೦ ಅಂಕಗಳನ್ನು ಓರಲ್‌ನಲ್ಲಿ ಕೊಟ್ಟಿದ್ದಾರೆ ಇಂಥ ಡಾಕ್ಟರುಗಳಿಂದ ರೋಗಗಳ ಗತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಇದೊಂದು ರೀತಿಯ ಕುಟುಂಬ ಯೋಜನೆಯ ಅಸ್ತ್ರ ಎಂದು ತಿಳಿದುಕೊಂಡರೆ ಅದು ಪ್ರತ್ಯೇಕ. ಥಿಯರಿಯಲ್ಲಿ ಫೇಲಾದರೂ he will take 50 marks out of 50 in the oral examination. There are many people who have secured 50 out of 50

marks in the oral examination. ಖಾಸಗಿ ಕಾಲೇಜಿನಲ್ಲಿ ಈ ಮಾಲ್‌ಪ್ರಾಕ್ಟೀಸ್ ಜಾಸ್ತಿ ಇದೆ. ಯಾವ ಯಾವ ಕಾಲೇಜಿನಲ್ಲಿ ಹೆಚ್ಚಿದೆ, ಯಾವ ಯಾವ ಕಾಲೇಜಿನಲ್ಲಿ ಕಮ್ಮಿ ಇದೆ ಎಂದು ಗ್ರೇಡ್ ಮಾಡಬಹುದು. ಆದರೆ ಆ ಕೆಲಸಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ನಾಳೆ ದಿವಸ ಆ ಕಾಲೇಜಿನವರು ಮಾನಹಾನಿ ಮಾಡಿದರು ಎಂದು ಗ್ರೇಡ್ ಮಾಡಿದ್ದಾರೆ ಎಂದು ಆಕ್ಷೇಪಣೆ ಮಾಡಬಹುದು. ಆದ್ದರಿಂದ ನಾನು ಮಾಡುವುದಿಲ್ಲ. ಖಾಸಗಿ ಕಾಲೇಜುಗಳಲ್ಲಿ ಮಾಲ್ ಪ್ರಾಕ್ಟೀಸ್ ವ್ಯಾಪಕವಾಗಿದೆ. ನಾನು ಅಲ್ಲಿ ಒಳ್ಳೆಯ ವಿದ್ಯಾರ್ಥಿಗಳು ಇಲ್ಲ ಎಂದು ಹೇಳುವುದಿಲ್ಲ. ಅನೇಕ ಪ್ರಾಮಾಣಿಕ ವಿದ್ಯಾರ್ಥಿಗಳಿದ್ದಾರೆ. Students who cannot manipulate, who cannot manoeuvr ಅಂಥವರೂ ಖಾಸಗಿ ಕಾಲೇಜುಗಳಲ್ಲಿದ್ದಾರೆ ಡಾಕ್ಟರ್ ರಾಜು ಅಂಥವರಿರಬಹುದು ರಾಜು ಅಂಥವರಿರಬಹುದು ಅವರು ಖಾಸಗಿ ಕಾಲೇಜಿನಲ್ಲಿ ಓದಿದ್ದು. ಆದರೆ ಖಾಸಗಿ ಕಾಲೇಜುಗಳಲ್ಲಿ ಮಾಲ್‌ಪ್ರಾಕ್ಟೀಸ್ ವ್ಯಾಪಕವಾಗಿ ನಡೆಯುತ್ತಿದೆ. ಈ ಬಗ್ಗೆ ಇನ್ನೂ ಹೆಚ್ಚು ಅಂಶಗಳನ್ನು ನಾನು ಹೇಳಬಹುದು. ಆದರೆ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಸಮಯ ಇಲ್ಲ. ಅಡ್ಮಿಷನ್ ಬಗ್ಗೆ ಅಥವಾ ಮೆಡಿಕಲ್ ಎಜುಕೇಷನ್ ಬಗ್ಗೆ ವಿಶೇಷವಾದ ಚರ್ಚೆಯನ್ನು ಇಲ್ಲಿ ಮಾಡಬೇಕು. It is high time that we must highlight all these things. They will buy medical seats. They will buy passes in the examinations. They will buy marks in the examination and they will also buy P. G seats. ಇಲ್ಲಿ ಅಂಕಗಳನ್ನು ಮ್ಯಾನಿಪುಲೇಟ್ ಮಾಡಿದರೆ ಮೆರಿಟ್ ಸಿಕ್ಕಿ ಪಿ.ಜಿ ಕೋರ್ಸಿಗೆ ಸೀಟು ಸಿಗುತ್ತದೆ. ಪ್ರಾಮಾಣಿಕರಿರುತ್ತಾರೆ. ಯಾರು ನಿಜವಾದ ಗುಣವನ್ನು ಹೊಂದಿರುತ್ತಾರೆ. For thirty years they will go on playing havoc in the health field ಇದರಿಂದ ಏನಾಗುತ್ತದೆಂದರೆ ಥಿಯರಿಯಲ್ಲಿ ಕಡಿಮೆ ಅಂಕಗಳನ್ನು ತೆಗೆದುಕೊಂಡು ಓರಲ್‌ನಲ್ಲಿ ೫೦ ಅಂಕಗಳನ್ನು ತೆಗೆದುಕೊಂಡವರು ಪಿ ಜಿ. ಕೋರ್ಸಿಗೆ ಹೋಗುತ್ತಾರೆ. For thirty years, we are leaving them in the health field ಅಂಥ ವ್ಯಕ್ತಿಗಳು ಮಾನವ ಕುಟುಂಬಕ್ಕೆ ದೊಡ್ಡ ಶಾಪವಾಗಿ ಪರಿಣಮಿಸಬಹುದು. ಹಳ್ಳಿಗಳಲ್ಲಿ ಸಂಚಾರ ಮಾಡುವಾಗ ತಾವು ನೋಡಿರಬಹುದು. ನಮಗೂ ಅನುಭವವಿದೆ. ತಮಗೂ ಕೂಡ ಅನುಭವ ಇರಬಹುದು. ಅಲ್ಲಿ ಕೆಲವು ಡಾಕ್ಟರುಗಳು ಯಾವರೀತಿ ಟ್ರೀಟ್‌ಮೆಂಟ್ ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ. ಎಲ್ಲರೂ ಎಂದು ನಾನು ಹೇಳುವುದಿಲ್ಲ. ಕೆಲವರು ಮಾಡುತ್ತಿರುವುದರಿಂದ ಸಜ್ಜನರಿಗೂ ಕೂಡ ಅಪವಾದ ಬರುತ್ತದೆ. ಇಡೀ ವೈದ್ಯಕೀಯ ಪ್ರಪಂಚಕ್ಕೆ ದೊಡ್ಡ ಅಪವಾದ, ಕಳಂಕ ಇದರಿಂದ ಖಂಡಿತವಾಗಿ ಬರುತ್ತದೆ. I request the Government to constitute a small Committee to look into the question of these examinations, may be of legislators or some experts. But again don't confine your Committee to the Deputy Secretary, Secretary or Director. Because they cannot go beyond a point. It is high time that we must highlight all these things, otherwise, we will be perpetuating a crime against the society and the Government should not be an abettor in it in a continued process. ಇದನ್ನು ನಾವು ಖಂಡಿತವಾಗಿಯೂ ನಿಲ್ಲಿಸಬೇಕಾಗಿದೆ. ಜ್ಯೂನಿಯರ್ ಡಾಕ್ಟರುಗಳು ಮನವಿಗಳನ್ನು ಕೊಟ್ಟಿದ್ದಾರೆ. ಅವರ ಬೇಡಿಕೆಗಳೆಲ್ಲಾ ತಮಗೂ ಸ್ಪಷ್ಟವಾಗಿ ಗೊತ್ತಿದೆ. In respect of stipend to the students coming from outside, ಇದರ ಬಗ್ಗೆ ಹೇಳುವುದಾದರೆ ಇದಕ್ಕಾಗಿ ಒಂದು ಸೆಲೆಕ್ಷನ್ ಕಮಿಟಿ ಮಾಡಿದ್ದೀರಿ. ಅದರಲ್ಲಿ ಕೆಲವು ಷರತ್ತುಗಳನ್ನು ಹಾಕಿದ್ದೀರಿ. ಆದರೆ, the son of a V.I.P. I don't want to name him — has been picked out by the Health Department for grant of this stipend I have got a photostat copy of the Government order issued for the son of a V.I.P. What kind of frustration, you are creating among these people? You are creating discontent among the people. This Government order is numbered as HFWr 130/MSF/83 dated 13-2-1984. This Government order is made fo.

the son of a V.I.P. ಅವರನ್ನು ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆಯಲ್ಲಿ ಹಾಕಿ ಸ್ಟೈಫಂಡ್ ಕೂಡ ಕೊಟ್ಟಿದ್ದೀರಿ.

SRI RAMAKRISHNA HEGDE.—Same treatment has been given to others also.

SRI M. VEERAPPA MOILY.—No, No ; I am sorry. I have got the copy of the Government order. Subsequently you might have done it, But you have initiated it only for the son of a V.I.P. But this Government order, which I am referring to was not general. ಉಳಿದವರಿಗೂ ಇದರಿಂದ ಲಾಭ ಆಗುವುದಾದರೆ ನನಗೆ ಸಂತೋಷ. ಈ ತರಹ ಫೇವರಿಟಿಸಂ ತೋರಿಸಿಕೊಂಡು ಮನಸ್ಸಿಗೆ ಬಂದಹಾಗೆ ಸ್ಟೈಫಂಡ್ ಕೊಡುವುದಾದರೆ what kind of administration we can expect, except an administration which has been demoralised. ಇವತ್ತು ಇನ್ನೊಂದು ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ನಿಮ್ಮ ನಿಮ್ಮ ಕ್ಷೇತ್ರವನ್ನು ಬೆಳೆಸುವ ಬಗ್ಗೆ ನಾವು ಆಕ್ಷೇಪಣೆ ಮಾಡುವುದಿಲ್ಲ. ನಿಮ್ಮ ಕ್ಷೇತ್ರವನ್ನು ಬೆಳೆಸಿ. ತಾವು ಬಹಳ ತರುಣರಿದ್ದೀರಿ. ತಮಗೆ ಉಲ್ಲಾಸ ಜಾಸ್ತಿ ಇರಬಹುದು. I don't want to discourages your enthusiasm. ಆದರೆ ಕೆಲವು ಸಾರ್ವ ಸರ್ಕಾರದಲ್ಲಿ ಇರುತ್ತದೆ. ಜಯನಗರದಲ್ಲಿ ಸಂಜಯಗಾಂಧಿ ಮೆಮೋರಿಯಲ್ ಕಾಂಪ್ಲೆಕ್ಸ್ ಇದೆ. ಟೆಂಪೊರರಿ ಅಪಾಯಿಂಟ್‌ಮೆಂಟ್ ಮಾಡಬಾರದು ಎಂದಿದ್ದರೂ ಕೂಡ ಅಲ್ಲಿಗೆ ಟೆಂಪೊರರಿ ಅಪಾಯಿಂಟ್‌ಮೆಂಟ್ ಮಾಡಿದ್ದೀರಿ. ಎಫ್ ಡಿ.ಸಿ; ಎಸ್.ಡಿ.ಸಿ; ಸ್ಟೆನೋಗ್ರಾಫರ್ಸ್, ಡ್ರೈವರ್ಸ್ ಎಲ್ಲಾ ಸೇರಿ ೭ ಜನರು. ನಾಲ್ಕನೇ ದರ್ಜೆ ನೌಕರರು ೪೦ ಜನರು ಒಟ್ಟು ೪೭ ಜನರನ್ನು ಅಲ್ಲಿ ಅಪಾಯಿಂಟ್ ಮಾಡಿದ್ದೀರಿ ಆದರೆ ೪೭ ಅಪಾಯಿಂಟ್‌ಮೆಂಟ್‌ಗಳೂ ಬರೀ ಕನಕಪುರದವರಿಗೇ ಆಗಿವೆ. I have got the list of the names of the persons appointed. It amounts to favouritism. ಮಂತ್ರಿಗಳು ಈ ರೀತಿ ಮಾಡುವುದಕ್ಕಾಗುವುದಿಲ್ಲ. ಕನಕಪುರದಲ್ಲೂ ನಿರುದ್ಯೋಗಿಗಳು ಇರಬಹುದು. ಅವರಿಗೂ ಕೆಲಸ ಕೊಡಿ. I have also get soft corner for the people of Kanakapura. After the election, certain section comes to me and certain section goes to you.

ಅಧ್ಯಕ್ಷರು.—ಈ ಪಟ್ಟಿಯಲ್ಲಿ ನಿಮ್ಮವರು ಎಷ್ಟಿದ್ದಾರೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಪಟ್ಟಿಯಲ್ಲಿ ಯಾರೂ ಇಲ್ಲ. You should not convert it to a mini Kanakapura. I would have appreciated if it is Kanakapura taluk, ಕನಕಪುರ ತಾಲ್ಲೂಕಿನಲ್ಲಿ ಸಾತನೂರು ಇದೆ. But the people of Kanakapura contituency have been appointed ಆದರೆ ಈ ರೀತಿ ಏತಕ್ಕೆ ಮಾಡುತ್ತೀರಿ ? ಜಯದೇವ ಇನ್‌ಸ್ಟಿಟ್ಯೂಟ್, ಕಿದ್ವಾಯಿ ಮೆಮೊರಿಯಲ್ ಹಾಸ್ಪಿಟಲ್, ನಿಮ್ಹಾನ್ಸ್ ಇಲ್ಲೆಲ್ಲಾ ಈ ತರಹ ಇರೆಗ್ಯುಲರ್ ಅಪಾಯಿಂಟ್‌ಮೆಂಟ್ ಮಾಡಿದ್ದೀರಿ ಎಂದು ಗೊತ್ತಾಗಿದೆ. ಆದರೆ ನನ್ನ ಹತ್ತಿರ ವಿವರ ಇಲ್ಲದಿರುವುದರಿಂದ ನಾನು ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. But so far as the Sanjay Gandhi Memorial complex is concerned, all the 47 people are from Kanakapura. ಈ ತರಹ ಪಕ್ಷಪಾತ ಧೋರಣೆ ಏತಕ್ಕೆ ? ತಾವು ಆ ತಾಲ್ಲೂಕಿನವರಾಗಿದ್ದು ಮಂತ್ರಿಗಳಾಗಿರುವುದರಿಂದ ಇದು ತಮ್ಮ ಮೇಲೆ ರಿಫ್ಲೆಕ್ಟ್ ಆಗುತ್ತದೆ. ಇದು ಸಂಪೂರ್ಣವಾಗಿ ಪಕ್ಷಪಾತ ಧೋರಣೆಯಾಗಿದ್ದು ಇದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಬೌರಿಂಗ್ ಆಸ್ಪತ್ರೆ ಬಗ್ಗೆ ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಈ ತರಹ ಆರ್ಡರ್ ನಾವು ಎಂದೂ ಮಾಡಿರಲಿಲ್ಲ. ಈ ಕಾಲೇಜಿನವರು ಇದನ್ನು ೫ ವರ್ಷ ಉಪಯೋಗ ಮಾಡಬಹುದು. ೫ ವರ್ಷ ಆದಮೇಲೆ ತಮ್ಮ ತಮ್ಮ ಹಾಸ್ಪಿಟಲ್ ಸೌಕರ್ಯವನ್ನು ತಾವೇ ನೋಡಿಕೊಳ್ಳಬೇಕೆಂದು ಆರ್ಡರ್ ಮಾಡಿದ್ದೆವು. ಅದನ್ನೇನಾದರೂ ತಾವು ಬದಲಾವಣೆ ಮಾಡಿದ್ದೀರಾ ? ಹಾಗೆ ಮಾಡಿದ್ದರೆ ಆ ಬಗ್ಗೆ ಉತ್ತರ ಕೊಡಿ. ಈ ಬಗ್ಗೆ ೧೯೮೦ರಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಇಷ್ಯೂ ಮಾಡಿದ್ದು ಇದೆ. ಅದನ್ನು ಏನಾದರೂ ರಿವೈಸ್ ಮಾಡಿದ್ದೀರಾ ? ಅದನ್ನು ರಿವೈಸ್ ಮಾಡಿದ್ದರೆ ಏನು ಮಾಡಿದ್ದೀರಿ ಎಂದು ಹೇಳಿ.

ಇನ್ನು ನಾನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಬಗ್ಗೆ ನಾನು ಏನನ್ನೂ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇವರೆ ಈ ಬಗ್ಗೆ ಬಹಳ ದೊಡ್ಡ ಒಂದು ನೀತಿಯನ್ನು ಪ್ರಕಟ ಮಾಡಿದ್ದೇವೆಂದು ಮಾನ್ಯ ಕೈಗಾರಿಕಾ ಮಂತ್ರಿಗಳಾದ ಬೊಮ್ಮಾಯಿಯವರು ಹೇಳಿದ್ದರು. ಆದರೆ ಇಲ್ಲಿ ನಿಮ್ಮ ನೀತಿ ಮತ್ತು ಸಾಧನೆಯನ್ನು ನೋಡಿದರೆ ನಮಗೆ ಬಹಳ ವಿಷಾದವೆನಿಸುತ್ತಿದೆ. ಎಕನಾಮಿಕ್ ಸರ್ವೆ ೧೯೮೩-೮೪ ರಲ್ಲಿ ತಾವು ಏನು ಹೇಳಿದ್ದೀರಿ ?

I refer from the Table-8 I.—Production of Selected Industries and Minerals in Karnataka. Please refer to the Percentage of variation of 1983-84 over 1982-83 wherein except two or three items, all items are under minus. Almost all the items are under minus. In respect of Aluminium it is 40.83, Iron and Steel—i) Pig Iron—23.01, Saleable [illegible] Steel Ingots—30.00, Soap—51.88, Only in respect of Iron Ore it is +14.37, Silver +5.06. There is Silver line so far as Silver is concerned.

In respect of Small Scale Industries, the Hon'ble Member Sri Nagaraj has spoken in detail. In respect of K.S.F.C. and K.S.I.D.C., the progress is very slow. I do not have much statistics about them. If you have any statistics, you may please furnish them in your reply. I do not find any Silver line in the horizon of industrial development in Karnataka.

SRI S.R. BOMMAI.—The year is not ended still. We are in March. Therefore, we have given the report of 1982-83.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ನಿಮ್ಮ ನಾಯಕರನ್ನು ಇದರಲ್ಲಿ ಅನುಸರಿಸಬೇಕು. ನಮ್ಮನ್ನು ಮಿಸ್‌ಲೀಡ್ ಮಾಡುವುದು ಬೇಡ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವು ಬ್ಲೈಂಡ್ ಫಾಲೋಯರ್ಸ್ ಅಲ್ಲ.

SRI M. VEERAPPA MOILY.—I was told this Ministry is a Two-Man Ministry.

SRI GOVIND P. VODEYARAJ.—Sir, we are not asking what kind of follower he is.

SRI M. VEERAPPA MOILY.—Whether you are a follower or not it is another question mark. I have to take up some other subject now. ಈ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ ಇಲ್ಲಿ ಸರಿಯಾಗಿ ನಿರ್ವಹಣೆ ಆಗುತ್ತಾ ಇಲ್ಲ. [illegible] ಇಲ್ಲಿ ಏನು ನಾವೇನಾದರೂ ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳು [illegible] ಫಿಗರ್ಸ್ ಕೊಡುತ್ತಾರೆ. ಆ ಫಿಗರ್ಸ್‌ನ್ನು ಎಲ್ಲಿಂದ ಪಿಕ್‌ಅಪ್ ಮಾಡುತ್ತಾರೆಂದು ಗೊತ್ತಿಲ್ಲ. [illegible] ಅದು ಕಾಣುವುದಿಲ್ಲ. I always base my calculation only on his report. I do not go beyond his report. That is not my intention.

Now, I will refer to this Administrative report. Regarding the growth of revenue under Sales Tax, it was 244.72 crores in the year 1980-81, it was increased to 30[illegible].42 crores in the year 1981-82 and it was further increased to 344.38 crores in the year 1982-83. It was during our regime. But now this Government has

furnished figures of growth of revenue under Sales Tax upto February 1984 ofthe year 1983-84, just one month short of the year 1983-84. What is the growth rate ? It is only 346.24 crores. So, the increase in the growth rate is just two crores in the year 1983-84 upto February 1984. They can show us some increase in March, after taking into consideration the Advance tax in March 1984. So, the growth rate has become practically stagnant. Even if you go through the other items, practically there is no growth rate. I now refer this Entertainment tax. The growth rate was 24.69 crores in the year 1982-83 and it is just 24.14 crores upto February 1984, in the year 1983-84. In regard to the Entry tax, the amount meant for the Corporations and Municipalities, there is decrease in the growth rate. In the year 1982-83 it was 11.52 crores and during this year i.e., 1983-84, the growth rate is just 9.58 crores, upto February 1984. With regard to the Professional Tax, of course, I can understand, because you have given some concessions. Even in the Betting Tax in respect of Race course, you could have increased. But there is a decrease in this item also. Last year i.e., 1982-83 it was 4.14 crores and during this year, upto February 1984, it is only 4.02 crores. ಆದುದರಿಂದ ತಾವು ಈ ದಿನ ಪ್ರಾಮುಖ್ಯವಾದಂಥ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ತಾವು ಸಂಪನ್ಮೂಲಗಳನ್ನು ಸರಿಯಾಗಿ ರೂಢಿಸಿಕೊಳ್ಳದಿದ್ದರೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಯಾವ ರೀತಿ ನಿಭಾಯಿಸುತ್ತೀರಿ ಎಂಬ ನಮ್ಮ ಪ್ರಶ್ನೆಗೆ ತಾವು ತಮ್ಮ ಉತ್ತರದಲ್ಲಿ ಹೇಳಬೇಕಾಗಿದೆ. ಆದುದರಿಂದಲೇ ಇಂದು ಈ ಪರಿಸ್ಥಿತಿ ಬಂದಿದೆ. ಬಜೆಟ್‌ನಲ್ಲಿ ಸಾಕಷ್ಟು ಖೋತಾ ಆಗಿದೆ. ನಿಮಗೆ ಅನೇಕ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಕೈಗೆ ತೆಗೆದುಕೊಳ್ಳಲು ಆಗಲಿಲ್ಲ. ಆದ್ದರಿಂದ ತಾವು ಎಕಾನಮಿ ಮೆಷರ್ಸ್ ಅಡಾಪ್ಟ್ ಮಾಡಬೇಕಾಯಿತು. ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವುದರಲ್ಲಿ ರಾಜಕೀಯ ಇಚ್ಛಾಶಕ್ತಿ ಇರಬೇಕು. ಇಲ್ಲದಿದ್ದರೆ......Government which is shaky cannot organise it. I have already stated this point in my budget speech. Even if you take the latest figures, there is absolutely no increase in respect of any item. With regard to the 20 point Programme, I don't go into the details. ಈ ಇಪ್ಪತ್ತು ಅಂಶದ ಕಾರ್ಯಕ್ರಮದ ಬಗ್ಗೆ ನಾನು ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಈ ಕಾರ್ಯಕ್ರಮದ ಬಗ್ಗೆ ಈ ಸರ್ಕಾರದವರಿಗೆ ನಂಬಿಕೆ ಇಲ್ಲ. ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಸಭೆಯಲ್ಲಿ ಈ ೨೦ ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವುದಾಗಿ ಒಪ್ಪಿಕೊಂಡು ಬಂದಿದ್ದಾರೆ. ಆದರೆ ಈ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನ ಮಾಡುತ್ತಿಲ್ಲ. ಅವರಿಗೆ ಈ ಕಾರ್ಯಕ್ರಮದ ಹೆಸರು ಹೇಳಿಕೊಳ್ಳಲು ನಾಚಿಕೆ ಆಗುತ್ತದೆಂದು ಕಾಣಿಸುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಬಡ್ಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ೨೦ ಅಂಶಗಳ ಕಾರ್ಯಕ್ರಮದ ಇಂಪ್ಲಿಮೆಂಟೇಷನ್ ಬಗ್ಗೆ ಬಡ್ಜೆಟ್ ಸ್ಪೀಚ್‌ನಲ್ಲಿ ಒಂದು ಶಬ್ದವನ್ನು ಸಹ ಹೇಳಲಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಹೇಳಲಿಕ್ಕೆ ತಮಗೆ ಅಂಜಿಕೆಯಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ವಿರೋಧಪಕ್ಷದ ನಾಯಕರಿಗೆ. ಅವರ ಪಕ್ಷದವರಿಗೆ ೨೦ ಅಂಶಗಳ ಕಾರ್ಯಕ್ರಮ ವೇದವಾಕ್ಯವಾಗಿರಬಹುದು? ನಮಗೆ ವೇದವಾಕ್ಯ ಅಲ್ಲದಿದ್ದರೂ, ಆವಾಚ್ಯ ಶಬ್ದ ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸ್ಪಷ್ಟೀಕರಣ ಹೇಳಿದ್ದೀರಿ ಸಂತೋಷ ಇವರಿಗೆ ಅನುಷ್ಠಾನ ಮಾಡುವ ಮನಸ್ಸು ಇದೆಯೋ ಎನ್ನುವ ಬಗ್ಗೆ ಸಂಶಯ. ಹಿಂದೆ ಸ್ಟೇಟ್ ಲೆವಲ್ ಕಮಿಟಿ ಇತ್ತು. ಇವರು ಅಧಿಕಾರಕ್ಕೆ ಬಂದ ಮೇಲೆ ೨೦ ಅಂಶಗಳ ಕಾರ್ಯಕ್ರಮವನ್ನು ಅಸ್ಪೃಶ್ಯ ಕಾರ್ಯಕ್ರಮಗಳಾಗಿ ಕಾಣುತ್ತಿದ್ದಾರೆ. ರೀಕಾನ್‌ಸ್ಟಿಟ್ಯೂಟ್ ಕಮಿಟಿ ಏನಾಗಿದೆ, ೧೯೮೦ನೇ ಇಸವಿಯಲ್ಲಿ ರೀ ಕಾನ್‌ಸ್ಟಿಟ್ಯೂಟ್ ಆದ ಕಮಿಟಿ ಹಾಗೆಯೇ ಇದೆ. ೨೦-೭-೮೩ರ ವರೆಗೆ ಅದೇ ಕಮಿಟಿ ಇದೆ. ಮಾನ್ಯ ವೈ. ರಾಮಕೃಷ್ಣರವರು ಮತ್ತು ನಾನು, ಅದಕ್ಕೆ ಸದಸ್ಯರಾಗಿದ್ದೇವೆ. ನನ್ನದು ಫೈನಾನ್ಸ್ ಅಂಡ್ ಪ್ಲಾನಿಂಗ್ ಮಿನಿಸ್ಟರ್ ಎಂದು ಡಿಸಿಗ್‌ನೇಷನ್ ಇತ್ತು. ಆದರೆ ಇದುವರೆಗೂ ಅದರ ಮೀಟಿಂಗ್ ಕರೆದಿಲ್ಲ. ಮಾನ್ಯ ವೈ. ರಾಮಕೃಷ್ಣ ಅವರಿಗೂ ಮೀಟಿಂಗ್‌ಗೆ ಕರೆದಂತೆ ಕಾಣಲಿಲ್ಲ. ಇವರಿಗೆ ಇದರ ಬಗ್ಗೆ ಎಷ್ಟು ಆಸಕ್ತಿ ಇದೆ ಎನ್ನುವುದು ಇದನ್ನು ನೋಡಿದರೆ ಅರ್ಥವಾಗುತ್ತದೆ. ಇವರು ೨೭-೧೦-೮೩ರ ನೋಟಿಫಿಕೇಷನ್ ನವೆಂಬರ್‌ನಲ್ಲಿ ಹಾಕಿದ್ದಾರೆ. ಜಿಲ್ಲಾ ಮಟ್ಟದ ಸಮಿತಿಗಳು ರಚನೆಯಾಗಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ—ತಮ್ಮ ಪಕ್ಷದ ಸದಸ್ಯರನ್ನು ಮುಂದುವರಿಸಿಕೊಂಡು ಬಂದಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ರೀ ಕಾನ್‌ಸ್ಟಿಟ್ಯೂಟ್ ಮಾಡಲಿಕ್ಕೆ ಮನಸ್ಸು ಇಲ್ಲದೇ ಮುಂದುವರಿಸಿಕೊಂಡು ಬಂದಿದ್ದೀರಿ, ನಮ್ಮ ಅನುಭವವನ್ನು ನೀವು ತೆಗೆದುಕೊಂಡಿದ್ದರೆ, ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತಿತ್ತು. ಕಾಂಗ್ರೆಸ್‌ನವರು ಅಸ್ಪೃಶ್ಯರು ಎನ್ನುವ ಪರಿಸ್ಥಿತಿಗೆ ಬಂದಿದ್ದರಿಂದ ಈ ಪರಿಸ್ಥಿತಿ ಬಂದಿದೆ.

ಶ್ರೀ ವಿ. ಎಸ್. ಆಚಾರ್ಯ.—ನಿಮ್ಮ ಅನುಭವವನ್ನೂ ತೆಗೆದುಕೊಂಡಿದ್ದರೆ ೧೯೮೩ರ ಹಿಂದೆ ಯಾವ ರೀತಿ ಇರುತ್ತಿತ್ತೋ, ಅದೇ ರೀತಿಯಾಗಿ ಇರುತ್ತಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ.—ನವೆಂಬರ್‌ನಿಂದ ಜನವರಿಯವರೆಗೂ ಮೀಟಿಂಗ್ ಕರೆದಿಲ್ಲ. ತಾಲ್ಲೂಕು ಸಮಿತಿ, ಜಿಲ್ಲಾ ಸಮಿತಿ, ೨೦ ಅಂಶದ ಕಾರ್ಯಕ್ರಮದ ಬಗ್ಗೆ ಮೀಟಿಂಗ್ ಕರೆದಿಲ್ಲ. ಕರ್ನಾಟಕ ಡೆವಲಪ್‌ಮೆಂಟ್ ಕಮಿಟಿ ಎಂದು ಕರೆದಿದ್ದಾರೆ. ಇವೊತ್ತು ಇವರು ಅವಾಚ್ಯ ಎಂದು ಹೇಳಿ ಅಸ್ಪೃಶ್ಯ ಎಂದು ಹೇಳಿ ಬಿಟ್ಟುಬಿಟ್ಟರು, ಇವರು ಹೆಸರನ್ನೇ ಹೇಳದೇ ಇದ್ದರೆ, ಎಷ್ಟರಮಟ್ಟಿಗೆ ಅನುಷ್ಠಾನ ಮಾಡತಕ್ಕ ಮನಸ್ಸು ಇದೆ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ. ಇಷ್ಟು ಸ್ಮಾಲ್ ಸೇವಿಂಗ್ಸ್‌ನಲ್ಲಿ, ಸಂಪನ್ಮೂಲಗಳು ಬಹಳ ಪ್ರಮುಖವಾದುದರಿಂದ, ಅದರಲ್ಲಿ ಇವರು ಏನು ಸಾಧನೆ ಮಾಡಿಕೊಂಡು ಬಂದಿದ್ದಾರೆ ಅದನ್ನು ನಾನು ಅನಂತರ ಹೇಳುತ್ತೇನೆ. ಇನ್ನು ರೆಕ್ರೂಟ್‌ಮೆಂಟ್ ಕಮಿಟಿ ಮಾಡುತ್ತೇನೆಂದು ಹೇಳಿ ಇಷ್ಟರವರೆಗೆ ಎಷ್ಟು ರೆಕ್ರೂಟ್‌ಮೆಂಟ್ ಮಾಡಿದ್ದಾರೆಂದು ನೋಡೋಣ ಡಿ.ಎಲ್.ಆರ್.ಸಿ, ಅಗ್ರಿಕಲ್ಚರ್ ಅಸಿಸ್ಟೆನ್ಸ್ ವಿಚಾರದಲ್ಲಿ, ಅನೇಕ ರೆಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ವ್ಯಾಪಕವಾಗಿ ಭ್ರಷ್ಟಾಚಾರದ ಆಪಾದನೆಗಳು ಇವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದನ್ನು ಕೂಡ ಒಪ್ಪಿಕೊಂಡಿದ್ದಾರೆ. ಕೆಲವೊಂದು ಕಮಿಟಿಗಳನ್ನು ರದ್ದು ಮಾಡಿದ್ದಾರೆ. ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡುವಾಗ, ಹಿಂದೆ ದೇವರಾಜ್ ಅರಸರ ಕಾಲದಲ್ಲಿ, ನಂತರ ಕೂಡ ನಾವು ನಿರ್ದಿಷ್ಟವಾದ ಒಂದು ಸಾಮಾಜಿಕ ಸಮತೋಲನ ಉಳಿಸಿಕೊಳ್ಳಬೇಕೆಂದು ಕಮಿಟಿಯನ್ನು ಮಾಡುತ್ತಿದ್ದೆವು. ಆ ಕಮಿಟಿಯಲ್ಲಿ ಮೈನಾರಿಟಿ ಇರಬೇಕು, ಬ್ಯಾಕ್‌ವರ್ಡ್‌ಕ್ಲಾಸ್ ಇರಬೇಕು, ಹರಿಜನ-ಗಿರಿಜನರು ಇರಬೇಕು. ಮತ್ತೆ ಮಹಿಳೆಯರು ಇರಬೇಕು, ಎಂದು ಮಾಡುತ್ತಿದ್ದೆವು. ಈ ರೀತಿಯ ಒಂದು ಸಿದ್ಧಾಂತವನ್ನು ಇಟ್ಟುಕೊಂಡು ನಾವು ಮಾಡುತ್ತಿದ್ದೆವು. ಇವರಿಗೆ ಯಾವ ಒಂದು ಸಿದ್ಧಾಂತ ಇಲ್ಲ, ಸಿದ್ಧಾಂತದ ಚೌಕಟ್ಟು ಇಲ್ಲದ ಪಕ್ಷವಾದುದರಿಂದ ಈ ರೀತಿ ಆಗಿದೆ. ಇವರು ಮೈನಾರಿಟಿ ಕೆಲಸಕ್ಕೆ ಹಾಕಿರಬಹುದು ಆದರೆ ಎಲ್ಲದರಲ್ಲೂ ಇಲ್ಲ. ಅದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್ ಎಲ್ಲದರಲ್ಲೂ ಇಲ್ಲ. ಕೆಲವೊಂದು ಕಮಿಟಿಗಳಲ್ಲಿ ಇದೆ. ರೇವು, ಒಳನಾಡು, ಜಲಸಾರಿಗೆ ಇಲ್ಲಿ ಮೈನಾರಿಟಿ ಇಲ್ಲ. ಇನ್ನೊಂದು ಸಮಿತಿ ಇದೆ, ಮೋಟಾರು ವಾಹನ ಇಲಾಖೆಯ ನೇಮಕಾತಿ ಸಮಿತಿಯಲ್ಲಿ ಮೈನಾರಿಟೀಸ್ ಇಲ್ಲ. ಭೂಮಾಪನ ಇಲಾಖೆಯಲ್ಲಿ ಮೈನಾರಿಟಿಸ್ ಇಲ್ಲ. ಸಾಮಾಜಿಕ ಸಮತೋಲವನ್ನು ನೇಮಕಾತಿ ಸಮಿತಿಗಳಲ್ಲಿ ಮೈನ್‌ಟೈನ್ ಮಾಡಬೇಕೆಂದು ಹಿಂದೆ ನಾವು ಮಾಡಿಕೊಂಡು ಬಂದಿದ್ದೇವೆ. ಈಗ ನೀವು ಮಾಡಿರತಕ್ಕದ್ದು ಯಾವ ರೀತಿ ಇದೆ ಎಂದರೆ. ನಿಮ್ಮದೇ ಆದಂತಹ ಸಿದ್ಧಾಂತ ಇದೆ. ವ್ಯಾಖ್ಯಾನ ಇದೆ. ಕಾಂಗ್ರೆಸ್ ಪಕ್ಷದ ವ್ಯಾಖ್ಯಾನ ಸಿದ್ಧಾಂತವನ್ನು ಅಳವಡಿಸಬೇಕೆಂದು ನಾವು ಹೇಳಿದರೆ ತಾವು ಒಪ್ಪುವ

ದಿಲ್ಲ. ತಮ್ಮ ದೃಷ್ಟಿಕೋನವೇ ಬೇರೆ, ತದ್ವಿರುದ್ಧವಾಗಿದೆ. ಕ್ರಾಂತಿ, ಪ್ರತಿಕ್ರಾಂತಿ ಎಂದು ಹೇಳುತ್ತೀರಾ ? ಮಾನ್ಯ ದೇವರಾಜ್ ಅರಸರ ೧೯೭೨ರ ಒಂದು ಕ್ರಾಂತಿ ಇದೆ. ರೆವಲ್ಯೂಷನ್ ಮತ್ತು ಕೌಂಟರ್ ರೆವಲ್ಯೂಷನ್ ಎಂದು ಹೇಳಬಹುದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ರೆವಲ್ಯೂಷನ್ನೇ ನಡೆದಿಲ್ಲ, ಇನ್ನು ಕೌಂಟರ್ ರೆವಲ್ಯೂಷನ್ ಹೇಗೆ ನಡೆಯುತ್ತದೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಅದು ಅವರ ದೃಷ್ಟಿಕೋನ.

ಶ್ರೀ ಎಂ, ಎಸ್. ಕೃಷ್ಣನ್.—ನಾವು ಅರ್ಥಮಾಡಿಕೊಂಡಿರುವ ಹಾಗೆ ಸಮಾಜ ಪರಿವರ್ತನೆಯಾಗಬೇಕು. ಒಂದು ಜಾತಿ ಇನ್ನೊಂದು ಜಾತಿ ಬಂದ ತಕ್ಷಣ ಪರಿವರ್ತನೆಯಾಗುತ್ತದೆಂದು ತಿಳಿದುಕೊಂಡಿದ್ದರೆ ತಪ್ಪಾಗುತ್ತದೆ. ಹಿಂದೆ ಕೆಳಗಿನ ಜಾತಿ ಮೇಲೆ ಎತ್ತಲಿಕ್ಕೆ ಒಪ್ಪಿಕೊಂಡು ಕ್ರಾಂತಿ ನಡೆಸಿದ್ದಾರೆಂದರೂ ತಪ್ಪಾಗುತ್ತದೆ. ಇವರು ಮೇಲಿನ ಜಾತಿಯನ್ನು ಎತ್ತಿದ್ದಾರೆ, ಇದು ಪ್ರತಿಕ್ರಾಂತಿಯಾಗಿದೆ ಎಂದರೂ ತಪ್ಪಾಗುತ್ತದೆ.

ಅಧ್ಯಕ್ಷರು.—ಒಟ್ಟು ಕ್ರಾಂತಿರಂಗದಲ್ಲಿ ಇರೋಣ.

ಶ್ರೀ ಎನ್. ಜಿ. ನಾಯಕ್.—ಕ್ರಾಂತಿರಂಗ ಪಾಲನೆ ಮಾಡುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಜಾತಿ ಧರ್ಮದ ಪ್ರಶ್ನೆ ಅಲ್ಲ, ಸಾಮಾಜಿಕ ಸಮತೋಲನ ಮೆಯಿನ್‌ಟೈನ್ ಮಾಡಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಜಾತಿಯ ಕಾರಣಗಳಿಂದ, ಧರ್ಮದ ಕಾರಣಗಳಿಂದ ಅಸಮತೋಲನ ಇದೆ. ಭೌಗೋಳಿಕವಾಗಿ ಸಾಮಾಜಿಕವಾಗಿ, ಅಸಮತೋಲನವನ್ನು ಹೋಗಲಾಡಿಸಲಿಕ್ಕೆ ಸಮತೋಲನವನ್ನು ಸ್ಥಾಪನೆ ಮಾಡುವ ದೃಷ್ಟಿಯಿಂದ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಇವರು ಕಮಿಟಿಗಳನ್ನು ಮಾಡಿದರು. ಕಾಂಗ್ರೆಸ್ ಪಕ್ಷ, ಬಿಜೆಪಿ ಪಕ್ಷದವರನ್ನು ಕೆಲವೊಂದಕ್ಕೆ ಹಾಕಿದರೂ ಕಮ್ಯುನಿಸ್ಟ್ ಪಕ್ಷದವರನ್ನು ಹೆಚ್ಚು ಹಾಕಲಿಲ್ಲ.

SRI M. S. KRISHNAN.—We do not go with begging bowls.

ಶ್ರೀ ಎಂ. ವೀರಪ್ಪಮೊಯಿಲಿ.—They do not belongs to our party. ಕಾಂಗ್ರೆಸ್‌ನವರು ಯಾರು ಎಂದರೆ. ಯಾರು ಕಾಂಗ್ರೆಸ್ ದ್ರೋಹಿಗಳಿದ್ದಾರೆ, ನಮ್ಮ ಕಾಂಗ್ರೆಸ್ ಪಕ್ಷದಲ್ಲೇ ಇದ್ದು ಎಲೆಕ್ಷನ್‌ನಲ್ಲಿ ಅವರಿಗೆ ಸಹಾಯ ಮಾಡಿದ್ದಾರೆ, ಅಂಥವರನ್ನು ಈ ಸಮಿತಿಯಲ್ಲಿ ಹಾಕಿದ್ದಾರೆ. ಏಕೆಂದರೆ ಅವರ ಋಣವನ್ನು ತೀರಿಸುವುದಕ್ಕೆ ಆದರೂ ಹಾಕಬೇಕಲ್ಲ. ಆದ್ದರಿಂದ ಹಾಕಿದ್ದಾರೆ. ಅಂಥವರು ನಮ್ಮ ಪಕ್ಷಕ್ಕೆ ಸೇರಿದವರಲ್ಲ.........

ಶ್ರೀ ಎಂ. ಎಸ್. ಕೃಷ್ಣನ್.—ಕಾಂಗ್ರೆಸ್‌ನವರು ಅಯ್ಯೋ, ನಮ್ಮನ್ನು ಹಾಕಲಿಲ್ಲವಲ್ಲ ಎಂದು ಹೇಳುತ್ತಿರಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಒಂದು ದ್ವಿಮುಖ ನೀತಿ. ವಿರೋಧಪಕ್ಷದವರನ್ನು ಹಾಕಲಿಲ್ಲ. ಎಂದು ಮಾನ್ಯ ದೇವೇಗೌಡರು ಧರಣಿ ಮಾಡಿದರು. ಆದರೆ ನಾವು ಧರಣಿ ಮಾಡಲಿಲ್ಲ. ಇಂಥ ಏಕಪಕ್ಷೀಯವಾಗಿ ಮಾಡತಕ್ಕ ಪಾಪದ ಹೊರೆ ಈ ಬಿ.ಜೆ.ಪಿ. ಮತ್ತು ಜನತಾ ಪಕ್ಷದ ತಲೆಯ ಮೇಲೆಯೇ ಇರಲಿ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ತಮ್ಮ ಧಾಟಿಗೆ ನಾನು ಅಡ್ಡಬರುವುದಿಲ್ಲ. ತಮ್ಮ ಕಾಲದಲ್ಲಿ ಟ್ರಿಬ್ಯುನಲ್‌ನಲ್ಲಿ ನ್ಯಾಯ ದೃಷ್ಟಿಯಿಂದ ಆದರೂ ನಮ್ಮ ಜಿಲ್ಲೆಯವರನ್ನು ಯಾರನ್ನಾದರೂ ಸೇರಿಸಿಕೊಂಡಿದ್ದೀರಾ ?

ಶ್ರೀ ಎಂ. ವೀರಪ್ಪಮೊಯಿಲಿ.—ಏಕೆ, ಬಂಟ್ವಾಳದ ಬಾಳಪ್ಪನವರಿಗೆ ಕೊಟ್ಟಿಲ್ಲವೆ ?

ಶ್ರೀ ವಿ. ಎಸ್. ಆಚಾರ್ಯ.—ಎಲ್ಲದಕ್ಕೂ ಅವರೊಬ್ಬರೇ ತಮಗೆ ಸಿಕ್ಕುವುದು.

ಶ್ರೀ ಎಸ್. ಆರ್. ಬೊಮ್ಮಾಯಿ—ಆ ವಿಚಾರಕ್ಕೆ ಹೋಗಬೇಡಿ. ಅಲ್ಲಿ ಇಲ್ಲಿ ಕೊಟ್ಟಿರಬಹುದು, ಆದರೆ ನಮ್ಮ ಪಕ್ಷದ ಯಾವ ಸದಸ್ಯರನ್ನೂ ನೀವು ಹಾಕಿಲ್ಲ.

SRI M VEERAPPAMOILY.—You had begged for it and we have given. But we do not want to beg for it.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ.........

ಶ್ರೀ ಎಂ. ವೀರಪ್ಪ ಮೊಯ್ಲಿ.—ಡಿ.ಎಲ್.ಆರ್.ಸಿ. ಧಾರವಾಡದಲ್ಲಿ ಇತ್ತು. ಅದರ ಮೇಲೆ ವ್ಯಾಪಕವಾದ ಭ್ರಷ್ಟಾಚಾರದ ಆಪಾದನೆ ಬಂದ ಮೇಲೆ ಅದನ್ನು ರದ್ದುಮಾಡಬೇಕಾಯಿತು. ಆ ಸಮಿತಿಗೆ ತಾವು ಸದಸ್ಯರಾಗಿದ್ದೀರಿ. It became a law and order problem.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಸದನಕ್ಕೆ * * ಹೇಳುತ್ತಿದ್ದೀರಿ.

SRI M VEERAPPA MOILY.—I am not yielding.

SRI S. R. BOMMAI.—You have made allegation against me.

SRI M. VEERAPPA MOILY.—I am on my legs.

(Interruptions)

*   *   *

ಅಧ್ಯಕ್ಷರು.—"ಸುಳ್ಳು'' ಎನ್ನುವ ಪದವನ್ನು ಉಪಯೋಗಿಸಬಾರದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅನೇಕ ಸಾರಿ ಇದೇ ಸಭೆಯಲ್ಲಿ 'ಸುಳ್ಳು'' ಎನ್ನುವ ಪದವನ್ನು ಉಪಯೋಗಿಸಬಾರದೆಂದು ರೂಲಿಂಗ್ ಕೊಟ್ಟಿದೆ, ಇದು ಪಾರ್ಲಿಮೆಂಟರಿ ಪದ ಅಲ್ಲ. ಸುಳ್ಳು ಎನ್ನುವುದಕ್ಕೆ ಬದಲಾಗಿ "ಸತ್ಯಕ್ಕೆ ದೂರವಾದುದು'' ಎಂದು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ ಪಾಯಿಂಟ್ ಆಫ್ ಆರ್ಡರ್.........

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರ್ ಏನು ಎಂಬುದು ನನಗೆ ಗೊತ್ತು. ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ. ಆದರೆ ನೀವು ಕೇಳಿಸಿ ಕೊಳ್ಳಲಿಲ್ಲ ಅಷ್ಟೆ.

ಶ್ರೀ ಎಸ್. ಆರ್, ಬೊಮ್ಮಾಯಿ,—ಈ ಕಮಿಟಿಯು ವಿಚಾರದಲ್ಲಿ ಹಿಂದೆ ಚರ್ಚೆ ಆದಾಗ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ನಮ್ಮ ಜನತಾ ಪಕ್ಷದ ಶಾಸಕರನ್ನು ಹಾಕಲಿಲ್ಲ. ಉದಾಹರಣೆಗೆ ಬಿಜಾಪುರ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ನಮ್ಮ ಪಕ್ಷದ ಶಾಸಕರನ್ನು ಒಬ್ಬರನ್ನೂ ಹಾಕಲಿಲ್ಲ, ಇಡೀ ರಾಜ್ಯದಲ್ಲಿ ಕೇವಲ ೧೦ ಜನರನ್ನು ಮಾತ್ರ ವಿರೋಧಪಕ್ಷದಿಂದ ಲ್ಯಾಂಡ್ ಟ್ರಿಬ್ಯುನಲ್ಸ್‌ಗೆ ಹಾಕಿದಿರಿ, ಆದರೆ ಇವತ್ತು ತಾವು ಯಾವುದೇ ತಾಲ್ಲೂಕಿನಲ್ಲಾಗಲಿ ಆಯಾಯ ತಾಲ್ಲೂಕಿನ ಶಾಸಕರನ್ನು ಅವರು ಯಾವುದೇ ಪಕ್ಷಕ್ಕೆ ಸೇರಿರಲಿ ಈ ಸಮಿತಿಯಲ್ಲಿ ಹಾಕಿದ್ದೇವೆ. ಇದರಲ್ಲಿ ಪಕ್ಷಪಾತ ಮಾಡಿಲ್ಲ. ಇನ್ನು ಧಾರವಾಡ ಡಿ.ಎಲ್.ಆರ್.ಸಿ, ಬಗ್ಗೆ ಹೇಳಿದ್ದಾರೆ. ಆ ಕಮಿಟಿಯ ಮೇಲೆ ಕರಪ್ಷನ್ ಛಾರ್ಜಸ್ ಏನೂ ಬಂದಿರಲಿಲ್ಲ. ಆ ಧಾರವಾಡ ಕಮಿಟಿ ರದ್ದು ಆಗಿರಲಿಲ್ಲ..........

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಇದನ್ನೆಲ್ಲಾ ಹೇಳಬಾರದು ಎಂದು ಇದ್ದೆ. ಆದರೆ ನೀವು ಪ್ರಚೋದನೆ ಮಾಡಿದ್ದರಿಂದ ನಾನು ಇನ್ನೂ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ,

ಶ್ರೀ ಎಸ್. ಆರ್, ಬೊಮ್ಮಾಯಿ:—ತಾವು ನೋಟೀಸನ್ನು ಕೊಟ್ಟು ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನೋಟೀಸನ್ನು ಏತಕ್ಕೆ ಕೊಡಬೇಕು ? ನಾನು ಇದನ್ನೆಲ್ಲಾ ಹೇಳಬಾರದೆಂದು ಇದ್ದೆ. ಆದರೂ ಈಗ ನನ್ನ ಹತ್ತಿರ ರೆಕಾರ್ಡ್ಸ್ ಇಲ್ಲದಿದ್ದರೂ ನನಗೆ ಜ್ಞಾಪಕ ಇರುವುದನ್ನು ಹೇಳುತ್ತಿದ್ದೇನೆ. ಹಿಂದೆ ತಾವು ಶಾಸಕರಾಗಿದ್ದಾಗ ಧಾರವಾಡ ಡಿ.ಎಲ್.ಆರ್.ಸಿ.ಯಲ್ಲಿ ಸದಸ್ಯ

*** Expunged as ordered by the chair.

ರಾಗಿದ್ದಿರಿ. ಇದು ಸತ್ಯ. ಇಡೀ ಸಮಿತಿಯ ಮೇಲೆ ಕರಪ್ಷನ್ ಛಾರ್ಜಸ್ ಬಂತು. ಅದೂ ನಿಜ. ಇದರಲ್ಲಿ ನಿಮ್ಮ ಬಗ್ಗೆ ಅಥವಾ ಯಾರ್‍ಯಾರದ್ದು ಎಷ್ಟೆಷ್ಟು ಪಾಲು ಎಂದು ನಾನು ಹೇಳುವುದಿಲ್ಲ. Because of your friendship with the Ex. Chief Minister, you got your list of recruitments approved and published and the rest of the recruitments in other place did not take place. It is a fact. Only the selected list of Dharwar was approved and the rest of the recruitments in the entire state was stopped.

SRI P. RAMDEV.—Are you paying complements ?

SRI S. R. BOMMAI.—There was no allegations. And... .....

(Interruption)

SRI M. VEERAPPA MOILY.—It is borne out by records.

(Interruption)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯ್ಲಿಯವರು ಬೊಮ್ಮಾಯಿಯವರ ಮೇಲೆ ಬಹಳ ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ.

MR. SPEAKER.—It may be a complient also.

(Interruptions)

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಹಾಜರಿಲ್ಲದಿರತಕ್ಕ ಹಿಂದಿನ ಮುಖ್ಯಮಂತ್ರಿಯವರ ಸ್ನೇಹಿತ್ವದಲ್ಲಿ ಮಾನ್ಯ ಬೊಮ್ಮಾಯಿಯವರು ಏನೋ ತಪ್ಪು ಮಾಡಿದ್ದಾರೆಂದು ಮಾನ್ಯ ಮೊಯ್ಲಿಯವರು ಹೇಳಿದ್ದಾರೆ. ಈ ರೀತಿ ಸಭೆಯಲ್ಲಿ ಹಾಜರಿಲ್ಲದವರ ಮೇಲೆ ಇವರು ಆಪಾದನೆ ಮಾಡುವುದು ಸರಿಯೆ ? ಏಕೆಂದರೆ ಹಿಂದಿನ ಮುಖ್ಯಮಂತ್ರಿಗಳು ಈಗ ಸದನದಲ್ಲಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಇದು ನಡೆದಿರತಕ್ಕ ವಿಚಾರ.

ಶ್ರೀ ಮಂತ್ತಿನ ಪೆಂಡಿಮಾರ್.—ಅವರ ಬಗ್ಗೆ ಹೇಳುವುದು ಇನ್ನೂ ಬಹಳ ಇದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವರ ಬಗ್ಗೆ ಹೇಳುವುದು ಇನ್ನೂ ಬಹಳ ಇದೆಯೆಂದು ಮಾನ್ಯ ಸದಸ್ಯರಾದ ಮುತ್ತಿನ ಪೆಂಡಿಮಾರ್‌ರವರು ಹೇಳುತ್ತಿದ್ದಾರೆ.........

ಶ್ರೀ ವಿ. ಎಸ್. ಆಚಾರ್ಯ.—ಡಿ.ಎಲ್.ಆರ್.ಸಿ. ಮೇಲೆ ಭ್ರಷ್ಟಾಚಾರ ಆಪಾದನೆ ಬಂದಿದ್ದರಿಂದ ಅದನ್ನು ರದ್ದು ಮಾಡಬೇಕಾಯಿತು. ಲಾ ಅಂಡ್ ಆರ್ಡರ್ ಸಿಚುಯೇಷನ್ ಬಂತು, ಮಾನ್ಯ ಬೊಮ್ಮಾಯಿಯವರು ಪಾಸ್ ಮಾಡಿದ ಲಿಸ್ಟ್ ಮಾತ್ರ ಪಬ್ಲಿಷ್ ಆಯಿತು ಎಂದು ಮಾನ್ಯ ಮೊಯ್ಲಿಯವರು ಹೇಳಿದ್ದಾರೆ ......

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅಂದಿನ ಮುಖ್ಯ ಮಂತ್ರಿಗಳಿಗೆ ಏನು ಪತ್ರವನ್ನು ಬರೆದಿದ್ದೇನೆ ಎಂಬುದನ್ನು ತೆಗೆದು ನೋಡಿ. ಯಾರ ಮೇಲೆ ಅಲಿಗೇಷನ್ ಇದೆ ಎಂಬುದನ್ನೂ ಕೂಡ ವಿಚಾರ ಮಾಡಿ. It is a matter of records. ಕರ್ನಾಟಕದ ಜನತೆಗೇ ಗೊತ್ತಿದೆ. ಶ್ರೀ ವೀರಪ್ಪ ಮೊಯ್ಲಿಯವರು ಏನು ? ಅವರು ಏನು ಮಾಡಿದ್ದಾರೆ ! ಶ್ರೀ ಗುಂಡೂರಾಯರು ಏನು ಮಾಡಿ ಮಾಡಿದ್ದಾರೆ ? ನಾನು ಏನು ಮಾಡಿದ್ದೇನೆ ಎಂಬುದು ಎಲ್ಲಾ ಗೊತ್ತಿದೆ. ನಾನು ಮಾನ್ಯ ಗುಂಡೂರಾಯರಿಗೆ ಏನು ಪತ್ರವನ್ನು ಬರೆದಿದ್ದೇನೆಂಬುದನ್ನು ತಾವು ತೆಗೆಸಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಫೈಲು ತಮ್ಮ ಹತ್ತಿರವೇ ಇದೆ. ಸೇವೆ ತೆಗೆದು ನೋಡಿ ನಮಗೆ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮೊಯ್ಲಿಯವರು ಏನು ಮಾಡಿದ್ದಾರೆ ಎಂಬುದು ಗೊತ್ತಿದೆ ಎಂದು ಮಾನ್ಯ ಸಚಿವರು ಹೇಳಿದಮೇಲೆ ನಮಗೆ ಇದರಲ್ಲಿ ಅನುಮಾನ ಬರುತ್ತದೆ. ಅದು ಏನು ಎಂಬುದನ್ನು ಅವರು ಹೇಳಬೇಕು,

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕ ಸೋಪ್ ಫ್ಯಾಕ್ಟರಿಯಲ್ಲಿ ಏನು ಮಾಡಿದ್ದೀರೆಂದು ನನಗೆ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನೀವೂ ಕೂಡ ಶಾಮೀಲಾಗಿ ಏನು ಮಾಡಿದ್ದೀರಿ ಎಂಬುದು ನನಗೆ ಗೊತ್ತಿದೆ.........Because you provoked.........

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಏನು ಎಂಬುದನ್ನು ನಾನು ಹೇಳಬೇಕಾಗುತ್ತದೆ...

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಆ ಅಲೀಗೇಷನ್ ಏನು ಎಂಬುದನ್ನು ಅವರು ಹೇಳಬೇಕು. ಇಲ್ಲದಿದ್ದರೆ ನಮಗೆಲ್ಲಾ ಅನುಮಾನ ಬರುತ್ತದೆ.

SRI M. VEERAPPA MOILY.—Because he provoked me, I had to give those details.

ರಿಕ್ರೂಟ್‌ಮೆಂಟ್ ಕಮಿಟಿಗಳು ಎಂದು ಏನು ಮಾಡಿದ್ದೀರಿ ಅದರ ಬಗ್ಗೆ ಎನ್‌ಕ್ವಯರಿ ಮಾಡುತ್ತೇವೆ, ಕಮಿಷನ್ ಮಾಡುತ್ತೇವೆಂದು ಹೇಳಿದಿರಿ. ಏನಾದರೂ ಮಾಡಿ ನಾವು ಎಲ್ಲದಕ್ಕೂ ರೆಡಿ ಇದ್ದೇವೆ. ಆದರೆ ಹೇಳುತ್ತೇವೆಂದು ಕಲ್ಪನೆಮಾಡಿ ಹೇಳಬಾರದು.

ಶ್ರೀ ಪಿ. ರಾಮದೇವ್.—ಅದಕ್ಕೆ ಒಂದು ದಾರಿ ಇದೆ. ಪ್ರಿಯರ್ ನೋಟೀಸ್ ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಬೇಜವಾಬ್ದಾರಿಯಿಂದ ಮಾಡಿರತಕ್ಕಂಥ ಒಂದು ಪರಂಪರೆಯನ್ನು ತಾವು ಇಟ್ಟುಕೊಂಡು ಬಂದಿರುತ್ತೀರಿ. I am not referring to you individually. We are ready to face it. We will talk about it. ಇಷ್ಟಕ್ಕೆ ಸೀಮಿತಗೊಳಿಸದೇ ಒಮ್ಮೆಲೆ ಎದ್ದುನಿಂತು ಗಡಬಿಡಿ ಮಾಡಿದರೆ ಹೇಗೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಮಂತ್ರಿಮಂಡಲದಲ್ಲಿ ಏನು ನಡೆದಿರುತ್ತದೆ ಪಬ್ಲಿಕ್ ಆಗಿ ವಿವರವಾಗಿ ನಡೆದದ್ದನ್ನು ನೋಡಿಕೊಂಡು ಹೇಳುವುದಕ್ಕೆ ಮೊದಲು ನೋಡಬೇಕಾಗಿತ್ತು. ನಿಮ್ಮ ಮುಖ್ಯಮಂತ್ರಿಗಳ ಮೇಲೆ ಎಂದಾದರೂ ನಾವು ಆಪಾದನೆ ಮಾಡಿದ್ದೇವೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಕರ್ನಾಟಕ ರಾಜ್ಯದ ಜನತೆಗೆ ಗೊತ್ತು, ನಾವು ಏನು ಮಾಡಿದೆವು. ಮತ್ತೆ ನೀವು ಏನು ಮಾಡುತ್ತಿದ್ದೀರಿ ಎನ್ನುವುದು. ಈಗ ಅದು ಏತಕ್ಕೆ ಚರ್ಚೆ ಮಾಡಬೇಕು. ಸಾಕಷ್ಟು ಇದರ ಬಗ್ಗೆ ಚರ್ಚೆ ನಡೆದಿದೆ, ಎಕ್ಸ್‌ಫೆಕ್ಟೆಡ್ ಫ್ಯಾಕ್ಟ್ಸ್, ಡೆಸ್‌ಪ್ಯೂಟ್ ಫ್ಯಾಕ್ಟ್ಸ್ ಏನಾದರೂ ಇದ್ದರೆ ಹೇಳಬಹುದಾಗಿತ್ತು. ಈಗ ಅಧ್ಯಕ್ಷರೇ ಏನಾಗಿದೆ ಎಂದರೆ, ನನ್ನ ಬ್ರದರ್-ಇನ್‌ಲಾ ಎಂದು ಹೇಳಿದಿರಿ. ನನ್ನ ಬ್ರದರ್ ಇನ್ ಲಾ ಯಾರು ? One of my brother-in-law is in Bombay and he is running some workshop.

ಶ್ರೀ ಎಸ್. ಆರ್. ಬೊಮ್ಮಾಯಿ....ನಿಮ್ಮ ಸಂಬಂಧೀಕರಿಗೆ ಏಜೆನ್ಸಿ ಕೊಟ್ಟಿದೆ ಎಂದು ಹೇಳಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ನನ್ನ ಸಂಬಂಧೀಕರಿಗೆ ಏನಾದರೂ ಏಜೆನ್ಸಿಯನ್ನು ಕೊಟ್ಟಿದ್ದರೆ ನಾನು ರಾಜಿನಾಮೆಯನ್ನು ಕೊಡುತ್ತೇನೆ.

SRI S. R. BOMMAI.—I will give the particulars.

SRI M. VEERAPPA MOILY.—Then I must say there is something in the DLRC at Dharwad.

SRI S. R. BOMMAI.—Sir, in Karnataka Soaps and Detergents factory.........

ಶ್ರೀ ಎಂ. ವೀರಪ್ಪಮೊಯಿಲಿ.—ಪ್ರಾಮಾಣಿಕರಾಗಿದ್ದರೆ ಶಾಂತರೀತಿಯಿಂದ ಕುಳಿತುಕೊಂಡು ಕೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಕೂಡ ಇದರಲ್ಲಿ ಭಾಗಿಯಾಗಿದ್ದೀರಿ ಎಂದು ಅನುಮಾನ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕರ್ನಾಟಕದ ಜನತೆಗೆ ಗೊತ್ತಿದೆ.

SRI M. VEERAPPA MOILY.—You are trying to prove it. Sir, The Minister must be asked to behave properly......... ಆದ್ದರಿಂದ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಫಾರಮ್ ಮಾಡಿದ್ದೇವೆಂದು ಹೇಳಿದಿರಿ. ಇದರಲ್ಲಿ ನಿಮ್ಮ ಪಕ್ಷದವರನ್ನೇ ಏಕಪಕ್ಷೀಯವಾಗಿ ಹಾಕಿದ್ದೀರಿ. ಇದರಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಹಾಕಿರಬಹುದು. ರಿಕ್ರೂಟ್‌ಮೆಂಟ್ ಕಮಿಟಿ ಎಂದು ಮಾಡಿಕೊಂಡು ಭ್ರಷ್ಟಾಚಾರದ ಆಪಾದನೆ ಇದ್ದು, ಭ್ರಷ್ಟಾಚಾರ ಆಗಿದೆ ಎಂದು ಅವರು ಒಪ್ಪಿಕೊಂಡ ಮೇಲೆ ಎರಡು ಕಮಿಟಿಗಳನ್ನು ಕೂಡ ರದ್ದು ಮಾಡಿದ್ದೀರಿ, ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಕೂಡ ಏಕಪಕ್ಷೀಯವಾಗಿ ಆಗಿದೆ. ತಾವು ಹೇಳಿದ್ದು ಕೂಡ ಮಾಡಿದ್ದಾರೆ. ತಮ್ಮ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಮಾಡಿದ್ದಾರೆ. ಅನೇಕ ಕಡೆ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ಅಪೋಜಿಷನ್ ಕಡೆಯವರು ಹೇಳಿದ್ದನ್ನು ಮಾಡಿದ್ದಾರೆ. ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. Sir, these Boards and Corporations have all become 'Political Chocolates' manufactured in the Workshop of Sri Ramakrishna Hegde.

ಶ್ರೀ ಎನ್. ಜಿ. ನಾಯಕ್.—ನಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ಡೆಪ್ಯುಟಿ ಚೇರ್‌ಮನ್‌ರವರನ್ನು ವಿರೋಧ ಪಕ್ಷದವರನ್ನು ಮಾಡಿದ್ದೆವು. ನಿಮ್ಮ ಸರ್ಕಾರ ಬಂದ ಮೇಲೆ ಏನು ಮಾಡಿರುತ್ತೀರಿ ?

ಶ್ರೀ ಎಂ. ವೀರಪ್ಪಮೊಯಿಲಿ.—ಡೆಪ್ಯುಟಿ ಚೇರ್‌ಮನ್ ಮಾಡಿದ್ದೆವು. ಅಂಥ ಒಂದು ಸತ್ ಸಂಪ್ರದಾಯವನ್ನು ನಿಮ್ಮ ಸರ್ಕಾರ ಬಂದಮೇಲೆ ಬಿಟ್ಟು ಬಿಟ್ಟಿರುತ್ತೀರಿ. ಮಾನ್ಯ ಕೃಷ್ಣಯ್ಯರವರನ್ನು ಡೆಪ್ಯುಟಿ ಚೇರ್‌ಮನ್ ಮಾಡಿದ್ದೆವು. ಆ ಒಂದು ಸತ್ ಸಂಪ್ರದಾಯಕ್ಕೆ ತಿಲಾಂಜಲಿಯನ್ನು ಕೊಟ್ಟಿರುತ್ತೀರಿ. ನಿಮ್ಮ ದೃಷ್ಟಿಕೋನವೇ ಬೇರೆ. ಕುದುರೆಗೆ ಜೀನುಹಾಕಿದಹಾಗೆ, ಅದು ಜಗತ್ತನ್ನೇ ನೋಡುವುದಿಲ್ಲ. ಮತ್ತೆ ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿಯೂ ಕೂಡ ತಮಗೆ ಬೇಕಾದವರನ್ನು ಹಾಕಿರುತ್ತೀರಿ. ನಮ್ಮ ಮಾನ್ಯ ನಾಡಫ್‌ರವರು ಅವರ ಕಾನ್‌ಸ್ಟಿಟ್ಯುಯನ್ಸಿಯ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಇದ್ದರು ಅವರನ್ನು ತೆಗೆದುಬಿಟ್ಟಿರುತ್ತೀರಿ. ಈರೀತಿಯಾಗಿ ಬಹಳಷ್ಟು ಎಂಎಲ್‌ಎಗಳನ್ನು ತೆಗೆದುಬಿಟ್ಟಿರುತ್ತೀರಿ ಎಂ.ಎಲ್.ಎ. ರೆಪ್ರಿಸೆಂಟೇಷನ್ ಇಲ್ಲದಿದ್ದರೆ ಅವರ ನಾಮಿನಿಯನ್ನು ಹಾಕಬೇಕಾಗಿತ್ತು. ಅವರನ್ನೂ ಕೂಡ ಹಾಕಲಿಲ್ಲ. ನಿಮ್ಮ ಪಕ್ಷದವರಿಗೆ ಸಹಾಯವಾಗಬೇಕು ಎನ್ನುವ ದೃಷ್ಟಿಯಿಂದ ಹೀಗೆ ಮಾಡಿರುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಎರಡರಲ್ಲಿ ಸದಸ್ಯರಾಗಿದ್ದರು. ಒಂದರಲ್ಲಿ ತೆಗೆದಿರುತ್ತೇವೆ. ಮತ್ತೊಂದರಲ್ಲಿ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಬೇರೆ ತಾಲ್ಲೂಕಿನಲ್ಲಿಯೂ ಇದ್ದರು. ಅವರನ್ನು ಟ್ರಿಬ್ಯುನಲ್‌ನಿಂದ ತೆಗೆದುಹಾಕಿದಮೇಲೆ ಅವರ ನಾಮಿನಿಯನ್ನು ಹಾಕಬೇಕಾಗಿತ್ತು. ಅವರನ್ನೂ ಕೂಡ ಹಾಕಲಿಲ್ಲ.

ಆಮೇಲೆ ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ೫೦ ಪರ್ಸೆಂಟ್ ಓರಲ್ ಎಂದು ಮಾಡಿದ್ದೀರಿ. ಮೆಡಿಕಲ್ ಕಾಲೇಜುಗಳಲ್ಲಿ ಎಕ್ಸಾಮಿನ್ ಮಾಡುವಾಗ ಅಲ್ಲಿ ಲಿಸ್ಟ್ ಮಾಡಿ ಹಾಕುತ್ತಾರೆ. ಅವರ ಪಕ್ಷದವರೇ ಇರುತ್ತಾರೆ. ಬಿ.ಜೆ.ಪಿ. ಪಕ್ಷದವರೇ ಇರುತ್ತಾರೆ. ಕಾಂಗ್ರೆಸ್ ಪಕ್ಷದವರು ಇರುವುದೇ ಇಲ್ಲ. ಹುಡುಗರು ಹೋದವರು ಹೇಳುತ್ತಾರೆ. ಜನತಾ ಪಕ್ಷದ ಲಿಸ್ಟ್ ಇದೆ. ಬಿಜೆಪಿ ಲಿಸ್ಟ್ ಇದೆ. ನಮಗೆ

ಯಾವ ಲಿಸ್ಟ್ ಇಲ್ಲವೆಂದು ಹೇಳುತ್ತಾರೆ. ೫೮ ಪರ್ಸೆಂಟ್ ಬಂದವರಿಗೂ ಕೂಡ ಸೀಟು ಸಿಗುತ್ತದೆ. ೭೦ ಪರ್ಸೆಂಟ್ ಬಂದಿದ್ದರೂ ನನಗೆ ಸೀಟ್ ಇಲ್ಲವೆಂದು ಹೇಳುತ್ತಿದ್ದಾರೆ. ಈರೀತಿ ಮಾಡಿದರೆ ನೀವು ಉದ್ಯೋಗವನ್ನು ಕೊಟ್ಟು ಏನು ಸಾಧನೆ ಮಾಡುತ್ತೀರಿ ? ಸಮಾಜದಲ್ಲಿ ನೆಮ್ಮದಿಯನ್ನು ತರುತ್ತೇವೆಂದು ಹೇಳತಕ್ಕಂಥವರು ಈ ಒಂದು ಕ್ರಮವನ್ನು ಅನುಸರಿಸುತ್ತಿರುವುದರಿಂದ ಸಂಪೂರ್ಣವಾಗಿ ಸಮಾಜದಲ್ಲಿ ನೆಮ್ಮದಿಯನ್ನು ಕದಡತಕ್ಕಂಥ ಭಾವನೆ ತಮ್ಮ ಮೇಲೆ ಬರತಕ್ಕಂಥ ಪ್ರಸಂಗ ಕೂಡ ಇದೆ ಎಂದು ಈವತ್ತು ಎಚ್ಚರಿಕೆಯನ್ನು ಕೊಡುತ್ತಾ ಇದ್ದೇನೆ. ಇನ್ನು ಬೋರ್ಡ್ ಕಾರ್ಪೊರೇಷನ್‌ಗಳೆಂದು ಮಾಡುತ್ತಿರುತ್ತೀರಿ. ಇದು ಒಂದು ಚಾಕಲೇಟ್ಸ್ ಇದ್ದಹಾಗೆ ಇರುತ್ತದೆ. ನಿಮಗೆ ಬಾಯಲ್ಲಿ ನೀರು ಬರುತ್ತಿರಬಹುದು. ಇದು ಒಂದು ರೀತಿಯಾಗಿ ಪೊಲಿಟಿಕಲ್ ಚಾಕಲೇಟ್ಸ್ ಆಗಿದೆ. ಕಾರ್ಪೊರೇಷನ್ ಅಧ್ಯಕ್ಷ ಪದವಿಯನ್ನು ಕೊಡುವುದಕ್ಕೆ ಮಾನ್ಯ ಕೃಷ್ಣನ್‌ರವರಿಗೆ ಗೊತ್ತಿದೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಮಾನ್ಯ ದೇವೇಗೌಡರು ಹಾರಾಟ ಹಾರಾಡಿದ್ದೆ ಹಾರಾಡಿದ್ದು. ನಾವು ಈರೀತಿ ಮಾಡುತ್ತೇವೆ, ನಾವು ಖರ್ಚು ಕಡಿಮೆ ಮಾಡುತ್ತೇವೆ. ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಲ್ಲವನ್ನು ಕಡಿಮೆ ಮಾಡಿಬಿಡುತ್ತೇವೆಂದು ಹೇಳಿ ಎಷ್ಟೋ ಕಾರ್ಪೊರೇಷನ್‌ಗಳನ್ನು ಬೋರ್ಡ್‌ಗಳನ್ನು ಹೆಚ್ಚು ಮಾಡಲಿಕ್ಕೆ ಹೊರಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಎಷ್ಟು ಮಾಡಿದರೂ ಮಧ್ಯಪ್ರದೇಶದಷ್ಟು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪ್ಪನಾಳ್‌ರವರಿಗೆ ಅಧ್ಯಕ್ಷ ಪದವಿಯನ್ನು ಕೊಟ್ಟಿರಿ. ಬಹಳ ದೊಡ್ಡ ಸಂತೋಷ. ಅವರಿಗೆ ಇತ್ತೀಚೆಗೆ ಸನ್ಮಾನ ನಡೆಯಿತು ಅವರ ಊರಿನಲ್ಲಿ ಬಹಳ ದೊಡ್ಡ ಸನ್ಮಾನ.

ಅಧ್ಯಕ್ಷರು.—ಸಭೆಯ ಹೊರಗೆ ನಡೆದದ್ದು.

ಶ್ರೀ ಎಂ. ವೀರಪ್ಪಮೊಯಿಲಿ.—ಬಹಳ ದೊಡ್ಡ ಇನ್‌ವಿಟೇಷನ್ ಮಾಡಿಸಿದ್ದರು. ಇಲ್ಲಿಂದ ೮-೯ ಜನ ಅಧ್ಯಕ್ಷರು ಹೋದರು. ಜೊತೆಗೆ ಗೂಟದ ಕಾರು ಇಟ್ಟುಕೊಂಡು ೧೦ ಜನ ಮಿನಿಸ್ಟರು ಹೋದರು.

ಅಧ್ಯಕ್ಷರು.—ಅದು ಅರ್ಬನ್ ಡೆವಲಪ್‌ಮೆಂಟ್ ಕಾರ್ಪೊರೇಷನ್.

೧೦-೩೦. ಎ.ಎಮ್.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವರ ಸನ್ಮಾನ ಪತ್ರಿಕೆಯನ್ನು ನೋಡಿದಾಗ ಮಾನ್ಯ ಉಪನಾಳ್ ಅವರು ಹೊಸದಾಗಿ ಮದುವೆಯಾಗುತ್ತಿದ್ದಾರೆಂದು ನಾನು ತಿಳಿದುಕೊಂಡೆ. ಇವರ ಒಂದು ಅಧ್ಯಕ್ಷ ಪದವಿಗೆ ಸನ್ಮಾನ ಮಾಡುವುದಿದ್ದರೆ ಇವರು ಆ ಹುದ್ದೆಯನ್ನು ವಹಿಸಿಕೊಂಡ ಕೂಡಲೇ ಮಾಡಬಹುದಾಗಿತ್ತು. ಆದರೆ ಆರೇಳು ತಿಂಗಳನಂತರ ನಡೆಯಿತು. ಆದ್ದರಿಂದ ಇವರು ಹೊಸದಾಗಿ ಮದುವೆ ಮಾಡಿಕೊಳ್ಳುತ್ತಿರಬಹುದೆಂದು ನಾನು ತಿಳಿದುಕೊಂಡೆ. ಒಂದು ವೇಳೆ ಅದೇನಾದರು ಮದುವೆ ಸನ್ಮಾನವಾಗಿದ್ದರೆ ನನಗೂ ಸಹ ಅವರು ದಯಮಾಡಿ ಊಟ ಕೊಡಬೇಕು. ಈ ಬಗ್ಗೆ ಮಾನ್ಯ ಬೊಮ್ಮಾಯಿ ಅವರು ಅವರಿಗೆ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯ್ಲಿ. ಅವರ ಸಲಹೆ ಯಾವ ರೀತಿ ಇದೆ ಎಂದರೆ......

ಅಧ್ಯಕ್ಷರು.—ಈಗ ನಿಮಗೆ ಏಕೆ ಎಚ್ಚರವಾಯಿತು ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಮದುವೆ ಎಂದ ತಕ್ಷಣ ಅವರು ಎದ್ದುನಿಲ್ಲುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರಲ್ಲಿ ಕಾನೂನಿನ ತೊಡಕು ಇದೆ. ಇದು ಮಾನ್ಯ ಮೊಯ್ಲಿ ಅವರಿಗೂ ಗೊತ್ತಿದೆ. ಕಾನೂನು ಪ್ರಕಾರ ಎರಡನೇ ಸಲ ಮದುವೆಯಾಗುವಂತಿಲ್ಲ ಆದರೂ ಇವರಿಗೆ ಎರಡನೆ ಸಲ ಮದುವೆ ಮಾಡಿಸಿ ಜೈಲಿಗೆ ಕಳುಹಿಸಬೇಕೆಂಬ ಉದ್ದೇಶವೇನಾದರೂ ತಮಗೆ ಇದೆಯೇ ?

ಶ್ರೀ ಎಂ. ರಾಮಪ್ಪ.—ಮಾನ್ಯ ಕಾನೂನು ಮಂತ್ರಿಗಳ ವಿಚಾರವನ್ನು ಇಲ್ಲಿ ಯಾರೂ ಮಾತನಾಡಲಿಲ್ಲವೆಂದು ಅವರಿಗೆ ಸಿಟ್ಟು ಬಂದಿರಬಹುದು. ಅವರು ಮತ್ತು ಮಾನ್ಯ ರಘುಪತಿಯವರು ಜಾಗ್ರತೆ ಮದುವೆ ಮಾಡಿಕೊಂಡರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯ್ಲಿ.--ಅವರು ಇನ್ನೊಂದು ಮದುವೆಯಾಗಿ ಜೈಲಿಗೆ ಹೋಗಬೇಕಾಗಿಲ್ಲ. ಅವರು ಹೊಸದಾಗಿ ಮದುವೆಯಾಗಿದ್ದರೆ ನಮಗೆ ಊಟ ಕೊಡಬೇಕೆಂಬುದೇ ನಮ್ಮ ಬೇಡಿಕೆ.

MR. SPEAKER.--He is good host.

ಶ್ರೀ ಎಂ. ವೀರಪ್ಪಮೊಯ್ಲಿ.--ಹೊಸ ಮದುಮಗನ ಊಟ ಬಹಳ ಚೆನ್ನಾಗಿರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದರಲ್ಲಿ ಏನೋ ಇದೆ. ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.--ಈ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲಿ ನಮಗೂ ಪಾಲು ಇರಲಿ ಎಂದು ಬಿ.ಜೆ.ಪಿ.ನವರು ಸಹ ಕೇಳಿ ಪಡೆದು ಕೊಂಡಿದ್ದಾರೆ. They have also knocked away some chunk of the Chairmanship, some four or so, ಇದು ಇಂದೂರಿನ ಸಮ್ಮೇಳನದ ಫಲ ಸೃಷ್ಟಿ ಎಂದು ಹೇಳಬಹುದು.

ಶ್ರೀ ವಿ. ಎಸ್. ಆಚಾರ್ಯ.--ಅಂದರೆ ನಾವು ಹಿಮಾಲಯ ಬೆಟ್ಟ ಹತ್ತಿರ ಹೋಗಿ ತಪಸ್ಸು ಮಾಡಬೇಕೆಂದು ಹೇಳುತ್ತೀರಾ? ಒಂದು ಸಲ ನಾವು ರಾಜಕೀಯಕ್ಕೆ ಬಂದಮೇಲೆ, ನಮ್ಮಲ್ಲಿ ಆಡಳಿತದ ಬಗ್ಗೆ ಅನುಭವವಿರುವವರನ್ನು ಉಪಯೋಗ ಮಾಡಿಕೊಳ್ಳುವುದು ಆಡಳಿತಪಕ್ಷದವರಿಗೆ ಬಿಟ್ಟದ್ದು. ಈ ಬಗ್ಗೆ ನಾವು ಅವರಲ್ಲಿ ಭಿಕ್ಷೆ ಕೇಳುವುದು ಏನೂ ಇಲ್ಲ.

SRI. M. VEERAPPA MOILY.—In a good sense I said.

ಶ್ರೀ ವಿ. ಎಸ್. ಆಚಾರ್ಯ.--ನಾನು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ, ಏನೆಂದರೆ, ಈ ವಿಚಾರದಲ್ಲಿ ನಮ್ಮ ಹೈ-ಕಮ್ಯಾಂಡ್‌ನವರು ಒಂದು ತೀರ್ಮಾನ ತೆಗೆದುಕೊಂಡಾಗ ನಮ್ಮ ಶಾಸಕರು ಯಾರೂ ಈ ಹುದ್ದೆಗಳನ್ನು ವಹಿಸಿಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ತಾವು ಮೆಚ್ಚಿಕೊಳ್ಳಬೇಕು. ಇಂಥಾದ್ದನ್ನು ನೀವು ಹೇಳುವುದಿಲ್ಲ. ಒಂದು ಸಲ ರಾಜಕೀಯಕ್ಕೆ ಬಂದಮೇಲೆ ಮನೆಮಠ ಬಿಟ್ಟು ಹಿಮಾಲಯಾ ಬೆಟ್ಟದ ಹತ್ತಿರ ಹೋಗಿ ತಪಸ್ಸು ಮಾಡುವುದಕ್ಕಾಗುವುದಿಲ್ಲ, ಅವಕಾಶ ಸಿಕ್ಕಿದಾಗ ಅದನ್ನು ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು ?

ಶ್ರೀ ಗೋವಿಂದ ಪಿ. ಒಡೆಯರಾಜ್.--ಹಾಗಿದ್ದರೆ ತಾವೂ ಸಹ ಮಂತ್ರಿ ಮಂಡಲಕ್ಕೆ ಸೇರಿಬಿಡಿ.

(ಗೊಂದಲ)

ಶ್ರೀ ಕೆ. ರಾಮಭಟ್.--ಮಾನ್ಯ ಅಧ್ಯಕ್ಷರೇ ಬಿ.ಜೆ.ಪಿ.ಯವರು ಮಂತ್ರಿಮಂಡಲಕ್ಕೆ ಸೇರಬೇಕೆಂದು ಸಲಹೆ ಮಾಡುತ್ತಿದ್ದಾರೆ. ಆದರೆ ನಾವು ಸೇರುವುದಕ್ಕೆ ಮೊದಲು ಅವರ ಕಡೆ ಮಂತ್ರಿಗಳಾಗಲು ಎಷ್ಟು ಜನ ತಯಾರಿದ್ದಾರೆಂಬುದನ್ನು ಮೊದಲು ನೋಡಿಕೊಳ್ಳಲಿ.

ಶ್ರೀ ಎಂ. ವೀರಪ್ಪಮೊಯ್ಲಿ.--ನಿಮ್ಮ ಪಕ್ಷದವರು ಕೆಲವು ಹುದ್ದೆಗಳನ್ನು ವಹಿಸಿಕೊಂಡಿದ್ದು ಒಳ್ಳೆಯದಾಯಿತು. ಒಳ್ಳೆಯ ಕೆಲಸಗಳನ್ನು ಮಾಡಿ. ಆದರೆ ನಾನು ಏನು ಹೇಳಿದೆ ಎಂಬುದನ್ನು ತಾವು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲವೆಂದು ಕಾಣುತ್ತದೆ. ಇವರು ಒಳ್ಳೆಯ ಕೆಲಸ ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ನನಗೆ ಅನುಮಾನ ಇದೆ ಎಂದು ಹೇಳಿದ್ದೇ ಹೊರತು ನಿಮ್ಮ ಬಗ್ಗೆ ನಾನು ಹೇಳಲಿಲ್ಲ.

ಡಾ. ವಿ. ಎಸ್. ಆಚಾರ್ಯ.--ನಮ್ಮ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿದೆ, ನೀವು ಬಿ.ಜೆ.ಪಿ. ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದೀರಿ. ೧೯೬೭ರಿಂದಲೂ ನಿಮಗೆ ನಮ್ಮ ಪರಿಚಯವಿದೆ. ಆದರೂ ಇದರಲ್ಲಿ ರಾಜಕೀಯ ಸೇರಿಸಿ ಹೇಳುತ್ತೀರಿ.

MR. SPEAKAR.—Though belated, please accept the congratulation Mr. Acharya.

SRI. M. VEERAPPA MOILY.--You have got better right than them to get those posts. You are entitled for something more ಏಕೆಂದರೆ, ಇವರು ನಿಮ್ಮಿಂದ ಸರ್ಕಾರದ ರಚನೆ ಮಾಡಿದ್ದಾರೆ.

ಶ್ರೀ ವೈ. ಕೆ. ರಾಮಯ್ಯ,—ಮಾನ್ಯ ವಿರೋಧಪಕ್ಷದ ನಾಯಕರು ಬೋರ್ಡ್ ಮತ್ತು ಕಾರ್ಪೊರೇಷನ್‌ಗಳನ್ನು ಚಾಕಲೇಟ್ ಎಂದು ಹೇಳಿದರು. ಇದರಿಂದ ನನ್ನ ಮನಸ್ಸಿಗೆ ಆದಂಥ ವೇದನೆಯನ್ನು ಹೇಳಬೇಕಾಗಿದೆ. ಆದ್ದರಿಂದ ಅವರು ಈಲ್ಡ್ ಆದರೆ ಕೆಲವು ವಿಚಾರಗಳನ್ನು ಹೇಳುತ್ತೇನೆ.

SRI. M. VEERAPPA MOILY—There is no cause of action. He need not reply. I am not eildying.

ಶ್ರೀ ವೈ. ಕೆ. ರಾಮಯ್ಯ.—ಸರ್ಕಾರದ ಬೆಂಬಲಕ್ಕಾಗಿ ನಮ್ಮನ್ನು ಈ ರೀತಿ ನೇಮಕ ಮಾಡಿದ್ದಾರೆಂದು ಹೇಳಿದ್ದನ್ನು ಕೇಳಿ ನನ್ನ ಮನಸ್ಸಿಗೆ ನೋವಾಗಿದೆ.

MR. SPEAKER.—You cannot be so sensitive about this.

(INTERRUPTIONS)

MR. SPEAKER.—Order please......

ಶ್ರೀ ವೈ. ಕೆ. ರಾಮಯ್ಯ.—ಅವರು ಅಧಿಕಾರದಲ್ಲಿದ್ದಾಗ ಎಷ್ಟು ಸುಖ ಅನುಭವಿಸಿದ್ದಾರೋ ನನಗೆ ಗೊತ್ತಿಲ್ಲ. ಆದರೆ ನಾನು ಈ ಹುದ್ದೆಯಲ್ಲಿದ್ದುಕೊಂಡು ಯಾವ ಸುಖವನ್ನೂ ಅನುಭವಿಸುತ್ತಿಲ್ಲ. ಗೂಟದ ಕಾರಿಗಾಗಿ ಮತ್ತು ಅಧಿಕಾರಸ್ಥಾನದ ಆಸೆಗಾಗಿ ನಾನು ಶ್ರೀ ಹೆಗಡೆ ಅವರ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದೇನೆ ಎಂಬ ಅಭಿಪ್ರಾಯ ಅವರ ಮಾತಿನಿಂದ ಬರುತ್ತದೆ ಆದ್ದರಿಂದ ಅವರು ದೊಡ್ಡ ಮನಸ್ಸು ಮಾಡಿ ಯಾರ ಬಗ್ಗೆಯಾದರೂ ವೈಯಕ್ತಿಕವಾಗಿ ಏನಾದರೂ ಇದ್ದರೆ ಹೇಳಬೇಕೇ ಹೊರತು ಸಾರ್ವತ್ರಿಕವಾಗಿ ಈ ರೀತಿ ಹೇಳುವುದು ಸರಿಯಲ್ಲವೆಂದು ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ,

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಜನರಲ್ ಆಗಿ ಮಾತನಾಡಿದೆ. There are sincere people like you. I have never said all Chairman are bad. There may be some people who want to serve the State and you may be one of them. ಆದ್ದರಿಂದ ತಾವು ಏತಕ್ಕೆ ಆ ರೀತಿ ಹೇಳುತ್ತೀರಿ.

ಶ್ರೀ ವೈ. ಕೆ. ರಾಮಯ್ಯ.—ತಾವು ಸಾರ್ವತ್ರಿಕವಾಗಿ ಹೇಳಿದ್ದರಿಂದ ನಾನು ಹೇಳಬೇಕಾಯಿತು. ತಾವು ಕೆಲವರು ಎಂದು ಬೇಕಾದರೆ ಹೇಳಿ ;

SRI M. VEERAPPA MOILY.—If they become so sensitive about this why should they accept public offices at all.

SRI Y. K. RAMAIAH—I am very sorry. I have not accepted public office to take these blames.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಇನ್ನು ನಾನು ಗೃಹ ಇಲಾಖೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಗೃಹ ಇಲಾಖೆಯಲ್ಲಿ ಸುಮಾರು ಆರು ತಿಂಗಳಿಂದ ಸಾವಿರಾರು ಜನ ಪೋಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. Since about 6 months, they deuoted on transferring police offibcers. ದೇವೇಗೌಡರು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರೆ ಅದನ್ನು ಬೊಮ್ಮಾಯಿಯವರು ಕ್ಯಾನ್ಸಲ್ ಮಾಡಿಸುವುದು ಮತ್ತು ಬೊಮ್ಮಾಯಿಯವರು ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದವರನ್ನು ದೇವೇಗೌಡರು ಕ್ಯಾನ್ಸಲ್ ಮಾಡಿಸುವುದು ಇಂತಹ ಒಂದು ಪರಿಸ್ಥಿತಿ ಸುಮಾರು ೬ ತಿಂಗಳಿಂದ ಈ ಗೃಹ ಇಲಾಖೆಯಲ್ಲಿ ನಡೆದುಕೊಂಡು ಬಂದಿದೆ. ಇನ್ನು ತಮಗೆ ಗೊತ್ತಿರುವ ಹಾಗೆ ಒಬ್ಬ ಡಿ. ಜಿ. ಪಿ. ಯವರ ಮೇಲೆ ಕುದೂರ್ ಆಯೋಗವನ್ನು ನೇಮಕ ಮಾಡಿದರು. ಅವರ ಮೇಲೆ ಅನೇಕ ಆಪಾದನೆಗಳು ಇವೆ. Government sent charge sheet prior to his becoming DGP. ಆ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಕೂಡ ತಿಳಿಸಬೇಕು. Absolve him from the charges which are made so that he will be free to work dispassionately. ತಾವು ಅವರ ಬಗ್ಗೆ ಯಾವ ಕ್ರಮವನ್ನು ಸಹ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. If you want to carry this responsiblity on his head. ಅದನ್ನು

ಮೊದಲು ಮಾಡಿ It is like hanging sword on his head, Chargesheet ತಮ್ಮ ಕಾಲದಲ್ಲಿಯೇ ಕಳುಹಿಸಿ ಕೊಟ್ಟಿದ್ದೀರಿ. ಆತ ಒಂದು ವೇಳೆ ಏನು ತಪ್ಪು ಮಾಡಿಲ್ಲವೆಂದು ಕಂಡು ಬಂದರೆ ಆತ ಶಿಕ್ಷೆಗೆ ಅರ್ಹನಲ್ಲವೆಂದು ತೀರ್ಮಾನ ಮಾಡಿ ಇಲ್ಲದಿದ್ದರೆ ಆತನ ಮೇಲೆ ಸೂಕ್ತ ಕ್ರಮ ತೆಗೆದು ಕೊಳ್ಳಿ. Officer who has got to serve fearlessly, objectively dispossionately, do not mak eto worry every day and night. He may not sleep. He does not know when the hanging sword will fall on him. ಆದರೆ ಅದೇ ಉನ್ನತ ಅಧಿಕಾರಿಯನ್ನು ಈ ಸರಕಾರದವರು ಪ್ರೋಮೋಟ್ ಮಾಡಿದ್ದಾರೆ. ಆದರೆ ನಾನು ಅವರ ವೈಯಕ್ತಿಕ ವಿಷಯವನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಇಂಥ ಕೆಲಸವನ್ನು ಮಾತ್ರ ದಯಮಾಡಿ ಮಾಡಬೇಡಿ. ಆದರೆ ಸರ್ಕಾರದವರು. ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಹಿಂದಿನ ಸರ್ಕಾರ ಇದ್ದಾಗ ಆ. ಡಿ. ಜಿ. ಪಿ. ಯವರನ್ನು ಬಳ್ಳಾರಿಗೆ ವರ್ಗಾವಣೆ ಮಾಡಿದ್ದರು. ಮತ್ತೆ ಬಳ್ಳಾರಿಯಲ್ಲಿ ಕೂಡ ಬೆಂಗಳೂರಿನಲ್ಲಿ ನಡೆದಂಥ ಘಟನೆಗಳು ನಡೆದಿವೆ. Are you going to sacrifice D. G. P. for such incident ? you don't follow the same precedent. ಒಬ್ಬರಿಗೆ ಒಂದು ರೀತಿಯ ಟ್ರೀಟ್‌ಮೆಂಟ್ ಮತ್ತೊಬ್ಬರಿಗೆ ಮತ್ತೊಂದು ರೀತಿಯ ಟ್ರೀಟ್ ಮೆಂಟ್ ಈ ರೀತಿ ಮಾಡುವುದು ಸರಿಯಲ್ಲ. ಎಲ್ಲರಿಗೂ ಒಂದೇ ರೀತಿಯ ಟ್ರೀಟ್‌ಮೆಂಟ್ ಕೊಡಬೇಕು. ಅದು ನಿಮ್ಮ ಒಳ್ಳೆಯ ಸಂಪ್ರದಾಯದ ಮುಖ್ಯ ಉದ್ದೇಶ. You could have given him that post not exactly on Bellary incident pretext. If you have brought the DGP it is absolutely your prerogative. ತಾವು ಹೋಗತಕ್ಕಂಥ ದಾರಿಯಲ್ಲಿ ಯಾರಿಗೂ ಕೂಡ ಕೆಟ್ಟದ್ದು ಮಾಡಬಾರದು. ಯಾವುದೇ ರೀತಿಯಲ್ಲಿ ಪಕ್ಷಪಾತವನ್ನು ತಾವು ಮಾಡಬಾರದು. ಇದರಿಂದ ಏನಾಗುತ್ತದೆ ಎಂದರೆ ಜನತೆಯಲ್ಲಿ ಮತ್ತು ಅಧಿಕಾರಿಗಳಲ್ಲಿ ಒಂದು ರೀತಿಯ ಅತೃಪ್ತಿಯುಂಟಾಗುತ್ತದೆ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಸ್ವಾಮಿ ಡಾಕ್ಟರ್ ಕೃಷ್ಣನ್ ರವರ ಬಗ್ಗೆ......

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ ನಾವು ತಪ್ಪು ಮಾಡಿದ್ದರಿಂದಲೇ ಜನತೆ ನಿಮ್ಮನ್ನು ಅಲ್ಲಿ ತಂದು ಕೂರಿಸಿದ್ದಾರೆ. People will judge it. Don't make your live shortlived by taking such precedents. If you want to shortlive, you do it. ತಾವು ಅನೇಕ ಕಮಿಷನ್‌ಗಳನ್ನು ನೇಮಕ ಮಾಡಿದ್ದೀರಿ. ಆದರೆ ಯಾವ ಕಮೀಷನ್ ವರದಿಯನ್ನು ಸಹ ಫಾಲೋ ಅಪ್ ಆಕ್ಷನ್ ತೆಗೆದು ಕೊಂಡಿಲ್ಲ ಆದ್ದರಿಂದ ಇವೊತ್ತು ಹೈಕೋರ್ಟಿನಲ್ಲಿ ನ್ಯಾಯಾಧೀಶರು ಕಮಿಷನ್ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಒಪ್ಪಿಕೊಳ್ಳುವುದಿಲ್ಲ. ಈಗ ತಾವು ಎ. ಜಿ. ಆನಂದರವರನ್ನು ಕೇಂದ್ರ ಸರ್ಕಾರದ ಸೇವೆಗೆ ಕಳುಹಿಸಿ ಕೊಟ್ಟಿದ್ದೀರಿ. For example, there was one DIG Mr. Anandan, who was deputed to Centre and his deputation was cancelled. Nor posting was given. He was also not given the pay for six months or leave granted ಮತ್ತೆ ಅದೇರೀತಿಯಲ್ಲಿ ತಾವು ಇನ್ನೊಂದು ಕೇಸು ಸಹ ಮಾಡಿದಿರಿ. The Chief Security Officer K. S. R. T. C. of course you have got right to post him as Chief Secruity Officer. That post was abolished in 1980 and you revive it in 1983 and gave him that post, just to dump that officer. You have got many other posts and you could have posted him in other places. ಈ ರೀತಿ ಮಾಡುವುದರಿಂದ ತಮಗೇನು ಪ್ರಯೋಜನವಾಗುತ್ತದೆ. ಮತ್ತೆ ಒಬ್ಬ Senior DGP has been ignored and fresh junior DIGs are given Range postings.

ಹಿಂದೆ ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಬೆಂಗಳೂರು ಸಿಟಿಯಲ್ಲಿರತಕ್ಕಂಥ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ಕರೆದು ಅವರ ಜೊತೆಯಲ್ಲಿ ವಿಚಾರ ವಿನಿಮಯ ಮಾಡಿ ವಿಷಯವನ್ನು ತಿಳಿದುಕೊಳ್ಳುತ್ತಿದ್ದರು. ಅವರ ಜೊತೆಯಲ್ಲಿ ಗೃಹಖಾತೆಯ ಕಾರ್ಯದರ್ಶಿಗಳನ್ನು ಸಹ ಕರೆಸುತ್ತಿದ್ದರು. ಆದರೆ ಅಂಥ ಒಂದು ಸಮಾಲೋಚನ ವಿರುಪೇರುಗಳ ಕಡೆಗೆ ತಾವು ಗಮನ ಕೊಟ್ಟಿಲ್ಲ. ಈ ರೀತಿ ಮಾಡುವುದರಿಂದ ಅವರಲ್ಲಿರತಕ್ಕಂಥ ಸಮಸ್ಯೆಗಳು ಪರಿಹಾರವಾಗುತ್ತದೆ. ಆ

ರೀತಿ ಮಾಡುವುದರಿಂದ That too sensitive Department like police, Postings should be Out of 50 Circle inspectors posted to Bangalore, there is only one SC Circle Inpector and One ST Circle Inspector, there are no backward blass Circle Inspector, and No Minorities. This is according to my information. There may be some variations here and there. ಅದೇ ರೀತಿಯಲ್ಲಿ ಸಬ್ ಇನ್ಸ್‌ಪೆಕ್ಟರ್ಸನ್ನು ತಾವು ಪೋಸ್ಟಿಂಗ್ ಮಾಡಿದ್ದಿರಿ. Today maintenance of law and order is an important thing in cities like Bangalore. ತಾವು ಏನು ಮಾಡಿದರೂ ಅದಕ್ಕೆ ನಾನು ಅಡ್ಡ ಬರುವುದಿಲ್ಲ. I am not attributing any motive to this community or that community. But many of them belong to two major communities But what is the net result here, is the real question. Senior officers in the Intelligence Department belong to one community. I am not trying to divided It is not my intentention. How the things are managed like this? ಇದರಿಂದ ಅಧಿಕಾರಿಗಳಲ್ಲಿ ಏನು ಮನೋಭಾವನೆ ಬರುತ್ತದೆ ಎಂದರೆ ಕೆಲವೇ ವರ್ಗದವರಿಗೆ ಈ ಸ್ಥಾನಗಳು ಲಭಿಸಿವೆ ಎನ್ನತಕ್ಕಂಥ ಮನೋಭಾವನೆ ಬೆಳೆದು ಬರುತ್ತದೆ. ಆದ್ದರಿಂದ ನಾನು ಹೇಳುವುದಾದರೂ ಏನೆಂದರೆ These postings you should leave it to the officers concerned. ಸೀನಿಯರ್ ಆಫೀಸರ್ಸ್‌ಗೆ ತಾವು ಅಧಿಕಾರವನ್ನು ಕೊಟ್ಟುಬಿಡಿ. I think the police Commissioner is not in a position to transfer even an Head Constable, leave alone Circle Inspector or sub Inspector. Thare are lot of interferences in the Police Department. I do not know about the Chief Minister but by two importment Ministers. There are frequent interferences by these Ministers who are not in-charge of home Ministry. I can understand, they can represent the Chief Minister ಇದು ಒಂದು ರೀತಿಯಲ್ಲಿ ತ್ರುಟನ್ ಆಗುತ್ತಿದೆ. ಪೋಲೀಸ್ ಇಲಾಖೆಯಲ್ಲಿ ಇಬ್ಬರು ಮಂತ್ರಿಗಳು ಬಹಳ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ನನಗೆ ವರ್ತಮಾನ ಬಂದಿದೆ. What kind of moarle you can maintain here. I do not say the chief Minister is interfering frequently, that I have not come ocross. Of course, these Ministers. who are not responsible for Home Minister may say about collective responsiblity. Total by the department will be demoralised.

Regarding posting of police officials there are 3 criteria i. e., 1) whether a person knows Kannada or not, 2) whether he is loyal to the Chief Minister or not and 3) to which community he belongs. These are the three criteria to the police department. To that extent it has come down. How can we expect the maintenance of law and order? ಅದಕ್ಕೆ ನಿಮಗೆ ಹತೋಟಿ ಸಿಗುತ್ತಾ, ಇಲ್ಲ. ಆದ್ದರಿಂದಲೇ ನಿಮ್ಮ ರಥ, ನಿಮ್ಮ ಗಾಡಿ ಎಲ್ಲೆಲ್ಲೋ ಹೋಗುತ್ತಿದೆ. ಈ ರೀತಿ ಆದು ಹೋದರೆ ಒಂದು ಕಡೆ ಇದರ ಚಕ್ರ ಪುಡಿಪುಡಿಯಾಗುತ್ತದೆಂದು ನಾನು ಹೇಳುತ್ತೇನೆ. That question of uncertainty you have given to the State, particularly in handling the Department like the Home Department.

(MR. DEPUTY SPEAKER. –in the Chair.)

Chief Minister should ask his cabinet colleagues to keep off from this dapartment and not to interfere in this. Entrust responsibility to competent officers at various levels and manage

this. Do not allow this to be managed by everyone. Let it be managed by the Home Minister, the Chief Minister, by allowing the proper officers at the competent level to handle this. If you do not do this the tradition which we have established in the country, in the police department, the best of the traditions will go. Before it is too late, please step in and correct. Please step in and correct. Regarding revision of pay scale of Circle Inspectors and Non-IPS Officers, it was under the consideration during our period. They have got dis-satisfaction for not revising their pay scales. Sometimes IPS leaders will not take up the case of non-IPS officers and the Circle Inspectors. That is the problem. When it is not effectively taken up then their case will remain as it is. The Circle Inspeetor should de upgraded to Tahsildar's grade and the non-IPS officers to Special Deputy Commissioner's grade. Regarding providing terrycot uniform, 2 sets should be given ouce in a year. But, there is a backlog. That has got to be filled up. In my view the traffic constable should be provided with a motor-bike. If not. at least the Traffic Head Constable should be provided with a motor-bike. because they have to chase the persons who commit offence. As in foreign countries the challan system will have to be introduced. We had some idea about that. It is because they will give wrong number and wrong addresses. Thousands of cases are left like that, The Dy. S, Ps. must be made Special Exeuctive Magistrate, because sometimes they have to impose prohibitory orders. In Maharastra, this system is in practice. The Commissioner of Bangalore will have to be given the powers under the Cinematography Act as in Hyderabad. The DCPs must be given the Additional District Magistrate powers, This is in practice in other State also. When bandh was observed in Bangalore the Commissioner went on sick leave. The Additional Commissioner was not having the District Magistrate power. Then. of coure, hurriedly government had to make the Additional Commissioner as the Commissioner and that order had to be issued. Therefore, the Additional Commissioner must also be given this power and the DCP must also be given Additional Magistrate power. Regarding the Armed Reserve Police in the distriet they will become the usual police constabulary. There should be some sort of batallion formation in the Armed Reserve Police. In rotation of five years they should be shifted from that district. Before shifting and making re-organisation they should be provided with housing facilities. The officials and the Police Sub-Inspectors should be given subsidised ration. ಅವರ ಒಂದು ಸಂಬಳಸಾರಿಗೆಯಿಂದ ಅವರು ತಮ್ಮ ಸಂಸಾರ ನಿಭಾಯಿಸಬೇಕಾಗಿರುವುದರಿಂದ ಅವರಿಗೆ ಆ ರೀತಿ ಒದಗಿಸಬೇಕಾಗಿದೆ. ಇನ್ನು ಕ್ರೈಮ್ ಫಿಗರ್ಸ್

ಹೇಳುತ್ತೇನೆ. ಆಗಾಗ ನಮ್ಮ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು. ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕರ್ನಾಟಕದಲ್ಲಿ ನೆಮ್ಮದಿ ಇದೆ ಎಂದು ಹೇಳುತ್ತಿದ್ದರು. ಅವರು ಇಲ್ಲಿ ಬಂದು ಕುಳಿತು ಅಪ್ರಾಯುಮಾನವಾಗಿ ಹೇಳುತ್ತಿದ್ದರು. ಆದರೆ ಈಗ ಬಂದು ಕುಳಿತ ೧೧ ನಿಮಿಷದಲ್ಲೇ ಸಿಟ್ಟು ಗೊಳ್ಳುತ್ತಾರೆ. ಇದನ್ನು ಅವರು ನಿಗ್ರಹಿಸಬೇಕಾಗುತ್ತವೆ. ಅವರ ಮಾತಿನಲ್ಲಿ ಕಠೋರತೆ ಇರಲ್ಲಿ. ಅವರು ಅಪ್ರಾಯುಮಾನವಾಗಿ ಹೇಳುವುದು ಸರಿಯಿರಬಹುದೆಂದು ನನ್ನಲ್ಲಿ ಭ್ರಮೆ ಇತ್ತು. ಆದರೆ ಅದು ಭ್ರಮ ಎಂಬುದು ನನಗೆ ಗೊತ್ತಾಗಿದೆ. ಈಗ ಕೆಲವು ಮುಖ್ಯ ಕ್ರೈಮ್ ಫಿಗರ್ಸ್‌ನ್ನು ನಾನು ಓದುತ್ತೇನೆ.

	1982	1983
Murders	886	947
Dacoities	171	166
Robberies	513	589
House breaking thefts	8090	9069
Thefts (Ordinary)	17702	15956
Cattle thefting	512	506
Rioting	5733	5730
Kidnapping and abduction	270	301
Counterfeiting of coins and currency notes	136	131
Cheating	1088	1259
Crime-breach of trust	653	802
Miscellaneous	36758	38741

So, in 1982 the total will be 74,479 whereas in 1983 it is 76,287.

೧೧-೦೦ ಎ.ಎಂ.

ವಿಪರೀತ ಜಾಸ್ತಿಯಾಗಿಬಿಟ್ಟಿದೆ. ಕಡಿಮೆಯೇನೂ ಇಲ್ಲ. Heinous crimes like murders, house-breaking, thefts, cheating, fatal motor accidents. ವಿಪರೀತ ಜಾಸ್ತಿಯಾಗಿ ಬಿಟ್ಟಿದೆ ಅಧ್ಯಕ್ಷರೇ, ಗೋಲಿಬಾರ್ ಮಾಡುವುದಿಲ್ಲವೆಂದು ಅಧಿಕಾರಕ್ಕೆ ಬಂದ ಪಕ್ಷ, ಗೋಲಿಬಾರ್ ಮಾಡಿದರೂ ರಬ್ಬರ್ ಗುಂಡನ್ನು ಮಾತ್ರ ಹಾರಿಸುತ್ತೇವೆ ಎಂದು ಹೇಳಿದ ಪಕ್ಷ ಗೋಲಿಬಾರ್ ಮಾಡುವುದರಲ್ಲಿ ದಾಖಲೆಯನ್ನೇ ನಿರ್ಮಿಸಿದೆ. I think there were 12 such incidents in the year. Total nnmber of persons died on account of police firing since the Janata Government came to power is 23. Valuable lives have been lost. ಇವತ್ತು ಇವರದ್ದು ಇದೊಂದು ಹೆಗ್ಗಳಿಕೆಯಾಗಿದೆ. ದುರಾದೃಷ್ಟವಶಾತ್ ಗೋಲಿಬಾರ್‌ನಲ್ಲಿ ನಮ್ಮ ಕಾಲದಲ್ಲಿಯೂ ಸತ್ತರು. ಅದಕ್ಕೆ ನಾವು ವಿಷಾದ ವ್ಯಕ್ತಪಡಿಸಿದ್ದೇವೆ. ಬೆಂಗಳೂರು ಬಂದ್ ಆಯಿತು. ಮೊನ್ನೆ ಶಿವಾಜಿನಗರ ಗೋಲಿಬಾರ್‌ನ್ನು ನಡೆಸಿಯೇ ಬಿಟ್ಟರು. ಆದ್ದರಿಂದ ಇವತ್ತು ಇದರಲ್ಲಿಯೂ ಕೂಡ ವಿಕ್ರಮ ಸಾಧಿಸಿಕೊಂಡು ಮುಂದೆ ಹೋಗುತ್ತಿದ್ದಾರೆ. Communal disturbances 3 major and 5 minor incidents of communal violince were reported and another 73 other incidents of criminal nature. ಇನ್ನು ಪೋಲೀಸ್ ಹೌಸಿಂಗ್‌ಗೆ ವಿಶೇಷವಾಗಿ ಹಣ ಕೊಡಬೇಕಾಗುತ್ತದೆ. ಹುಡ್ಕೋದಿಂದಲೂ ಕೂಡ ಹಣ ಕೊಡಬೇಕಾಗುತ್ತದೆ. I think our new Housing Board Chairman can do something about the police housing. Don't he sensitive to all these things. Try to get into work particularly, on police housing. ಪೋಲೀಸ್ ಹೌಸಿಂಗ್ ಕೆಲಸ ಸ್ವಲ್ಪ ಮಾಡಿ. ಚಿಲ್ಲರೆಯದ್ದು ಸ್ವಲ್ಪ

ಬಿಟ್ಟು ಬಿಡಿ. ಇನ್ನು, ಮತ್ತೊಂದು ಬೆಳೆದು ಬಂದಿದೆ. ಅದೇನೆಂದರೆ ರಾಜಕಾರಣಕ್ಕಾಗಿ ಪೋಲೀಸರನ್ನು ಉಪಯೋಗ ಮಾಡತಕ್ಕಂಥ ಒಂದು ಪ್ರವೃತ್ತಿ. ನಾನು ಇದರ ಬಗ್ಗೆ ಸಾಕಷ್ಟು ಪತ್ರ ವ್ಯವಹಾರಗಳನ್ನು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾಡಿದ್ದೇನೆ. ನೋಡಿ ಇಷ್ಟೊಂದು ಪತ್ರ ವ್ಯವಹಾರಗಳಿವೆ (ಫೈಲನ್ನು ಸಭೆಗೆ ತೋರಿಸಿದರು). ಶ್ರೀ ಅರಸು ಚೆಟ್ಟಿ ಎನ್ನುವ ಕೊಳ್ಳೇಗಾಲದ ಒಬ್ಬ ವಕೀಲರು ದೂರು ಕೊಡಲು ಬಂದರೆ ಸಬ್‌ಇನ್ಸ್‌ಪೆಕ್ಟರ್ ಅವರಿಗೆ ಛಡಿ ಹೊಡೆದುಬಿಟ್ಟರು. ಏನೂ ತಪ್ಪಿಲ್ಲದಿದ್ದರೂ ಕೂಡ ಅವನಿಗೆ ಶಿಕ್ಷೆ; ಆಮೇಲೆ ಎಂ. ಇ. ವಸಂತ, ಜನರಲ್ ಸೆಕ್ರೆಟರಿ, ಸೋಮವಾರಪೇಟೆ ಇವರನ್ನು ಅರಸೀಕೆರೆಯ ಸಬ್‌ಇನ್ಸ್‌ಪೆಕ್ಟರ್ ಹೊಡೆದಿದ್ದಾರೆ. That matter also came up here... he has been innocent person. Nanjegowda also was tortured and wrongfully confined. Shankaragowda of Harapanahalli ಅವರನ್ನೂ ಕೂಡ ಕನ್‌ಫೆಷನ್ ಮಾಡಿದ್ದಾರೆ. ಇನ್ನು, ಸಿದ್ಧರಾಮೇಶನ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಆತನಿಗೆ ರಕ್ಷಣೆ ಇರಲಿಲ್ಲ. He was so much exposed, somebody came and killed him. ಇದರ ಬಗ್ಗೆ ವಿಚಾರಣೆ ಏನು ನಡೆಯುತ್ತಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕು. ತಮಗೆ ಗೊತ್ತಿದೆ ಅನೇಕ ಕೇಸುಗಳು Umeshchandra, General Secretary, INTUC and Sadashiva Shetty... they were practically maimed to death. Of course, fortunately they survived by certain persons. ಅದರಲ್ಲೂ ಕೂಡ ಚಾರ್ಜ್‌ಶೀಟ್ ಹಾಕಲಿಲ್ಲ, ಸರಿಯಾದ ವಿಚಾರಣೆ ಆಗಲಿಲ್ಲ. ಆದರೂ ಕೂಡ Yellappa of Raibagh was severly assaulted by the Raibagh police. ಶಾಸಕ ಶ್ರೀ ಎನ್.ಜಿ. ನಾಯಕ್ ಅವರ ಕ್ಷೇತ್ರದಲ್ಲಿ ತಳಕು ಪೋಲೀಸ್ ಸ್ಟೇಷನ್‌ನಲ್ಲಿ ಸಬ್ ಇನ್ಸ್‌ಪೆಕ್ಟರ್... six months back he was transferred because he was harassing and humiliating the people, the public-men, Congress-men and many others. But he returned with vengeance within three months to Molkalmur the very same constituency. ನಾಯಕ್ ಅವರ ಮಗ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ ಒಂದು ಜಾತ್ರೆಗೆ ಹೋದರೆ ಆತ ಹುಡುಗಿಯರನ್ನು ಚುಡಾಯಿಸುತ್ತಾನೆ ಎಂದು ಬೇರೆಯವರು ಮಾತನಾಡಿದ್ದಾರೆ ಎಂದು ಹೇಳಿ ಜಾತ್ರೆಯಲ್ಲಿದ್ದ ಹುಡುಗನನ್ನು ದರದರ ಎಳೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಬೂಟ್ಸ್ ಕಾಲಿನಿಂದ ಹೊಡೆಸಿದ್ದಾರೆ. ಎಲ್ಲಿಯವರೆಗೆ ಈ ದಾರ್ಷ್ಟ್ಯತನ, ರಾಜಕೀಯ ವೈರವನ್ನು ಪೋಲೀಸರ ಮುಖಾಂತರ ತೆಗೆದುಕೊಳ್ಳುತ್ತೀರಿ? Because he did not concede your demand to join your party you want to harass. You must feel ashamed. We must regret for what has happed. To what extent you want to use the police force? ಇದು ಕತೆಯಲ್ಲ. ಆಮೇಲೆ ಹುಡುಗನನ್ನು ಬಿಟ್ಟರು. ಯಾವ ಉದ್ದೇಶದಿಂದ ಆ ಸಬ್‌ಇನ್ಸ್‌ಪೆಕ್ಟರ್‌ನನ್ನು ೩-೪ ತಿಂಗಳಲ್ಲಿಯೇ ತಂದು ಇಟ್ಟಿದ್ದೀರಿ?...because he has politically fulfilled your ambitions. It has become a licence for him. He will attack; he will do whatever he wants, This is the way you treat the public representatives. ಶ್ರೀ ಹುಚ್ಚಮಾಸ್ತಿ ಗೌಡರ ವಿಷಯದಲ್ಲಿ ದಾಂಧಲೆ ಆಯಿತು. ಹಿರಿಯ ಸ್ವಾತಂತ್ರ್ಯ ಯೋಧರು ಕೇಸನ್ನು ಫೈಲ್ ಮಾಡಿದರು. You havenot filed charge sheet, you have not prosecuted the MLA or anybody ನಂತರ ಶಾಸಕ ಶ್ರೀ ಉಗ್ರನರಸಿಂಹಪ್ಪನವರ ಹೆಂಡತಿಯನ್ನು ಪೋಲೀಸರ ಸಹಾಯದಿಂದ ಇಲ್ಲಿ ತಂದು ಪೋಲೀಸರ ಸಹಾಯ ಉಪಯೋಗ ಮಾಡಿಕೊಂಡು ನಂಜೇಗೌಡರನ್ನು ಅರೆಸ್ಟ್ ಮಾಡಲು ವಾರೆಂಟ್ ತೆಗೆದುಕೊಂಡು ಹೋದರು. ಇಬ್ಬರನ್ನೂ ಅಪಹರಿಸಬೇಕೆಂದು ನೋಡಿದರು. ಶಿಕಾರಿಪುರದ ಬಂಗ್ಲೆಯಲ್ಲಿ ಏನು ನಡೆಯಿತು? ಆಹಾರ ಮಂತ್ರಿ ಶ್ರೀ ಬಸವಣ್ಣಪ್ಪನವರು ಹೋದಾಗ ಏನಾಯಿತು? He was asked to release the rice which was seized by the Government. When he failed to do it. ಯಾರೋ ಒಬ್ಬರು ಬಸವಣ್ಣನವರ ಕಾಲರನ್ನು ಹಿಡಿದುಕೊಂಡು ಅವರ ಮೂಗಿಗೆ ಹೊಡೆದಾಗ ಅವರ ಉಂಗುರ ಬಸವಣ್ಣನವರ ಮೂಗಿಗೆ ಸಿಕ್ಕಿ ಹಾಕಿ ರಕ್ತ ಧಾರಾಕಾರವಾಗಿ ಇಳಿದಿದ್ದು ಮಂತ್ರಿಯವರಿಗೆ ಗೊತ್ತಿದೆ,

ಡಾ॥ ವಿ. ಎಸ್. ಆಚಾರ್ಯ.—ಯಾವ ಮಂತ್ರಿಗೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಆಹಾರ ಮಂತ್ರಿಗಳಿಗೆ ಹೊಡೆದಾಗ ಉಂಗುರ ಮೂಗಿಗೆ ಸಿಕ್ಕಿ ಹಾಕಿ ನೆತ್ತರು ಧಾರಾಕಾರವಾಗಿ ಇಳಿಯಿತು. It is only in September or a couple ofmonths back...police were there. They were helpless to protect the Minister. Then how can they protect a common citizen, MLA ?...

ಶ್ರೀ ಜಿ. ಬಸವಣ್ಣಪ್ಪ —ಘಟನೆ ನಡೆದದ್ದು ನಿಜ. ಆದರೆ ಅದು ತಾವು ಹೇಳಿದಷ್ಟು ಉತ್ಪ್ರೇಕ್ಷೆಯಿಂದ ಕೂಡಿಲ್ಲ. ಅದು ಸತ್ಯಕ್ಕೆ ದೂರವಾದದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಘಟನೆ ನಡೆದದ್ದು ಇದೆ. ಯಾರು ಘಟನೆ ಮಾಡಿದರು ? ಏನು ಕೇಸ್ ಹಾಕಿದ್ದೀರಿ ? ಚಾರ್ಜ್‌ಶೀಟ್ ಹಾಕಿದ್ದೀರಾ ? ಅದನ್ನೂ ಬಿಟ್ಟು ಕಾಂಪ್ರಮೈಸ್ ಮಾಡಿದ್ದೀರಿ... because you had to compromise... ಮಂತ್ರಿಮಂಡಲ ಬದುಕಬೇಕಾದರೆ ಈ ಕಾಂಪ್ರಮೈಸ್ ಮಾಡಬೇಕಾಗುತ್ತದೆ. This is a Government which lives on compromise just for living. I think... ಈ ಮಟ್ಟದಲ್ಲಿ ಈ ಮಂತ್ರಿಮಂಡಲ, ಈ ಸರ್ಕಾರ ಜೀವನ ಮಾಡುವುದು ನಮ್ಮ ಕರ್ನಾಟಕ ರಾಜ್ಯದ ಪರಂಪರೆಗೆ ಸಂಸ್ಕೃತಿಗೆ ಅವಮಾನ ಎಂದು ಹೇಳದೇ ನಿರ್ವಾಹ ಇಲ್ಲ. ಶ್ರೀ ರಾಜವರ್ಧನ್ ಅವರು ನಗುತ್ತಿದ್ದಾರೆ. ನಾಳೆ ಅವರಿಗೂ ಕೂಡ ಇದೇ ರೀತಿ ಆಗಬಹುದು. It may happen to you when it has happened to Mr. Basavanappa.

ಮಾನ್ಯ ಅಧ್ಯಕ್ಷರೆ, ಶಿಕಾರಿಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಹಿಂಸೆಗೆ ಏನು ಒಳಪಡಿಸಿದ್ದಾರೆ ಆ ಬಗ್ಗೆ ನಾನು ಪತ್ರ ಕೂಡ ಬರೆದಿದ್ದೇನೆ. ಅದೆಲ್ಲಾ ಡೀಟೈಲ್ಸ್ ನನ್ನ ಹತ್ತಿರ ಇದೆ ಮತ್ತು ಬಹಳ ದೊಡ್ಡ ಲಿಸ್ಟ್ ಸಹ ಇದೆ. ಶಿಕಾರಿಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಹಾಕಿರತಕ್ಕ ಕೇಸ್ ನಂಬರ್ ಇದೆ, ಪರ್ಸನ್ಸ್ ಇನ್‌ವಾಲ್ವ್ಡ್ ಇದೆ. I will write a letter and pass it over to the Hon'ble Chief Minister.

SRI H. GANGADHARAN.—So many Criminals are found in the Congress.

SRI M. VEERAPPA MOILY.—The worst criminals are there in your party. ಅಲ್ಲಿ ಸುಮಾರು ೧೦ ಸಾವಿರ ಮಂದಿ ಸಭೆ ಸೇರಿದ್ದರು. ನಾನು ಹೋಗುವುದಕ್ಕೆ ತಡವಾಯಿತು, ನನಗೋಸ್ಕರವಾಗಿ ಜನ ಕಾಯುತ್ತಾ ಇದ್ದರು. ನಾನು ಹೋಗುತ್ತಿದ್ದೆ. ಬಸ್ಸಿನಲ್ಲಿ ಹೋಗುವವರ ಮೇಲೆ ಕೇಸ್ ಹಾಕಿದರು. ನಾನು ಹೋಗುತ್ತಿದ್ದೆ, ಹೂಮಾಲೆ ಹಿಡಿದುಕೊಂಡು ಯೂತ್ ಕಾಂಗ್ರೆಸ್ ಪ್ರೆಸಿಡೆಂಟ್ ಕಾಯುತ್ತಿದ್ದರೆ ಸರ್ಕಲ್ ಇನ್ಸ್‌ಪೆಕ್ಟರ್ ಮೊಯ್ಲಿಯವರು ಬಸ್‌ನಲ್ಲಿ ಬರುತ್ತಾರಾ ಎಂದು ಕೇಳಿದರಂತೆ. ಬಸ್ಸಲ್ಲಿ ಬಂದರೆ ಏನು ತಪ್ಪು ? It shows to what extent you are taking the police...

ಶ್ರೀ ಎಂ. ಎಸ್. ಕೃಷ್ಣನ್.—ಕೇಳಿದ್ದರಲ್ಲಿ ತಪ್ಪೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಏನೂ ತಪ್ಪಿಲ್ಲ. ನಾನು ಹೋಗಿ ಬಂದಮೇಲೆ ಯೂತ್ ಕಾಂಗ್ರೆಸ್ ಪ್ರೆಸಿಡೆಂಟ್ ಮೇಲೆ ಸೆಕ್ಷನ್ ೧೦೭ರ ಪ್ರಕಾರ ಕೇಸ್ ಹಾಕಿದ್ದಾರೆ. ಪೊಲಿಟಿಕಲ್ ಮೀಟಿಂಗ್ ಆರ್ಗನೈಸ್ ಮಾಡಬಾರದೆ ? ಇದು ಪ್ರಜಾಪ್ರಭುತ್ವವೇ ? These are proved by facts. Let me say that. ವೆಸ್ಟ್ ಬೆಂಗಾಲ್‌ನಲ್ಲಿ ಕಾಂಗ್ರೆಸ್ ವರ್ಕರ್ಸ್ ಮೇಲೆ ದೊಡ್ಡ ಧಾಳಿಯಾಗಿ ಕೇಸ್ ಹಾಕಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಅದೇ ರೀತಿ ನಡೆಯುತ್ತಾ ಇದೆ. Let us not repeat all those things here. We do not want to create that such situation ಕಾಲು ಕೆದರಿ ನಮ್ಮನ್ನು ಜಗಳಕ್ಕೆ ಕರೆಯುತ್ತಿದ್ದಾರೆ. Let us not adopt that kind of politics and each party takes the battle to the streets. Let us not do that. ಕರ್ನಾಟಕದ ಸಂಸ್ಕೃತಿಗೆ ಅದು ಬಹಳ ದೂರ ಇದೆ. ಸಮಾಜ ಬದುಕಬೇಕು.

ಇವತ್ತು ನಾವು ಈ ಸ್ಥಾನದಲ್ಲಿರಬಹುದು ನೀವು ಆ ಸ್ಥಾನದಲ್ಲಿರಬಹುದು, ಸಮಾಜ ಬದುಕಬೇಕು. Ultimately our intention is to serve the people. This is a law and order problem which you will have to deal with it. If any body responsible for creating law and order problem you can deal with them but do you justify the cases filed against the Congress Workers? Is it a justifiable action? What are the reasons? ದಿವಸಕ್ಕೆ ೧೦-೧೫ ಮಂದಿ ನಮ್ಮ ಮನೆಗೆ ಬರುತ್ತಾರೆ, ರೆಪ್ರೆಸೆಂಟ್ ಮಾಡುತ್ತಾರೆ. ಆದುದರಿಂದ ತಾವು ಇದನ್ನೆಲ್ಲಾ ನಿಲ್ಲಿಸಬೇಕು. Otherwise we will be unnecesarily taking the politics to the streets and it is not proper, it is not conducive for creating good climate. It is very unfortunate the police force has been and is being used against the political rivalries. This is absolutely against the norms of the democracy of the nation. ಇನ್ನೂ ಅನೇಕ ವಿಚಾರಗಳಿವೆ. ನಾನು ಪ್ರತ್ಯೇಕವಾಗಿ ಅದರ ವಿಚಾರ ಕೊಡಲಿಕ್ಕೆ ಹೋಗುವುದಿಲ್ಲ. The murder of Municipal President at Hassan and how police have also been used to get Sri Vasantha Bangere. I can understand if Sri Vasantha Bangere has returned to BJP on his own. It is welcome. But using police force to prevail him....

DR. V. S. ACHARAYA.—Sir. I got to interfere. ನಾವು ಮೂರು ನಾಲ್ಕು ಜನ ಕಾರಿನಲ್ಲಿ ಮೈಸೂರಿಗೆ ಹೋಗುತ್ತಿದ್ದೆವು. ಅವರು ಎಲ್ಲಿದ್ದಾರೆಂದು ಗೊತ್ತಾದ ಕೂಡಲೇ...

SRI M. VEERAPPA MOILY.—I have this version. If it is not corrcet it is o.k. According to me the Superintendent of Police himself came from Mysore to drop Sri Vasantha Bangere. This is the report. That means the Janata Party men or the BJP men—they have no law. ಕಾನೂನು ಅವರಿಗೆ ಅಪ್ಲೈ ಆಗುವುದಿಲ್ಲ. ಆ ಒಂದು ಪರಿಸ್ಥಿತಿ ಬಂದು ಬಿಟ್ಟಿದೆ. Whatever offence they commit they are immune through these things.

DR. V. S. ACHARYA.—It is imaginary. I am here I appeal to the Leader of opposition to be reasonable. ನೀವು ಹೇಳುವುದರಲ್ಲಿ ಸತ್ಯಾಂಶ ಇರಬಹುದು ಎಂದು ಇದ್ದೆ. ಆದರೆ ವಸಂತಬಂಗೇರ ಪ್ರಕರಣದಲ್ಲಿ ಹೇಳಿದ್ದನ್ನು ನೋಡಿದರೆ ಎಲ್ಲಾ ಇಮ್ಯಾಜಿನರಿ ಇದೆ.

SRI M. VERRAPPA MOILY.—I am telling whatever information I have with me. You are denying it. It is for the people to judge which is correct and which is wrong.

DR. V. S. ACHARYA.—I am sorry you are giving wrong information.

SRI M. VEERAPPA MOILY.—If you have better information it is welcome. My view is that police should not be used. If it has not been used it is o.k. If your information is correct. I believe it.

DR. V. S. ACHARYA.—As a matter of fact, after we returned from Mysore many senior members from your party abused for having not taken the police assistance...

SRI M. VEERAPPA MOILY.—My friend Sri Acharya speaking as if I do not know Sri Bangera. I know him very well. He is not a stranger to me. I know his family well. Even then we never asked him to leave the BJP. I never advised him though I know him very well. We never used any personal influence to leave to BJP and to join our party. We never played defection game. We never used it.

ಮಾನ್ಯ ಅಧ್ಯಕ್ಷರೇ, ಕಬಾಡಿ ಮರ್ಚೆಂಟ್ಸ್ ಅಸೋಸಿಯೇಷನ್, ಜೆ. ಎಮ್. ರಸ್ತೆ, ಬೆಂಗಳೂರು ಇವರ ಕ್ಲಬನ್ನು Police of Ulsoor raided on 22-1-1984, Sunday at 6 p m. and seized Rs. 10,000, tape-recorder and allegedly some blue films also. A TV with VCR was also there. ಕೆಲವು ಜನರನ್ನು ಅರೆಸ್ಟ್ ಮಾಡಿದ್ದಾರೆ, ಅದರಲ್ಲಿ ಕಾರ್ಪೋರೇಟರ್ ಒಬ್ಬರಿದ್ದಾರೆ. ಅವರು ಜನತಾ ಪಕ್ಷಕ್ಕೆ ಸೇರಿದವರು He was also arrested along with that. I have got all the details about this case. There may be other side of it and that is for the Government to say. We always pick up all information and on the basis of the information, we speak here They used a Jeep number CAG 626, and one Matador Van No. 6. Top VIPs immediately intervened and even the files have been destroyed. ಈ ರೀತಿ ಕೆಲಸ ಮಾಡಿದರೆ ಹೊರಟು ಹೋಯಿತು That means Gambling ಮಾಡಿದವರನ್ನು ಮತ್ತು Blue films ಹಿಡಿದಾಗ the only thing is that person must have some connection with some persons in the higher ups. If he has got some connection with higher ups, then it absolves everything. ಬೆಂಗಳೂರು ನಗರದಲ್ಲೇ ಕಾನೂನು ವ್ಯವಸ್ಥೆ ಹೀಗಾದರೆ ಬೇರೆ ಕಡೆಗಳಲ್ಲಿ ಇನ್ನು ಯಾವರೀತಿಯಾಗಿ ಮಾಡುತ್ತೀರಿ ಎನ್ನುವುದು ಅರ್ಥವಾಗುತ್ತಿಲ್ಲ. ಈಗ ಸಬ್ ಇನ್ಸ್‌ಪೆಕ್ಟರ್ ಪೋಸ್ಟಿಂಗ್‌ನಲ್ಲೂ ಅಷ್ಟೆ. ಶ್ರೀ ವೆಂಕಟಶಿವ ರೆಡ್ಡಿಯವರು ಹೇಳಿದ್ದಾರೆ ಮುಖ್ಯ ಮಂತ್ರಿಗಳವರಿಗೂ ಮನವಿಯನ್ನು ಕೊಟ್ಟಿದ್ದಾರೆ. A Sub-Inspector who has gone from there again comes back within a month or two. Then he takes the vengeance against the person who is responsible for his transfer. ಶಿವರಾತ್ರಿ ದಿವಸ ಒಂದು ಯಕ್ಷಗಾನ ಮಾಡಿದರು EX-MLA prevails upon that Sub-Inspector and that Sub-Inspector takes itup. He took action. In 1-2 months, the Officer is sent and within one month, he comes back. ಈ ಡಿಪಾರ್ಟ್‌ಮೆಂಟ್‌ನಲ್ಲಿ ಹಾಗೂ ಇನ್ನೂ ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಕೂಡ ಇದೇ ರೀತಿ ಆಗುತ್ತಿದೆ. In Mudhol, i.e., Lokapur Police Station, a Sub-Inspector was transferred and again he comes back within 15 days.

SRI SUDHEENDRA RAO KASBE.—In Raichur District, (in Manvi), a Sub-Inspector comes back within a week.

SRI M VEERAPPA MOILY.—They will come back within 1-2 or 3 months and start taking vengeance against our MLAs, Congress workers. This is the type of Police Administration you have; ಪೋಲೀಸ್ ರುಚಿ ತೋರಿಸುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಅವರು ಉದ್ದೇಶ ಪೂರ್ವಕವಾಗಿ ಹೇಳಿದರೋ ಅಥವಾ ಸಿಟ್ಟಿನ ಭರದಲ್ಲಿ ಆಕಸ್ಮಿಕವಾಗಿ ಹೇಳಿದರೋ ಗೊತ್ತಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸ್ವಾಮಿ, ನಮ್ಮಲ್ಲಿ ರೈತರು ಧರಣಿ ಕುಳಿತಿದ್ದಾರೆ, ಮಂತ್ರಿಗಳು ಟ್ರಾನ್ಸ್‌ಫರ್ ಮಾಡಿದರೂ ಪುನಃ ೧೫ ದಿವಸದಲ್ಲೇ ಪೋಸ್ಟಿಂಗ್ಸ್ ಮಾಡಿರುವುದರಿಂದ ಅವರೆಲ್ಲಾ ಸ್ಟ್ರೈಕ್ ಮಾಡುತ್ತಿದ್ದಾರೆ. ಈ ಪರಿಸ್ಥಿತಿ ಎಲ್ಲಿಗೆ ಹೋಗುತ್ತದೋ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತು ಪೋಲೀಸ್ ಅಡ್ಮಿನಿಸ್ಟ್ರೇಷನ್ ಈ ಪರಿಸ್ಥಿತಿಗೆ ಬಂದಿದೆ. ಬೆಂಗಳೂರಿನಲ್ಲಿ ನಡೆದ ಘಟನೆಯ ಬಗ್ಗೆ ಸಾಕಷ್ಟು ಪ್ರಸ್ತಾಪವಾಗಿದೆ.

The Commissioner is very good, to be very frank with you. He is an honest Officer. Because of the postings and transfers, he has no control. Because of the type of Adminstration that you are having, he has on control over the situation Good and honest officers are not in a position to function here.

Regarding the Bangalore incident, if the Commissioner could have really feared the public, and could have immediately arrested the Sub-Inspector incharge of the Police Station, the ugly incidents could have been avoided. ಈಗ ತಮಗೆ ಗೊತ್ತಿದೆ "ಮೈಸೂರು ರಾಜ್ಯದ ಆಡಳಿತ ಕೆಲವು ಅಭಿಪ್ರಾಯಗಳು ಮತ್ತು ಸಲಹೆಗಳು" ಎನ್ನುವ ಪುಸ್ತಕದಲ್ಲಿ ಶ್ರೀ ಎ. ಡಿ. ಗೋರವಾಲರವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಬಹುಶಃ ಈ ಸರ್ಕಾರಕ್ಕೆ ಅದು ಅನ್ವಯವಾಗಬಹುದು. ಆದುದರಿಂದ ಈ ವಿಷಯವನ್ನು ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ. "ಚರಿತ್ರೆಯು ರೂಪುಗೊಳ್ಳುವುದು ಜನರ ಭಾವನೆಗಳಿಂದಲ್ಲ ಅವರ ಸಾಧನೆಗಳಿಂದ" ಎಂದು ಒಬ್ಬ ಉದ್ದಾಮ ಲೇಖಕನು ಹೇಳಿದ್ದಾನೆ. ಅದೇ ರೀತಿಯಲ್ಲಿಯೇ ಒಂದು ಸರ್ಕಾರವು ಒಳ್ಳೆಯದಾಗಿರುವುದಾಗಲಿ ಅಥವಾ ಕೆಟ್ಟದಾಗಿರುವುದಾಗಲಿ ಅಧಿಕಾರ ಸ್ಥಾನಗಳಲ್ಲಿರುವವರ ಮಾತುಗಳಿಂದಲ್ಲ, ಅವರ ಕೃತಿಗಳಿಂದ ಎಂದರೆ ಅವರು ಒಳ್ಳೆಯ ಕೆಲಸಗಳನ್ನು ಮಾಡಿದರೆ ಸರ್ಕಾರವು ಒಳ್ಳೆಯ ಸರ್ಕಾರವೆನ್ನಿಸಿಕೊಳ್ಳುತ್ತದೆ. ಆಡಳಿತದ ಮೇಲ್ಪಾಟಿಗಾಗಿ ಯಾವ ಪ್ರಯತ್ನವನ್ನು ಕೈಕೊಳ್ಳಬೇಕಾದರೂ ಅದಕ್ಕೆ ಪೀಠಿಕಾರೂಪವಾಗಿ ಈ ವಿಚಾರವನ್ನು ನೆನೆಪಿನಲ್ಲಿಟ್ಟಿರುವುದು ಅವಶ್ಯಕವಾಗಿರುತ್ತದೆ. ಇಲ್ಲಿ ಇನ್ನು ಮುಂದಕ್ಕೆ ಏನು ಹೇಳಿದ್ದಾನೆಂದರೆ "ಉನ್ನತಾಧಿಕಾರಿ ಸ್ಥಾನಗಳಲ್ಲಿರುವವರ ದೃಷ್ಟಾಂತವು ಗಾಳಿಯಂತಿರುತ್ತದೆ. ಜನ ಸಾಮಾನ್ಯರ ನಡವಳಿಕೆಯು ಹುಲ್ಲಿನಂತಿರುತ್ತದೆ, ಗಾಳಿಯು ಹುಲ್ಲಿನ ಮೇಲೆ ಬೀಸಿದಾಗ, ಹುಲ್ಲು ಯಾವ ಕಡೆಗೆ ಬಾಗಬೇಕೋ ಆ ಕಡೆಗೆ ಬಾಗಿಯೇ ಬಾಗುತ್ತದೆ." ಆದ್ದರಿಂದ ಒಂದು ಸರ್ಕಾರದಲ್ಲಿ ಸತ್ಯ ನಿಷ್ಠೆಯಿರುವಾಗ, ಜನತೆಯಲ್ಲಿ ನೀತಿ ಭಾವನೆಯು ಬೆಳೆಯುವ ಸಂಭವವು ಬಹುಮಟ್ಟಿಗೆ ಹೆಚ್ಚಾಗುತ್ತದೆ. ಅಲ್ಲದೆ, ಭಾರತೀಯರು ಶೀಲ ಸ್ವಭಾವಕ್ಕೆ ಉಚ್ಚ ಗೌರವವನ್ನು ಕೊಡುವುದರಲ್ಲಿ ಹೆಸರುವಾಸಿಯಾಗಿದ್ದಾರೆ. ಆದ್ದರಿಂದ ಉನ್ನತ ಸ್ಥಾನಗಳಲ್ಲಿರುವವರು ಉತ್ತಮ ಶೀಲ ಸ್ವಭಾವವನ್ನು ಪ್ರಕಟಪಡಿಸಿದಾಗ ಅದರಿಂದ ಇತರರಿಗಿಂತ ಭಾರತೀಯರ ಮನಸ್ಸಿನ ಮೇಲೆ ವಿಶೇಷ ಪರಿಣಾಮವಾಗುವ ಸಂಭವವುಂಟು.

SRI K. G. MAHESWARAPPA,—It is an universal truth.

SRI M. VEERAPPA MOILY.—It is universal but it applies in letter and spirit, in all force, the present Government. ಸರ್ಕಾರದ ಆಡಳಿತವನ್ನು ನಡೆಸುವವರಿಗೆ ಅಗತ್ಯವಾಗಿ ಇರಬೇಕಾದ ಈ ವೈಯಕ್ತಿಕ ಶೀಲ ಸ್ವಭಾವ ನಿಜಸ್ವರೂಪವೇನು? ಹಣಕಾಸಿನ ವಿಷಯದಲ್ಲಿ ನಿಸ್ಪೃಹರಾಗಿರುವುದು ಪ್ರಾಮಾಣಿಕತೆಯೇ ಸರಿ. ಪ್ರಾಮಾಣಿಕತೆಯೆಂದರೆ ಅಷ್ಟು ಮಾತ್ರವೇ ಅಲ್ಲ, ಸ್ವಜನ ಪಕ್ಷಪಾತ, ಜಾತೀಯತೆ ಅಥವಾ ಕೋಮುವಾರು ಭಾವನೆ ಇವುಗಳಿಂದ ಸಂಪೂರ್ಣವಾಗಿ ದೂರವಾಗಿರುವುದು ಸಹ ಪ್ರಾಮಾಣಿಕತೆಯೇ ಸರಿ. ಬೌದ್ಧಿಕವಾಗಿಯೂ ಪ್ರಾಮಾಣಿಕತೆ ಇರಬೇಕು ಪ್ರಾಮಾಣಿಕ ಬುದ್ಧಿಯಿಂದ ವಿಚಾರ ಮಂಥನ ಮಾಡುವುದು ಒಂದು ವಿಷಯದ ಗುಣಾವಗುಣಗಳನ್ನು ತುಲನ ಮಾಡಿ, ಅವುಗಳ ಆಧಾರದ ಮೇಲೆ ತೀರ್ಮಾನಗಳನ್ನು ಕೈಗೊಳ್ಳುವುದು, ತೀರ್ಮಾನಗಳನ್ನು ಮಾಡುವಾಗ ಪೂರ್ವಾಗ್ರಹಗಳಿಗೆ ಅಥವಾ ಪಕ್ಷಪಾತ ಭಾವನೆಗಳಿಗೆ ಇಂಬುಗೊಡದೆ ಆ ತೀರ್ಮಾನಗಳಿಗೆ ಬರುವುದು, ಕೋಪತಾಪಗಳಿಗೀಡಾಗದೆ, ತಳಮಳಗೊಳ್ಳದೆ, ತನ್ನ ಭಾವನೆಗಳಿಗೆ ಹೃತ್ಪೂರ್ವಕವಾದ ವಿರೋಧವು ವ್ಯಕ್ತವಾದಾಗ ಅಂಥ ವಿರೋಧವನ್ನು ಗಮನಕ್ಕೆ ತೆಗೆದುಕೊಳ್ಳಲು ಸಮ್ಮತಿಸುವುದು ಇವುಗಳೂ ಸಹ ಪ್ರಾಮಾಣಿಕತೆಯ ಅಂಶಗಳೇ ಆಗಿವೆ. ಒಂದು ಮಾತಿನಲ್ಲಿ ಹೇಳುವುದಾದರೆ, ತಾನು ಸಾರ್ವಜನಿಕ ಸದ್ಗುಣಿಯಾಗಿರುವುದು ತಾನು ಮಾಡುವ ಪ್ರತಿಯೊಂದು ಕಾರ್ಯವನ್ನು ಬಿಟ್ಟು ಜನತೆಯ ಹಿತದೃಷ್ಟಿಯಿಂದ ವಿವೇಚಿಸುವಂತೆ ಮಾಡುವ ಪ್ರೇರಕಗುಣವೇ ಪ್ರಾಮಾಣಿಕತೆಯೆಂದು ಹೇಳಿಬಿಡಬಹುದು.

ಇನ್ನು ಅಫಿಷಿಯಲ್ ಮತ್ತು ನಾನ್ ಅಫಿಷಿಯಲ್ ಟೂರ್ ಯಾವ ರೀತಿಯಲ್ಲಿ ನಡೆಯಬೇಕು ಎಂಬುದನ್ನು ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡಿದ್ದಾರೆ. ಆದರ್ಶದ ನೆರಳಿನಲ್ಲಿ ಆದರ್ಶವನು ಯಥಾವತ್ತಾಗಿ ಸ್ಥಾಪಿಸಲು ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ಬಂದಮೇಲೆ ಏನಾದರೂ ಇದರ ಬಗ್ಗೆ ಹೆಜ್ಜೆಯನ್ನು ತೆಗೆದುಕೊಂಡಿದ್ದಾರೆಯೇ ಅನ್ನತಕ್ಕಂಥಾದ್ದು ಅಷ್ಟೇ ಪ್ರಶ್ನೆ ಇರತಕ್ಕದು.

I would like to quote from the Report of the Study Team of the state level administration which is appointed by the Administrative Reforms Commission. It reads thus;

> "Official tours are solely meant for administrative purposes. They should be systematised and undertaken for welldefined purposes such as Inspection of project, discussion of problems with the officials and people, on the spot study, public reactions to the Government policies and so on.
>
> Unofficial tours are for personal, political, social and religious or family reasons should be undertaken at the minister's cost and without involving local officials and the administration. The Chief Minister as the Head of the Ministery is the proper person to do so and help maintenance of the standards and priorities. The present practice of the Chief Minister, & the ministers indulge more in projecting their personal and party images than doing purposeful public duty, frequent visits by same ministers and simultaneously visits by several Ministers to the same place or area take place, Quite often in such tours ministers inevitably develop close contact with particular persons in particular cases.."

೧೧-೩೦ ಎ.ಎಂ.

ಆಡಳಿತಾತ್ಮಕವಾಗಿ ಏನಾದರೂ ಒಳ್ಳೆಯದು ಮಾಡತಕ್ಕ ದೃಷ್ಟಿಕೋನ ನಿಮ್ಮಲ್ಲಿ ಇಲ್ಲ. ಇಲ್ಲಿ ನಡೆಯುತಕ್ಕಂಥ ವಿದ್ಯಮಾನಗಳನ್ನು ನೋಡಿದರೆ ಇದು ಗೊತ್ತಾಗುತ್ತದೆ. ಮಂತ್ರಿಗಳು ತದ್ವಿರುದ್ಧವಾಗಿ ಹೇಳಿಕೆಗಳನ್ನು ಕೊಡುತ್ತಾರೆ. ಇನ್ನು ಶಾಸಕರುಗಳಿಗೆ ಹಾಗೂ ಮಂತ್ರಿಗಳಿಗೂ ಕೂಡಾ ಒಂದು ಕೋಡ್ ಆಫ್ ಕಂಡಕ್ಟ್ ಬಗ್ಗೆ ಏನು ಮಾಡಿದ್ದೀರಿ ಎಂಬುದನ್ನು ನಾವು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ. ಅಧ್ಯಕ್ಷರೇ, ಈ ಮಂತ್ರಿ ಮಂಡಲದಲ್ಲಿ there is no homogeneity ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿಯಲ್ಲಿ ಮಾತನಾಡುತ್ತಾರೆ. ಶ್ರೀ ದೇವೇಗೌಡರವರು ಒಂದು ತರಹ ಮಾತನಾಡುತ್ತಾರೆ, ಶ್ರೀ ಬೊಮ್ಮಾಯಿಯವರು ಒಂದು ತರಹ ಮಾತನಾಡುತ್ತಾರೆ. ಶ್ರೀ ಅಜೀಜ್ ಸೇಠ್‌ರವರು ಹಾಗೂ ಶ್ರೀ ನಜೀರ್‌ಸಾಬ್‌ರವರು ಮತ್ತು ಶ್ರೀ ರಘುಪತಿಯವರು ಮತ್ತು ಅನೇಕ ಮಂತ್ರಿಗಳು ಒಂದೊಂದು ತರ ಮಾತನಾಡುತ್ತಾರೆ.

ಉದಾಹರಣೆಗೆ ಶ್ರೀ ಚಂದ್ರಶೇಖರ್‌ರವರು ಅನಧಿಕೃತ ಕಟ್ಟಡಗಳನ್ನು ಡಿಮಾಲಿಶ್ ಮಾಡಿರುವುದು ಸರಿಯೆಂದು ಹೇಳಿಕೆ ಕೊಟ್ಟರೆ ರಘುಪತಿಯವರು ಡಿಮಾಲಿಶ್ ಮಾಡಿರುವುದು ತಪ್ಪು, ತಕ್ಕ ಪರಿಹಾರ ಕೊಡಬೇಕು ಎಂದು ಹೇಳಿದ್ದಾರೆ. ಹಾಗೆಯೇ ಅಜೀಜ್‌ಸೇಠ್‌ರವರು ಭಾಷೆ ವಿಚಾರದಲ್ಲಿ ಒಂದು ತರಹ ಹೇಳಿಕೆ ಕೊಟ್ಟಿದ್ದಾರೆ. ಪಂಚಾಯತ್ ಪರಿಷತ್ ಆಗಬೇಕೆಂದು ನಜೀರ್‌ಸಾಬ್‌ರವರು ಹೇಳಿದರೆ Taluk Board review ಆಗಬೇಕೆಂದು ದೇವೇಗೌಡರು ಮತ್ತು ಬೊಮ್ಮಾಯಿಯವರು ಹೇಳಿದ್ದಾರೆ. ಆದ್ದರಿಂದ ಈ ಮಂತ್ರಿಮಂಡಲದಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಮಾತನಾಡ ತಕ್ಕಂಥ ಪ್ರತೀತಿ ಇದೆ.

Homogeneity is quite essential in a Ministry, otherwise, you cannot say that they are capable of shouldering joint responsibilities.

ಶ್ರೀ ರಾಮಕೃಷ್ಣ ಹೆಗಡೆ.—ಆ ತರಹ ಸ್ಟೇಟ್‌ಮೆಂಟ್ ಮಾಡಿದ ಉದ್ದೇಶ ನಿಮಗೆ ಕನ್‌ಫ್ಯೂಶನ್ ಆಗಲಿ ಎಂದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಮಗೆ ಕನ್‌ಫ್ಯೂಶನ್ ಆಗುವುದಿಲ್ಲ. ಸ್ಪಷ್ಟವಾಗಿ ತಿಳಿದು ಕೊಳ್ಳತಕ್ಕ ಶಕ್ತಿ ನಮಗಿದೆ. ಆದರೆ ನಿಮಗಿಲ್ಲ.

ಶ್ರೀ ಹೆಚ್. ಗಂಗಾಧರನ್.—ಬಾಂಡೆಡ್ ಲೇಬರರ್ಸ್ ಹಾಗೆ ಮಂತ್ರಿಗಳು ಈ ಮಂತ್ರಿಮಂಡಲದಲ್ಲಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ —ಕನಫ್ಯೂಶನ್ ಎಂಬುದನ್ನು ಆರ್ಡರ್ ಎಂದು ತಿಳಿದುಕೊಳ್ಳು-ವುದಾದರೆ ನಮ್ಮಿಂದೇನೂ ಅಭ್ಯಂತರವಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಶ್ರೀ ಗಂಗಾಧರನ್‌ರವರು ಈಗ ಬಾಂಡೆಡ್ ಲೇಬರರ್ ತರಹ ಆಗಿದ್ದಾರೆ. ಹಿಂದೆ ಗಂಗಾಧರನ್‌ರವರು ಕಪಟತನ ಗೊತ್ತಿದ್ದೂ ಉದ್ದೇಶವನ್ನು ಒಳ್ಳೆಯದು ಎಂದು ಹೇಳುತ್ತಿದ್ದಾರೆ. ಈಗ ಅವರು ಏಕೆ ಹೀಗೆ ಆಗಿದ್ದಾರೆ ಎಂದು ಅರ್ಥವಾಗುತ್ತಿಲ್ಲ.

SRI H. GANGADHARAN.—We have maintained independence throughout.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಹೊರಗಡೆ ಈ ಸರಕಾರ ಕರಪ್ಟ್, ಕಮ್ಯುನಲ್, ಎಂದು ಹೇಳುತ್ತಾರೆ. ಆದರೆ ವಿಧಾನಸೌಧದ ಒಳಗಡೆ ಮಾತ್ರ ಈ ಸರಕಾರ ನಾನ್‌ಕರಪ್ಟ್, ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳುತ್ತಾರೆ. ಈ ದ್ವಿಮುಖ ನೀತಿ ಯಾರಿಗೂ ಶೋಭೆ ತರುವುದಿಲ್ಲ.

SRI H. GANGADHARAN.—If it is non-corrupt, we will say non-corrupt. If it is corrupt, we will say corrupt only.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಮುಖ್ಯಮಂತ್ರಿಯವರು ರಾಷ್ಟ್ರೀಯ ಜನತಾಪಕ್ಷಕ್ಕೂ ಅಲ್ಲ, ಅಥವಾ ಕರ್ನಾಟಕ ರಾಜ್ಯದಲ್ಲಿರತಕ್ಕ ಬಿ.ಜೆ.ಪಿ. ಅಥವಾ ಜನತಾಪಕ್ಷಕ್ಕೆ ಅಥವಾ ಅವರಿಗೆ ಬೆಂಬಲ ಕೊಡತಕ್ಕ ಪಕ್ಷೇತರ ಸದಸ್ಯರಿಗೆ, ಅಥವಾ ಸಿ.ಪಿ.ಎಂ., ಸಿಪಿಐ ರವರಿಗೆ ಮಾತ್ರ ಅಲ್ಲ. ಅವರು ಇಡೀ ಕರ್ನಾಟಕ ರಾಜ್ಯಕ್ಕೆ ಮುಖ್ಯಮಂತ್ರಿಗಳು ಆಗಿದ್ದಾರೆ. ಇದನ್ನು ಅವರು ತಿಳಿದುಕೊಂಡು ವರ್ತನೆ ಮಾಡುವುದು ಒಳ್ಳೆಯದು ಕಳೆದ ಒಂದೂವರೆ ವರ್ಷದಲ್ಲಿ ಸರಕಾರ ನಡೆದುಕೊಂಡು ಬಂದಂಥ ರೀತಿ ಯನ್ನು ನೋಡಿದರೆ ಏನೊಂದು ದಕ್ಷಿಣದ ಮುಖ್ಯಮಂತ್ರಿಗಳ ಕಾನ್‌ಕ್ಲೇವ್ ಪ್ರಯತ್ನ ಮಾಡಿ ಕರ್ನಾಟಕದ ಜನರಿಗೆ ಒಂದು ಚಕ್ರವ್ಯೂಹ ರಚಿಸಿದ ಬಗ್ಗೆ ಹೇಳಬೇಕಾಗಿದೆ. These Ministers are only for Janatha or BJP or their allies but not for the people of Karnataka.... ಕರ್ನಾಟಕ ಜನರ ಹಿತಾಸಕ್ತಿಗಳನ್ನು ಬದಿಗೊತ್ತಿ ಇವರು ಕೆಲಸ ಮಾಡಿದ್ದಾರೆ. ಸರಕಾರವನ್ನು ನಡೆಸತಕ್ಕಂಥವರ ದೃಷ್ಟಿಕೋನ ಜನರಿಗೆ ಕೊಟ್ಟ ಮಾತನ್ನು ಭರವಸೆಗಳನ್ನು ಈಡೇರಿಸುವ ದೃಷ್ಟಿಯಲ್ಲಿರಬೇಕು. ಮತ್ತು ಸರಕಾರದ ಸಾಧನೆ ಏನು ಎಂಬುದು ಜನರಿಗೆ ಗೊತ್ತಾಗಬೇಕು. ಆದರೆ ಇಲ್ಲಿ ನೋಡಿದರೆ ಬಹಳ ನಿರಾಶೆ ಆಗುತ್ತದೆ. ಇವರ ದೃಷ್ಟಿಕೋನ ಮೈನಾರಿಟಿ ಬಗ್ಗೆಯಾಗಲೀ, ಹಿಂದುಳಿದವರ ಬಗ್ಗೆಯಾಗಲೀ, ರೈತರ ಬಗ್ಗೆಯಾಗಲೀ ವಿರೋಧವಾಗಿದೆ. ಈ ಒಂದು ಹೊಸ ಪ್ರತೀತಿ ಯನ್ನು ಬೆಳೆಸಿಕೊಂಡು ಹೋಗುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನ ಇಲ್ಲ.

ಇನ್ನು ಕೇಂದ್ರ ಸರಕಾರದಲ್ಲಿದ್ದಾಗ ಯಾವ ರೀತಿ ವರ್ತಿಸುತ್ತಿದ್ದರು ಎಂಬುದನ್ನು ನೋಡಬೇಕು. ಇವರ ಜನತಾ ಸರಕಾರ ಅಲ್ಲಿದ್ದಾಗ ವಿರೋಧಪಕ್ಷದವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದರೋ ಅದೇ ಪ್ರಕಾರವಾಗಿ ಇಲ್ಲಿಯೂ ಸಹ ಸರಕಾರದ ಎಲ್ಲಾ ಆಡಳಿತ ಯಂತ್ರಗಳನ್ನು ದುರುಪ-ಯೋಗ ಮಾಡಿದ್ದಾರೆ. ಪಾಟ್ನಾದಲ್ಲಿ ಇವರಿಗೆ ಚಂದ್ರಶೇಖರ್‌ರವರು ಒಳ್ಳೆಯ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ ಇಲ್ಲಿ ಇವರ ವ್ಯವಹಾರ ಹೇಗಿದೆ ಎಂಬುದನ್ನು ನೋಡಬೇಕು. ಜನತೆಯು ಇವರಿಗೆ ಎದುರಿಸಲಾಗಲಿಲ್ಲ. ಜನತೆಯೇ ಇವರಿಗೆ ಸರ್ಟಿಫಿಕೇಟನ್ನು ಕೊಡುತ್ತಾ ಬಂದಿದೆ. ನಿಮ್ಮ

ಕಾರ್ಯ ಚಟುವಟಿಕೆ ಮೆಚ್ಚುಗೆ ಆಗಿಲ್ಲ ಎಂಬುದು ಗೊತ್ತಾಗುತ್ತದೆ. ಇವರ ಡೆಮಾಕ್ರಸಿ, ಪೀಪಲ್ಸ್‌ರೈಟ್ಸ್ ಸೋಷಲಿಸಮ್ ಬಗ್ಗೆ ಬಹಳ ಚೆನ್ನಾಗಿ ವ್ಯಾಖ್ಯಾನ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸೋಷಲಿಸಮ್ ಬಗ್ಗೆ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪಾಟ್ನಾದಲ್ಲಿ ಕಮ್ಯುನಿಷ್ಟರನ್ನು ದೂರ ಇಡಬೇಕು ಎನ್ನುತ್ತಾರೆ. ಇಲ್ಲಿ ಅವರ ಸಹಾಯವನ್ನು ಪಡೆದುಕೊಳ್ಳುತ್ತಾರೆ. ಕೇಂದ್ರದಲ್ಲಿ ಬಿ.ಜೆ.ಪಿ. ಯವರನ್ನು ಕಂಡರೆ ಆಗುವುದಿಲ್ಲ. ಇಲ್ಲಿ ಅವರಿಗೆ ಭಾಯಿ ಭಾಯಿ ಆಗುತ್ತಾರೆ. ಇದೆಲ್ಲಾ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಮಾಡುತ್ತಿದ್ದಾರೆ. ಇದೆಲ್ಲಾ ಬರೆಯ ಹುಲಿಯ ವೇಷ ಮತ್ತು ಅಲಾಯಿ ವೇಷ. ಕರ್ನಾಟಕ ರಾಜ್ಯದಲ್ಲಿ ಒಂದು ತರಹ ಮೊಹರಂ ಆಗಿದೆ ಒಂದು ಸಂದರ್ಭದಲ್ಲಿ ಒಂದು ಮತ್ತೊಂದು ಸಂದರ್ಭದಲ್ಲಿ ಬೇರೊಂದು ವೇಷ ಹಾಕುತ್ತಾರೆ. ಸಮಾಜವಾದವನ್ನು ಪಾಲಿಸ ಬೇಕೆಂದು ಹೇಳುವವರು ಈಗ ಅವರವರ ವೈಯಕ್ತಿಕ ಪ್ರತಿಷ್ಠೆ, ವೈಯಕ್ತಿಕ ಆಶೆ ಆಕಾಂಕ್ಷೆಗಳನ್ನು ಪ್ರಾರಂಭ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮನ್ನು ಬಿಹಾರ್‌ನಲ್ಲಿ ಟೀಕೆ ಮಾಡಿದರು ಎಂದು ಇಟ್ಟುಕೊಳಿ ಅದರಿಂದ ನಿಮಗೆ ಏತಕ್ಕೆ ಕೊರತೆ ? ನೀವು ಎಷ್ಟೋಸಲ ನಮ್ಮನ್ನು ಟೀಕೆ ಮಾಡಿದ್ದೀರಿ, ಈಗಲೂ ಮಾಡುತ್ತಿದ್ದೀರಿ. ಅದಕ್ಕೆ ಸರಿಯಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ನಾವು ಟೀಕೆ ಮಾಡುವ ಜನ ಅಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮುಖ್ಯ ಮಂತ್ರಿಗಳು ಯಾವರೀತಿ ಜನತೆಯ ಹಿತಾಸಕ್ತಿಗಳ ಬಗ್ಗೆ ಆಸಕ್ತಿ ತೋರಿಸುತ್ತಾರೆ ಎಂಬುದರ ಬಗ್ಗೆ ಅವರ ಟೂರ್ ಪ್ರೋಗ್ರಾಂ ವಿವರಣೆಯನ್ನು ಕೊಡುತ್ತೇನೆ. ಇದನ್ನು ಹೇಳಿದರೆ ಅವರಿಗೆ ಸಿಟ್ಟುಬರುತ್ತದೆ. ರಾಜ್ಯದ ಒಳಗಡೆ ಎಷ್ಟು ? ಹೊರಗಡೆ ಎಷ್ಟು ಪ್ರವಾಸ ಮಾಡಿದ್ದಾರೆ ಎಂಬುದನ್ನು ತಿಳಿಸಲಿಚ್ಛಿಸುತ್ತೇನೆ. ರಾಜ್ಯದ ಹಿತಾಸಕ್ತಿಗಳ ಬಗ್ಗೆ ಅವರು ಹೊರಗಡೆ ಪ್ರವಾಸ ಮಾಡಿದ್ದರೆ ನಮ್ಮ ಆಕ್ಷೇಪಣೆ ಇಲ್ಲ. ಶ್ರೀ ಬೊಮ್ಮಾಯಿಯವರು, ಶ್ರೀ ದೇವೇಗೌಡರು ಇದ್ದಾರೆ ಪರವಾಗಿಲ್ಲ. ಅವರ ಪ್ರವಾಸದಿಂದ ರಾಜ್ಯಕ್ಕೆ ಏನಾದರೂ ಹಣ ತಂದು ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡುವುದಾದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಜನವರಿ ೧೯೮೩ ರಿಂದ ಮಾರ್ಚ್ ೧೨ರವರೆಗೆ ಮುಖ್ಯಮಂತ್ರಿಗಳು ರಾಜ್ಯದ ಹೊರಗಡೆ ಮತ್ತು ಒಳಗಡೆ ಪ್ರವಾಸ ಮಾಡಿರತಕ್ಕ ಪಟ್ಟಿ ಈ ರೀತಿಯಾಗಿದೆ. Within the State – Tour 83 days – Halts– 39 days Outside the State – tour 126 days as against 83 days inside the State. and halts outside the State – 90 days as against 39 days inside the State. This is how the Chief Minister has performed the tours. ಮುಖ್ಯಮಂತ್ರಿಗಳು ಕರ್ನಾಟಕ ರಾಜ್ಯಕ್ಕೋ ಅಥವಾ ಜನತಾಪಕ್ಷಕ್ಕೋ ಎಂಬುದು ಒಂದು ಯಕ್ಷ ಪ್ರಶ್ನೆಯಾಗಿ ಉಳಿದು ಬಂದಿದೆ. ಈ ರೀತಿ ಅವರು ಕರ್ನಾಟಕ ರಾಜ್ಯದ ಹಿತಾಸಕ್ತಿಗಳನ್ನು ಬಲಿ ಕೊಡುತ್ತಿದ್ದಾರೆ. ಇವರ ಮೇಲೆ ಭ್ರಷ್ಟಾಚಾರದ ಆರೋಪ, ಜಾತೀಯತೆಯ ಆರೋಪ ಎಲ್ಲಾ ಇದೆ. ಇದರಿಂದಾಗಿ ಕರ್ನಾಟಕದಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ತಕ್ಕ ವಾತಾವರಣ ಇಲ್ಲ.

ಇನ್ನು ಕ್ಯಾಬಿನೆಟ್ ಎಕ್ಸ್‌ಪ್ಯಾನ್‌ಷನ್ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ ಮಾಡಿಲ್ಲ. ಎಷ್ಟೊಂದು ಇಲಾಖೆಗಳನ್ನು ಇವರೇ ಇಟ್ಟುಕೊಂಡಿದ್ದಾರೆ, ವಿಸ್ತಾರ ಮಾಡಲು ಇವರಿಗೆ ಭಯ ಅವರಿಗೆ ಧೈರ್ಯ ಇಲ್ಲವೋ ಅಥವಾ ಅವಕಾಶ ಇಲ್ಲವೋ ಅಥವಾ ಶ್ರೀ ದೇವೇಗೌಡರು ಮತ್ತು ಶ್ರೀ ಬೊಮ್ಮಾಯಿಯವರು ಬಿಡುತ್ತಿಲ್ಲವೋ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಶ್ರೀ ಬೊಮ್ಮಾಯಿಯವರು ತಮ್ಮ ಜನವನ್ನು ಜಾಸ್ತಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಶ್ರೀ ದೇವೇಗೌಡರು ತಮ್ಮ ಜನವನ್ನು ಜಾಸ್ತಿ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇವರ ಗಲಾಟೆಯಲ್ಲಿ ಮುಖ್ಯಮಂತ್ರಿಯವರ ಕೂಸು ಬಡವಾಗಿದೆ. ಎತ್ತಿದವರ ಕೂಸು ಆಗಬೇಕಾಗಿದೆ ಮುಖ್ಯಮಂತ್ರಿಯವರು. ಮುಖ್ಯಮಂತ್ರಿಗಳು ಧೈರ್ಯದಿಂದ ಕೆಲಸ ಮಾಡಿ ಸಂಘರ್ಷಣೆಯಲ್ಲಿ ನುಚ್ಚುನೂರಾಗಬಾರದು. ಅದರಲ್ಲಿ ತಾವು ಮಾತ್ರವಲ್ಲ ಕನ್ನಡದ ಜನತೆ ನುಚ್ಚುನೂರಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರ್).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಕೈಗಾರಿಕಾ ಮಂತ್ರಿಗಳು ಮಂಡಿಸಿರುವ ಡಿಮ್ಯಾಂಡ್‌ಗಳನ್ನು ಸಂತೋಷದಿಂದ ಬೆಂಬಲಿಸಿ, ಕೆಲವು ಮಾತುಗಳನ್ನು ಆಡಲಿಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅಗ್ನಿಶಾಮಕದಳದ ಅವಶ್ಯಕತೆ ಬಹಳ ಇದೆ. ಸರ್ಕಾರ ಈ ವಿಚಾರದಲ್ಲಿ ಆದಷ್ಟು ಕ್ರಮ ತೆಗೆದುಕೊಂಡಿದೆ. ಕೆಲವು ಜಿಲ್ಲೆಗಳಲ್ಲಿ ಒಂದು ಅಗ್ನಿಶಾಮಕದಳವೂ ಇಲ್ಲ. ಅನೇಕ ಸಾರಿ ಬೆಂಕಿ ಅನಾಹುತ ಉಂಟಾಗಿ, ಬಡವರ ಮನೆಗಳು, ಅನೇಕ ಸಂಘಸಂಸ್ಥೆಗಳ ವಸ್ತುಗಳು. ಅಗ್ನಿ ವಿಕೋಪಕ್ಕೆ ತುತ್ತಾಗಿ, ಬಹಳ ಲುಕ್ಸಾನಿಗೆ ಗುರಿಯಾಗಿವೆ. ಇಂತಹ ಸಂದರ್ಭದಲ್ಲಿ ಅಗ್ನಿಶಾಮಕದಳಗಳು ಇಲ್ಲದೆ ಬಹಳ ತೊಂದರೆಯಾಗಿದೆ. ಆದುದರಿಂದ ಕನಿಷ್ಟ ಒಂದೊಂದು ರೆವಿನ್ಯೂ ಡಿವಿಜನ್‌ಗಳಲ್ಲಿ, ಒಂದೊಂದು ಅಗ್ನಿಶಾಮಕ ದಳಗಳನ್ನು ಸ್ಥಾಪಿಸಬೇಕೆಂದು ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ. ಅನೇಕ ಕಡೆ ಕೆಲವು ಎ.ಪಿ.ಎಂ.ಸಿ. ಮತ್ತು ನಗರಸಭೆಗಳು, ಇವುಗಳಲ್ಲಿ ೫೦ ಲಕ್ಷ ೬೦ ಲಕ್ಷ ಹಣ ಇದ್ದರೂ, ಕೂಡ ಅವರಿಗೆ ಅಧಿಕಾರಿಗಳು ಪರವಾನಗಿಯನ್ನು ಕೊಟ್ಟಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಿ, ಅಗ್ನಿಶಾಮಕ ಯಂತ್ರಗಳನ್ನು ಇಡಲಿಕ್ಕೆ ಸರ್ಕಾರ ಆದೇಶ ಕೊಡಲಿ ಎಂದು ಇಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಹೆಗಡೆಯವರ ಸರ್ಕಾರ ಬಂದಮೇಲೆ, ಒಂದು ವರ್ಷದ ಅವಧಿಯಲ್ಲಿ ಉತ್ತಮ ಸಾಧನೆಗಳನ್ನು ಸಾಧಿಸಿದೆ. ಆಡಳಿತ ಸುಧಾರಣೆ ಮಾಡುವುದಕ್ಕೆ ಕೂಡ ಪ್ರಯತ್ನ ಮಾಡಿದೆ. ನಮ್ಮ ಮೊಯ್ಲಿಯವರು ಹೇಳಿದರು, ಅಧಿಕಾರಿಗಳಲ್ಲಿ ದೌರ್ಜನ್ಯ ಇದೆ ಅಂತ. ಈ ಅಧಿಕಾರಿಗಳ ದೌರ್ಜನ್ಯ ಇವತ್ತು ಅಷ್ಟೇ ಅಲ್ಲ, ಮೊದಲಿನಿಂದ ಬಂದಿದೆ. ಗುಂಡೂರಾವ್ ಸರ್ಕಾರ ಇದ್ದಾಗಲೂ ದೌರ್ಜನ್ಯ ಇತ್ತು, ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗಲೂ ದೌರ್ಜನ್ಯ ಇತ್ತು, ದೇವರಾಜ ಅರಸರ ಸರ್ಕಾರ ಇದ್ದಾಗಲೂ ದೌರ್ಜನ್ಯ ಇತ್ತು, ಇವತ್ತೂ ಕೂಡ ಇದೆ. ಅಧಿಕಾರಿಗಳು ಶಹಭಾಸ್‌ಗಿರಿಯನ್ನು ಪಡೆಯುವುದಕ್ಕೆ ಮಾಡಬಾರದ್ದನ್ನು ಮಾಡಿ, ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಾರೆ. ಗುಂಡೂರಾವ್ ಸರ್ಕಾರಕ್ಕೂ ಕೂಡ ಇವರಿಂದಲೇ ಕೂಡ ಕೆಟ್ಟ ಹೆಸರು ಬಂತು. ನಮ್ಮ ಶಹಭಾಸ್‌ಗಿರಿ ಪಡೆಯುವುದಕ್ಕೆ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಈ ದೌರ್ಜನ್ಯ ಹೋಗಬೇಕು ಈ ಅಧಿಕಾರಿಗಳನ್ನು ಸರಿಯಾಗಿ ಹತೋಟಿಯಲ್ಲಿಡದಿದ್ದರೆ, ಇವರನ್ನು ಸರಿಯಾಗಿ ದಂಡಿಸದಿದ್ದರೆ, ಅನಾಹುತಗಳು ತಪ್ಪಿದ್ದಲ್ಲ. ಪ್ರತಿಯೊಂದು ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ ಎನ್ನುವುದನ್ನು ನಾವು ಮರೆಯಲಿಕ್ಕಿಲ್ಲ. ಈ ಅಧಿಕಾರಿಗಳ ವಿಷಯದಲ್ಲಿ ಕೆಲವರಿಗೆ ಶಿಕ್ಷೆ ಕೊಡುವುವುದಕ್ಕೆ, ಇವರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಸಾಕಷ್ಟು ಸಾಧನಗಳು ನಮ್ಮ ಸರ್ಕಾರದಲ್ಲಿವೆ. ಇವತ್ತು ಹೆಗಡೆಯವರ ಸರ್ಕಾರ ಬಂದಮೇಲೆ ಅನೇಕ ರೀತಿಯಿಂದ ದುಷ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟಿದ್ದಾರೆ, ಹಾಗೂ ಕೊಡುತ್ತಿದ್ದಾರೆ. ಆದರೆ ಹಿಂದೆ ನಡೆದು ಬಂದ ದಾರಿ ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಪ್ರತಿವರ್ಷ ವಿಜಿಲೆನ್ಸ್ ಕಮಿಷನರ್ ಅವರಿಗೆ, ಸರ್ಕಾರಕ್ಕೆ, ಸಾರ್ವಜನಿಕರು ಅನೇಕ ದೂರುಗಳನ್ನು ಕೊಡುತ್ತಿದ್ದಾರೆ. ಇವತ್ತು ಕೊಟ್ಟಂತಹ ದೂರುಗಳು ಸರಿಯಾಗಿ ವಿಚಾರಣೆ ಆಗಿದೆಯೋ ಇಲ್ಲವೇ ಎಂದು ನೋಡಿದರೆ, ವಿಚಾರಣೆ ಆಗಿಲ್ಲ. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಂಡರೆ, ಸಾರ್ವಜನಿಕರಲ್ಲಿ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುತ್ತದೆ ಎನ್ನುವ ಮಾತನ್ನು ಮರೆಯುತಕ್ಕದ್ದಲ್ಲ. ಉದಾಹರಣೆಗೆ ಹೇಳಬೇಕೆಂದರೆ, ರಾಜ್ಯದಲ್ಲಿ ಸುಮಾರು ೬೬ ನಮೂನೆಯ ಗೆಜೆಟೆಡ್ ಅಧಿಕಾರಿಗಳಿದ್ದಾರೆ, ಬಿ.ಡಿ.ಓ. ಅಸಿಸ್ಟೆಂಟ್ ಲೇಬರ್ ಕಮೀಷನರ್, ಎಸ್.ಇ.ಡಿ.ಸಿ., ಸ್ಪೆಷಲ್ ಡಿ.ಸಿ ಹೀಗೆ ಅನೇಕ ಇಲಾಖೆಗಳ ಅಧಿಕಾರಿಗಳಿದ್ದಾರೆ. ಅದೇರೀತಿ ನಾನ್ ಗೆಜೆಟೆಡ್ ಅಧಿಕಾರಿಗಳು ವಿಲೇಜ್ ಅಕೌಂಟ್‌ನಿಂದ ಹಿಡಿದು, ೬೦ ನಮೂನೆಯಲ್ಲಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪ, ಅನ್ಯಾಯದ ಆರೋಪ ಹೀಗೆ ಅನೇಕ ತರಹದ ಲೋಪದೋಷಗಳು ಇವೆ. ಇವತ್ತು ವಿಜಿಲೆನ್ಸ್ ಕಮಿಷನ್‌ರವರು ನಮಗೆ ಸುಮಾರು ೫–೬ ವರ್ಷಗಳಿಂದ ವರದಿಯನ್ನು ಸಭೆಗೆ ಕೊಟ್ಟಿರಲಿಲ್ಲ. ಹಿಂದೆ ದೇವರಾಜ ಅರಸರ ಕಾಲದ ೫ ವರ್ಷಗಳ ಗುಂಡೂರಾಯರ ಕಾಲದ ೩ ವರ್ಷಗಳ ಅವಧಿಯಲ್ಲಿ ವಿಜಿಲೆನ್ಸ್ ಕಮಿಷನ್ ಅವರ ರಿಪೋರ್ಟ್ ಏನಾಗಿದೆ, ಯಾವ ಯಾವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡರು ಎಂಬ ಬಗ್ಗೆ ಈ ಶಾಸನ ಸಭೆಯ ಮುಂದೆ ಇಡಲಿಲ್ಲ. ಹೆಗಡೆಯವರ ಸರ್ಕಾರ ಬಂದಮೇಲೆ ೪ ವರ್ಷದ ರಿಪೋರ್ಟ್‌ಗಳನ್ನು ಅಂದರೆ ೧೯೭೭–೭೮ರಿಂದ ೧೯೮೦–೮೧ರ ವರೆಗಿನ ವರದಿಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ.

Indicates that remarks or speeches have not been reviser by the member concerned.

ಹಿಂದಿನ ೫ ವರ್ಷಗಳಲ್ಲಿ ಏನೇನು ನಡೆದಿದೆ ಎಂಬುದನ್ನು ಕೂಡ ನಮಗೆ ನೋಡಲಿಕ್ಕೆ ಅವಕಾಶ ಸಿಕ್ಕಿದೆ. ವಿಜಿಲೆನ್ಸ್ ಕಮಿಷನ್ ಅವರ ರಿಪೋರ್ಟ್ ಪ್ರಕಾರ ನೋಡಿದರೆ ೧೯೬೪–೬೫ ರಿಂದ ೧೯೭೦–೭೧ರ ವರೆಗೆ ೬೦,೪೧೪ ಅರ್ಜಿಗಳನ್ನು ವಿಜಿಲೆನ್ಸ್ ಕಮಿಷನ್ ಅವರಿಗೆ, ಸಾರ್ವಜನಿಕರು ಮತ್ತು ಸರ್ಕಾರದಿಂದ ಹೋಗಿವೆ. ಈ ರೀತಿ ಹೋದ ಅರ್ಜಿಗಳ ಪೈಕಿ, ಸುಮಾರು ೩೫,೬೬೭ ಅರ್ಜಿಗಳನ್ನು ವಿಜಿಲೆನ್ಸ್ ಕಮಿಷನ್ ಅವರು ಆಯಾ ಖಾತೆಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಳುಹಿಸಿಕೊಟ್ಟಿರುತ್ತಾರೆ. ಈ ೩೫,೬೬೭ ಅರ್ಜಿಗಳನ್ನು ಆಯಾ ಖಾತೆಗಳಿಗೆ ಕಳಿಸಿಕೊಟ್ಟರೂ, ಅವು ಏನಾದವು ಎನ್ನುವ ಬಗ್ಗೆ ವಿಚಾರಣೆ ಮಾಡಿ, ಯಾವ ಕ್ರಮವನ್ನು ತೆಗೆದುಕೊಂಡರು ಎಂಬುದೇ ಇಲ್ಲಿಯ ಸದಸ್ಯರಿಗೆ ಗೊತ್ತಿಲ್ಲ. ಸರ್ಕಾರ ಯಾವುದೇ ವರದಿಯಲ್ಲೂ ಕೂಡ ಹೇಳಿಲ್ಲ. ರಾಜ್ಯದಲ್ಲಿ ವಿಜಿಲೆನ್ಸ್ ಕಮಿಷನ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅವರು ಅನೇಕ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ. ಹಿಂದಿನ ನಾಲ್ಕು ವರ್ಷಗಳ ವರದಿಯನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ತಲೆ ತಗ್ಗಿಸಬೇಕಾಗುತ್ತದೆ. ಡಿಸ್‌ಮಿಸ್ ಮಾಡಿ ಎಂದು ಅನೇಕ ಸಾರಿ ಅವರು ವಿಚಾರಣೆ ಮಾಡಿ, ಅಧಿಕಾರಿಗಳ ಮೇಲೆ ಶಿಫಾರಸ್ ಕಳುಹಿಸಿದ್ದಾರೆ. ಆದರೂ ಹಿಂದಿನ ಸರ್ಕಾರಗಳು ೫ ವರ್ಷಗಳ ಅವಧಿಯಲ್ಲಿ ಅನೇಕರಿಗೆ ಕ್ಷಮಾದಾನವನ್ನು ಮಾಡಿದ್ದಾರೆ. ಒಂದೆರಡು ಇಂಕ್ರಿಮೆಂಟ್ ಕಟ್ ಮಾಡಿ, ಬರತಕ್ಕಂಥ ಪಗಾರವನ್ನು ಸ್ವಲ್ಪ ಕಡಿಮೆ ಮಾಡಿದ್ದಾರೆ. ಅನೇಕ ಅಸಿಸ್ಟೆಂಟ್ ಇಂಜನಿಯರ್ಸ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ಸ್, ಎಸ್.ಇ. ಮತ್ತು ಸಿ.ಇ.ಗಳು ಜೈಲಿನಲ್ಲಿ ಇರಬೇಕಾದವರು, ನೌಕರಿಯನ್ನು ಕಳೆದುಕೊಂಡು ಮನೆಯಲ್ಲಿ ಇರಬೇಕಾದವರು ಇವತ್ತು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದಾರೆ. ಇದಕ್ಕೆ ಯಾರು ಕಾರಣ? ಈ ರೀತಿ ಭ್ರಷ್ಟ ಅಧಿಕಾರಿಗಳಿಗೆ ಕ್ಷಮಾದಾನವನ್ನು ಮಾಡುತ್ತಾ ಹೋದರೆ, ಸಚಿವ ಸಂಪುಟದಲ್ಲಿ ಸರ್ಕಾರದ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಏನು ಇರುತ್ತದೆ? ಒಳ್ಳೆಯ ಆಡಳಿತ ನಡೆಸುವುದಕ್ಕೆ ಸಾಧ್ಯವೆ? ಸುದೈವದಿಂದ ನಮ್ಮ ಸರ್ಕಾರ ಬಂದಮೇಲೆ, ಶ್ರೀಮಾನ್ ಹೆಗಡೆಯವರು ನಿರ್ದಾಕ್ಷಿಣ್ಯವಾಗಿ, ಕೆಲವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಆ ವರದಿ ಇನ್ನೂ ಬಂದಿಲ್ಲ. ಅದು ಬಂದಮೇಲೆ ಗೊತ್ತಾಗುತ್ತದೆ. ಇದು ನಡೆದುಕೊಂಡು ಬಂದಿದೆ. ಹಿಂದಿನಿಂದ ಇದ್ದ ಸರ್ಕಾರಗಳು ನಿರ್ದಾಕ್ಷಿಣ್ಯವಾಗಿ ದುಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೆ, ಇವತ್ತು ಈ ರೀತಿ ಅಧಿಕಾರಿಗಳು ದೌರ್ಜನ್ಯ ಮಾಡುವುದಾಗಲೀ, ಭ್ರಷ್ಟಾಚಾರ ಮಾಡುವುದಾಗಲೀ, ಸೋಮಾರಿಗಳಾಗುವುದಾಗಲೀ, ಅಥವಾ ಅಧ್ಯಕ್ಷರಾಗುವುದಾಗಲೀ ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲ. ಈಗಿನ ಸರ್ಕಾರ ಚೆನ್ನಾಗಿ, ಚುರುಕಾಗಿ ಕೆಲಸ ಮಾಡುತ್ತಿದೆ. ವಿಜಿಲೆನ್ಸ್ ಕಮಿಷನ್ ಅವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಏಕೆಂದರೆ ವಿಜಿಲೆನ್ಸ್ ಕಮಿಷನ್‌ನಲ್ಲಿ ಜಿಲ್ಲಾ ನ್ಯಾಯಾಧೀಶರು ಇರುತ್ತಾರೆ. ಸರ್ಕಾರಿ ಅಧಿಕಾರಿಗಳು ಯಾರಿದ್ದಾರೆ, ಇವರು ವಕೀಲರನ್ನು ಇಡುವುದಕ್ಕೆ ಅವಕಾಶ ಇದೆ. ಸಮರ್ಥ ರೀತಿಯಲ್ಲಿ ವಿಚಾರಣೆ ಮಾಡಿ, ವರದಿಯನ್ನು ಕೊಟ್ಟಾಗ ಡಿಸ್‌ಮಿಸ್ ಮಾಡಿ ಎಂದು ಹೇಳಿ ಶಿಫಾರಸ್ ಮಾಡಿದರೂ, ಅದನ್ನು ಆ ರೀತಿ ಡಿಸ್‌ಮಿಸ್ ಮಾಡದೇ ಇವರಿಗೆ ನೌಕರಿಯಲ್ಲಿ ಪ್ರಮೋಷನ್ ಕೊಟ್ಟು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇಡುವುದು ಅಯೋಗ್ಯತನ, ಅನ್ಯಾಯ ಎಂಬ ಮಾತನ್ನು ಹೇಳುತ್ತೇನೆ. ವಿಜಿಲೆನ್ಸ್ ಕಮಿಷನ್ ಅವರು ಕೆಲವು ಐ.ಎ.ಎಫ್. ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಲು ಶಿಫಾರಸ್ ಮಾಡಿದರೂ ಕೂಡ, ಐ.ಎ.ಎಸ್. ಅಧಿಕಾರಿಗಳು ದೊಡ್ಡ ದೊಡ್ಡ ಹುದ್ದೆಯಲ್ಲಿರುವುದರಿಂದ, ಅವರು ನಿವೃತ್ತಿ ಆಗುವವರೆಗೂ ಇಂತಹ ಕೇಸುಗಳನ್ನು ವಿಚಾರಣೆ ಮಾಡದೇ ಸುಮ್ಮನೆ ಮುಂದೂಡುವುದು, ಮತ್ತೆ ಸರ್ಕಾರಕ್ಕೆ ಬಂದ ವರದಿಗಳು ಏನೇನೆ ಅವನ್ನು ಬೇರೆಯವರಿಗೂ ತಿಳಿಸದೇ ಗಪ್‌ಚಿಪ್ ಇಟ್ಟುಬಿಡುವುದು. ಆಮೇಲೆ ಈ ಅಧಿಕಾರಿಗಳು ನಿವೃತ್ತಿಯಾದ ಮೇಲೆ ವರದಿಗಳನ್ನು ಹೊರತೆಗೆದು, ಇವರು ಈಗಾಗಲೇ ನಿವೃತ್ತಿ ಆಗಿಬಿಟ್ಟಿದ್ದಾರೆ, ಇವರ ಮೇಲೆ ಕ್ರಮ ತೆಗೆದುಕೊಳ್ಳುವುದು ಅನಾವಶ್ಯಕ ಎಂಬುದಾಗಿ ತೀರ್ಮಾನ ಮಾಡಿರತಕ್ಕ ಅನೇಕ ಅನೇಕ ಉದಾಹರಣೆಗಳು ನಮ್ಮ ಕಣ್ಮುಂದೆ ಇವೆ. ಈ ರೀತಿ ಮಾಡದಹಾಗೆ, ನಿರ್ದಾಕ್ಷಿಣ್ಯವಾಗಿ ದುಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ಮಾಡಿದರೆ, ನಮ್ಮ ದೇಶದಲ್ಲಿ ಪೋಲೀಸ್ ಅಧಿಕಾರಿಗಳಾಗಲೀ, ಪಿ.ಡಬ್ಲ್ಯು.ಡಿ. ಅಧಿಕಾರಿಗಳಾಗಲೀ, ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ದೌರ್ಜನ್ಯ ಮಾಡುತ್ತಾರೆ. ಸರ್ಕಾರ ಕೊಟ್ಟಂಥ ಹಣವನ್ನು ತಾಲ್ಲೂಕು ಮಟ್ಟದಲ್ಲಿ ನೂರಕ್ಕೆ ೨೫ರಷ್ಟು ದುರುಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕೆಲವು ತಾಲ್ಲೂಕುಗಳಲ್ಲಿ ಬಿ.ಡಿ.ಓ. ಮತ್ತು ಎಂಜಿನೀಯರುಗಳು ಸೇರಿ ಕೆರೆಗಳ ರಿಪೇರಿ ಮಾಡಲಾಗಿದೆಯೆಂದು ತಪ್ಪು ಲೆಕ್ಕಗಳನ್ನು ತೋರಿಸಿ ಬೇಕಾದಷ್ಟು ಹಣವನ್ನು ಹೊಡಿದ ಸಂದರ್ಭಗಳೂ ಇವೆ. ಇವರುಗಳ ಮೇಲೆ ವಿಜಿಲೆನ್ಸ್ ಕಮಿಷನ್‌ರವರು ತನಿಖೆ ಮಾಡಿ ಸರ್ಕಾರಕ್ಕೆ ಅವರ ಮೇಲೆ ರಿಪೋರ್ಟ್‌ಗಳನ್ನು ಸಲ್ಲಿಸಿದ್ದರೂ ಸಹ ಇದುವರೆಗೂ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಇದಕ್ಕೆ ನಾವು ಏನು ಹೇಳಬೇಕು ? ಆದ್ದರಿಂದ ರಿಪೋರ್ಟ್ ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳುವ ಪ್ರವೃತ್ತಿ ನಮ್ಮ ಸರ್ಕಾರದಲ್ಲಿ ಬೆಳೆಯಬೇಕು, ಎಂದು ಹೇಳುತ್ತೇನೆ. ಅಧ್ಯಕ್ಷರೇ, ನಮ್ಮ ಸರ್ಕಾರದಲ್ಲಿ ಸುಮಾರು ೨೩೦ ಜನ ಐ. ಎ. ಎಸ್. ಅಧಿಕಾರಿಗಳು ಸುಮಾರು ೩೫೬ ಜನ ಕೆ.ಎ.ಎಸ್. ಅಧಿಕಾರಿಗಳಿದ್ದಾರೆ. ಇವರುಗಳನ್ನು ಯಾವುದೋ ಒಂದೇ ಮ್ಯಾನೇಜರಿಕೆ ಮಾಡುವುದಕ್ಕೆ ಹಚ್ಚುವುದನ್ನು ಬಿಟ್ಟು ಇವರುಗಳಿಗೆ ತಕ್ಕಂತೆ ಜವಾಬ್ದಾರಿಯುತವಾದ ಕೆಲಸವನ್ನು ಕೊಡಬೇಕು. ನಮ್ಮ ಸರ್ಕಾರದಲ್ಲಿ ಅನೇಕ ಜನ ಒಳ್ಳೆಯ ನುರಿತ ಐ.ಎ.ಎಸ್. ಅಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳಿದ್ದಾರೆ. ಹೊಸದಾಗಿ ಬಂದಂತಹ ಐ.ಎ ಎಸ್. ಅಧಿಕಾರಿಗಳನ್ನು ಜಿಲ್ಲಾಧಿಕಾರಿಗಳನ್ನಾಗಿ ನೇಮಕ ಮಾಡಿದರೆ ಅವರಿಗೆ ಆಡಳಿತ ಮಾಡಲು ಧೈರ್ಯಸ್ಥೈರ್ಯಗಳು ಸಾಲುವುದಿಲ್ಲ. ನಮ್ಮಲ್ಲಿ ೬೧ ಕಾರ್ಪೊರೇಷನ್‌ಗಳು ಇನಿವೆ ಅವುಗಳಿಗೆ ಒಬ್ಬೊಬ್ಬ ಅಧಿಕಾರಿ ೧೦-೧೫ ಕಾರ್ಪೊರೇಷನ್‌ಗಳಿಗೆ ಡೈರೆಕ್ಟರ್ ಆಗಿರುತ್ತಾರೆ. ಕೆಲವು ಅಧಿಕಾರಿಗಳು ಒಬ್ಬರೇ ೩-೪ ನಿಗಮಗಳ ಅಧ್ಯಕ್ಷರಾಗಿರುವ ಉದಾಹರಣೆಗಳೂ ಇವೆ. ನಮ್ಮಲ್ಲಿ ಯಾರು ಮಾಜಿ ಶಾಸಕರು, ಮಾಜಿ ಮಂತ್ರಿಗಳು ಉತ್ತಮ ಆಡಳಿತಗಾರರಾಗಿರುತ್ತಾರೋ ಅಂತಹವರನ್ನು ನಾನ್ ಅಫಿಷಿಯಲ್ ಮೆಂಬರಾಗಿ ನೇಮಿಸಿದರೆ ಕಾರ್ಪೊರೇಷನ್‌ಗಳು ಒಳ್ಳೆಯ ಕೆಲಸವನ್ನು ಮಾಡುತ್ತವೆಂದು ನಾನು ಇಲ್ಲಿ ಸಲಹೆ ಕೊಡುತ್ತಿದ್ದೇನೆ.

ಇನ್ನು ಡಿ.ಎಲ್.ಆರ್.ಸಿ. ಬಗ್ಗೆ ಹೇಳಬೇಕಾದರೆ, ಇದರಲ್ಲಿ ಅನೇಕ ಹಗರಣಗಳು ತುಂಬಿವೆ. ಸರ್ಕಾರದವರು ಧೈರ್ಯ ಮಾಡಿ ಈ ಸಮಿತಿಗಳನ್ನು ರದ್ದುಪಡಿಸಿದ್ದಾರೆ. ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಹಿಂದೆ ಶ್ರೀ ಗುಂಡೂರಾವ್ ಸರ್ಕಾರ ಇದ್ದಾಗ ನಮ್ಮ ಧಾರವಾಡದಲ್ಲಿ ಡಿ.ಎಲ್.ಆರ್.ಸಿ. ಕಮಿಟಿ ಇತ್ತು. ವಿರೋಧ ಪಕ್ಷದ ಪತಿಯಿಂದ ಶ್ರೀ ಎಸ್. ಬೊಮ್ಮಾಯಿಯವರು ಆ ಕಮಿಟಿಯ ಸದಸ್ಯರಾಗಿದ್ದರು. ಅವರು ಪಿ.ಎ.ಸಿ. ಅಧ್ಯಕ್ಷರಾಗಿದ್ದರು. ಪಿ.ಎ.ಸಿ. ಮೀಟಿಂಗ್ ನಡೆಯುತ್ತಿದ್ದಾಗ, ಈ ಡಿ.ಎಲ್.ಆರ್.ಸಿ. ಮೀಟಿಂಗ್ ನಡೆಯುತ್ತಾ ಇತ್ತು. ಈ ಡಿ.ಎಲ್.ಆರ್.ಸಿ. ಕಮಿಟಿಯ ಮೇಲೆ ಅನೇಕ ಅಪವಾದಗಳಿದ್ದಾಗ್ಯೂ ಈ ಸಮಿತಿಯನ್ನು ರದ್ದು ಮಾಡಲಿಲ್ಲ. ಒಬ್ಬೊಬ್ಬ ಬಡವನಿಂದ ೮-೧೦ ಸಾವಿರ ರೂಪಾಯಿಗಳನ್ನು ವಸೂಲಿ ಮಾಡಿದರು. ಆ ಸಮಿತಿ ರದ್ದು ಮಾಡುವ ವಿಚಾರ ಬಂದಾಗ ಅದೇ ಸಮಯದಲ್ಲಿ ಧಾರವಾಡದಲ್ಲಿ ಬೈ ಎಲೆಕ್ಷನ್ ಬಂತು. ಆಗ ಗುಂಡೂರಾಯರು ಮತ್ತು ಜಿಲ್ಲಾ ಮಂತ್ರಿಗಳು ಕೂಡಿಕೊಂಡು ಆ ಸಮಿತಿಯ ಮೇಲೆ ಅಪಾದನೆ ಇದ್ದರೂ ಸಹ ಆ ಅಕ್ರಮ ನೇಮಕಗಳಿಗೆ ಮನ್ನಣೆ ಕೊಟ್ಟರು. ಆ ರೀತಿ ಈಗಿನ ಸರ್ಕಾರ ಮಾಡುತ್ತಾ ಇಲ್ಲ. ಎಲ್ಲೆಲ್ಲಿ ಭ್ರಷ್ಟಾಚಾರ ಕಾಣುತ್ತಿದೆ. ಅಧಿಕಾರಿಗಳೇ ಇರಲಿ, ಅಧಿಕಾರೇತರರಿರಲಿ ಅವರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಅವರನ್ನು ಮಟ್ಟಹಾಕಬೇಕು. ಬಹಳ ಧೈರ್ಯ ಮಾಡಿ ಈ ಸರ್ಕಾರದವರು ಲೋಕಆಯುಕ್ತ ಬಿಲ್ಲನ್ನು ತಂದಿದ್ದಾರೆ. ಈ ಬಿಲ್ಲಿನ ಪ್ರಕಾರ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು ಈ ಮಸೂದೆಯ ವ್ಯಾಪ್ತಿಯೊಳಗೆ ಬರುತ್ತಾರೆ. ಯಾರು ಭ್ರಷ್ಟಾಚಾರಗಳನ್ನು ಎಸಗುತ್ತಾರೆ ಅಂಥವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಯಾವ ಅಸ್ತ್ರಗಳು ಬೇಕೋ ಆ ಅಸ್ತ್ರಗಳನ್ನು ಲೋಕ ಆಯುಕ್ತದ ಮೂಲಕ ಪ್ರಯೋಗ ಮಾಡಿದ್ದಾರೆ. ಇದು ಜಾರಿಗೆ ಬಂದರೆ ಭ್ರಷ್ಟಾಚಾರಿಗಳು, ಸ್ವಜನ ಪಕ್ಷಪಾತಿಗಳು, ವಿರೋಧಿಗಳ ದಮನ ಇವುಗಳು ಕಡಿಮೆಯಾಗುತ್ತವೆ ಎಂದು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರೇ ಜನತಾ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯ ಅನುಸಾರ ಎಲ್ಲಾ ಪುರಸಭೆಗಳಿಗೆ ಈಗಾಗಲೇ ಚುನಾವಣೆಗಳನ್ನು ಮಾಡಿದ್ದಾರೆ. ಈ ಚುನಾವಣೆಗಳಲ್ಲಿ ೧೮ರಿಂದ ೨೧ ವರ್ಷದ ತರುಣರಿಗೆಲ್ಲಾ ಮತವನ್ನು ಹಾಕಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಮತ್ತು ಅನೇಕ ಸಂಘ ಸಂಸ್ಥೆಗಳಲ್ಲಿ ಭಾಗವಹಿಸಲಿಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಈ ವಿಷಯದಲ್ಲಿ ನಾನು ಸರ್ಕಾರವನ್ನು ಬೆಂಬಲಿಸುತ್ತೇನೆ. ಮತ್ತು ಅವರನ್ನು ಈ ವಿಷಯದಲ್ಲಿ ಹೊಗಳಿದರೆ ತಪ್ಪೇನು ಇಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ನೌಕರಿಯ ವಿಚಾರದಲ್ಲಿ ಹೇಳಬೇಕಾದರೆ, ಈಗಾಗಲೇ ೨೨,೫೦೦ ಹುದ್ದೆಗಳನ್ನು ಲೋಕ ಸೇವಾ ಆಯೋಗ ಮತ್ತು ಇಲಾಖಾ ನೇಮಕಾತಿ ಸಮಿತಿಗಳು ಆಯ್ಕೆಯನ್ನು ಮಾಡುವ ಪ್ರಗತಿಯಲ್ಲಿವೆ. ಇದು ಬಹಳ ಒಳ್ಳೆಯ ವಿಚಾರವೆಂದು ಹೇಳಬಹುದು.

ಇನ್ನು ಕಮಿಷನ್‌ಗಳ ಬಗ್ಗೆ ಹೇಳಬೇಕಾದರೆ: ವಿಜಿಲೆನ್ಸ್ ಕಮಿಷನ್ ರಿಪೋರ್ಟ್, ಕಾಡೂರು ಕಮಿಷನ್ ರಿಪೋರ್ಟ್, ದೇಸಾಯಿ ಕಮಿಷನ್ ರಿಪೋರ್ಟ್, ಬ್ಯಾಡಗಿ ಕಮಿಷನ್ ರಿಪೋರ್ಟ್ ಮತ್ತು ಕೆಂಪೇಗೌಡರ ಕಮಿಷನ್ ರಿಪೋರ್ಟ್ ಹೇಳಿರುವ ಆರೋಪಿ ಅಧಿಕಾರಿಗಳ ಮೇಲೆ ಸರ್ಕಾರದವರು ಸೂಕ್ತ ಕ್ರಮಗಳನ್ನು ತೆಗೆದುಕೊಂಡರೆ ಬಹಳ ಪ್ರಯೋಜನವಾಗುತ್ತದೆ. ಇಲ್ಲದಿದ್ದರೆ ಈ ವರದಿಗಳನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟರೆ ಅವುಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಅಧ್ಯಕ್ಷರೇ, ಇನ್ನು ರಾಜಕೀಯ ವಿಶ್ರಾಂತಿ ವೇತನದ ಬಗ್ಗೆ ಹೇಳಬೇಕಾದರೆ, ಸ್ವಾತಂತ್ರ್ಯ ಹೋರಾಟಗಾರರಿಗೆ ಸಾಕಷ್ಟು ಸೌಲಭ್ಯಗಳನ್ನು ಕೊಡಬೇಕೆಂದು ಹೇಳುತ್ತೇನೆ. ಕೆಲವು ಕಡೆ ಈ ರಾಜಕೀಯ ಹೋರಾಟಗಾರರನ್ನು ಅಂದರೆ ತಾಲ್ಲೂಕು ಕಛೇರಿಗಳಲ್ಲಿ, ಮತ್ತು ಅಸಿಸ್ಟೆಂಟ್ ಕಮಿಷನರ್ ಕಛೇರಿಗಳಲ್ಲಿ ಇವರುಗಳಿಗೆ ಗೌರವವೇ ಇಲ್ಲ. ಸ್ವಾತಂತ್ರ್ಯ ಹೋರಾಟಗಾರರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಎಂಬುದು ಅವರಿಗೆ ನೆನಪೇ ಇದ್ದಂತಿಲ್ಲ. ಒಂದು ಸಾರಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರನನ್ನು ಮರ್ಯಾದೆ ಕೊಡದೆ ಕಛೇರಿಯಿಂದ ಹೊರಗೆ ನೂಕಿಸಿದ ಸಂದರ್ಭವೂ ಇದೆ. ಜನರು ಆ ತಹಸೀಲ್ದಾರನಿಗೆ ಹಿಡಿದುಕೊಂಡು ಒದೆಯುತ್ತೇವೆಂದು ಬಂದಿದ್ದಾಗ ಆ ತಹಸೀಲ್ದಾರನಿಗೆ ಬುದ್ಧಿಯಿಲ್ಲ ಏನೋ ಅಧಿಕಾರವಿದೆಯೆಂದು ಆ ರೀತಿ ಮಾಡುತ್ತಾನೆ ಹೋಗಲೀ ಸುಮ್ಮನಿರಿ ಎಂದು ಅವರಿಗೆ ಸಮಾಧಾನ ಮಾಡಿದ್ದೇನೆ. ಈಗ ತಾಲ್ಲೂಕು ಕಛೇರಿಗಳಲ್ಲಿ ಮತ್ತು ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗಳಲ್ಲಿ ಸಾರ್ವಜನಿಕರು ಹೋದರೆ ಅವರು ಕುಳಿತುಕೊಳ್ಳಲು ಕುರ್ಚಿಗಳೇ ಇರುವುದಿಲ್ಲ. ಈ ಸ್ವಾತಂತ್ರ್ಯ ಹೋರಾಟಗಾರರ ನೆನಪಿಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ನೆನಪಿನ ಸೌಧಗಳನ್ನು ನಿರ್ಮಿಸಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಯಾವ ಯಾವ ವ್ಯಕ್ತಿ ತಮ್ಮ ಜೀವನವನ್ನು ಕಳೆದುಕೊಂಡಿದ್ದಾನೆ ಅಂಥವರ ಫೋಟೋಗಳನ್ನು ಹಾಕಿಸಿ ಅವರು ಮಾಡಿದಂತಹ ಸೇವೆ, ಬಲಿದಾನ ಮತ್ತು ತ್ಯಾಗಗಳನ್ನು ಸಾರ್ವಜನಿಕರಿಗೆ ತಿಳಿಯುವಂತೆ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಬೇಕಾದರೆ, ಪ್ರತಿಯೊಂದು ತಾಲ್ಲೂಕಿನಲ್ಲೂ ಜಿಲ್ಲೆಯಲ್ಲೂ ಮತ್ತು ರಾಜ್ಯ ಮಟ್ಟದಲ್ಲೂ ೨೦ ಅಂಶಗಳ ಕಾರ್ಯಕ್ರಮಗಳಲ್ಲಿ ಸಾಧಿಸಿದಂತಹ ಪ್ರಗತಿ ಮತ್ತು ಸಾಧಿಸಬೇಕಾದಂತಹ ಪ್ರಗತಿಯ ಬಗ್ಗೆ ವಿವರವಾದ ವರದಿಯನ್ನು ಆಗಾಗ್ಗೆ ಕೊಡುತ್ತಿದ್ದಾರೆ. ಇದು ಒಂದು ಬಹಳ ಸಂತೋಷದ ವಿಷಯ. ಆದರೆ ೨೦ ಅಂಶಗಳ ಕಾರ್ಯಕ್ರಮದ ಪ್ರಗತಿಯು ಪ್ರತಿಯೊಂದು ತಾಲ್ಲೂಕಿನಲ್ಲೂ ಸರಿಯಾಗಿ ಆಗುತ್ತಿಲ್ಲವೆಂದು ಹೇಳಬೇಕಾಗಿದೆ. ಈ ಕಾರ್ಯಕ್ರಮಗಳು ಪ್ರಗತಿದಾಯಕವಾಗಿ ನಡೆಯುವಂತಾಗಲೂ ಸಮಿತಿಗಳಿಗೆ ಆದಷ್ಟು ಬೇಗ ಅಧಿಕಾರೇತರರನ್ನು ನಾಮಕರಣ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತಿದ್ದೇನೆ. ೧೯೮೨-೮೩ನೇ ಸಾಲಿನ ರಾಜ್ಯದ ಆಡಳಿತ ವರದಿಯಲ್ಲಿ ಪ್ರತಿಯೊಂದು ಸರ್ಕಾರದ ಇಲಾಖೆಯ ಬಗ್ಗೆ ವರದಿಯನ್ನು ಸಭೆಗೆ ಕೊಡುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಆ ವರದಿಯನ್ನು ಕೊಟ್ಟಿಲ್ಲ. ಆದಷ್ಟು ಬೇಗ ಆ ವರದಿಯನ್ನು ಸಭೆಗೆ ಕೊಡುವುದು ಒಳ್ಳೆಯದು. ಮತ್ತು ಪ್ರತಿಯೊಂದು ತಾಲ್ಲೂಕು ಕಚೇರಿ ಮತ್ತು ಅಸಿಸ್ಟೆಂಟ್ ಕಚೇರಿಗಳಲ್ಲಿ ಒಂದೊಂದು ಕಂಪ್ಲೇಂಟ್ ಬಾಕ್ಸ್‌ಗಳನ್ನು ಇಡಬೇಕೆಂದು ತಿಳಿಸಿದ್ದರೂ ಸಹ ಇದುವರೆಗೂ ಕಂಪ್ಲೇಂಟ್ ಬಾಕ್ಸ್‌ಗಳನ್ನು ಇಡಲಿಲ್ಲ. ಆದಷ್ಟು ಬೇಗ ಈ ಬಾಕ್ಸ್‌ಗಳನ್ನು ಇಡಲು ಏರ್ಪಾಡು ಮಾಡಬೇಕು ಎಂದು ಹೇಳಲು ಇಚ್ಛೆಪಡುತ್ತೇನೆ.

ಇನ್ನು ಆಸ್ಪತ್ರೆಗಳ ವಿಚಾರದಲ್ಲಿ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಆಸ್ಪತ್ರೆಗಳು ಇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಲು ಡಾಕ್ಟರುಗಳು ಹೋಗುವುದಿಲ್ಲ. ಅಂತಹವರ ಮೇಲೆ ಸರ್ಕಾರವು ಸೂಕ್ತ ಕ್ರಮವನ್ನು ತೆಗೆದುಕೊಂಡು ಅವರುಗಳು ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡಲು ಸರ್ಕಾರವು ಆದೇಶವನ್ನು ಕೊಡಬೇಕು. ಇನ್ನು ಔಷಧಿಗಳ ವಿಷಯದಲ್ಲಿ ಸರ್ಕಾರವು ಸೂಕ್ತ ಗಮನವನ್ನು ಹರಿಸಬೇಕು. ಈಗ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಿಗೆ ಸರ್ಕಾರವು ಕೊಡುವ ಔಷಧವು ಕೇವಲ ೩ ತಿಂಗಳಿಗೆ ಮಾತ್ರ ಆಗುವಷ್ಟು

ಇರುತ್ತದೆ. ಇನ್ನು ೬ ತಿಂಗಳು ಔಷಧಿಯೇ ಇರುವುದಿಲ್ಲ. ಇಂತಹ ಅನಾನುಕೂಲಗಳ ಕಡೆ ಸರ್ಕಾರ ತೀವ್ರವಾದ ಗಮನವನ್ನು ಹರಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಬಯಸುತ್ತೇನೆ.

12-00 ಮಧ್ಯಾಹ್ನ

ಈ ದಿಸೆಯಲ್ಲಿ ಸಾಕಷ್ಟು ಔಷಧಿಗಳನ್ನು ಆಸ್ಪತ್ರೆಗಳಿಗೆ ಕಳುಹಿಸುವಂತಹ ವ್ಯವಸ್ಥೆಯನ್ನು ನಮ್ಮ ಘನ ಸರಕಾರ ಮಾಡಲಿ ಎಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆಮೇಲೆ ಈ ಆಸ್ಪತ್ರೆಗಳ ವಿಚಾರದಲ್ಲಿ ಇನ್ನೊಂದು ಹೇಳಬೇಕೆಂದರೆ, ಪ್ರತಿಯೊಂದು ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ಲಂಚ ಕೊಡದೆ ಇದ್ದರೆ, ಅಲ್ಲಿರತಕ್ಕ ಡಾಕ್ಟರುಗಳು ಯಾರನ್ನೂ ಸರಿಯಾಗಿ ನೋಡುವುದಿಲ್ಲ. ಬಡವರೇ ಇರಲಿ. ಒಬ್ಬ ಹೆಣ್ಣು ಮಗಳು ಹೆರಿಗೆಗೆ ಹೋದರೂ ಸಹ ೫೦ ರೂಪಾಯಿಗಳನ್ನು ಕೊಡಿ ಎಂದು ಹೇಳುತ್ತಿದ್ದಾರೆ ಇಂತಹವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.—ನೀವು ಹೇಳಿದ ೫೦ ರೂಪಾಯಿಗಳು ಕಡಿಮೆ ಆಯಿತು. ೧೦೦ ರೂಪಾಯಿಗಳು ಎಂದು ಹೇಳಬೇಕಾಗಿತ್ತು.

ಶ್ರೀ ಬಿ. ಜಿ. ಬಣಕಾರ್.—೫೦ ಇರಬಹುದು, ೧೦೦ ಇರಬಹುದು, ೨೦೦ ರೂಪಾಯಿಗಳು ಇರಬಹುದು. ಅವರವರ ಶಕ್ತಿಗೆ ತಕ್ಕಹಾಗೆ ಇದೆ ಅದನ್ನು ಬ್ಯಾನ್ ಮಾಡಲು ಏನು ಪ್ರಯತ್ನ ಮಾಡಬೇಕೆಂದು ನಮ್ಮ ಮುಖ್ಯಮಂತ್ರಿಗಳು, ಆರೋಗ್ಯ ಮಂತ್ರಿಗಳು ಇಬ್ಬರೂ ಕೂಡಿ ವಿಚಾರ ಮಾಡಬೇಕು. ಇವತ್ತು ಯಾರಾದರೂ ಬಡವರು ಸರಕಾರಿ ಆಸ್ಪತ್ರೆಗೆ ಹೋದರೆ, ಅವನು ಸಾಯಬೇಕೆಂದರೆ ಹೋಗಬೇಕು, ಇಲ್ಲದಿದ್ದರೆ ಖಾಸಗಿ ಆಸ್ಪತ್ರೆಗೆ ಹೋಗಬೇಕು ಎನ್ನತಕ್ಕ ಅಭಿಪ್ರಾಯ ಇದೆ. ಇನ್ನು ಪ್ರತಿ ಆಸ್ಪತ್ರೆಗೂ ಬೋರ್ಡ್ ಆಫ್ ವಿಸಿಟರ್ಸ್ ಮಾಡಬೇಕೆಂದು ಇದೆ. ನಮ್ಮ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಬೋರ್ಡ್ ಆಫ್ ವಿಸಿಟರ್ಸ್ ಮಾಡಿದ್ದಾರೆ, ಅದರಲ್ಲಿ ಸತ್ತವರನ್ನು, ಎರಡು ವರ್ಷದ ಹಿಂದೆ ಟ್ರಾನ್ಸ್‌ಫರ್ ಆದವರನ್ನು ಸೇರಿಸಿ ಒಂದು ಕಮಿಟಿ ಮಾಡಿದ್ದಾರೆ. ಅವಸರದಲ್ಲಿ ಇದನ್ನು ಮಾಡಿದ್ದಾರೆ. ನಾನು ಆರೋಗ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ಆಸ್ಪತ್ರೆಗೂ ಬೋರ್ಡ್ ಆಫ್ ವಿಸಿಟರ್ಸ್ ಮಾಡಿ ಸರಿಯಾದ ಸದಸ್ಯರನ್ನು ನಾಮಕರಣ ಮಾಡಿ, ಕಮಿಟಿಗಳನ್ನು ರಚನೆ ಮಾಡಿ, ಆಸ್ಪತ್ರೆಗಳ ಬಗ್ಗೆ, ಡಾಕ್ಟರುಗಳ ಬಗ್ಗೆ ಯಾವುದೇ ರೀತಿಯಾದ ಕಂಪ್ಲೇಂಟುಗಳೂ ಬರದ ರೀತಿಯಲ್ಲಿ ನೋಡಿಕೊಳ್ಳಬೇಕು. ಇನ್ನು ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಅನೇಕ ಕಡೆ ಕೆಟ್ಟು ನಿಂತ ಮೋಟಾರ್ ವಾಹನಗಳು ಇವೆ ನಮ್ಮ ಧಾರವಾಡ ಜಿಲ್ಲಾ ಹೆಲ್ತ್ ಆಫೀಸ್ ಮುಂದೆ, ಶಿವಮೊಗ್ಗ ಹೆಲ್ತ್ ಆಫೀಸ್ ಮುಂದೆ ಇವುಗಳನ್ನು ನಿಲ್ಲಿಸಿದ್ದಾರೆ. ಅದು ಒಳ್ಳೆ ಮೋಟಾರು ಬಜಾರ್ ಇದ್ದಹಾಗೆ ಇದೆ, ೮-೧೦ ವಾಹನಗಳನ್ನು ರಿಪೇರಿ ಮಾಡದೆ ಅಲ್ಲಿ ನಿಲ್ಲಿಸಿದ್ದಾರೆ. ಧಾರವಾಡ ಜಿಲ್ಲಾ ಹೆಲ್ತ್ ಆಫೀಸ್‌ಗೆ ಪತ್ರಕರ್ತರು ಹೋಗಿ ನೋಡಿಕೊಂಡು ಬಂದು ಪತ್ರಿಕೆಯಲ್ಲಿ ಫೋಟೋ ಸಹ ಪ್ರಕಟಿಸಿದ್ದರು. ಕೆಲವು ಕಡೆ ಟೈರ್, ಇಲ್ಲ, ಟೈರ್ಸ್ ಇದ್ದರೆ ಟ್ಯೂಬ್ಸ್ ಇಲ್ಲ, ಟೈರ್ಸ್ ಟ್ಯೂಬ್ಸ್ ಎಲ್ಲಾ ಇದ್ದರೂ, ಪೆಟ್ರೋಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಈ ಅವ್ಯವಸ್ಥೆ ಆಗದ ರೀತಿಯಲ್ಲಿ ನೋಡಿಕೊಳ್ಳಿ ಎಂದು ಹೇಳುತ್ತೇನೆ. ಸಲಹೆಗಳನ್ನು ಕೊಡುವಾಗ, ಈ ಪಕ್ಷದವರು ಕೊಡಲಿ, ಆ ಪಕ್ಷದವರು ಕೊಡಲಿ, ಯೋಗ್ಯವಾದ ಸಲಹೆ ಸೂಚನೆಗಳನ್ನು ಯಾರು ಕೊಟ್ಟರೂ ಕೂಡ ಅದನ್ನು ಕೇಳಿಕೊಂಡು, ಸೂಕ್ತವಾದ ಪರಿಹಾರ ಒದಗಿಸಿಕೊಡುವುದು ನಿಮ್ಮ ಕರ್ತವ್ಯ ಎಂದು ಹೇಳಿ, ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅದನ್ನು ಬಿಟ್ಟು ನೀವು ಮಾತನಾಡುವಾಗ ಮಧ್ಯೆ ನಾವು ಇಂಟರ್‌ಫಿಯರ್ ಆಗುವುದು, ನಾವು ಮಾತನಾಡುವಾಗ ಮಧ್ಯೆ ನೀವು ಇಂಟರ್‌ಫಿಯರ್ ಮಾಡುವುದು, ಒಬ್ಬರಿಗೊಬ್ಬರಿಗೆ ಒಂದು ನಾಟಕ ನಡೆದಂತೆ ಮಾಡುವುದು ಸರಿಯಲ್ಲ. ಯೋಗ್ಯ ಸಲಹೆ ಕೊಡುವುದಕ್ಕೆ ಅವರಿಗೆ ಅಧಿಕಾರ ಇದೆ. ಇದು ಪ್ರಜಾಪ್ರಭುತ್ವ. ಇಲ್ಲಿ ಪ್ರಜೆಗಳೇ ಪ್ರಭುಗಳು. ಪ್ರಜೆಗಳ ಕಷ್ಟನಷ್ಟಗಳನ್ನು ತಿಳಿದುಕೊಂಡು, ಪರಿಹಾರ ಒದಗಿಸಿ. ಅಮೂಲಾಗ್ರವಾದ ಅಭಿವೃದ್ಧಿಗೆ ಹೋರಾಟ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಉಪಾಧ್ಯಕ್ಷರೇ, ಈ ದಿನ ಮಾನ್ಯ ಮುಖ್ಯ ಮಂತ್ರಿಗಳು, ಆರೋಗ್ಯ ಮಂತ್ರಿಗಳು, ಕೈಗಾರಿಕಾ ಮಂತ್ರಿಗಳು. ಈ ಮೂರು ಜನ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು, ಬಹುಶಃ ಮೂರೇ ಜನ ಎಂದು ಕಾಣುತ್ತದೆ.

ಉಪಾಧ್ಯಕ್ಷರು.— ಮಾನ್ಯ ರಾಜವರ್ಧನ್ ಅವರು ನಾನು ಇದ್ದೇನೆ ಎಂದು ಹೇಳುತ್ತಿದ್ದಾರೆ.

ಶ್ರೀ ರಾಜವರ್ಧನ್.—ಅವರಿಗೆ ನಾನು ಲೆಕ್ಕಕ್ಕಿಲ್ಲವೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಲೆಕ್ಕಕ್ಕೆ ಇರುವ ಹಾಗೆ ನೀವೂ ಇರಬೇಕು. ಹಾಗೆ ಇದ್ದರೆ ನಮಗೆ ನೆನಪಿಗೆ ಬರುತ್ತದೆ. ನಾಲ್ಕು ಜನ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳೂ ಸೇರಿ, ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ನಾನು ಮಾತನಾಡುತ್ತಿದ್ದೇವೆ. ವಿರೋಧಿಸುವುದಕ್ಕೆ ಕಾರಣಗಳೂ ಕೂಡ ಇವೆ. ಆದರೆ ಅದಕ್ಕೆ ಪೂರ್ವಭಾವಿಯಾಗಿ ಒಂದು ಮಾತನ್ನು ನಾನು ತಮ್ಮ ಮೂಲಕ ಸದನದ ಗಮನಕ್ಕೆ ತರಬೇಕಾಗಿದೆ ಹಾಗೂ ಉತ್ತರ ಕೊಡತಕ್ಕ ಮಾನ್ಯ ಮಂತ್ರಿಗಳ ಗಮನಕ್ಕೂ ತರಬೇಕಾಗಿದೆ. ಮಾನ್ಯ ಸದಸ್ಯರು, ಆ ಕಡೆ ಕುಳಿತಿರುವವರು, ಈ ಕಡೆ ಕುಳಿತಿರುವವರು, ಯಾರೇ ಇರಬಹುದು, ಅವರು ತಮ್ಮ ಮುಂದಿರತಕ್ಕಂಥ ಬೇಡಿಕೆಗಳನ್ನು ನೋಡಿದರೆ, ಯಾರಿಗೂ ಕೂಡಾ, ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ, ತನ್ಮೂಲಕ ನ್ಯಾಯವನ್ನು ಪಡೆಯುವುದಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿ ನಾವು ಇದ್ದೇವೆ ಎಂಬುದು ಗೊತ್ತಾಗುತ್ತದೆ. ಇದು ಏತಕ್ಕಾಗಿ, ಯಾವ ಕಾರಣಕ್ಕಾಗಿ ಎಂಬ ಪ್ರಶ್ನೆ ಬೇರೆ. ನಾವು ನೋಡಿದ ಹಾಗೆ ಓಟ್ ಆನ್ ಅಕೌಂಟ್ ತೆಗೆದುಕೊಂಡು ಚರ್ಚೆ ಮಾಡತಕ್ಕ ಕಾಲ ಇದ್ದಾಗ, ಫುಲ್‌ಫ್ಲೆಡ್ಜ್‌ಡ್ ಡಿಸ್ಕಷನ್ ಆಗಿ, ಡಿಮ್ಯಾಂಡ್ ನಿಧಾನವಾಗಿ ಬರುತ್ತಿತ್ತು. ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಕಾಲ ನಮಗೆ ಸಿಗುತ್ತಿತ್ತು. ಆದರೆ ನೇರವಾಗಿ ಆಯವ್ಯಯ ಪತ್ರ ಮಂಡನೆ ಆದಮೇಲೆ, ಬೇಡಿಕೆಗಳ ಮೇಲಿನ ಚರ್ಚೆಯನ್ನು ಸಂಪೂರ್ಣವಾಗಿ ತೆಗೆದುಕೊಂಡಿರುವುದರಿಂದ, ಅಪ್ರೋಪ್ರಿಯೇಷನ್ ಬಿಲ್, ನಾಳೆ ಈ ಮನೆಯ ಮುಂದೆ ಹಾಗೂ ಆ ಮನೆಯ ಮುಂದೆ ಪಾಸಾಗತಕ್ಕ ಸಂದರ್ಭ ಇರುವುದರಿಂದ ಬಹಳ ಅರ್ಜೆಂಟಾಗಿ, ಜರೂರಾಗಿ, ಪಾಸ್ ಮಾಡತಕ್ಕದ್ದು ತರಾತುರಿಯ ಕೆಲಸವೇ ವಿನಾ ನ್ಯಾಯವಾಗಿ ಚರ್ಚೆಯಲ್ಲಿ ಭಾಗವಹಿಸಿ, ನ್ಯಾಯವನ್ನು ಪಡೆಯುವುದಕ್ಕೆ ವ್ಯಯವನ್ನು ಮಾಡುವುದಕ್ಕೆ ಯಾರಿಗೂ ಇದರಿಂದ ಸಾಧ್ಯವಿಲ್ಲ. ಮಾನ್ಯ ಮಂತ್ರಿಗಳು ಸಾಯಂಕಾಲ ಉತ್ತರ ಹೇಳುವುದಕ್ಕೆ ಪ್ರಾರಂಭ ಮಾಡುವುದಕ್ಕೆ ಮೊದಲು ಯಾರು ಬೇಕಾದರೂ ಚರ್ಚೆಯಲ್ಲಿ ಮಾತನಾಡಬಹುದು. ಆದರೆ ಸಾಯಂಕಾಲ ಉತ್ತರವನ್ನು ಹೇಳಬೇಕಾದರೆ, ಮಾನ್ಯ ಮಂತ್ರಿಗಳು ಒಂದು ಮಾತನ್ನು ಆಡಬಾರದು ಎಂದು ನನ್ನ ಒಂದು ಸೂಚನೆ ಇದೆ. ಅದೇನೆಂದರೆ, ನೀವು ಯಾರು ಈ ವಿಚಾರ ಹೇಳಲಿಲ್ಲ. ನಮ್ಮ ಇಲಾಖೆ ಬಗ್ಗೆ ನೀವು ಮಾತನಾಡಿಲ್ಲ ನಮ್ಮ ಇಲಾಖೆ ಚೆನ್ನಾಗಿ ಕೆಲಸ ಮಾಡಿದೆ, ಎನ್ನತಕ್ಕಂಥ ಒಂದು ಧ್ವಜವನ್ನು, ತಾವೇ ತಮ್ಮ ರಥದ ಕಿರೀಟಕ್ಕೆ ಹಚ್ಚಿಕೊಳ್ಳುವುದು ಒಳ್ಳೆಯದಲ್ಲ ಎಂದು ಹೇಳುತ್ತೇನೆ. ಸದಸ್ಯರಿಗೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದಲ್ಲ. ಏನು ಕರೀಗೌಡರೇ ನೀವು ಮಾತನಾಡುವುದಕ್ಕೆ ತಯಾರಾಗಿಲ್ಲವೇ ? ಎಲ್ಲಾ ಚೆನ್ನಾಗಿ ಗೊತ್ತಿದೆ, ಆದರೆ ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಅನೇಕ ಜನ ಸದಸ್ಯರು ಮಾತನಾಡಬೇಕಾಗಿರುವುದರಿಂದ ಕಾಲವನ್ನು ನಾನು ಹೆಚ್ಚು ವ್ಯಯ ಮಾಡುವುದು ಬೇಡ ಎಂದು ಇಲ್ಲಿಗೆ ಬಿಟ್ಟಿದ್ದೇನೆ. ಮಾನ್ಯ ಸದಸ್ಯರ ಹಕ್ಕನ್ನು ಗಮನಿಸಿ, ನಾನು ೧೫–೨೦ ನಿಮಿಷದ ಮೇಲೆ ಭಾಷಣ ಮುಂದುವರಿಸಬಾರದು ಎಂಬುದು ತೀರ್ಮಾನ ಮಾಡಿದ್ದೇನೆ. ಬೇರೆಯವರ ಹಕ್ಕಿಗೆ ಅಡ್ಡಿ ಬರುವುದು ಬೇಡ ಎಂದ ಪೂರ್ವಭಾವಿಯಾಗಿ ಸೂಚನೆ ಕೊಡುತ್ತಾ ಮಾತನಾಡುತ್ತಿದ್ದೇನೆ. ಡಾ. ಆಚಾರ್ಯ ಅವರೂ ಮಾತನಾಡಬಹುದು. ನಾನು ಉತ್ತರಕ್ಕೂ ಕೂಡಾ ಇರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲ. ಅವರು ಮಾತನಾಡಬೇಕಾದರೆ ಹಾಕಿಕೊಳ್ಳತಕ್ಕ ಕಾಲು ಕೆದರುವ ಸ್ವಭಾವ ಇದೆ ಮಾನ್ಯ ಹೆಗಡೆಯವರು ಕಾಲು ಕೆದರಿ ಮೈಮೇಲೆ ಹಾಕಿಕೊಳ್ಳತಕ್ಕ ಸ್ವಭಾವ ಇದೆ. ನಾನು ಹೇಳಿದ್ದು ಗ್ರಾಮ್ಯ ಭಾಷೆ. ನಾನು ಉತ್ತರಕ್ಕೆ ಇರುವುದಿಲ್ಲ ಎಂದರೆ ಯಾರು ಇರುವುದಿಲ್ಲ ಎಂದು ಅಲ್ಲ, ಆದರೆ ಕಾಲು ಕೆದರಿ ಮೈಮೇಲೆ ಹಾಕಿಕೊಳ್ಳುವುದು ಬೇಡ ಎಷ್ಟು ಪಾಯಿಂಟ್ ಇದೆ, ಅಷ್ಟಕ್ಕೇ ಉತ್ತರ ಕೊಟ್ಟರೆ ಒಳ್ಳೆಯದು. ಇಲ್ಲದೇ ಹೋದರೆ ಮಾನ್ಯ ಸದಸ್ಯರು ತಮ್ಮ ಹಕ್ಕನ್ನು ಚಲಾವಣೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲ ಎಂದು ಕೇಳಿದೆ. ತಕ್ಷಣ ಅವರು ಸಂಪೂರ್ಣವಾಗಿ ಗುಣಮುಖರಾಗಲಿ, ಅವರ ಶಕ್ತಿ ಎಷ್ಟಿದೆ ಅಷ್ಟು ಉತ್ತರ ಹೇಳಲಿ, ಅದಕ್ಕಿಂತ ಹೆಚ್ಚಾಗಿ ತಮ್ಮ ಶಕ್ತಿ ತೋರಿಸಿಕೊಂಡರೆ ನಮ್ಮ ಅಭ್ಯಂತರ ಇಲ್ಲ, ಸ್ವಾಗತ. ಆದರೆ ಅದಕ್ಕೆ ಉತ್ತರ ತೆಗೆದುಕೊಳ್ಳುವುದಕ್ಕೆ ಅವರು ರಡಿ ಇರಬೇಕು.

ಮಾನ್ಯ ಸಭಾಧ್ಯಕ್ಷರೇ, ಕ್ಷಮಿಸಬೇಕು, ನಾನು ಆರೋಗ್ಯ ಇಲಾಖೆ ಮೇಲೆ ಮಾತನಾಡುವುದಿಲ್ಲ. ಆದರೆ ಒಂದೇ ಒಂದು ವಿಚಾರ, ಮಂಗನ ಕಾಯಿಲೆ ಬಗ್ಗೆ ಹೇಳಬೇಕಾಗಿದೆ ತಾವು ಈ ಬಗ್ಗೆ ಉತ್ತರ ಕೊಟ್ಟಿದ್ದೀರಿ. ಅದಕ್ಕಿಂತ ಹೆಚ್ಚಾಗಿ ಯಾವ ಮಂತ್ರಿಯೂ ಕೆಲಸ ಮಾಡುವುದು ಕಷ್ಟ ಇದೆ ಎಂದು ನನಗೆ ಗೊತ್ತಿದೆ. ಅದು ಅನಿವಾರ್ಯವಾದ ವೈರಲ್ ಡಿಸೀಸ್. ಪ್ರಾಮಾಣಿಕವಾಗಿ ಒಬ್ಬ ವ್ಯಕ್ತಿ ಏನು ಮಾಡಬೇಕೋ ಅದನ್ನು ನೀವು ಮಾಡಿದ್ದೀರಿ. ಡಾಕ್ಟರ್‌ಗೇ ನಿಲುಕದಿರತಕ್ಕ ವಿಚಾರಕ್ಕೆ ನೀವು ಏನು ಮಾಡುವುದಕ್ಕೆ ಆಗುತ್ತದೆ ? ಲಸಿಕೆ ತಯಾರು ಮಾಡಿ ಒದಗಿಸತಕ್ಕ ಕೆಲಸ ಮಾಡಬಹುದು, ಡಾಕ್ಟರುಗಳನ್ನು ಕೊಡಬಹುದು, ಅಷ್ಟು ಮಾಡಬಹುದೇ ವಿನಹ ಬೇರೆ ಏನು ಮಾಡುವುದಕ್ಕೆ ಆಗುವುದಿಲ್ಲ. ಅದನ್ನೇ ನೀವು ಸ್ವಲ್ಪ ಚೆನ್ನಾಗಿ ಮಾಡಿ ಎಂದು ನಾನು ಸಲಹೆ ಕೊಡುತ್ತೇನೆ. ದಿನನಿತ್ಯ ಜನ ಸಾಯುವುದನ್ನು ನೋಡಿದರೆ, ಎಲ್ಲರೂ ಕೂಡ ಕಳವಳ ಪಡುವ ವ್ಯಸನದ ಸಂಗತಿಯಾಗಿದೆ. ಮಾನ್ಯ ವಸಂತಬಂಗೇರಾ ಅವರ ಕ್ಷೇತ್ರದಲ್ಲಿ ೧೦೩ ಜನ ಸತ್ತಿದ್ದಾರೆ. ಆ ಸಂಖ್ಯೆ ಇನ್ನೂ ದೊಡ್ಡದಾಗುತ್ತಾ ಹೋಗುತ್ತಿದೆ. ಈ ಸದನ ನಡೆಯುತ್ತಿದೆ ನಾವು ಚರ್ಚೆ ಮಾಡುತ್ತಿದ್ದೇವೆ ಅಲ್ಲಿ ಜನ ಸಾಯುತ್ತಿದ್ದಾರೆ. ಇದು ಬಹಳ ದೊಡ್ಡ ವಿಚಾರ, ಯಾರೂ ಮಾತನಾಡದೇ ಇದ್ದರೂ, ಇದರ ಬಗ್ಗೆ ವಿವರವಾಗಿ, ಗಮನ ಕೊಟ್ಟು, ಉತ್ತರ ಕೊಡುವುದು ಒಳ್ಳೆಯದು ಎಂದು ನನ್ನ ಸೂಚನೆ.

ಇನ್ನು ಇಂಡಸ್ಟ್ರೀಸ್ ಬಗ್ಗೆ ಬಹಳ ವಿಚಾರಗಳು ಇವೆ. ಆ ವಿಚಾರದಲ್ಲಿಯೂ ಕೂಡ ಭಾಷಣ ಮಾಡುವಹಾಗೆ ಇಲ್ಲ, ಕಾಲ ಇಲ್ಲ ತಾಲ್ಲೂಕಿಗೆ ಎಷ್ಟೆಷ್ಟೋ ಘಟಕಗಳನ್ನು ಮಾಡುತ್ತೇವೆಂದು ತಾವು ಹೇಳಿದ್ದಿರಿ. ತಾಲ್ಲೂಕಿಗೆ ಒಂದು ಸಾವಿರವೋ, ಎರಡು ಸಾವಿರವೋ. ಅದನ್ನು ಮರೆತು ಬಿಟ್ಟಿದ್ದೇನೆ. ನೀವು ಟೋಟಲಿ ಮಾಡಿದ್ದು ೭೫೦ ಮಾತ್ರ. ಬಜೆಟ್‌ನಲ್ಲಿ ಅದನ್ನು ಪ್ರಸ್ತಾಪ ಮಾಡಿದ್ದೀರಿ. ನೀವು ಪಾರಾಗಿದ್ದೀರಿ ಎಂದು ಗೊತ್ತಾಗಿದೆ. ಆದರೆ ಅದೊಂದೇ ಪಾಯಿಂಟ್ ಅಲ್ಲ. ಇನ್ನೂ ಬಹಳ ವಿಚಾರಗಳು ಇದ್ದರೂ ಅದಕ್ಕೆ ನಾನು ಹೋಗುವುದಿಲ್ಲ ನಿಮ್ಮ ಭಾಷಣವನ್ನು ನೀವು ನಿಲ್ಲಿಸುವುದಿಲ್ಲ ನಿಮ್ಮ ಸಾಧನೆಗಳ ಬಗ್ಗೆ ಹೇಳೇಹೇಳುತ್ತೀರಿ. ಆದರೆ ಲೋಪ ದೋಷಗಳನ್ನು, ಆಗಿರತಕ್ಕ ಅನ್ಯಾಯಗಳನ್ನು, ನಿಮ್ಮ ಮಾತಿನಲ್ಲಿ ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ತಾವು ಉತ್ತರ ಕೊಡತಕ್ಕ ಅವಶ್ಯಕತೆ ಬೀಳಲಾರದು. ಆದರೆ ಯಾರಾದರೂ ಸದಸ್ಯರು ಮಾತನಾಡಿದರೆ, ವಿವರ ಕೊಡುವುದು ಒಳ್ಳೆಯದು. ಇದೆಲ್ಲಾ ನಾನು ಮಾತನಾಡುತ್ತಿರುವುದು ನಿಮ್ಮ ಇಲಾಖೆಯ ಬಗ್ಗೆ ಒಂದು ಸೂಚನೆ ಅಷ್ಟೆ.

ನನ್ನ ಭಾಷಣವನ್ನು ಒಂದೆರಡು ವಿಷಯಗಳಿಗೆ ಮಾತ್ರ ಸೀಮಿತಗೊಳಿಸುತ್ತೇನೆ. ಮುಖ್ಯ ಮಂತ್ರಿಗಳ ಬೇಡಿಕೆಗಳ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಸಾಮಾನ್ಯವಾಗಿ ಮಾನ್ಯ ಬಣಕಾರ್ ರವರು ಮಾತನಾಡಿದ್ದಾರೆ. ಆ ಬಗ್ಗೆ ನನಗೆ ಸಂತೋಷವಾಗಿದೆ. ಏಕೆಂದರೆ ಅವರ ಭಾಷಣದಲ್ಲಿ ಸ್ವಲ್ಪ ಬದಲಾವಣೆಯಾಗಿದೆ ಈಗ ಕಾಲದ ಚಕ್ರ ಉರುಳುತ್ತಿರುತ್ತದೆ. ಚಕ್ರದ ಹಲ್ಲು ಉರುಳುತ್ತಿರುತ್ತದೆ. ನಾನೂ ಅವರೂ ಅಕ್ಕಪಕ್ಕದ ತಾಲ್ಲೂಕಿನವರು. ಕರ್ನಾಟಕ ರಾಜ್ಯದಲ್ಲಿರತಕ್ಕಂತಹ ಒಂದು ಆಡಳಿತ ಒಟ್ಟಾರೆ ಅನುಭವದ ಮೇಲೆ, ಅವರು ನಿಮ್ಮ ಆಡಳಿತದ ಬಗ್ಗೆ ನಿರ್ಲಕ್ಷ್ಯತನ ಕೆಲವೊಮ್ಮೆ ಹೊರಹೊಮ್ಮಿ ಬರತಕ್ಕ ಭಾವನೆಗಳು ಏನು ಇದ್ದಾವೆ ಅವುಗಳನ್ನು ನಿಜವಾಗಿಯೂ ಮೆಚ್ಚತಕ್ಕದು. ಬಹಳ ಸಂತೋಷವಾಯಿತು.

ಶ್ರೀ ಬಿ. ಜಿ. ಬಣಕಾರ್.—ಅದು ಈಗ ಏನೂ ಅಲ್ಲ. ಮೊದಲಿನಿಂದಲೂ ಬಂದುಬಿಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ಇದ್ದರೂ ಪ್ರಾರಂಭದಲ್ಲಿದುದಕ್ಕಿಂತ ಈಗ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ಈ ಒಂದು ಸರ್ಕಾರದ ಅಂಕಿ ಅಂಶಗಳ ಪ್ರಶ್ನೆ ಬೇಕಾಗಿಲ್ಲ. ಯಾವ ಒಂದು ಇಲಾಖೆಯಲ್ಲಿ ಎಷ್ಟು ಲಂಚ ನಡೆಯುತ್ತಿದೆ ಎಂಬುದರ ಅಂಕಿ ಅಂಶಗಳನ್ನು ತರುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ ಅದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಮ್ಮಂತಹ ಸಮಾಜದಲ್ಲಿ ಲಂಚ ಇದ್ದೇ ಇರುತ್ತದೆ. ನಮ್ಮ ಸರ್ಕಾರ ಇದ್ದಾಗ್ಯೂ ಆ ಮಾತನ್ನು ನಾವು ಒಪ್ಪಿದ್ದೇವೆ. ಆದರೆ ಜನತೆ ಏನನ್ನು ಬಯಸುತ್ತದೆಂದರೆ ಲಂಚವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಬೇಕೆಂಬ ಬಯಕೆಯನ್ನು ವ್ಯಕ್ತಪಡಿಸುತ್ತದೆ. ನಾವೂ ಕೂಡ ವ್ಯಕ್ತಮಾಡುತ್ತೇವೆ. ಈ ದಿಸೆಯಲ್ಲಿ ಅಂದರೆ ಲಂಚವನ್ನು ನಿರ್ಮೂಲನ ಮಾಡತಕ್ಕ ದಿಸೆಯಲ್ಲಿ, ಆ ದಾರಿಯಲ್ಲಿ ಹೋಗುವ ದಿಕ್ಕಿನಲ್ಲಿ ಯಾವಾಗಲೂ ಕೂಡ ಇದನ್ನು ನಿರ್ಮೂಲನ ಮಾಡತಕ್ಕ ಚಿಪ್ನಯ ಆಧಾರದ ಮೇಲೆ ಕಾರ್ಯಕ್ರಮ ರೂಪುಗೊಳ್ಳಬೇಕು ಪ್ರಜಾಪ್ರಭುತ್ವದಲ್ಲಿ. ಪ್ರಜಾಪ್ರಭುತ್ವದಲ್ಲಿ ನಾವೂ

ಯಾವಾಗಲೂ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವೂ ಕೂಡ ಗಮನದಲ್ಲಿಡಬೇಕು. ಒಂದು ಪಕ್ಷದ ಸರ್ಕಾರವನ್ನು ತೆಗೆದು ಮತ್ತೊಂದು ಪಕ್ಷದ ಸರ್ಕಾರವನ್ನು ತೆಗೆದುಕೊಂಡು ಬಂದು ಅಧಿಕಾರದ ಗದ್ದುಗೆಗೆ ಕೂಡಿಸುವುದೊಂದೇ ಗುರಿಯಲ್ಲ. ಈ ಮಾತನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ. ಇದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆ ಮಾತನ್ನು ತಾವೂ ಕೂಡ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಏತಕ್ಕೆಂದರೆ, ಬರೀ ಪಾರ್ಟಿ ಬದಲಾವಣೆಯಿಂದ ಸಮಸ್ಯೆಗಳಿಗೆ ಪರಿಹಾರ ಸಿಕ್ಕುವುದಿಲ್ಲ ಎನ್ನತಕ್ಕಂತಹದ್ದು ತಾವುಗಳೆಲ್ಲರೂ ಒಪ್ಪುತ್ತೀರೆಂಬುದು ನನ್ನ ಭಾವನೆ. ಸರ್ಕಾರ ಯಾವ ರೀತಿ ಬಂತು ಎಂಬುದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಚುನಾವಣೆಯಲ್ಲಿ ಜನತೆ ಒಂದು ಚಿಹ್ನೆಗೆ ಮತವನ್ನು ಹಾಕುವುದಿಲ್ಲ. ಮತ್ತೊಂದು ಚಿಹ್ನೆಗೆ ಓಟನ್ನು ಕೊಡುತ್ತಾರೆ ಎನ್ನತಕ್ಕಂತಹ ಮಾತು ಇದೆ. ಅದರಲ್ಲಿರತಕ್ಕ ಕಾರ್ಯಕ್ರಮಗಳು ಸಮಾಜದಲ್ಲಿರತಕ್ಕ ದುರ್ಬಲರು, ಹರಿಜನ–ಗಿರಿಜನರು, ಹಾಗೂ ಹಿಂದುಳಿದ ವರ್ಗದವರು ಹಾಗೂ ಎಲ್ಲಾ ಜಾತಿಯಲ್ಲಿರತಕ್ಕ ಕಡುಬಡವರು ಯಾರು ಇದ್ದಾರೆ ಅವರ ಉನ್ನತಿಯ ಬಗ್ಗೆ ಕಾರ್ಯಕ್ರಮವನ್ನು ಹಾಕುವುದು. ಅವರ ಒಂದು ಕಾರ್ಯಕ್ರಮವನ್ನು ನೋಡಿ ಜನ ಓಟನ್ನು ಕೊಡುವುದರ ಮೂಲಕ ಸರ್ಕಾರವನ್ನು ಅಧಿಕಾರಕ್ಕೆ ತರುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಲಂಚವನ್ನು ಕಡಿಮೆ ಮಾಡುವುದಕ್ಕೆ ಯಾವುದಾದರೊಂದು ಗೊತ್ತುಗುರಿ ಇರತಕ್ಕಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿದೆಯೋ? ಆ ಬಗ್ಗೆ ಕೂಡ ಸರ್ಕಾರ ವಿಚಾರ ಮಾಡುತ್ತಿಲ್ಲ. ಅಂದರೆ ಈ ಸರ್ಕಾರ ವಿಫಲವಾಗಿದೆ. ಇದು ಅಧಿಕಾರದಲ್ಲಿರುವುದನ್ನು ಬಿಟ್ಟು ಕೆಳಗೆ ಇಳಿಯಬೇಕು. ಈ ಪಕ್ಷ ಅಧಿಕಾರಕ್ಕೆ ಹೇಗೆ ಬಂತು ಎಂಬುದು ಎಲ್ಲರಿಗೂ ಗೊತ್ತು. ೧೯೮೩ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಆದಂತಹ ಚುನಾವಣೆಯಲ್ಲಿ ಕರ್ನಾಟಕ ಕ್ರಾಂತಿರಂಗ ಹಾಗೂ ಜನತಾ ಪಕ್ಷ ಸೇರಿ ಚುನಾವಣೆಯಲ್ಲಿ ಜನತೆಯ ಮುಂದೆ ಹೋಗಿರತಕ್ಕಂತಹ ವಿಚಾರ ಹಳೇ ವಿಚಾರ. ನಮಗೆ ಬೇಕಿಲ್ಲ ಅದು. ಹಳೆ ವಿಚಾರವನ್ನು ಮತ್ತೆ ಕೆದಕುವುದರಲ್ಲಿ ಅರ್ಥ ಇಲ್ಲ. ಆದರೆ ಜನತಾ ಪಕ್ಷದ ಪಾಟ್ನಾದ ಅಧಿವೇಶನದಲ್ಲಿ ಸ್ಪಷ್ಟವಾಗಿ ಸರ್ಕಾರದ ಭುಜವನ್ನು ಚಪ್ಪರಿಸಿದ್ದಾರೆ. ಅವರ ಭಾವನೆ ಏನಿದೆ ಎಂದರೆ ಬಹಳ ಒಳ್ಳೆಯ ಸರ್ಕಾರ. ಒಳ್ಳೆಯ ಆಡಳಿತವನ್ನು ಕೊಡುತ್ತಿದೆ ಅಂತ. ಆದರೆ, ಅಂತಹ ದಿಸೆಯಲ್ಲಿ ಸರ್ಕಾರ ಪ್ರಯತ್ನಪಟ್ಟಿದ್ದರೆ, ೧೦ ಸಲ ಅಲ್ಲ, ೧೦೦ ಸಲ ಬೇಕಾದರೂ ಭುಜವನ್ನು ಚಪ್ಪರಿಸಲಿ. ನಾನು ಬೇಡ ಅಂತ ಹೇಳುವುದಿಲ್ಲ. ನಾವೂ ಆ ಬಗ್ಗೆ ವಿಚಾರಮಾಡೋಣ. ಆದರೆ ಆಡಳಿತ ಪಕ್ಷದಲ್ಲಿರುವ ನೀವೂ ಆ ಬಗ್ಗೆ ವಿಚಾರಮಾಡಿ. ಖಾಸಗಿಯಾಗಿ ಕುಳಿತುಕೊಂಡು ವಿಚಾರಮಾಡಿ. ಈ ಸರ್ಕಾರ ಏನು ೧೯೮೩ನೇ ಜನವರಿ ತಿಂಗಳಲ್ಲಿ ಅಧಿಕಾರವನ್ನು ವಹಿಸಿಕೊಂಡು ತಹಲ್‌ವರೆಗೆ ಅಂದರೆ ಇಲ್ಲಿಯವರೆಗೆ, ಮನೆಗಳನ್ನು ಕಟ್ಟಿಕೊಡುವುದಕ್ಕೇ ಆಗಲಿ, ಮತ್ತೊಂದು ಬಾಬಿಗೇ ಆಗಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಮೆಚ್ಚುಗೆ ವ್ಯಕ್ತಮಾಡಬಹುದಾಗಿತ್ತು. ಆ ಬಗ್ಗೆ ಇಟ್ಟಿರತಕ್ಕಂತಹ ಒಂದು ಹೆಜ್ಜೆಯೇ ಏನು ಸಂಪೂರ್ಣವಾಗಿ ಇಟ್ಟಿರತಕ್ಕ ಹೆಜ್ಜೆ ಅಂದರೆ ದಾಪುಗಾಲು ಗುರಿಯ ಹೆಜ್ಜೆಯೇನೂ ಅಲ್ಲ. ನಿಮ್ಮ ವಿಚಾರಧಾರೆಗಳು, ಕೆಲವು ನೀತಿಯ ಚೌಕಟ್ಟಿನಲ್ಲಿ ಸ್ಪಷ್ಟವಾದ ಹೆಜ್ಜೆಯನ್ನು ಇಡಬೇಕು. ಪ್ರಜಾಪ್ರಭುತ್ವದಲ್ಲಿ ಯಾರು ಪ್ರಭುಗಳು ಅಂದರೆ ಪ್ರಜೆಗಳೇ ಪ್ರಭುಗಳು. ಅದನ್ನು ಪದೇಪದೇ ಹೇಳಿಕೆ ಕೊಡತಕ್ಕಂತವರು ನೀವು ನಾವೂ ಕೊಟ್ಟಿದ್ದೇವೆ. ಆದರೆ ಇತ್ತೀಚೆಗೆ ಆ ಬಗ್ಗೆ ಹೆಚ್ಚಿನ ವ್ಯಾಖ್ಯಾನ ಬರುತ್ತಿದೆ. ಸಂತೋಷ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಬೇಕು. ಅಂತಹ ಒಂದು ಆಧಾರದ ಮೇಲೆ ಇರತಕ್ಕಂತಹದ್ದೇ ಪ್ರಜಾಪ್ರಭುತ್ವ. ಆದರೆ ಅಂತಹ ಒಂದು ಪ್ರಜಾಪ್ರಭುತ್ವದಲ್ಲಿ ಇವತ್ತು ಪ್ರಭುಗಳು ಎನ್ನತಕ್ಕಂತಹವರು ಚಪರಾಸಿಯಾಗುತ್ತಿದ್ದಾನೆ. ಇದಕ್ಕೆ ಕಾರಣವೇನೆಂದರೆ, ನಿಮ್ಮ ಮೇಲೆ ಗೂಬೆ ಕೂರಿಸಬೇಕೆಂದು ಈ ಮಾತನ್ನಾಡುತ್ತಿಲ್ಲ. ಅನೇಕ ವರ್ಷಗಳಿಂದ ಇರತಕ್ಕಂತಹ ಒಂದು ಪದ್ಧತಿ. ಇದು ಮೊನ್ನೆ ಮೊನ್ನೆಯದಲ್ಲ. ದಯಮಾಡಿ ತಪ್ಪು ತಿಳಿದುಕೊಂಡುಬಿಟ್ಟು ಅದರ ಬಗ್ಗೆ ಭಾಷಣ ಮಾಡಬೇಡಿ. ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ನಿಜಲಿಂಗಪ್ಪನವರು, ಈ ರೀತಿ ಯಾರ್‍ಯಾರು ಹಿಂದೆ ಅಧಿಕಾರದಲ್ಲಿದ್ದರೋ, ಅವರನ್ನೂ ಕೂಡ ಸೇರಿಸಿ ಇದು ಬಂದಿರತಕ್ಕಂತಹ ವಿಚಾರ. ಅಲ್ಲಿಂದ ಕೂಡ ಬೃಹದಾಕಾರವಾಗಿ ಇದು ಬೆಳೆದಿರತಕ್ಕ ವಿಚಾರ. ಆದ್ದರಿಂದ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಬೇಕು. ಅಧಿಕಾರಿಗಳು ಕುರ್ಚಿಗಳನ್ನು ಕೊಡತಕ್ಕಂತಹ ಸೌಜನ್ಯತೆ ಅಷ್ಟೇ ಅಲ್ಲ. ಕೂಡುವುದಕ್ಕೆ ಕುರ್ಚಿಯನ್ನೇ ಕೊಡುವುದಿಲ್ಲ. ಅದು ಬೇಡ ನಯವಾಗಿ ಒಳ್ಳೆಯ ಮಾತನಾಡಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಾಮಾಣಿಕ ಪ್ರಯತ್ನದ ಕೆಲಸವನ್ನಾದರೂ ಮಾಡಿದ್ದರೆ ಅದು ನಿಜವಾಗಿಯೂ ಸಂತೋಷಪಡತಕ್ಕ ವಿಚಾರ. ಆ ಒಂದು ಕಳಕಳಿ ನಮ್ಮ ಅಧಿಕಾರ ವರ್ಗದಲ್ಲಿ ಬರಬೇಕು. ಬರಬೇಕು ಅಂತ ಹೇಳುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ಅದ್ಯ

ಬರಬೇಕಾಗಿದ್ದರೆ, ಅದಕ್ಕಾಗಿ ಅವರು ಸರ್ಕಾರವನ್ನು ನೋಡಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಯಾವ ಪಕ್ಷವನ್ನು ಅಧಿಕಾರದ ಗದ್ದುಗೆಯಲ್ಲಿ ಕೂರಿಸಿದ್ದಾರೋ, ನಿಮ್ಮನ್ನು ಜನತೆ ನೋಡಬೇಕಾಗುತ್ತದೆ. ಇವತ್ತು ನೀವು ಇರಬಹುದು. ನಾಳೆ ನಾವು ಬರಬಹುದು ಆ ಪ್ರಶ್ನೆಯಲ್ಲ. ಸುಮಾರಾಗಿ ಸಿದ್ದಪ್ಪ ಎಂಬುವವನು ಗುಮಾಸ್ತ ಇರುತ್ತಾರೆ. ಯಾರೋ ಒಬ್ಬ ನಾರಾಯಣ ಎಂಬುವವನು ತಹಸೀಲ್ದಾರ್ ಇರುತ್ತಾರೆ. ಸಾಮಾನ್ಯ ಒಬ್ಬ ವ್ಯಕ್ತಿಗೆ ತಹಸೀಲ್ದಾರ್ ಆಗಲಿ, ಅಥವಾ ಪೋಲೀಸ್ ಠಾಣೆಯಲ್ಲಿರುವ ಸಬ್ ಇನ್ಸ್‌ಪೆಕ್ಟರ್ ಆಗಲಿ ಅವರನ್ನು ಯಾವ ರೀತಿ ಕಾಣುತ್ತಿದ್ದಾರೆಂಬುದು ಬಹಳ ಮುಖ್ಯವಾಗಿ ಇಲ್ಲಿರತಕ್ಕ ವಿಚಾರ. ಇದರ ಬಗ್ಗೆ ಸರ್ಕಾರ ಗಮನದಲ್ಲಿಡಬೇಕು. ಹಿಂದಿನ ಸರ್ಕಾರದ ಆಡಳಿತಕ್ಕಿಂತ ಒಳ್ಳೆಯ ಆಡಳಿತವನ್ನು ಕೊಡುತ್ತಿದ್ದೇವೆಂಬುದನ್ನು ಗೊತ್ತುಪಡಿಸಬೇಕಲ್ಲ. ನಿಜವಾಗಿಯೂ ಆ ಬಗ್ಗೆ ಪ್ರಗತಿಯನ್ನು ಹೊಂದಿರತಕ್ಕ ವಿಚಾರ ಯಾವಾಗಲೂ ಇದೆ. ಅದನ್ನು ನಿಮ್ಮ ಕಾರ್ಯಕ್ಷೇತ್ರದಲ್ಲಿ ಜಾರಿಗೊಳಿಸಿದ್ದೀರಿ ಎನ್ನತಕ್ಕಂತಹದ್ದರ ಅನುಸಾರವಾಗಿ, ಆ ಒಂದು ಅನುಭವದ ಆಧಾರದ ಮೇಲೆ ಜನಸಾಮಾನ್ಯರು ಬರಬೇಕು. ಜನಸಾಮಾನ್ಯರು ಪ್ರತಿ ನಿತ್ಯ, ತಾಲ್ಲೂಕು ಆಫೀಸಿಗೆ ಹೋಗುತ್ತಿರುತ್ತಾನೆ, ಪಿ.ಡಬ್ಲ್ಯೂ.ಡಿ. ಆಫೀಸಿಗೆ ಹೋಗುತ್ತಿರುತ್ತಾನೆ, ಫಾರೆಸ್ಟ್ ಆಫೀಸಿಗೆ ಹೋಗುತ್ತಿರುತ್ತಾನೆ. ಹಲವಾರು ಇಲಾಖೆಗಳಿಗೆ ಅವನು ಹೋಗಬೇಕಾಗಿರುತ್ತದೆ. ಆವಾಗ ಅಧಿಕಾರಿಗಳು ಅವನ ಜೊತೆಯಲ್ಲಿ ಒಳ್ಳೆಯ ರೀತಿಯಲ್ಲಿ ನಡೆದುಕೊಂಡರೆ ಒಳ್ಳೆಯದು ನಾವು ಬಯಸತಕ್ಕ ಸಮಾಜದಲ್ಲಿ ಅದು ಜಾರಿಗೆ ಬರಬೇಕು. ಚರ್ಚೆಯನ್ನು ಮುಂದುವರಿಸಬೇಕೆಂಬ ಆಸೆ ಇದ್ದರೂ ಕಾಲಾವಕಾಶ ಇಲ್ಲದೇ ಇರುವುದರಿಂದ ನನ್ನ ಮಾತಿನ ವಿಚಾರಧಾರೆಯನ್ನು ಕಡಿಮೆ ಮಾಡುತ್ತಿದ್ದೇನೆ. ಹೀಗೆ ನೀವು ಅಧಿಕಾರಕ್ಕೆ ಬಂದ ಮೇಲೆ ಮಂತ್ರಿಮಂಡಲ ರಚನೆಯಾದ ಮೇಲೆ ಖಂಡಿತವಾಗಿ ೫ ಪೈಸೆಯಷ್ಟು ನಿಜವಾಗಿಯೂ ಆ ದಿಸೆಯಲ್ಲಿ ಕೆಲಸ ಮಾಡಿದ್ದರೆ ನಿಜವಾಗಿಯೂ ನಿಮಗೆ ಶಹಬಾಸ್‌ಗಿರಿಯನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೆ. ನಿಮ್ಮ ಆತ್ಮವನ್ನು ನೀವೇ ಮುಟ್ಟಿ ನೋಡಿಕೊಳ್ಳಿ. ಸಾಮಾನ್ಯ ಮನುಷ್ಯನಿಗೆ ೫ ಪೈಸೆಯ ಸಹಾಯ ಮಾಡಿದ್ದೀರೆ ಎಂಬುದನ್ನು ಪತ್ತೆಹಚ್ಚಬೇಕಾಗಿದೆ. ಆ ಒಂದು ಅಭಿಪ್ರಾಯದ ಆಧಾರದ ಮೇಲೆ ನಿಮ್ಮ ಆತ್ಮವನ್ನು ಮುಟ್ಟಿ ಮಾತನಾಡಬೇಕಾಗುತ್ತದೆ. ೫ ಪೈಸೆಯಷ್ಟು ಸಹಾಯದ ಕೆಲಸ ಆಗಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದೇನೆ. ಇದು ಸ್ಪಷ್ಟವಾದ ನನ್ನ ಅಭಿಪ್ರಾಯ. ವಿರೋಧಪಕ್ಷದಲ್ಲಿ ಕುಳಿತುಕೊಂಡು ಈ ಮಾತನ್ನಾಡುತ್ತಿಲ್ಲ. ಇವತ್ತು ನಾನು ಇಲ್ಲಿ ಕುಳಿತಿರಬಹುದು. ನೀವು ಅಲ್ಲಿ ಕುಳಿತಿರಬಹುದು. ಆ ಬಗ್ಗೆ ವಿಚಾರ ಮಾಡಿ ನೋಡೋಣ. ಆ ಬಗ್ಗೆ ತೆಗೆದುಕೊಂಡಂತಹ ಕಾರ್ಯಕ್ರಮವನ್ನು ಜಾರಿಗೆ ಕೊಡತಕ್ಕಂತಹ ಸ್ಥೈರ್ಯ, ಶಕ್ತಿ ಇದೆ ಎಂಬುದು ನಮ್ಮ ಮನಸ್ಸಿಗೆ ಮನವರಿಕೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಇದೆ ಅಂತ ಹೇಳುವುದಾದರೆ, ಇಷ್ಟರವರೆಗೆ ಆ ಬಗ್ಗೆ ಕಾರ್ಯಕ್ರಮವನ್ನು ಹಾಕಬೇಕಾಗಿತ್ತು. ಅದು ಇಲ್ಲವೇ ಇಲ್ಲ. ಯಾವ ಮಟ್ಟಕ್ಕೆ ಹೋಗಿದ್ದೀರೆಂಬುದು ಗೊತ್ತು. ಇದರ ಅರ್ಥವನ್ನು ತಾವು ಗ್ರಹಿಸಬೇಕು. ಅದರ ಬಗ್ಗೆ ಚರ್ಚೆ ನನಗೆ ಬೇಕಾಗಿಲ್ಲ. ಇವರು ಅಧಿಕಾರವನ್ನು ತೆಗೆದುಕೊಂಡ ಸ್ವಲ್ಪ ದಿವಸದಲ್ಲೇ ರಾಜಾಜಿನಗರದಲ್ಲಿ ಪೋಲೀಸ್ ಹೈಲ್ಯಾಂಡ್‌ನಲ್ಲಿ ಒಂದು ಗಲಾಟೆಯಾಯಿತು. ಅಲ್ಲಿಗೆ ಮುಖ್ಯಮಂತ್ರಿಗಳೇ ಹೋದರು. ನಾನೇ ಅದನ್ನು ತಿಳಿದುಕೊಂಡು ಒಳ್ಳೆಯ ತೀರ್ಮಾನವನ್ನು ಮಾಡುತ್ತೇನೆ, ಪೋಲೀಸ್ ಕಮೀಷನರ್ ಯಾರೂ ಬೇಕಾಗಿಲ್ಲವೆಂದು ನೇರವಾಗಿ ಹೋದರು. ಹಿಂದೆ ರಾಜರು ನೇರವಾಗಿ ಹೋಗುತ್ತಿದ್ದರು. ಅವರು ವೇಷ ಮರೆಸಿಕೊಂಡು ಪ್ರಜೆಗಳು ಕ್ಷೇಮವಾಗಿದ್ದಾರಾ. ಏನು ಭಾವನೆ ಪ್ರಜೆಗಳಲ್ಲಿದೆ, ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಆದರೆ ಈ ಮುಖ್ಯಮಂತ್ರಿಗಳು ವೇಷವನ್ನೂ ಮರೆಸಿಕೊಳ್ಳದೆ ನೇರವಾಗಿ ಅಲ್ಲಿಗೆ ಹೋಗಿದ್ದಾರೆ. ಅದಕ್ಕೆ ನನ್ನ ಅಭ್ಯಂತರವಿಲ್ಲ.

ಅಲ್ಲಿಗೆ ಹೋದರು, ಟ್ರಾಫಿಕ್ ಐಲೆಂಡ್‌ನಲ್ಲಿ ಪೋಲೀಸಿನವರು ನಿಂತುಕೊಂಡು ಈ ಕಡೆ ವಾಹನ ಬನ್ನಿ, ಆ ಕಡೆ ವಾಹನ ಬನ್ನಿ ಎಂದು ಕೋರಿಸುತ್ತಿರುತ್ತಾನಲ್ಲ. ಆ ಜಾಗದಲ್ಲಿಯೇ ಹತ್ತಿನಿಂತು ಕೊಂಡು ಬಿಟ್ಟರು. ಆ ಒಂದು ಫೋಟೋ ಕೂಡ ಬಂದಿದೆ. ಇದನ್ನು ನೋಡಿ ನನಗೂ ಬಹಳ ಕೂಡ ಸಂತೋಷವಾಯಿತು. ಒಬ್ಬ ಪೋಲೀಸ್ ಪೇದೆ ನಿಂತುಕೊಳ್ಳುವ ಜಾಗದಲ್ಲಿ ಮಾನ್ಯ ಮುಖ್ಯಮಂತ್ರಿಗಳವರು ನಿಂತುಕೊಂಡಿದ್ದಾರೆ, ಪ್ರಜಾ ಪ್ರಭುತ್ವ ಟ್ರಾಫಿಕ್ ಐಲೆಂಡ್‌ನಿಂದ ಪ್ರಾರಂಭವಾಯಿತು ಎನ್ನುವ ಭಾವನೆ ಬಂತು. ಟ್ರಾಫಿಕ್ ಐಲೆಂಡ್‌ನಿಂದ ಪ್ರಾರಂಭ ಮಾಡಿದ್ದಾರೆ, ಬಹಳ ಕ್ರಾಂತಿಕಾರಕವಾದ ಬದಲಾವಣೆ ತರುತ್ತಿದ್ದಾರೆ, ಅಧಿಕಾರವನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎನ್ನುವ ಭಾವನೆ ಬಂತು. ಅನಂತರ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಸಸ್‌ಪೆಂಡ್ ಮಾಡಿ ಬಿಟ್ಟರು. ಆಗಲೂ ಬಹಳ ಸಂತೋಷ

ಪಟ್ಟೆ. ಈ ತರಹ ನಿರ್ಣಯವನ್ನು ತೆಗೆದುಕೊಳ್ಳುವ ಧೈರ್ಯ ಇವರಿಗೆ ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಇದ್ದಾಗಲೂ ಇರಲಿಲ್ಲ. ಆದರೂ ಕೂಡ ಹೊಸದಾಗಿ ಬಂದಿದೆ ನೋಡೋಣ ಎಂದು ಸಂತೋಷ ಪಟ್ಟು ನೋಡಿದರೆ, ಅಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳು ಎಲ್ಲಾ ತಿರುಗಿ ಬಿದ್ದಾಗ ತಕ್ಷಣವೇ ಸಸ್‌ಪೆನ್‌ಷನ್ ಆರ್ಡರ್‌ನ್ನು ಹಿಂದಕ್ಕೆ ತೆಗೆದುಕೊಂಡು ಮನೆಗೆ ಕಳುಹಿದರು. ಈ ವಿಚಾರ ದಲ್ಲಿ ಇವರಿಗೆ ನಿಜವಾಗಿಯೂ ಶಕ್ತಿ ಸಾಮರ್ಥ್ಯ ಇದೆ ಎಂದು ನೋಡುವುದಾದರೆ ಇದರ ಬಗ್ಗೆ ಪೂರ್ತಿ ವಿವರವಾಗಿ ಹೇಳಲು ವೇಳೆ ಇಲ್ಲ, ಆದುದರಿಂದ ದಯವಿಟ್ಟು ಕ್ಷಮಿಸಬೇಕು. ಮಾನ್ಯ ಮುಖ್ಯಮಂತ್ರಿ ಗಳವರು ಟ್ರಾಫಿಕ್ ಐಲೆಂಡ್‌ಗೆ ಹೋಗಿ ಏನು ಕೆಲಸ ಮಾಡಿದ್ದಾರೆ ಅದಕ್ಕಾಗಿ ಜನತಾ ಪಕ್ಷದವರು ಮೊನ್ನೆ ದಿವಸ ಪಾಟ್ನಾದಲ್ಲಿ ಇವರ ಭುಜವನ್ನು ತಟ್ಟಿದ್ದಾರೆ. ಇದಕ್ಕಾಗಿ ನೀವು ಅವರ ಭುಜವನ್ನು ತಟ್ಟುವ ಹಾಗಿದ್ದರೆ ತಟ್ಟಿ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಲಂಚರುಷುವತ್ತು ಹಾಗೆಯೇ ಇದೆ, ಅದು ಇನ್ನೂ ಬೆಳೆಯುತ್ತಲೇ ಇದೆ, ಕಡಿಮೆಯಾಗಿಲ್ಲ, ಹೀಗಿದ್ದರೂ ಸಹ ನೀವು ಅವರ ಭುಜವನ್ನು ತಟ್ಟುತ್ತಾ ಹೋಗುವುದಾದರೆ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಒಂದು ಸಾರಿ ಭುಜವನ್ನು ಚಪ್ಪರಿಸಿದರೆ, ನಮ್ಮ ಕರ್ನಾಟಕದ ಎಲ್ಲಾ ಮಂತ್ರಿಗಳಿಗೂ ಸಹ ಭುಜವನ್ನು ಚಪ್ಪರಿಸಿದ ಹಾಗೆ ಆಗ ಬಹುದೇನೋ, ಆ ರೀತಿಯಾಗಿ ನೀವು ಸಂತೋಷ ಪಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಇನ್ನು ಅಧ್ಯಕ್ಷರೇ, ಹಿಂದಿನ ಸರ್ಕಾರದಲ್ಲಿ ಉಗುರು ಕಿತ್ತಿರಲಿಲ್ಲ. ನಿಮ್ಮ ಸರ್ಕಾರ ಬಂದ ಮೇಲೆ ಬೆಂಗಳೂರು ಪೋಲೀಸ್ ಸ್ಟೇಷನ್ನಿನಲ್ಲಿ ಒಂದು ಪ್ರಕರಣದಲ್ಲಿ ಖೈದಿಯ ಉಗುರನ್ನು ಕಿತ್ತಿದ್ದಾರೆ. ಆ ಪೋಲೀಸ್ ಅಧಿಕಾರಿಯು ಸಸ್‌ಪೆಂಡ್ ಆದರು, ಆದರೂ ಸಹ ಪೋಲೀಸಿನವರ ಈ ವರ್ತನೆ ಕಡಿಮೆಯಾಗಲಿಲ್ಲ. ಇದೆಲ್ಲಾ ಪತ್ರಿಕೆಗಳಲ್ಲಿ ಅಗ್ರವಾದ ಲೇಖನದಲ್ಲಿ ಬರುತ್ತಿವೆ. ಪೋಲೀಸ್ ಸ್ಟೇಷನ್‌ಗಳಲ್ಲಿ ಜನ ಸಾಯುವುದು ನಿಲ್ಲಲಿಲ್ಲ. ಇವತ್ತು ಪೋಲೀಸಿನವರು ಅವರು ಉಪಯೋಗಿಸತಕ್ಕ ಥರ್ಡ್ ಡಿಗ್ರಿ ಮೆಥಡ್‌ನ್ನು ಇನ್ನೂ ಬದಲಾಯಿಸಿ ಕೊಂಡಿಲ್ಲ. ಇದು ಒಂದು ಬೆಳವಣಿಗೆಯೋ ? ಏನು ಒಂದು ಬದಲಾವಣೆಯಾಗಿದೆ ಎಂದರೆ ಈ ಕಡೆ ಕೂತವರು ಆ ಕಡೆ ಕೂತಿದ್ದಾರೆ, ಆ ಕಡೆ ಕೂತವರು ಈ ಕಡೆಗೆ ಕೂತಿದ್ದಾರೆ, ಇದು ಒಂದು ಪ್ರಗತಿಯಾಗಿದೆ ಎನ್ನುವ ಭಾವನೆಯೋ ?

ಶ್ರೀ ಗೋವಿಂದ ಪಿ. ಒಡೆಯರಾಜ್.—ಶ್ರೀ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದರ ಪ್ರಗತಿಯಾಗುತ್ತಿತ್ತೇನೋ......

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ವೀರಪ್ಪಮೊಯ್ಲಿಯವರು ಯಾವ ಐಲೆಂಡ್‌ಗೆ ಹೋಗುತ್ತಿದ್ದರೋ ನಾನು ಅದೇ ಐಲೆಂಡ್‌ಗೆ ಹೋಗುತ್ತಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಇನ್ನು ಅಧ್ಯಕ್ಷರೇ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಕ್ರಮ ದಾಸ್ತಾನುಗಾರರ ಮೇಲೆ, ಕಳ್ಳ ಸಾಗಾಣಿಕೆದಾರರ ಮೇಲೆ ಏನು ಕ್ರಮವನ್ನು ಕೈಗೊಂಡಿದ್ದಾರೆ ? ಮಾನ್ಯ ಮುಖ್ಯಮಂತ್ರಿಗಳವರು ಕೆಲವು ದಿವಸಗಳ ಹಿಂದೆ ವಿಧಾನ ಪರಿಷತ್ತಿನಲ್ಲಿ ಪೋಲೀಸಿನವರ ರುಚಿ ತೋರಿಸಲೇ ಎಂದು ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳವರು ಹೇಳಿದ ಮೇಲೆ ಅದನ್ನು ಕಾಯಾ ವಾಚಾ ಮನಸಾ ಆ ಮಾತನ್ನು ನಡೆಸತಕ್ಕ ಮುಖ್ಯಮಂತ್ರಿಗಳಿದ್ದಾರೆ, ಆ ಮಾತಿನಂತೆ ನಡೆಸಿಯೇ ತೋರಿಸಿ ಬಿಟ್ಟರು. ಪೋಲೀಸ್ ಸ್ಟೇಷನ್ನಿನಲ್ಲಿ "ಮುನ್ನ" ನನ್ನೇ ತೆಗೆದುಬಿಟ್ಟರು. ನಿರಪರಾಧಿಯ ಜೀವವನ್ನೇ ತೆಗೆದು ಬಿಟ್ಟರು. ಪೋಲೀಸಿನವರ ರುಚಿ ತೋರಿಸಲಾ ಎಂದು ಹೇಳಿದಾಕ್ಷಣವೇ ಹೆಣ ಬಿದ್ದು ಹೋಯಿತು. ನಿಮ್ಮದು ಪೋಲೀಸ್ ರಾಜ್ಯವಲ್ಲ, ಗುಂಡು ಹೊಡೆಯುತಕ್ಕ ರಾಜ್ಯವಲ್ಲವೆಂದು ಹಿಂದೆ ನೀವು ಚುನಾವಣೆಯಲ್ಲಿ ಜನತೆಗೆ ಭರವಸೆ ಕೊಟ್ಟು ಬಂದಿದ್ದೀರಿ. ನಿಮ್ಮ ಕ್ಷೇತ್ರ ಕೋರಟಗೆರೆ ಕ್ಷೇತ್ರ ಕೂಡ ಸೇರಿದೆ ಹಾಗೆ ಅಲ್ಲಿಗೆ ನಾನು ಕೂಡ ಬಂದಾಗ ಭಾಷಣ ಮಾಡಿದ್ದೆ. ಆದರೆ ಇವತ್ತು ಮುಖ್ಯ ಮಂತ್ರಿಗಳವರು ರಬ್ಬರ್‌ಗುಂಡು ಹಾಕಿದ್ದೇವೆಂದು ಹೇಳಿದ್ದಾರೆ, ರಬ್ಬರ್ ಗುಂಡು ಎಷ್ಟು ಸ್ಟಾಕ್ ಇಟ್ಟಿದ್ದೀರಿ ಎನ್ನುವ ಆಕೌಂಟನ್ನು ತಾವು ಈ ಸದನದಲ್ಲಿ ಉತ್ತರ ಕೊಡುವಾಗ ಕೊಡಬೇಕಾಗುತ್ತದೆ. ರಬ್ಬರ್ ಗುಂಡು ಹೊಡೆದಿದ್ದೇವೆಂದು ತಾವು ಹೇಳುತ್ತಿದ್ದೀರಿ ಆದರೆ ಡಾಕ್ಟರುಗಳು ದೇಹದ ಕೈಯಿಂದ ಗುಂಡುಗಳನ್ನು ತೆಗೆಯುತ್ತಿದ್ದರೆ ಮೆಟಲ್ ಗುಂಡುಗಳು ಹೊರಗೆ ಬರುತ್ತಿವೆ. ಅಂದರೆ ನಿಮ್ಮ ರಬ್ಬರ್ ಗುಂಡುಗಳಲ್ಲಿ ಮೆಟಲ್ ರೂಪದಲ್ಲಿರುತ್ತವೇ ?

ಶ್ರೀ ಎನ್. ಜಿ. ನಾಯಕ್.—ಈಗಿನ ಕಾಲದ ರಬ್ಬರ್ ಅಷ್ಟು ಹಾರ್ಡ್ ಆಗಿರುತ್ತದೆ......

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳವರು ಈ ಸದನದಲ್ಲಿಯೇ ಮಟ್ಕಾ, ಓಸಿ ಯನ್ನೆಲ್ಲಾ ನಿಲ್ಲಿಸಿ ಬಿಡುತ್ತೇವೆಂದು ಹೇಳಿದ್ದರು. ಆಗ ನಾವು ಪರವಾಗಿಲ್ಲ ಮುಖ್ಯಮಂತ್ರಿಗಳು ನಿಜವಾಗಿಯೂ ನಿಲ್ಲಿಸಿ ಬಿಡುತ್ತಾರೆಂದು ತಿಳಿದುಕೊಂಡಿದ್ದೆ. ಆದರೆ ಸ್ವಾಮಿ ಇವತ್ತಿನ ದಿವಸ ಎಲ್ಲಿಯಾದರೂ ಓಸಿ, ಮಟ್ಕಾ ನಿಂತಿದೆಯೇ? ಎಲ್ಲಿಯೇ ನೋಡಿ ಯಾವ ಊರಿನಲ್ಲಿಯೇ ಹೋಗಿ ನೋಡಿ ಓಸಿ, ಮಟ್ಕಾ ಅವ್ಯಾಹತವಾಗಿ ನಡೆಯುತ್ತಿದೆ. ಅಂಥಾದ್ದರಲ್ಲಿ ಭುಜವನ್ನು ತಟ್ಟಿಕೊಳ್ಳತಕ್ಕ ತೀರ್ಮಾನವನ್ನು ಮಾಡಿಕೊಂಡಿದ್ದೀರಿ. ಆ ಮೇಲೆ ಸಮಾಜದಲ್ಲಿರತಕ್ಕ ಹರಿಜನ ಗಿರಿಜನರ ಮೇಲೆ ಮತ್ತು ದುರ್ಬಲವರ್ಗದವರ ಅವ್ಯಾಹತವಾಗಿರತಕ್ಕ ದಾಳಿ ನಡೆಯುತ್ತಿದೆ. ಇನ್ನೊಂದು ಅಧ್ಯಕ್ಷರೇ, ಇತ್ತೀಚೆಗೆ ಬ್ಲೂ ಫಿಲಂನ ಹಾವಳಿ ಬೇರೆ ನಡೆಯುತ್ತಿದೆ. ಶ್ರೀ ಬೊಯ್ಯಾಯಿರವರೇ ಇದನ್ನು ಯಾರಿಗೆ ಹೇಳಬೇಕೋ ಗೊತ್ತಿಲ್ಲ, ನಮ್ಮ ಮುಖ್ಯಮಂತ್ರಿಗಳವರು ಇದ್ದಿದ್ದರೆ ಚೆನ್ನಾಗಿತ್ತು, ಪಾಪ ಅವರಿಗೆ ಹುಷಾರಿಲ್ಲವಾದುದರಿಂದ ರೆಸ್ಟ್ ತೆಗೆದುಕೊಳ್ಳುವುದಕ್ಕೆ ಹೋಗಿರಬಹುದು. ಇವತ್ತಿನ ದಿವಸ ಓ.ಸಿ. ಮಟ್ಕವನ್ನು ನಿಲ್ಲಿಸುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಇದರ ಜೊತೆಗೆ ಇತ್ತೀಚೆಗೆ ಬ್ಲೂ ಫಿಲಂನ ಹಾವಳಿ ಕೇಳಿ ಬರುತ್ತಿದೆ. ಸ್ವಾಮಿ ಈ ರೀತಿಯಾಗಿ ಹಿಂದೆ ಯಾವ ಸರ್ಕಾರದಲ್ಲಿಯೂ ಇರಲಿಲ್ಲ, ಆದರೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಬಂದ ಮೇಲೆ ಏತಕ್ಕೆ ಈ ಬ್ಲೂ ಫಿಲಂನ ಹಾವಳಿ ಜಾಸ್ತಿಯಾಗಿದೆ ಎನ್ನುವುದು ಅರ್ಥವಾಗಲಿಲ್ಲ. ಮಾನ್ಯ ಶ್ರೀ ಜೀವರಾಜ್ ಆಳ್ವರವರೇ ತಾವು ಸಹ ಇದರ ಬಗ್ಗೆ ವಿಚಾರ ಮಾಡಿ ಇದನ್ನು ನಿಯಂತ್ರಿಸುವುದಕ್ಕೆ ಕಾನೂನು ತರಬೇಕು. ಇದು ಸಮಾಜವನ್ನೇ ಹಾಳು ಮಾಡತಕ್ಕ ಒಂದು ಕೆಟ್ಟ ಪ್ರವೃತ್ತಿ ಬೆಳೆಯುತ್ತಿದೆ. ಇನ್ನು ಬೇರೆ ಅರ್ಥದಲ್ಲಿ ಅಲ್ಲ. ನೀವು ಅಧಿಕಾರಕ್ಕೆ ಬಂದ ಮೇಲೆ ಇದು ಬೆಳೆಯುತ್ತಿದೆ, ಇದನ್ನಾದರೂ ತಪ್ಪಿಸುವುದಕ್ಕೆ ಆಗದಿದ್ದರೆ ತಪ್ಪಿಸಿದ್ದೇವೆ ಎಂದು ಹೇಳಲಿ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ಇವತ್ತು ಬೆಂಗಳೂರು ನಗರ ಮತ್ತೆ ಬೇರೆ ಕಡೆಗಳಲ್ಲಿ ಹೆಣ್ಣು ಮಕ್ಕಳ ಚೈನು, ಮಾಂಗಲ್ಯವನ್ನು ಕಿತ್ತುಕೊಂಡು ಹೋಗತಕ್ಕದ್ದು, ಕಿವಿಯಲ್ಲಿರತಕ್ಕ ಓಲೆಯನ್ನು ಕಿತ್ತುಕೊಂಡು ಹೋಗತಕ್ಕದ್ದು, ಹಣ ದರೋಡೆ ಮಾಡತಕ್ಕದ್ದು ಜಾಸ್ತಿಯಾಗುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀ ಬಂಗಾರಪ್ಪನವರು ಬ್ಲೂ ಫಿಲಂನ ಬಗ್ಗೆ ಹೇಳುತ್ತಿದ್ದಾರೆ, ಅದನ್ನು ಒಂದು ಸಾರಿ ನಗ್ನವಾಗಿ ನೋಡಿ ಬಿಟ್ಟರೆ ಅಸಹ್ಯವಾಗುತ್ತದೆ, ಅನಂತರ ಅದರ ಹತ್ತಿರಕ್ಕೂ ಹೋಗುವುದಿಲ್ಲ ಎನ್ನತಕ್ಕ ಒಂದು ಅಭಿಪ್ರಾಯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮೂಡಿದೆ. ಆಮಸ್ಟರ್‌ಡಂ, ಮತ್ತು ಕೇಪ್ ಇನ್ನು ಮುಂತಾದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನೋಡಿಕೊಂಡು ಬಂದಿರತಕ್ಕವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಅನುಭವವನ್ನು ಯಾರೂ ಸಹಿಸುವುದಕ್ಕಾಗುವುದಿಲ್ಲ.

೧೨-೩೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೆ, ಈ ಗೃಹ ಇಲಾಖೆ ತನ್ನ ಕಾರ್ಯಕ್ಷೇತ್ರದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ನನ್ನ ಹತ್ತಿರ ವಿಚಾರಗಳು ಬಹಳ ಸ್ಟಾಕ್ ಇದೆ. ದೂರುಗಳನ್ನು ಕೊಟ್ಟಿರುವುದು ಎಲ್ಲಾ ಇದೆ. ಸೌತ್‌ಕೆನರಾದಲ್ಲಿ ಒಬ್ಬ ಹರಿಜನ ಹೆಣ್ಣು ಮಗಳನ್ನು ರೇಪ್ ಮಾಡುವುದಕ್ಕೆ ಹೋಗಿ ಕೊಂದು ಬಿಸಾಕಿದರು. ಇಂಥಾದ್ದೆಲ್ಲಾ ಅವ್ಯಾಹತವಾಗಿ ನಡೆಯುತ್ತಿದೆ. ಹೀಗಿರುವಾಗ ತಾವು ಏತಕ್ಕಾಗಿ ಹೊಗಳುತ್ತಿದ್ದೀರಿ, ತಪ್ಪನ್ನು ನೇರವಾಗಿ ಒಪ್ಪಿಕೊಳ್ಳಿ. ವಾಸ್ತವಾಂಶದಿಂದ ಕೂಡಿದ ಹೇಳಿಕೆ ಕೊಡುವುದರಲ್ಲಿ ಅರ್ಥವಿದೆ. ಜನಸಾಮಾನ್ಯರ ಅಭಿಪ್ರಾಯವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಪೋಲೀಸ್ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸಮಾಡತಕ್ಕ ಒಳ್ಳೆಯ ಅಧಿಕಾರಿಗಳಿದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಕರ್ನಾಟಕ ರಾಜ್ಯ ಹೆಸರಿಗೆ ತಕ್ಕಹಾಗೆ ಇರಬೇಕು. ಪೋಲೀಸ್ ಇಲಾಖೆ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ ಎಂದು ಎಲ್ಲಾ ಕಡೆಯಿಂದ ಮಾತನಾಡಿದ್ದೇವೆ. ಇನ್ನೂ ಚೆನ್ನಾಗಿರಬೇಕು ಎನ್ನತಕ್ಕ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಇನ್ನು ಕಮಿಟಿಗಳ ವಿಚಾರದಲ್ಲಿ ಹೇಳುವುದಾದರೆ, ಎಲ್ಲಾ ಕಮಿಟಿಗಳಿಗೆ ತಾವು ನೇಮಕ ಮಾಡುತ್ತಾ ಇದ್ದೀರಿ, ತಮ್ಮ ಪಕ್ಷದವರನ್ನೇ ತುಂಬಿಕೊಂಡಿದ್ದೀರಿ. ಮಾನ್ಯ ಬಣಕಾರ್‌ರವರು ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟುಮಟ್ಟಿಗೆ ಲಂಚದ ಹಾವಳಿಯನ್ನು ನಿಲ್ಲಿಸಿದ್ದೇವೆ ಎಂದು ಹೇಳಿದರು. ಗ್ರಾಮಸೇವಕರ ಇಂಟರ್‌ವ್ಯೂ ನಡೆದಾಗ ಬೆಳಗಾಂ, ಕಾರವಾರ ಜಿಲ್ಲೆಗಳಲ್ಲಿ ಲಂಚ ರುಷುವತ್ತು ನಡೆದಿದೆ ಎಂದು ತಿಳಿದು ಬಂದಿದೆ, ಅದನ್ನು ಏಕೆ ನಿಲ್ಲಿಸ

ಬಾರದು. ಹೊಸದಾಗಿ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ರಚನೆಮಾಡಿ. ಇದರ ಬಗ್ಗೆ ಕೂಡ ವಿಚಾರ ಮಾಡುವುದರಲ್ಲಿ ಅರ್ಥವಿದೆ. ಆಮೇಲೆ ಡಾ. ರಾಜಕುಮಾರ್‌ರವರ ಅಸೋಸಿಯೇಷನ್ ಆಗಲಿ, ರೈತ ಸಂಘದವರಾಗಲಿ ಚಳುವಳಿ ಮಾಡತಕ್ಕ ಕಾಲದಲ್ಲಿ ಏನು ಮಾಡಿದಿರಿ ಎನ್ನುವುದರ ಬಗ್ಗೆ ಹೇಳಬೇಕಾಗಿದೆ. ನೀವು ಚೇಳಿನ ಕುಲದವರು. ಚೇಳಿನ ಮರಿ ಹುಟ್ಟಬೇಕಾದರೆ, ತಾಯಿಯ ಹೊಟ್ಟೆ ಒಡೆದು ಹೊರಗೆ ಬರುತ್ತದೆ. ತಾಯಿ ಸತ್ತುಹೋಗುತ್ತದೆ. ಡಾಕ್ಟರ್ ರಾಜಕುಮಾರ್ ಸಂಘದವರು ಮತ್ತು ರೈತ ಸಂಘದವರು ಬೆಂಬಲ ಕೊಟ್ಟರು. ನೀವು ತಾಯಿ ಚೇಳನ್ನು ಕೊಂದುಹಾಕಿ ಅವರ ಮೇಲೆ ಗಧಾ ಪ್ರಹಾರ ಮಾಡತಕ್ಕ ಕೆಲಸವನ್ನು ಮಾಡುತ್ತಾ ಇದ್ದೀರಿ. ರೈತ ಸಂಘದವರು ಪಾಂಪ್ಲೆಟ್ ಕೂಡ ಹೊರಡಿಸಿದ್ದಾರೆ. ಅಮಾನುಷ ಕೃತ್ಯಗಳನ್ನು ಮಾಡಿಸಿದ್ದೀರಿ, ಅವಾಚ್ಯ ಶಬ್ದಗಳನ್ನಾಡಿ, ಬೂಟು ಕಾಲಿನಿಂದ ಒದ್ದಿದ್ದಾರೆ. ಡಾಕ್ಟರ್ ರಾಜಕುಮಾರ್ ಅಭಿಮಾನಿಗಳ ಸಂಘದವರ ಮೇಲೆ ಸಾಕಷ್ಟು ಕೇಸುಗಳನ್ನು ಹಾಕಿ ಅವರನ್ನು ಕೋರ್ಟಿನಲ್ಲಿ ಓಡಾಡಿಸುತ್ತಿದ್ದೀರಿ. ಆಮೇಲೆ ಡಾಕ್ಟರ್ ರಾಜಕುಮಾರ್ ರವರನ್ನೂ ಕೂಡ ಮಾತನಾಡಿಸಿ ಬರುತ್ತೀರಿ, ರಾಜಕೀಯ ಎಲ್ಲಾ ಮಾಡುತ್ತೀರಿ. ಡಾಕ್ಟರ್ ರಾಜಕುಮಾರ್ ಅವರೂ ತಿಳಿಸಿದರು, ಅದು ಏನೇ ಇರಲಿ. ಅದರ ವಿವರ ನಮಗೆ ಬೇಕಾಗಿಲ್ಲ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಸೂಚನೆಯನ್ನು ಕೊಡುತ್ತೇನೆ. ಶಾಂತಿ ಸುವ್ಯವಸ್ಥೆ ಮತ್ತು ಶಾಂತಿ ಪಾಲನಾ ದೃಷ್ಟಿಯಿಂದ ದಯವಿಟ್ಟು ಇನ್ನು ಮೇಲಾದರೂ ರೈತರ ಪ್ರತಿನಿಧಿಗಳ ಮೇಲೆ, ರೈತ ಸಂಘದವರ ಮೇಲೆ, ಡಾಕ್ಟರ್ ರಾಜಕುಮಾರ್ ಅಭಿಮಾನಿಗಳ ಸಂಘದವರ ಮೇಲೆ ಅನ್ಯಾಯವಾಗಿ ನಡೆಯುತಕ್ಕ ಪೋಲೀಸ್ ದೌರ್ಜನ್ಯವನ್ನು ನಿಲ್ಲಿಸದೇಹೋದರೆ ಪರಿಸ್ಥಿತಿ ಸರಿಯಾಗಲಿಕ್ಕಿಲ್ಲ ಎನ್ನತಕ್ಕ ಅಭಿಪ್ರಾಯವನ್ನು ಇಡಲಿಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಪೋಲೀಸ್ ಬೆನ್‌ವಲೆಂಟ್ ಫಂಡ್ ಏನಿದೆ ಅದರಲ್ಲಿ ಲಕ್ಷಾಂತರ ರೂಪಾಯಿ ದುರುಪಯೋಗವಾಗುತ್ತಿದೆ ಎನ್ನತಕ್ಕ ಮಾತನ್ನು ಪೋಲೀಸ್ ಪೇದೆಗಳು ತಿಳಿಸಿದ್ದಾರೆ. ಬೆನ್‌ವಲೆಂಟ್ ಫಂಡ್‌ನಲ್ಲಿ ಲಕ್ಷಾಂತರ ರೂಪಾಯಿ ಲೂಟಿ ಹೊಡೆಯುತ್ತಿದ್ದಾರೆ. ಇದರ ಕಡೆ ಮಾನ್ಯ ಜಿಗಜಿನಿಗಿಯವರೇ ನೀವಾದರೂ ನೋಡಬಾರದೇ ? ಮಾನ್ಯ ಮುಖ್ಯ ಮಂತ್ರಿಯವರಿಗಂತೂ ಬಿಡುವಿಲ್ಲ. ನೀವಾದರೂ ನೋಡಿ. ಪೋಲೀಸ್ ಕಾನ್ಸ್‌ಟೇಬಲ್ಸ್ ಬೀದಿಯಲ್ಲಿ ನಿಂತಿರುವವರಿಗೆ ಪೆಟ್ರೋಲ್ ಹೊಗೆ ಕುಡಿದೂ ಕುಡಿದೂ ಟಿ. ಬಿ. ಬರುತ್ತದೆ ಮತ್ತು ಡ್ರೆಸ್‌ನಿಂದ ತೊಂದರೆಯಿದೆ, ಹಾಗೂ ಹೆಡ್ ಕ್ಯಾಪ್‌ನಿಂದ ತಲೆನೋವು ಬರುತ್ತದೆ ಎಂಬ ದೂರುಗಳು ಬಂದಿವೆ. ಆದುದರಿಂದ ಏನಾದರೂ ಮಾಡಿ ಅದನ್ನು ಬದಲಾವಣೆ ಮಾಡುವುದು ಒಳ್ಳೆಯದು ಎಂದು ಸೂಚನೆ ಮಾಡುತ್ತೇನೆ. ಪೋಲೀಸ್ ಬೆನ್‌ವಲೆಂಟ್ ಫಂಡ್‌ನಿಂದ ಏನು ಲಕ್ಷಾಂತರ ರೂಪಾಯಿ ಲೂಟಿ ಹೊಡೆಯುತ್ತಿದ್ದಾರೆ ಅದರ ಕಡೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ದಿವಸ ಮಾನ್ಯ ಜಿಗಜಿನ್ನಿಯವರಿಗೆ ಆ ಡ್ರೆಸ್‌ಹಾಕಿ, ಕ್ಯಾಪ್ ಹಾಕಿ ಕಳಿಸಿ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಹಾಕಿಸಿ. ಅದು ಏನೇ ಇರಲಿ. ಮಾನ್ಯ ಜಿಗಜಿನ್ನಿಯವರ ಬಗ್ಗೆ ನನಗೆ ಬಹಳ ಕನಿಕರ ಇದೆ. ಏಕೆಂದರೆ, ನಿಮ್ಮನ್ನು ಮಂತ್ರಿ ಗಳನ್ನಾಗಿ ಮಾಡಿ ನಿಲ್ಲಿಸಿದ್ದಾರೆಯೇ ಹೊರತು ನಿಮಗೆ ಅಧಿಕಾರ ಕೊಟ್ಟಿಲ್ಲ. ನಿಮ್ಮ ಹತ್ತಿರ ಯಾವುದೂ ಇಲ್ಲ.

ಶ್ರೀ ಜಿಗಜಿನ್ನಿ ರಮೇಶ್ ಚಂದಪ್ಪ.—ಹಿಂದೆ ಈ ಇಲಾಖೆಯಲ್ಲಿ ಮುಖ್ಯ ಮಂತ್ರಿಗಳು ಎಷ್ಟು ಅಧಿಕಾರವನ್ನು ಕೊಟ್ಟಿದ್ದರು ಅದಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ನನಗೆ ಕೊಟ್ಟಿದ್ದಾರೆ. ಆದ್ದರಿಂದ ನನಗೆ ಕೊಟ್ಟಿರತಕ್ಕ ಅಧಿಕಾರದ ವಿಚಾರದಲ್ಲಿ ಸಂಶಯಬೇಡ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಯಾವ ಯಾವ ಅಧಿಕಾರ ಕೊಟ್ಟಿದ್ದಾರೆ, ಯಾವರೀತಿ ಅಧಿಕಾರ ಚಲಾಯಿಸಿ ಎಂದು ನಿರ್ದೇಶನ ಕೊಟ್ಟಿದ್ದಾರೆ. ಆ ಬಗ್ಗೆ ಸರ್ಕಾರದ ಪರವಾಗಿ ಆರ್ಡರ್ಸ್ ಇರಬೇಕಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜಿಗಜಿನ್ನಿಯವರು ಹರಿಜನ ಕೋಮಿನ ಮುಖಂಡರು. ಅವರ ಬಗ್ಗೆ ನನಗೆ ಬಹಳ ಗೌರವವಿದೆ. ಅವರು ಮೇಲಕ್ಕೆ ಬರಬೇಕು ಎಂದು ಹೇಳು ತ್ತಿದ್ದೇನೆ. ನಿಮ್ಮ ದಾರಿಗೆ ನಾನು ಅಡ್ಡ ಬರುವುದಿಲ್ಲ. ನೀವು ನನಗೆ ಕೊಟ್ಟಿರುವ ಅಧಿಕಾರ ಸಾಕು ಅಂದರೆ ನಾನೇನು ಮಾಡಲಿ. ನೀವು ಅಷ್ಟಕ್ಕೇ ಸಂತೋಷ ಪಡತಕ್ಕ ಮಂತ್ರಿಗಳು, ನಾವೇಕೆ ಅಡ್ಡ

ಬರಲಿ. ನಾನು ನಿಮ್ಮನ್ನು ಮೇಲಕ್ಕೆ ಎತ್ತಬೇಕು ಎಂದು ಹೇಳಿದರೆ ನೀವು ನನಗೆ ಇಷ್ಟೇ ಸಾಕು ಅಂದರೆ ನಾನೇನು ಮಾಡಲಿ.

ಶ್ರೀ ಬಿ.ವಿ. ಕರಿಗೌಡ.—ಅವರು ಬಹಳ ತೂಕವಾಗಿದ್ದಾರೆ, ನೀವು ಮೇಲಕ್ಕೆ ಎತ್ತಿದರೆ ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿ ಪೋಲೀಸರ ಸಂಬಳ ಸಾರಿಗೆ ಬಗ್ಗೆ ವಿಚಾರ ಮಾಡುವುದು ಒಳ್ಳೆಯದು. ಅವರು ಬಹಳ ಯಾತನೆ ಪಡುತ್ತಿದ್ದಾರೆ. ಬೆಂಗಳೂರಿನಲ್ಲಿ ಮನೆ ಸಿಕ್ಕುವುದು ಕಷ್ಟ. ಅವರ ಸಂಬಳ ಸಾರಿಗೆ, ಭತ್ಯ ಕೊಡುವುದರ ಕಡೆ ಗಮನ ಕೊಡುವುದು ಒಳ್ಳೆಯದು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನೊಂದು ವಿಷಯವೇನೆಂದರೆ, ಇಲ್ಲಿ ಅಡ್ವೊಕೇಟ್ ಜನರಲ್ ಒಬ್ಬರನ್ನು ನೇಮಕ ಮಾಡಿದ್ದೀರಿ, ಸಂತೋಷ್ ಹೆಗಡೆ ಅವರನ್ನು ನೇಮಕ ಮಾಡಿದ್ದೀರಿ. ಇದು ನೇರವಾಗಿ ರಾಜಕೀಯಕ್ಕೆ ಸಂಬಂಧಪಟ್ಟಿರತಕ್ಕ ಪ್ರಶ್ನೆ. ಹಾಗಾದರೆ ಈ ಸರ್ಕಾರ ಬಹುಮತ ಪಡೆದಿರತಕ್ಕ ಸರ್ಕಾರವಲ್ಲ. ಬಿ. ಜೆ. ಪಿ. ಇತ್ಯಾದಿ ಪಕ್ಷಗಳ ನೆರವು ಪಡೆದಿದೆ, ಸ್ವತಂತ್ರ ಪಕ್ಷಗಳ ನೆರವು ಪಡೆದಿದೆ, ಅವರ ನೆರವು ಅತೀ ಅವಶ್ಯಕವಾಗಿ ಬೇಕಾದಂಥ ಸಂದರ್ಭ. ಸಂತೋಷ್ ಹೆಗಡೆಯವರನ್ನು ಅಡ್ವೊಕೇಟ್ ಜನರಲ್ ಆಗಿ ಮಾಡಿದ್ದೀರಿ. ಇದರಲ್ಲಿ ರಾಜಕೀಯ ನಡೆದಿದ್ದರೆ ಅದನ್ನು ಸದನದ ಮೂಲಕ ಬಯಲಿಗೆ ಎಳೆಯಬೇಕು ಎನ್ನುವುದು ನಮ್ಮ ಆಸೆ. ಇವರು ಕೆ. ಎಸ್. ಹೆಗ್ಗಡೆಯವರ ಮಕ್ಕಳು. ಕೆ.ಎಸ್. ಹೆಗಡೆಯವರು ಬಿ.ಜೆ.ಪಿ.ಯ ಉಪಾಧ್ಯಕ್ಷರು. ಇಂದೂರಿನಲ್ಲಿ ಬಿ. ಜೆ. ಪಿ.ಯ ಎಕ್ಸಿಕ್ಯುಟೀವ್ ಕಮಿಟಿ ಸೇರಿ ಈ ಸರ್ಕಾರಕ್ಕೆ ಬೆಂಬಲ ಮುಂದುವರಿಸಬೇಕು ಎನ್ನುವ ವಿಚಾರ ಚರ್ಚೆಗೆ ಬಂದು ಬೆಂಬಲ ಹಿಂತೆಗೆದುಕೊಳ್ಳುತ್ತೇವೆ ಎನ್ನುವ ಪ್ರಶ್ನೆ ಬಂದಾಗ, ಕೆ. ಎಸ್. ಹೆಗಡೆಯವರ ಮುಖಾಂತರ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ರಾಜಕೀಯ ಸಂದಾನವನ್ನು ಮಾಡಿ ಇವರ ಸರ್ಕಾರಕ್ಕೆ ಬಿ.ಜೆ.ಪಿ.ಯವರ ಬೆಂಬಲ ಪಡೆಯುವುದರಲ್ಲಿ ಸಂಪೂರ್ಣವಾಗಿ ಸಫಲರಾದರು ಎಂದು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ.

SRI K. G. MAHESHWARAPPA.—Sri Santosh Hegde is a very competdnt man.

SRI S. BANGARAPPA.—Competency or otherwise, I am not discussing about those things. ಆ ಪ್ರಶ್ನೆ ಆಮೇಲೆ ಚರ್ಚೆ ಮಾಡೋಣ ಅನುಭವಿಗಳು in the Bangalore Bar ಅಸೋಸಿಯೇಷನ್‌ನಲ್ಲಿದ್ದರು. ಸೀನಿಯರ್ಸ್ ಬಹಳ ಜನ ಇದ್ದಾರೆ. Do you think that this is the only qualification ? ಇವರು ಇನ್ನೂ ಚಿಕ್ಕವಯಸ್ಸಿನವರು. What is the political prize for this ? ಇಲ್ಲಿ ಬಿ.ಜೆ.ಪಿ. ಬೆಂಬಲ ಗಳಿಸಿದರು. ಅವರ ಮುಖೇನ ಅಡ್ವೊಕೇಟ್ ಜನರಲ್ ಮಾಡಿದರು. ಇದಕ್ಕೋಸ್ಕರವಾಗಿ ರಾಜಕೀಯವಾಗಿ ಕುದುರಿಸತಕ್ಕ ಹಾಗೂ ಅಧಿಕಾರದಲ್ಲಿ ಉಳಿದುಕೊಳ್ಳತಕ್ಕ ಸ್ಪಷ್ಟವಾದ ವ್ಯಾಪಾರ ಇದು. ಅಲ್ಲದೆ ಇನ್ನೇನು ? ಇದು ಆದಮೇಲೆ ಮೊದಲು ಭಾರತೀಯ ಜನತಾ ಪಾರ್ಟಿಯವರು ನಾವು ಅಧಿಕಾರದಲ್ಲಿಲ್ಲ ಅಂತ ಹೇಳುತ್ತಿದ್ದರು. ನಾನು ಹಾಗೇ ನೋಡುತ್ತಾ ಇದ್ದೆ. ೭-೮ ಬೋರ್ಡುಗಳ ಅಧ್ಯಕ್ಷರು ಈ ಒಂದು ಪಕ್ಷದವರು ಇದ್ದಾರೆ. ಅಂದ ಮೇಲೆ ಭಾರತೀಯ ಜನತಾ ಪಾರ್ಟಿಯವರು ಇವರ ಜೊತೆಯಲ್ಲಿ ಅಧಿಕಾರದಲ್ಲಿದ್ದಾರೆ. ಅಧಿಕಾರದಲ್ಲಿಲ್ಲ ಅಂತ ಭಾಷಣ ಮಾಡುವುದು ತಪ್ಪು. ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾಗಿದ್ದಾರೆ. ಮಂತ್ರಿಗಳಾಗದಿರುವುದನ್ನು ಬಿಟ್ಟರೆ, ಉಳಿದ ಎಲ್ಲ ಸವಲತ್ತುಗಳನ್ನು ಇವರೂ ಪಡೆಯುತ್ತಿದ್ದಾರೆ. ಆದರೆ ಸಿ.ಪಿ.ಐ. ಹಾಗೂ ಸಿ.ಪಿ.ಎಂ. ಬಗ್ಗೆ ಮಾತನಾಡುವುದಿಲ್ಲ ಅವರು ಯಾವುದೇ ಅಧಿಕಾರದಲ್ಲಿಲ್ಲ. ಗೂಟದ ಕಾರು, ಇನ್ನಿತರ ವ್ಯವಸ್ಥೆ ಕಾನೂನು ಪ್ರಕಾರ ಬಂದುಬಿಡುತ್ತದೆ. ಇವೆಲ್ಲ ರಾಜಕೀಯವಾಗಿ ಆಗಿರತಕ್ಕ ವ್ಯವಸ್ಥೆಗಳು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಒಂದು ಸಲಹೆ ಮಾಡಬಯಸುತ್ತೇನೆ. ಅದೇನೆಂದರೆ, ತಾವು ಮಾತನಾಡುವಾಗ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಿ, ಬೇರೆಯವರನ್ನು ಕುರಿತು ಮಾತನಾಡಬೇಡಿ. ಆರೀತಿ ತಾವು ಏನಾದರೂ ಮಾನಾಡಿದರೆ ನಿಮ್ಮ ಚರಿತ್ರೆಯನ್ನು ಬಿಚ್ಚಬೇಕಾಗುತ್ತದೆಂದು ಹೇಳಿ ಇಷ್ಟಕ್ಕೆ ನನ್ನ ಭಾಷಣವನ್ನು ನಿಲ್ಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಸ್. ಆಚಾರ್ಯ (ಉಡುಪಿ ಕ್ಷೇತ್ರ).— ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಿಸಿದ ನೇರವಾದ ಬೇಡಿಕೆಗಳು, ಹಾಗೂ ಉದ್ಯಮ ಸಚಿವರು, ಆರೋಗ್ಯ ಸಚಿವರು ಅದೇ ರೀತಿ ಮೀನುಗಾರಿಕೆ ಸಚಿವರಿಗೆ ಸಂಬಂಧಪಟ್ಟ ಇನ್ನೂ ಮುಂತಾದ ಅನೇಕ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಇತರ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ಈ ಬೇಡಿಕೆಗಳ ಮೇಲೆ ಬೆಂಬಲವನ್ನು ಕೊಡುತ್ತಾ ಕೆಲವೊಂದು ಅನಿಸಿಕೆಗಳನ್ನು ಮತ್ತು ಸಲಹೆಗಳನ್ನು ಕೂಡ ಭಾರತೀಯ ಜನತಾ ಪಾರ್ಟಿಯ ಪರವಾಗಿ ಕೊಡುವುದಕ್ಕೆ ನಾನು ಎದ್ದು ನಿಂತಿದ್ದೇನೆ. ಈ ಸರ್ಕಾರ ಸುಮಾರು ೧೪ ತಿಂಗಳುಗಳ ಆಡಳಿತದ ಅವಧಿ ಈಗ ಮುಗಿದಿದೆ. ಆ ಅವಧಿಯಲ್ಲಿ ಕೆಲಸ ಹೇಗೆ ನಡೆದಿದೆ ಎಂಬ ಈ ಹಿನ್ನೆಲೆಯಲ್ಲಿ ೧೯೮೪–೮೫ನೇ ಸಾಲಿಗೆ ನಮ್ಮ ಮುಂದೆ ಬೇರೆ ಬೇರೆ ಇಲಾಖೆಗಳ ಬೇಡಿಕೆಯ ಬಗ್ಗೆ ಸಾಮಾನ್ಯ ಚರ್ಚೆ ಕೂಡ ನಡೆಯಬೇಕಾಗಿದೆ. ಸಾಮಾನ್ಯ ಆಡಳಿತ ಇತರೆ ಪ್ರತಿಯೊಂದು ಇಲಾಖೆಗಳ ಬಗ್ಗೆ ಮಾತನಾಡಬೇಕಾಗಿದೆ. ಈ ಸರ್ಕಾರ ೧೯೮೩ ನೇ ಇಸವಿ ಜನವರಿ ತಿಂಗಳಲ್ಲಿ ಬಂತು. ಇದ್ದಂತಹ ಒಂದು ಪಕ್ಷದ ಸರ್ಕಾರವನ್ನು ಬದಲಾವಣೆ ಮಾಡಿ, ಮತ್ತೊಂದು ಸರ್ಕಾರ ಅಧಿಕಾರಕ್ಕೆ ಬರಬೇಕಾಗಿದ್ದರೆ ಅದಕ್ಕೆ ಅನೇಕ ಕಾರಣಗಳು ಇವೆ. ಆ ಎಲ್ಲ ಕಾರಣಗಳನ್ನು ಬಹಳ ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಕಾರಣ ಕಾಲಾವಕಾಶ ಕೂಡ ಇಲ್ಲ. ಆದರೆ ಒಂದು ಮಾತು ಮಾತ್ರ ಸ್ಪಷ್ಟ. ಕರ್ನಾಟಕದ ೪ ಕೋಟಿ ಜನ ಬದಲಾವಣೆಯನ್ನು ತಂದಿದ್ದು ಅವರು ಬರೀ ಸರ್ಕಾರ ಬದಲಾವಣೆ ಮಾತ್ರ ಅಲ್ಲ. ಸರ್ಕಾರ ಅಂದರೆ, ಕ್ರಿಯಾಶೀಲವಾಗಿ, ದಿನನಿತ್ಯ ವ್ಯವಹಾರದಲ್ಲಿ ಜನತೆಗೂ ಮತ್ತು ಸರ್ಕಾರಕ್ಕೂ ಇರತಕ್ಕ ಸಂಬಂಧ, ಬರತಕ್ಕ ಮಾತುಕತೆಗಳಲ್ಲಿ ಅನೇಕ ಬದಲಾವಣೆಯನ್ನು ಅಪೇಕ್ಷೆ ಮಾಡುತ್ತಾರೆ. ಅವರ ಆ ಒಂದು ನಿರೀಕ್ಷೆಯನ್ನು ಮುಟ್ಟುವುದಕ್ಕಾಗುವುದಿಲ್ಲವೆಂದು ಹೇಳುವಂತಹ ಮಾತನ್ನು ಪ್ರಥಮದಲ್ಲೇ ಹೇಳಬೇಕಾಗಿದೆ. ಸಾಮಾನ್ಯ ಆಡಳಿತ ಜನರಿಗೆ ಮುಟ್ಟಿದೆ ಎನ್ನುವಂತಹದ್ದನ್ನು ಕಾಣುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಹಳ ಅನುಭವಸ್ಥರಿದ್ದಾರೆ. ವೈಜ್ಞಾನಿಕ ಮನೋಭಾವ ಇರತಕ್ಕಂತಹವರು. ಚುರುಕು ಸ್ವಭಾವ ಇರತಕ್ಕಂತಹವರು, ಯಾವುದೇ ಒಂದು ಸಮಸ್ಯೆಯನ್ನು ಅವರ ಹತ್ತಿರ ತೆಗೆದುಕೊಂಡು ಹೋದಾಗ ಕೂಡಲೇ ಅದನ್ನು ಗ್ರಹಿಸುವಂತಹ ಶಕ್ತಿ ಉಳ್ಳಂತಹವರು. ಮಾನ್ಯ ಮುಖ್ಯಮಂತ್ರಿಗಳು ಆ ಬಗ್ಗೆ ಕೂಡಲೇ ಹೇಳಿಕೆಯನ್ನು ಕೊಡತಕ್ಕದ್ದೂ ಕೂಡ ಉಂಟು. ಸರ್ಕಾರಕ್ಕೆ ಸಂಬಂಧಪಟ್ಟಂತಹ ವಿಷಯದಲ್ಲಿ ಮಂತ್ರಿಮಂಡಲದ ಸಭೆಯಲ್ಲಿ ಏನೊಂದು ನಿರ್ಣಯಗಳಾಗುತ್ತವೆ, ಅದು ಪತ್ರಿಕೆಗಳಲ್ಲಿ ಬರುತ್ತದೆ. ಸರ್ಕಾರದ ನಿರ್ಣಯಗಳನ್ನು ಮಂತ್ರಿಮಂಡಲದ ನಿರ್ಣಯಗಳನ್ನು ಸಚಿವರಾದ ಶ್ರೀಮಾನ್ ರಘುಪತಿಯವರು ಎಲ್ಲರಿಗಿಂತ ಮುಂಚಿತವಾಗಿ ಅವುಗಳನ್ನು ಬಣ್ಣ ಬಣ್ಣದ ಬೋರ್ಡುಗಳಲ್ಲಿ ಪ್ರಿಂಟ್ ಮಾಡಿಸಿ ಸಾಕಷ್ಟು ಪುಸ್ತಕಗಳನ್ನು ಹೊರಗೆ ತಂದಿದ್ದಾರೆ. ಅವುಗಳ ಸ್ಯಾಂಪಲ್‌ಗಳನ್ನು ಇಲ್ಲಿ ಹೇಳಬೇಕೆಂದಿದ್ದೆ. ಆದರೆ ಈ ದಿನ ನನ್ನ ಕಿಟ್ ಅನ್ನು ತರಲಿಲ್ಲ. ಕೆಲವೊಂದು ಪಾಲಿಸಿ ಡಿಸಿಷನ್ ಅದು ಪರಿಶೀಲನೆ ಮಾಡಬೇಕೆಂದಿದ್ದರೆ ಅದನ್ನು ಪರಿಶೀಲನೆ ಮಾಡಾಯಿತು ಅದನ್ನು ಜಾರಿಗೂ ಕೂಡ ಕೊಟ್ಟಿದ್ದೇವೆ ಎನ್ನುವ ಪ್ರಕಟಣೆ ಪತ್ರಿಕೆಗಳಲ್ಲಿ ಬರುತ್ತದೆ. ಅವರ ಒಂದು ಪ್ರಕಟಣೆ ಪ್ರಕಾರ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ಕ್ಕೆ ಏರಿಸಿಯಾಯಿತು. ಮತ್ತೆ ವೃತ್ತಿ ತೆರಿಗೆ ರದ್ದಾಯಿತು. ನಿರ್ಣಯ ಮಾಡದೇ ಇರತಕ್ಕಂತಹದ್ದನ್ನು ನಿರ್ಣಯ ಮಾಡಿದೆ ಎಂದು ಪತ್ರಿಕೆಗಳಲ್ಲಿ ಬರುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಅಂತಹ ಪುಸ್ತಕಗಳನ್ನು ನವೆಂಬರ್ ೧೯೮೩ರಲ್ಲಿ ಪ್ರಕಟ ಮಾಡಿದ್ದಾರೆ. ಪ್ರಚಾರ ಮಾಡುವುದರಲ್ಲಿ ಮಾತ್ರ ಇವರು ಹಿಂದೆ ಬಿದ್ದಿಲ್ಲ. ಬಹಳ ಹೈಪವರ್ ಪ್ರೂಪಗಾಂಡ. ಪ್ರಚಾರದ ವಿಷಯದಲ್ಲಿ ಹೊಂದಿರತಕ್ಕಂತಹದ್ದಕ್ಕೂ ಆಚರಣೆಗೂ ಬಹಳಷ್ಟು ವ್ಯತ್ಯಾಸ ಇದೆ. ಆಡಳಿತದಲ್ಲಿ ಬದಲಾವಣೆಯಾಗಿರುವುದು ಮಾತ್ರ ಕಾಣುತ್ತಿಲ್ಲ. ಹೊಸ ಹೊಸ ಆದೇಶಗಳನ್ನು ಕೊಟ್ಟು ಅವುಗಳನ್ನು ಕಾರ್ಯಾಚರಣೆಗೆ ಕಾರ್ಯಪ್ರವೃತ್ತರಾಗಬೇಕು. ಜನಸಾಮಾನ್ಯರು, ಬಡವರ ಜನ ಜೀವನ ಸುಧಾರಣೆಯಾಗುತ್ತದೆ, ಅವರಿಗೆ ಅನುಕೂಲ ದೊರಕುತ್ತದೆ ಎನ್ನುವಂತಹ ಕಲ್ಪನೆಯಲ್ಲಿ ಕರ್ನಾಟಕ ರಾಜ್ಯದ ಜನರು ಇದ್ದಾರೆ ಅವರಿಗೆ ಸಹಕಾರಿಯಾಗುವಂತಹ ಒಂದು ದೊಡ್ಡ ಕಮ್ಯುನಿಕೇಷನ ಗ್ಯಾಪ್ ಇರುವಂತೆ ಕಾಣುತ್ತದೆ ಸರ್ಕಾರ ನಡೆಸುವವರು, ಆಡಳಿತ ಯಂತ್ರ ಕೀಳು ಮಟ್ಟದಲ್ಲಿ ನಡೆಯುತ್ತಿದೆ ಎಂಬುದನ್ನು ತಿಳಿದು ಆ ದೃಷ್ಟಿಯಿಂದ ನಿಮ್ಮ ಆಡಳಿತ ಯಂತ್ರಕ್ಕೆ ಬೇಕಾದ ನಿರ್ದೇಶನಗಳನ್ನು ಸರಿಯಾಗಿ ಕೊಡುತ್ತಿಲ್ಲ. ಅವರಲ್ಲಿ ಬೇಕಾದ, ಕಾರ್ಯಕ್ರಮಕ್ಕೆ ಬೇಕಾದ Motivating force ನ ಅಭಾವ ಇದೆ ಅಂತ ಹೇಳುವಂತಹ ಪ್ರಶ್ನೆ ಸಹ ಬರುತ್ತದೆ. ಈ ಒಂದು ಗೊಂದಲವನ್ನು ದಯಮಾಡಿ ನಿಲ್ಲಿಸಬೇಕು. ನಿರ್ಣಯಗಳು ಸರಿಯಾದ ರೀತಿಯಲ್ಲಿ ಜಾರಿಯಾಗಿ, ಜನತೆಯ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವಂತಹ ಮನೋಭಾವ ಅವರಿಗೆ ಬರುವಂತಹ ಪ್ರಯತ್ನವನ್ನು ಮಾಡಬೇಕು, ಈ ರೀತಿ ಹೇಳಿದರ

ಮುಖ್ಯಮಂತ್ರಿಗಳಾಗಲೀ ಅಥವಾ ಇತರೇ ಮಂತ್ರಿಗಳಾಗಲೀ ಸರ್ಕಾರವನ್ನು ನಡೆಸುವವರು ಅದರ ಬಗ್ಗೆ ಅನ್ಯಥಾ ಭಾವಿಸಬಾರದು. ಅನೇಕ ಬೇರೆ ಬೇರೆ ಕಾನೂನಿನಲ್ಲಿರತಕ್ಕ ಲೋಪ ದೋಷಗಳನ್ನು ಸರಿಪಡಿಸುವ ಸಲುವಾಗಿ ತಿದ್ದುಪಡಿಗಳನ್ನು ಮಾಡಿದ್ದೀರಿ. ಇದೇ ಅಧಿವೇಶನದಲ್ಲಿ ಬೇಕಾದಷ್ಟು ಮಾಡಿದ್ದೀವೆ. ಇದು ಹಿಂದೆ ಹತ್ತಾರು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಶ್ರೀಮಾನ್ ಮೊಯ್ಲಿಯವರು ಮಧ್ಯದಲ್ಲಿ ಮಂತ್ರಿಗಳಾಗಿದ್ದರು. ಪ್ರಬಲವಾದ ಖಾತೆಯನ್ನೇ ವಹಿಸಿಕೊಂಡಿದ್ದರು. ನಮ್ಮ ಜಿಲ್ಲೆಯಲ್ಲಿರುವ ಕೆಲವು ಸಮಸ್ಯೆಗಳು ಇರುವುದು ಅದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತಿರುವುದು ಕಂಡುಬಂದು ಸಂಬಂಧಪಟ್ಟ ಕಾನೂನಿಗೆ ತಿದ್ದುಪಡಿಯನ್ನು ಮಾಡಬೇಕೆಂದೂ ಹೇಳಿದರೂ, ಆ ಬಗ್ಗೆ ಇರತಕ್ಕ ಕಾನೂನಿಗೆ ತಿದ್ದುಪಡಿಯನ್ನು ತರುವಂತಹ ಕೆಲಸ ಅವರ ಕಾಲದಲ್ಲಿ ಆಗಿರಲಿಲ್ಲ. ಹೊಸ ವಿಧೇಯಕವಲ್ಲ ಅನೇಕ ಕಾನೂನಿನ ಲೋಪದೋಷಗಳಿಗೆ ತಿದ್ದುಪಡಿ ಸಹ ಆಗಿದೆ. ಆಡಳಿತ ಯಂತ್ರದಲ್ಲಿ ಆಗಬೇಕಾದ ಬದಲಾವಣೆ ಆಗಲಿಲ್ಲ ಎಂದು ಹೇಳುವಂತಹದ್ದಕ್ಕೆ ಬಹುಪಾಲು ಸಂಬಂಧ ಇದೆ. ತಾಲ್ಲೂಕು ಮಟ್ಟದಲ್ಲಿರುವ ತಾಲ್ಲೂಕು ಆಫೀಸು, ಬಿ.ಡಿ.ಓ. ಕಚೇರಿ, ಪೋಲೀಸ್ ಸ್ಟೇಷನ್ ಇರಬಹುದು. ಗ್ರಾಮದಲ್ಲಿರತಕ್ಕ ಗ್ರಾಮ ಸೇವಕನ ಅಥವಾ ಗ್ರಾಮ ಲೆಕ್ಕಿಗನಿಂದ ಇದು ಪ್ರಾರಂಭವಾಗಬೇಕು. ಆ ಒಂದು ಮನೋಭೂಮಿಕೆ ಅಲ್ಲಿಂದ ಆಗಬೇಕಾದ ಅಗತ್ಯ ಇದೆ. ನಮ್ಮ ರಾಜ್ಯದಲ್ಲಿ ೨೨ ಸಾವಿರ ನೇಮಕಾತಿಗಳಿಗೆ ಸಂಬಂಧಪಟ್ಟಂತೆ ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ನಿಮ್ಮ ವರದಿಯಲ್ಲಿ ಹೇಳಿದ್ದೀರಿ. ನೇಮಕಾತಿ ಸಮಿತಿಗಳು ಕೆಲಸ ಮಾಡುತ್ತಿರುವ ಬಗ್ಗೆ ವಿಶ್ಲೇಷಣೆಯನ್ನು ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನಾವೂ ಅನೇಕ ಸಂದರ್ಭದಲ್ಲಿ ಈ ಸದನದಲ್ಲೇ ಮಾಡಿದ್ದೇವೆ. ನೇಮಕಾತಿ ಸಮಿತಿಗಳಲ್ಲಿ ಭ್ರಷ್ಟಾಚಾರ ಇದೆ. ಅಂತಹ ಒಂದು ನೇಮಕಾತಿ ಸಮಿತಿಗಳಿಂದ ಆಯ್ಕೆಗೊಂಡು ಅಭ್ಯರ್ಥಿ ಯಾವ ರೀತಿ ಕೆಲಸವನ್ನು ತನ್ನ ಮುಂದಿನ ಸೇವೆಯಲ್ಲಿ ಮಾಡಬಹುದೆಂಬುದನ್ನು ಯೋಚನೆ ಮಾಡಬೇಕಾಗಿದೆ. ಕರ್ನಾಟಕ ರಾಜ್ಯದ ೪೬ ಸಾವಿರ ಹುದ್ದೆಗಳು ಮಂಜೂರಾಗಿರುವಂತಹವುಗಳು, ಅವುಗಳು ಖಾಲಿ ಉಳಿದಿವೆ ಎನ್ನುವ ಮಾತನ್ನು ಸಹ ಹೇಳಬೇಕಾಗಿದೆ. ನೇಮಕಾತಿ ಸಮಿತಿಗಳ ಮೂಲಕ ನೇಮಕ ಮಾಡುವಂತಹ ಪದ್ಧತಿಯನ್ನು ಫಲಪ್ರದವಾಗಿ ಯಾವುದೇ ಲೋಪ ದೋಷ ಇಲ್ಲದಿರುವ ರೀತಿಯಲ್ಲಿ ಪುನಃ ರಚಿಸಿ ಆದಷ್ಟು ಬೇಗನೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರತಕ್ಕಂತಹ ಹುದ್ದೆಗಳನ್ನು ಭರ್ತಿ ಮಾಡಬೇಕು. ಪಶುಸಂಗೋಪನಾ ಇಲಾಖೆಯ ಬಗ್ಗೆ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕಳೆದ ವರ್ಷ ಸಚಿವರು ಭರವಸೆ ಕೊಟ್ಟರು. ಆದರೆ ಜಿಲ್ಲೆಯಲ್ಲಿ ಇರಬೇಕಾದ ಅರ್ಧಾಂಶದಷ್ಟು ಸಿಬ್ಬಂದಿ ಇದುವರೆವಿಗೂ ಇಲ್ಲ. ನೇಮಕ ಮಾಡಬೇಕಾದ ಸಿಬ್ಬಂದಿಗಳೇ ಇಲ್ಲ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಅಂತಹ ಸಿಬ್ಬಂದಿಯನ್ನು ತರಬೇತಿ ಮಾಡುವಂತಹ ವ್ಯವಸ್ಥೆಯನ್ನು ತೆಗೆದುಕೊಳ್ಳಿ ಅಂತ ಹೇಳಿದ್ದರೂ, ಅದು ಇನ್ನೂ ಆಗಿಲ್ಲ ಅಂತ ಕೇಳಿದ್ದೇನೆ. ಅತ್ಯಂತ ಪ್ರಮುಖವಾದ ಇಲಾಖೆ ಇಂತಹ ಇಲಾಖೆಯಲ್ಲಿ ಸಿಬ್ಬಂದಿ ಇಲ್ಲ ಅಂದರೆ ತೊಂದರೆಯಾಗಬಹುದು, ಅದರ ಬಗ್ಗೆ ಯೋಚನೆ ಮಾಡಬೇಕು. ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಮಿತ್ರರಾದ ಹಿರಿಯ ಶಾಸಕರಾದ ಶ್ರೀಮಾನ್ ಬಣಕಾರ್‌ರವರು ಹೇಳಿದರು. ಯಾವ ಯಾವ ಸಂದರ್ಭದಲ್ಲಿ ವಿಜಿಲೆನ್ಸ್ ಕಮೀಷನ್ ವರದಿಯನ್ನು ಕೊಟ್ಟರೂ, ಆ ವಿಜಿಲೆನ್ಸ್ ಕಮೀಷನ್ ತನ್ನ ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದಾರೆ, ಆ ಶಿಫಾರಸ್ಸಿಗನುಗುಣವಾಗಿ ಕ್ರಮವನ್ನು ತೆಗೆದುಕೊಂಡಿಲ್ಲ. ಶಿಫಾರಸ್ಸಿಗೆ ವಿರುದ್ಧವಾಗಿ ಹೋಗಿ ಪನಿಶ್‌ಮೆಂಟ್ ಕೊಡುವಂತಹ ಕಡೆಯಲ್ಲಿ ಪ್ರಮೋಷನ್ ಕೊಟ್ಟಿರುವಂತಹ ಸಂದರ್ಭ ಉಂಟು ಎನ್ನುವ ಮಾತನ್ನು ಹೇಳಿದ್ದಾರೆ.

ಒಂದೇ ಒಂದು ವಿಚಾರವನ್ನು ಈ ಬಗ್ಗೆ ಹೇಳಬಯಸುತ್ತೇನೆ. ಎಲ್ಲಿ ಯಾವಾಗ ಅಧಿಕಾರಿಗಳ ಮಟ್ಟದಲ್ಲಿ ಭ್ರಷ್ಟಾಚಾರದ ಪ್ರಕರಣ ಗೊತ್ತಾಗುತ್ತದೋ ಆ ಕೂಡಲೇ ಅದರ ಬಗ್ಗೆ ತನಿಖೆ ನಡೆಸಿ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬೇಕಾದ ವಿಧಾನವನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಇನ್ನೊಂದು ವಿಚಾರವನ್ನು ಮುಖ್ಯ ಮಂತ್ರಿಗಳು ಗಮನಿಸಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತಿದ್ದೇನೆ. ಇದು ಬೇರೆ ಬೇರೆ ಇಲಾಖೆಗಳಲ್ಲಿ ಈಗಾಗಲೇ ಇರತಕ್ಕ ಸಿಬ್ಬಂದಿಗೆ ಶಿಕ್ಷಣ ಇಲಾಖೆಯಲ್ಲಿ ಅಥವಾ ಆರೋಗ್ಯ ಇಲಾಖೆಯಲ್ಲಿ ಅಥವಾ ಯಾವುದೇ ಇಲಾಖೆಯಲ್ಲಿ ಇರಲಿ ಬಡ್ತಿ ಕೊಡತಕ್ಕ ಪ್ರಶ್ನೆ ಬಂದಾಗ ಕಾನೂನು ಪ್ರಕಾರ ಕೊಡಬೇಕಾದ ಬಡ್ತಿಯನ್ನು ಕೊಡದೆ ಅನ್ಯಾಯವಾಗಿದೆ. ಬಹಳ ಸಮಯದ ಹಿಂದೆಯೇ ಬಡ್ತಿ ಸಿಗಬೇಕಾಗಿತ್ತು ಎಂದು ಹೇಳುವ ಪ್ರಮುಖ ಸ್ಥಾನದಲ್ಲಿರತಕ್ಕ ಸಿಬ್ಬಂದಿಯ ಪರಿಣಾಮ ಇತರೆ ಕೆಲಸದ ಮೇಲೆ ಬೀಳುತ್ತದೆ. ಬಡ್ತಿ ಮತ್ತು ವೇತನ ಪುನರ್‌ವಿಮರ್ಶೆ ಮಾಡುವುದು ಇರ

ಬಹುದು ಅಥವಾ ಇನ್ನಿತರ ಸೇವೆಗೆ ಸಂಬಂಧಪಟ್ಟ ವಿಷಯಾದಲ್ಲಿ ಜಾಗ್ರತೆಯಾಗಿ ಕೆಲಸ ಮಾಡಬೇಕು. ಕಂದಾಯ ಇಲಾಖೆಯಲ್ಲಿ ತಹಶೀಲ್ದಾರ್ ಮತ್ತು ಅಸಿಸ್ಟೆಂಟ್ ಕಮೀಷನರುಗಳಿಗೆ ಸಂಬಂಧಪಟ್ಟ ಹಾಗೆ ನೇಕ ನೇಮಕಾತಿ ಮತ್ತು ಬಡ್ತಿಯ ರೇಷಿಯೋವನ್ನು ಸರಿಯಾಗಿ ಪಾಲಿಸದೆ ಪಟ್ಟಿಯಲ್ಲಿ ಹೆಚ್ಚು ಕಡಿಮೆ ಆಗಿರುವುದು ಅಸಿಸ್ಟೆಂಟ್ ಕಮೀಷನರುಗಳಿಗೆ ಮತ್ತು ತಹಶೀಲ್ದಾರುಗಳಿಗೆ ಅಸಮಾಧಾನ ಮತ್ತು ಗೊಂದಲವನ್ನುಂಟು ಮಾಡಿದೆ. ನಮಗೆ ಬರತಕ್ಕ ಕಾಗದ ಪತ್ರಗಳನ್ನು ಸಂಬಂದಪಟ್ಟ ಸಚಿವರಿಗೆ ಕಳುಹಿಸಿಕೊಡತಕ್ಕದ್ದು ನಮ್ಮ ಕರ್ತವ್ಯ. ಆಯಾಯ ಇಲಾಖೆಯ ಮಂತ್ರಿಗಳು ಯಾರ್ಯಾರಿಗೆ ಬಡ್ತಿ ದೊರೆತಿಲ್ಲ ಬಡ್ತಿ ದೊರೆಯುವುದರಲ್ಲಿ ತಾರತಮ್ಯವಾಗಿದೆ ಎಂಬುದನ್ನು ನೋಡಿ ಸರಿಪಡಿಸಬೇಕು. ಇವತ್ತಿನ ದಿವಸ, ಬೇರೆ ಬೇರೆ ಮೂಲಗಳಿಂದ ಬಂದವರಿಗೆ ಸ್ಕೇಲ್ ಫಿಕ್ಸ್ ಆಗಿಲ್ಲ, ಪೆನ್‌ಷನ್‌ನಲ್ಲಿ ವಿಳಂಬವಾಗಿದೆ. ಸರ್ಕಾರಿ ಸೇವೆ ಮಾಡಿ ನಿವೃತ್ತರಾಗಿ ಹೋಗುವಾಗ ಪೆನ್‌ಷನ್ ಇತ್ಯಾದಿಗಳು ಸರಿಯಾದ ಸಮಯದಲ್ಲಿ ದೊರೆಯದೆ ಬಹಳ ತೊಂದರೆ ಯಾಗುತ್ತಿದೆ. ಅವರು ನಿವೃತ್ತರಾದಮೇಲೆ ಎಷ್ಟೋ ಸಮಯದವರೆಗ ಪೆನ್‌ಷನ್ ಇತ್ಯರ್ಥವಾಗುವುದಕ್ಕೆ ಕಾಯಬೇಕಾಗಿದೆ. ಅದಕ್ಕೋಸ್ಕರ ಸಿಬ್ಬಂದಿ ಸೇವಾ ಇಲಾಖೆ ಎಂದು ಮಾಡಿ ಅದರಲ್ಲಿ ಸ್ಕೇಲ್‌ರೀ ಫಿಕೇಷನ್, ಪೇ ಫಿಕೇಷನ್, ರಿಕ್ರೂಟ್‌ಮೆಂಟ್ ಪೆನ್‌ಷನ್ ವಗೈರೆಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬರು ಕ್ಯಾಬಿನೆಟ್ ದರ್ಜೆಯ ಸಚಿವರನ್ನು ನೇಮಿಸುವುದು ಒಳ್ಳೆಯದು. ಏಕೆಂದರೆ ಅಷ್ಟೊಂದು ಅಗಾದವಾದ ಸಮಸ್ಯೆ ಇದೆ. ಇದರ ಬಗ್ಗೆ ನಿಮಗೂ ಸಾಕಷ್ಟು ಅನುಭವವಾಗಿರಬಹುದು. ಪ್ರತಿದಿವಸ ರಾಜ್ಯದ ಮೂಲೆಮೂಲೆಗಳಿಂದ ಬೇರೆಬೇರೆ ವರ್ಗದ ಅಧಿಕಾರಿಗಳು ಸ್ಕೇಲ್ ರೀಫಿಕೇಷನ್, ಪ್ರೊಮೋಷನ್ ಪೆನ್‌ಷನ್ ಇತ್ಯಾದಿ ತೊಂದರೆಗಳ ಬಗ್ಗೆ ಕಾಗದ ಪತ್ರಗಳನ್ನು ಬರೆಯುತ್ತಿರುವುದನ್ನು ನೋಡಿದರೆ ಅದಕ್ಕೆ ಒಬ್ಬರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳನ್ನು ನೇಮಿಸುವುದು ಒಳ್ಳೆಯದೆಂದು ಹೇಳ ಬಯಸುತ್ತೇನೆ. ಸಾಮಾನ್ಯ ಆಡಳಿತದ ಬಗ್ಗೆ ಹೆಚ್ಚು ಹೇಳ ಬಯಸುವುದಿಲ್ಲ. ಇನ್ನು ಗೃಹ ಖಾತೆ ಮತ್ತು ಒಳಾಡಳಿತ ಇಲಾಖೆಯ ಬಗ್ಗೆ ಮೊಯಿಲಿಯವರು ಮತ್ತು ಬಂಗಾರಪ್ಪನವರು ಸಾಕಷ್ಟು ಮಾತನಾಡಿದ್ದಾರೆ. ಶಾಂತಿ ಸುವ್ಯವಸ್ಥೆ, ಜನರ ಪ್ರಾಣಹಾನಿಯ ಮತ್ತು ಆಸ್ತಿಪಾಸ್ತಿಗಳ ರಕ್ಷಣೆಯ ಕೆಲಸ ಪ್ರಮುಖವಾದುದು ಪೋಲೀಸ್ ಖಾತೆಗೆ ಸಂಬಂಧಪಟ್ಟ ವರದಿಯಲ್ಲಿ ಹೆಚ್ಚು ಕಡಿಮೆ ೭೪೪೭೭ ಬೇರೆ ಬೇರೆ ನಮೂನೆಯ ಅಪರಾಧಗಳು ಹಿಂದಿನ ವರ್ಷದಲ್ಲಿ ನಡೆದಿವೆ ಈ ವರ್ಷ ೭೬ ಸಾವಿರ ಆಗಿದೆ. ಅಂದಾಗ ಹೆಚ್ಚು ಕಡಿಮೆ ಹೋದ ವರ್ಷಕ್ಕೂ ಈ ವರ್ಷಕ್ಕೂ ಒಂದೇ ಸ್ಥಿತಿ ಇದೆ. ಇದರಲ್ಲಿ ಏನೋ ಸುಧಾರಣೆ ಆಗಲಿಲ್ಲ. ಕೆಲವು ನಮೂನೆಯ ಅಪರಾಧಗಳು ಜಾಸ್ತಿಯಾಗಿವೆ ಎಂದು ತಿಳಿದು ಬರುತ್ತದೆ. ಈ ಬಗ್ಗೆ ಸಭೆಯಲ್ಲೂ ಕೂಡ ಇತ್ತೀಚೆಗೆ ಸಾಕಷ್ಟು ಚರ್ಚೆಗಳು ನಡೆದಿವೆ ಬೆಂಗಳೂರಿನಲ್ಲಿ ಕಳೆದ ಕೆಲವು ದಿನಗಳಲ್ಲಿ ನಡೆದ ಪ್ರಕರಣಗಳ ಸಂಬಂಧದಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆದಂತಹ ಪ್ರಕರಣಗಳನ್ನು ನೋಡಿದರೆ ಶಾಂತಿ ವ್ಯವಸ್ಥೆ ಹದಗೆಡುವುದಕ್ಕೆ ಈ ಖಾತೆಯ ಲೋಪದೋಷಗಳೇ ಕಾರಣವೆಂದು. ಹೇಳಬಹುದುಇಲ್ಲದಿದ್ದರೆ, ಪೋಲೀಸ್ ಠಾಣೆಯಲ್ಲಿ ಹಿಂಸಾಚಾರ ಮತ್ತು ಅತಿರೇಖದಿಂದ ಬಂಧನದಲ್ಲಿದ್ದವರು ತೀರಿಹೋಗುವ ಪ್ರಸಂಗ ಬರುತ್ತಿರಲಿಲ್ಲ. ಇದು ಬಹಳಖಂಡನೀಯವಾದುದು ಈ ಬಗ್ಗೆ ಮೊನ್ನೆಯೂ ಮಾತನಾಡಿದ್ದೆ ಮತ್ತೆ ಈವತ್ತು ಮಾತನಾಡುತ್ತಿದ್ದೇನೆ. ಇಡೀ ಪೋಲೀಸ್ ಇಲಾಖೆಹಾಳಾಗಿದೆ. ಆದರೆ ಯಾರೂ ಒಳ್ಳೆಯವರು ಇಲ್ಲವೆಂದು ಹೇಳಬಯಸುವುದಿಲ್ಲ ಕೆಲವರು ಒಳ್ಳೆಯವರು ಇದ್ದಾರೆ. ಅನೇಕ ಪ್ರಕರಣಗಳನ್ನು ತಾವು ನೋಡಿರಬಹುದು. ಒಂದು ವಾರದ ಹಿಂದೆ ಟ್ಯಾಕ್ಸಿ ಡ್ರೈವರ್ ಒಬ್ಬ ಬಾಡಿಗೆಗೆ ತೆಗೆದು ಕೊಂಡು ಹೋದನಂತರ ಅವನು ಮತ್ತೆ ವಾಪಸ್ಸು ಬರಲಿಲ್ಲ. ನಂತರ ಸುದ್ದಿ ಬಂತು, ಅವನ ಮೃತ ದೇಹ ಪತ್ತೆ ಆಗಿದೆ ಎಂದು. ಆದರೆ ಕಾರು ಮಾತ್ರ ಪತ್ತೆಯಾಗಿರಲಿಲ್ಲ. ಜನರೆಲ್ಲಾ ಭಯಭೀತರಾಗಿದ್ದರು. ಇಂಥ ಈ ಒಂದು ಕೇಸಿನಲ್ಲಿ ಬಹಳ ಚಾಕು ಚಕ್ಯತೆಯಿಂದ ಪೋಲೀಸರು ಕೆಲಸ ಮಾಡಿದ್ದಾರೆ. ಇದಕ್ಕೆ ಮೆಚ್ಚಿಗೆ ವ್ಯಕ್ತ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಪೋಲೀಸ್ ಇಲಾಖೆಯನ್ನು ಬಯ್ಯುತ್ತಾರೆ. ಆದರೆ ಒಂದೊಂದು ಸಂದರ್ಭದಲ್ಲಿ ಇಲಾಖೆಯನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ಮೈಸೂರಿನಲ್ಲಿ ೪-೫ ಜನ ತರುಣರ ತಂಡವನ್ನು ಪತ್ತೆಹಚ್ಚಿ ಅವರನ್ನು ಕಿಡ್‌ನ್ಯಾಪ್ ಮತ್ತು ಮರ್ಡರಿಗೆ ಸಂಬಂಧಪಟ್ಟಂತೆ ಬಂಧಿಸಿದ್ದಾರೆ. ೧೯೭೪ ರಿಂದ ಇಂಥ ೬-೭ ಪ್ರಕರಣಗಳನ್ನು ಬಯಲಿಗೆ ತಂದಿದ್ದಾರೆ. ಒಂದು ಕಾರನ್ನು ವೇಗವಾಗಿ ನಡೆಸಿಕೊಂಡು ಹೋಗುವಾಗ ಸಂಶಯಪಟ್ಟ ಹೆಡ್‌ಕಾನ್‌ಸ್ಟೇಬಲ್ ಮೈಸೂರಿನ ರಸ್ತೆಯಲ್ಲಿ ಕಾರನ್ನು ಹಿಡಿದು ಒಂದು ನಿಗೂಢ ಪ್ರಶ್ನೆಯನ್ನು ಹೊರಕ್ಕೆ ತೆಗೆದಿದ್ದಾರೆಂದರೆ ಸಂತೋಷ. ಇದು ಮಾತ್ರವಲ್ಲದೆ, ತೀರ್ಥಹಳ್ಳಿಯಲ್ಲಿ ಲಾರಿಯ ಡ್ರೈವರನ್ನು ಮರ್ಡರ್ ಮಾಡಿ ಲಾರಿಯನ್ನು ಅಪಹರಿಸಿಕೊಂಡು ಹೋದವರನ್ನು ೪೮ ಗಂಟೆಯೊಳಗೆ ಪತ್ತೆ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಇದೇ ಸದನದಲ್ಲಿ ಹೇಳಿದರು, ಬೆಳಗಾಂ

ನಲ್ಲಿ ಸದಾನಂದ ಪ್ರಭು ಎಂಬ ೭ ವರ್ಷದ ಹುಡುಗನನ್ನು ಜನವರಿ ೩೧ ರಂದು ಕಿಡ್‌ನ್ಯಾಪ್ ಮಾಡಿದ್ದಾರೆ ಎಂದು. ಆಮೇಲೆ ಆ ಹುಡುಗನನ್ನು ಬೇಕಾದರೆ ದುಡ್ಡು ಕೊಡಬೇಕೆಂದು ಹೇಳಿದ್ದನ್ನು ನಿನ್ನೆ ದಿವಸ ಪೋಲೀಸರು ಪತ್ತೆಹಚ್ಚಿಕೊಟ್ಟಿದ್ದಾರೆಂದು ಸುದ್ದಿ ಬಂದಿದೆ. ಈ ಸಂದರ್ಭದಲ್ಲಿ, ಪ್ರಕಾಶರವರ ಖಾತೆಯ ಸಿಬ್ಬಂದಿಯ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ನಾಗರಾಜ್ ಎಂಬ ಕಂಡಕ್ಟರ್‌ಗೆ ಬಸ್ಸಿನಲ್ಲಿ ಸಿಕ್ಕಿದ ವಜ್ರದ ಓಲೆಯನ್ನು ಸಂಬಂಧಪಟ್ಟವರು ಬಂದು ತೆಗೆದು ಕೊಳ್ಳಬಹುದೆಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಅದು ಸುಮಾರು ೮-೧೦ ಸಾವಿರ ರೂಪಾಯಿ ಬೆಲೆ ಬಾಳುವ ಓಲೆ. ಅಂಥ ವ್ಯಕ್ತಿಗಳು ನಿಮ್ಮ ಖಾತೆಯಲ್ಲೂ ಇರಬಹುದು, ಪೋಲೀಸ್ ಖಾತೆಯಲ್ಲೂ ಇರಬಹುದು, ಒಳ್ಳೆಯ ಕೆಲಸ ಮಾಡಿದವರನ್ನು ನಾವು ಯಾವತ್ತೂ ಹೊಗಳುತ್ತೇವೆ. ಪೋಲೀಸ್ ಇಲಾಖೆಯಲ್ಲಿ ಒಳ್ಳೆಯವರಿದ್ದರೂ ಕೆಲವೊಂದು ಕಡೆಗಳಲ್ಲಿ ಕೆಲವರಿಗೆ ಡ್ರೆಸ್ ಹಾಕಿದ ಕೂಡಲೇ ಏನಾಗುತ್ತದೋ ಅಥವಾ ಅವರ ಪ್ರವೃತ್ತಿಯೇ ಆ ರೀತಿ ಇರಬಹುದೋ ಏನೋ ಗೊತ್ತಿಲ್ಲ. ಕೆಲವರು ಬದಲಾಗುತ್ತಾರೆ. ಕೆಲವರು ಕ್ರಿಮಿನಲ್ ಮೈಂಡೆಡ್ ಜನರು ಇರುತ್ತಾರೆ. ಆ ದೃಷ್ಟಿಯಿಂದ ನಾನು ಹೇಳುವುದಾದರೆ, ಅಪರಾಧಿ ಮನೋಭಾವ ಇರತಕ್ಕ ಜನರನ್ನು ಸ್ಕ್ರೀನಿಂಗ್ ಮಾಡಿ ಅಂಥವರನ್ನು ಸಾಧ್ಯವಾದರೆ ಕೆಲಸದಿಂದ ವಜಾ ಮಾಡಬೇಕು, ಇಲ್ಲದಿದ್ದರೆ, ಅವರ ಕೈಯಲ್ಲಿ ಲಾಠಿ ಕೊಡುವ ಕೆಲಸವನ್ನು ಬಿಟ್ಟು ಕನಿಷ್ಟ ಪಕ್ಷ ಟೇಬಲ್ ವರ್ಕ್ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದು ಬಹಳ ಮಹತ್ವವಾದುದು. ಮುಖ್ಯ ಮಂತ್ರಿಗಳು ಈ ಸಲಹೆಯನ್ನು ಕೇಳಿಕೊಂಡರೆ ಪೋಲೀಸ್ ಠಾಣೆಯಲ್ಲಿ ಅತ್ಯಾಚಾರ ಮತ್ತು ಅತಿರೇಖ ಆಗತಕ್ಕದ್ದು ನಿಲ್ಲಲು ಸಾಧ್ಯವಾಗುತ್ತದೆಂದು ನಾನಾದರೂ ಹೇಳ ಬಯಸುತ್ತೇನೆ. ಈ ಇಲಾಖೆ ಕೆಲಸ ಮಾಡುವುದಕ್ಕೆ ಮಧ್ಯದಲ್ಲಿ ಅನಾವಶ್ಯಕವಾದ ಹಸ್ತಕ್ಷೇಪ ಆಡಳಿತ ಪಕ್ಷದ ಸದಸ್ಯರಿಂದಾಗಲೀ ಅಥವಾ ಸರ್ಕಾರ ನಡೆಸತಕ್ಕ ಮಂತ್ರಿಗಳಿಂದಾಗಲಿ ಇರಬಾರದು. ಅವರಿಗೆ ವಹಿಸಿಕೊಟ್ಟ ಕೆಲಸವನ್ನು ಅವರು ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯ ಇರಬೇಕು. ಅಂದರೆ ಇವರು ಪ್ರತ್ಯೇಕವಾಗಿ ಇರಬೇಕೆಂದು ಹೇಳುತ್ತಿಲ್ಲ. ಕೊನೇ ಜವಾಬ್ದಾರಿ ಇವರದ್ದೇ ಇರುತ್ತದೆ. ಪ್ರತಿಯೊಂದು ವಿಷಯದಲ್ಲೂ ಹಸ್ತಕ್ಷೇಪ ಮಾಡಿದರೆ ಏನಾಗುತ್ತದೆಂದರೆ ಏನೊಂದು ಗುರಿ ಇರುತ್ತದೋ ಅದು ತಪ್ಪಿ ಹೋಗುತ್ತದೆ. ಅವರು ಸರಿಯಾದ ಮಾರ್ಗದಲ್ಲಿ ಹೋಗದೆ ಅಪರಾಧಿಗಳನ್ನು ಪತ್ತೆಹಚ್ಚುವುದಕ್ಕೆ ಕಷ್ಟವಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಆಡಳಿತ ಪಕ್ಷದವರು ಹಸ್ತ ಕ್ಷೇಪ ಮಾಡಿದರೆ ಒಳ್ಳೆಯದಲ್ಲ. ಮೊನ್ನೆ ಒಂದು ಪ್ರಕರಣದ ಬಗ್ಗೆ ರೂಲ್ ೬೯ರ ಪ್ರಕಾರ ಚರ್ಚೆ ಆಗಬೇಕೆಂದು ಹೇಳಿದೆವು. ಮತ್ತು ಆ ಬಗ್ಗೆ ಮುಖ್ಯ ಮಂತ್ರಿಗಳ ಹತ್ತಿರ ಕೂಡ ಹೇಳಿದೆ. ಗುಲ್ಬರ್ಗ ಜಿಲ್ಲೆಯ ವಿಪೂರಿನ ಕೊಲೆ ಪ್ರಕರಣ ತಮಗೆಲ್ಲ ಗೊತ್ತಿದೆ. ಅದಕ್ಕೆ ಸಂಬಂಧ ಪಟ್ಟಹಾಗೆ ಇಲಾಖೆಯ ಮೇಲೆ ಒತ್ತಡ ಬಿತ್ತು. ಯಾರೂ ಅದರಲ್ಲಿ ಇನ್‌ವಾಲ್ವ್ ಆಗಿಲ್ಲವೆಂಬ ವಿಷಯಗಳು ಇವೆ.

೧-೦೦ ಪಿ. ಎಂ.

ಅಂಥದ್ದರ ಮೇಲೆ ಚಾರ್ಜ್‌ಷೀಟ್ ಆಯಿತು. ಮುಖ್ಯಮಂತ್ರಿಗಳು ಆ ಸಂದರ್ಭದಲ್ಲಿ ನಿಷ್ಪಕ್ಷಪಾತವಾದ ತನಿಖೆಯಾಗಬೇಕು ಎಂದು ಸಿ.ಒ.ಡಿ ಗೆ ಕೊಟ್ಟರು. ಆದರೆ ತನಿಖೆಯಾಗಿ ನ್ಯಾಯ ಹೊರ ಬರಬೇಕು ಎನ್ನುವಾಗ ಸಿ.ಒ.ಡಿ.ಯಿಂದ ವಾಪಸ್ ತೆಗೆದುಕೊಂಡಿದ್ದಾರೆ. ಅದರ ಪರಿಣಾಮವಾಗಿ ನಿರಪರಾಧಿಗಳು ಶಿಕ್ಷೆ ಅನುಭವಿಸಬೇಕಾಗಿದೆ. ಈ ರೀತಿ ಆಗಿರುವುದು ಪ್ರಥಮ ಅಲ್ಲ. ೧೯೭೮ರಲ್ಲಿ ಇದೇ ಪ್ರಕರಣದಲ್ಲಿ ರಾಜಕೀಯ ಒತ್ತಡ ತಂದು ನಿರಪರಾಧಿ ಜನರ ಮೇಲೆ ಸೇಡು ತೀರಿಸಿಕೊಳ್ಳುವ ಪ್ರಯತ್ನ ನಡೆದಿದೆ. ೧೯೭೮ರಲ್ಲೂ ಇದೇ ನಮೂನೆಯಲ್ಲಿ ಮಾಡಿದಾಗ ದೇವರಾಜ ಅರಸು ಅವರು ಆ ಪ್ರಕರಣವನ್ನು ಸಿ ಒ.ಡಿ.ಗೆ ಒಪ್ಪಿಸಿ ತನಿಖೆ ಮಾಡಿ ನಿರಪರಾಧಿಗಳನ್ನು ಚಾರ್ಜ್‌ಷೀಟ್‌ನಿಂದ ಹೊರತು ಪಡಿಸಿದ್ದಾರೆ. ಈ ಖಾತೆಯಲ್ಲಿ ಗಂಭೀರವಾದ ಪ್ರಕರಣದಲ್ಲಿ ಯಾವರೀತಿ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾರೆ ಎಂಬುದು ಜನರ ಮನಸ್ಸಿನಲ್ಲಿ ದೃಢವಾಗಬೇಕಾಗಿದ್ದರೆ ಸರ್ಕಾರ ಸ್ವಲ್ಪ ಜಾಗೃತವಾಗಬೇಕಾಗುತ್ತದೆ. ಪೋಲೀಸ್ ಇಲಾಖೆಗೆ ಹೀಗೆ ಮಾಡಬೇಕು. ಹಾಗೆ ಮಾಡಬೇಕು ಎಂದು ಆಡಳಿತ ಪಕ್ಷಕ್ಕೆ ಸೇರಿದಂಥ ಪ್ರಮುಖ ಸಹಸ್ಯರು ಒತ್ತಡ ಹೇರುವುದು ಖಂಡನೀಯ. ಇದು ಅಪೇಕ್ಷಣೀಯವೂ ಅಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇವೆ. ಅನೇಕ ಹೊಸ ಹೊಸ ಚಟುವಟಿಕೆಗಳು ರಾಜ್ಯದಲ್ಲಿ ಪ್ರಾರಂಭವಾಗುತ್ತಿವೆ. ಅನೇಕ ವಿದ್ಯಾ ಸಂಸ್ಥೆಗಳು ದೊಡ್ಡ ದೊಡ್ಡ ಆಸ್ಪತ್ರೆಗಳು, ಹೊಸ ಹೊಸ ಬಂದರುಗಳು ಆಗಿ ಅರ್ಬನೈಸೇಷನ್ ಆಗುತ್ತಿರುವುದರಿಂದ ಹೊಸ

ಹೊಸ ಠಾಣೆಗಳನ್ನೂ ಸಹ ಮಾಡಬೇಕಾಗಿದೆ. ಸಾರ್ವಜನಿಕ ಬಂಡವಾಳ ವಿನಿಯೋಗವಾಗಿ ಹೆಚ್ಚು ಹೆಚ್ಚು ಜನನಿಬಿಡ ಚಟುವಟಿಕೆಗಳು ನಡೆಯುತ್ತಿರುವಾಗ ಪೋಲೀಸ್ ಠಾಣೆಗಳ ಸಂಖ್ಯೆಯೂ ಹೆಚ್ಚಾಗಬೇಕು. ನಾನು ಇದರಲ್ಲಿ ಎರಡು ಮೂರು ವಿಚಾರ ಹೇಳುತ್ತೇನೆ. ನಮ್ಮಲ್ಲಿ ನಾಲ್ಕೈದು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ಬಂದರು ನಿರ್ಮಾಣವಾಯಿತು. ಅಲ್ಲಿ ಕೋಟಿಗಟ್ಟಲೆ ವ್ಯವಹಾರ ನಡೆಯುತ್ತಿದೆ. ಹಿಂದೆ ಅಲ್ಲಿ ಪೋಲೀಸು ಠಾಣೆಯ ಅಗತ್ಯವಿಲ್ಲದಿದ್ದರೂ ಈಗ ಅಗತ್ಯ ಉಂಟು. ಎಲ್ಲೆಲ್ಲಿ ಹೊಸ ಹೊಸ ಚಟುವಟಿಕೆಗಳು ಬೆಳೆಯುತ್ತಿದೆ ಅಲ್ಲೆಲ್ಲಾ ಹೊಸ ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪನೆ ಮಾಡುವಂಥದ್ದು ಮುಖ್ಯವಾದುದು. ಪೋಲೀಸ್ ಸಿಬ್ಬಂದಿಗೆ ಹೊಸ ಹೊಸ ತರಬೇತಿ ಕೊಡುವ ಬಗ್ಗೆ ಮತ್ತು ಇತರ ಕಾರ್ಯಕ್ರಮಗಳ ಬಗ್ಗೆ ಭಾಷಣದಲ್ಲಿ ಕೊಟ್ಟಿದ್ದಾರೆ. ಪೋಲೀಸ್ ಇಲಾಖೆ ಸಿಬ್ಬಂದಿಯನ್ನು ಇನ್ನೂ ಹೆಚ್ಚಿನ ಶಿಸ್ತಿಗೆ ಒಳಪಡಿಸಬೇಕಾದ ಅಗತ್ಯ ಇದೆ. ಪೋಲೀಸ್ ಇಲಾಖೆ ಸಿಬ್ಬಂದಿಗೆ ಕ್ವಾರ್ಟರ್ಸ್‌ಗಾಗಿ ಹೋದವರ್ಷಕ್ಕಿಂತ ೧೧ ಲಕ್ಷ ರೂಪಾಯಿ ಹೆಚ್ಚಿಗೆ ಇಟ್ಟಿದ್ದೇವೆಂದು ಹೇಳಿದ್ದಾರೆ. ಎಕ್ಸ್‌ಕಲೇಷನ್ ಆಫ್ ಕಾಸ್ಟ್ ಮುಂತಾದ ವಿಷಯಗಳನ್ನು ನೋಡಿದರೆ ಈ ಹಣವೂ ಸಾಲದಾಗುತ್ತದೆ. ಪೋಲೀಸರಿಗೆ ನ್ಯಾಯಾಧೀಶರಿಗೆ ಮತ್ತು ಅದೇರೀತಿ ಮುನ್ಸಿಪಾಲಿಟಿಗಳಲ್ಲಿ ಕೆಲಸ ಮಾಡುವ ಚೀಫ್ ಆಫೀಸರ್‌ಗಳಿಗೆ ಅಂದರೆ ಸ್ವತಂತ್ರವಾಗಿ ಇರಬೇಕಾದ ಜನರಿಗೆ ವಸತಿ ಸೌಕರ್ಯವನ್ನು ಅಗತ್ಯವಾಗಿ ಕಲ್ಪಿಸಿಕೊಡಬೇಕಾಗುತ್ತದೆ. ಅದೇರೀತಿ ಅವರ ಸಂಬಳಸಾರಿಗೆಗಳನ್ನೂ ಪುನರ್ವಿಮರ್ಶೆ ಮಾಡುವ ಬಗ್ಗೆ ಕೂಡ ಗಮನ ಕೊಡಬೇಕಾಗುತ್ತದೆ. ಅರ್ಥ ಖಾತೆಯ ವಿಷಯದಲ್ಲಿ ಟ್ಯಾಕ್ಸೇಷನ್‌ಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ತೆರಿಗೆಗಳಲ್ಲಿ ಕೆಲವು ರಿಯಾಯಿತಿ ಕೊಟ್ಟಿರುವುದನ್ನು ಮತ್ತು ಕಡಿಮೆ ಮಾಡಿರುವುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಸ್ವಾಗತ ಮಾಡುತ್ತಾರೆಂದು ನಾನು ಯೋಚನೆ ಮಾಡಿದೆ. ಆದರೆ ಅವರು ಅದನ್ನು ಬಿಟ್ಟು ರಿಸೋರ್ಸ್ ಮೊಬಲೈಸೇಷನ್‌ನಲ್ಲಿ ತಾವು ವಿಫಲರಾಗಿದ್ದೀರಿ ಎಂಬ ಮಾತನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಯಾರಾದರೂ ಬೆಂಬಲವಾಗಿ ನಿಲ್ಲಬೇಕಾದುದು ಅವರ ನೈತಿಕ ಕರ್ತವ್ಯ. ಇಲ್ಲದಿದ್ದರೆ ಮುಖ್ಯಮಂತ್ರಿಗಳು ಸೀರಿಯಸ್ಸಾಗಿ ತೆಗೆದುಕೊಂಡು ಹೆಚ್ಚು ತೆರಿಗೆಗಳನ್ನು ಹಾಕಿದರೆ ನಮ್ಮ ಜನರಿಗೇ ತೊಂದರೆಯಾಗುತ್ತದೇ. ತೆರಿಗೆ ವಸೂಲಾತಿಯಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ, ಅಬ್ಕಾರಿ ಇಲಾಖೆ ಮತ್ತು ಮೋಟಾರು ವಾಹನಗಳ ಇಲಾಖೆ ಪ್ರಮುಖವಾದುದು. ಈ ಮೂರು ಇಲಾಖೆಗಳಲ್ಲೂ ಗಣನೀಯವಾಗಿ ಆದಾಯ ಹೆಚ್ಚಾಗಿರುವುದು ವರದಿಯಲ್ಲಿ ಬಂದಿದೆ. ೧೯೭೪–೭೫ರಲ್ಲಿ ೧೦೩ ಕೋಟಿ ರೂಪಾಯಿ ಸೇಲ್ಸ್ ಟ್ಯಾಕ್ಸ್ ಮತ್ತು ಇತರ ಬಾಬುಗಳಿಂದ ಬಂದಿದ್ದರೆ ಇವತ್ತು ೪೬೭ ಕೋಟಿ ರೂಪಾಯಿ ಬಂದಿದೆ. ೧೯೮೦–೮೧ ರಿಂದ ೧೯೮೧–೮೨ರ ವರೆಗೆ ಒಂದು ರೀತಿ it was a good year. ಆಗ ೯೩ ಕೋಟಿ ರೂಪಾಯಿ ಏರಿಕೆ ಆಗಿದ್ದರೆ ವೀರಪ್ಪ ಮೊಯಿಲಿಯವರ ಕೊನೆ ವರ್ಷದ ಬಜೆಟ್ಟಿನಲ್ಲಿ ಕೇವಲ ೩೭ ಕೋಟಿ ರೂಪಾಯಿ ಹೆಚ್ಚಾಗಿರುವುದನ್ನು ನೋಡುತ್ತೇವೆ. ಆದರೆ ಈ ವರ್ಷ ಮಾರಾಟ ತೆರಿಗೆ ಸಂಬಂಧವಾಗಿ ೫೭ ಕೋಟಿ ರೂಪಾಯಿ ಏರಿಕೆಯಾಗಿದೆ. ಆದ್ದರಿಂದ ರಿಸೋರ್ಸ್ ಮೊಬಲೈಸೇಷನ್‌ನಲ್ಲಿ ಹಿಂದೆ ಬಿದ್ದಿಲ್ಲ ಎಂದು ಹೇಳಬಹುದು. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಾಬರಿಯಾಗುವ ಪ್ರಮೇಯವಿಲ್ಲ. ಆದರೆ ಈ ಬಗ್ಗೆ ಕೆಲವೊಂದು ಸಲಹೆಗಳನ್ನು ಸಾರ್ವಜನಿಕ ಹಿತ ದೃಷ್ಟಿಯಿಂದ ಕೊಡುತ್ತೇನೆ. ಸೇಲ್ಸ್ ಟ್ಯಾಕ್ಸ್‌ನಲ್ಲಿ ಹೊಸ ಹೊಸ ತೆರಿಗೆಗಳನ್ನು ಜಾರಿಗೊಳಿಸುವಾಗ ಹಿಂದಿನ ಅಭ್ಯಾಸ ಬಲದಂತೆ ರೆಟ್ರಾಸ್ಪೆಕ್ಟಿವಾಗಿ ಹಿಂದಿನ ತಾರೀಖಿನಿಂದ ಜಾರಿಗೊಳಿಸುವುದನ್ನು ನೋಡುತ್ತಿದ್ದೇವೆ. ಈ ರೀತಿ ಆಗಬಾರದು. ಯಾವ ತೆರಿಗೆ ಹಾಕಿದರೂ ಪ್ರಾಸ್ಪೆಕ್ಟಿವಾಗಿ ಹಾಕಬೇಕು. ಆಯವ್ಯಯ ಪತ್ರದ ೯೧ನೇ ಪ್ಯಾರಾದಲ್ಲಿ ಕಳೆದ ವರ್ಷ ಸದನ ಅನುಮೋದನೆ ನೀಡಿರುವ ಮೂರು ತೆರಿಗೆ ವಿಧೇಯಕಗಳಿಗೆ ರಾಜ್ಯಪಾಲರ ಅನುಮೋದನೆ ಇನ್ನೂ ದೊರೆಯದಿರುವುದರಿಂದ ಈ ಕ್ರಮಗಳನ್ನು ಕಾರ್ಯರೂಪಕ್ಕೆ ತರಲು ನಮಗೆ ಸಾಧ್ಯವಾಗಲಿಲ್ಲ ಎಂದು ವಿವರಣೆ ಕೊಟ್ಟಿದ್ದಾರೆ. ಎಂಟ್ರಿ ಟ್ಯಾಕ್ಸ್ ವಗೈರೆ ಏನೇನು ತಿದ್ದುಪಡಿ ಮಾಡಿದ್ದೇವೆ ಅದನ್ನು ಹಿಂದಿನ ತಾರೀಖಿನಿಂದ ಜಾರಿಗೆ ತರುವುದು ಆಗಬಾರದು. ಅದನ್ನು ಪ್ರಾಸ್ಪೆಕ್ಟಿವ್ ತಾರೀಖಿನ ಜಾರಿಗೆ ಕೊಡಬೇಕು. ಸೇಲ್ಸ್ ಟ್ಯಾಕ್ಸ್ ರಿಜಿಸ್ಟ್ರೇಷನ್‌ಗೆ ೫೦ ಸಾವಿರ ರೂಪಾಯಿಗಳವರೆಗೆ ವಿನಾಯಿತಿ ಕೊಟ್ಟಿದ್ದೀರಿ. ಅದನ್ನು ೫೦ ಸಾವಿರ ರೂಪಾಯಿಯಿಂದ ಒಂದು ಲಕ್ಷ ರೂಪಾಯಿಗಳವರೆಗೆ ೧೦೦ ರೂಪಾಯಿ ವಸೂಲು ಮಾಡಿ ೧ ಲಕ್ಷ ರೂಪಾಯಿಗಿಂತ ಮೇಲೆ ೨೦೦ ರೂಪಾಯಿ ವಸೂಲು ಮಾಡಿದರೆ ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಅನುಕೂಲವಾಗಬಹುದು. ಹೋಟೆಲುಗಳ ಬಗ್ಗೆ ಈಗಾಗಲೇ ತಮ್ಮ ಹತ್ತಿರ ಹೇಳಿದ್ದೇನೆ. ಹೋಟೆಲ್ ಉದ್ಯಮವನ್ನು ಇತರ ಉದ್ಯೋಗದಂತೆ ಕನ್‌ಸಿಡರ್ ಮಾಡಬಾರದು. ಅದಕ್ಕೆ ಎರಡು ಲಕ್ಷ ರೂಪಾಯಿಗಳವರೆಗೆ

ವಹಿವಾಟಿಗೆ ವಿನಾಯಿತಿ ನೀಡಬೇಕು. ಇಲ್ಲದಿದ್ದರೆ ಒಟ್ಟಾಗಿ ೫೦೦ ರೂಪಾಯಿ ಅಥವಾ ಎಷ್ಟಾದರೂ ಫಿಕ್ಸ್ ಮಾಡಿ ತೆಗೆದುಕೊಳ್ಳಬಹುದು. ಇನ್ನು ಮದ್ದುಗಳ ಬಗ್ಗೆ ಹೇಳುವುದಾದರೆ ಇದು ಅತ್ಯಾವಶ್ಯಕವಾದ ವಸ್ತು. ಇಡೀ ದಕ್ಷಿಣ ರಾಜ್ಯದಲ್ಲೇ ಕರ್ನಾಟಕ ರಾಜ್ಯದಲ್ಲಿ ಇರುವಷ್ಟು ಮಾರಾಟ ತೆರಿಗೆ ಔಷಧಿಗಳ ಮೇಲೆ ಇನ್ನೆಲ್ಲೂ ಇಲ್ಲ. ಶೇಕಡ ೮ರಷ್ಟು ತೆರಿಗೆ ಸರ್‌ಚಾರ್ಜ್ ಎಲ್ಲಾ ಸೇರಿ ಒಟ್ಟು ಶೇಕಡ ೧೧ರಷ್ಟು ತೆರಿಗೆ ಔಷಧಿಗಳ ಮೇಲೆ ತೆಗೆದುಕೊಳ್ಳುತ್ತಿದ್ದೀರಿ. ನೆರೆ ರಾಜ್ಯಗಳಲ್ಲಿ ನಾಲ್ಕೈದು ಪರ್ಸೆಂಟ್ ಇದೆ. ಮಾನ್ಯ ಆರೋಗ್ಯ ಸಚಿವರು ಈ ಬಗ್ಗೆ ಪ್ರಭಾವ ಬೀರಬೇಕಾಗಿ ಬರಬಹುದು. ಔಷಧದ ಮೇಲೆ ಮಾರಾಟ ತೆರಿಗೆಯನ್ನು ೫ ಪರ್ಸೆಂಟಿಗೆ ಮಿತಿಗೊಳಿಸಬೇಕೆಂದು ನಾನು ಕಳಕಳಿಯಿಂದ ಸಲಹೆ ಕೊಡುತ್ತಿದ್ದೇನೆ. ಅದರಂತೆ ಜನಸಾಮಾನ್ಯರು ಉಪಯೋಗ ಮಾಡುವಂಥ ಚಹಾ ಕಾಫಿ ಮೇಲೆ ಶೇಕಡ ೧೧ರಷ್ಟು ತೆರಿಗೆ ಹಾಕಿರುವುದನ್ನೂ ೫ ಪರ್ಸೆಂಟಿಗೆ ಇಳಿಸಿ ಸಿಂಗಲ್ ಪಾಯಿಂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಅರ್ಬನ್ ವಾಟರ್‌ಸಪ್ಲೈ ಸೆಸ್ ಎಂದು ೧೦ ಪರ್ಸೆಂಟ್ ಪ್ರಾಪರ್ಟಿ ಟ್ಯಾಕ್ಸ್ ಮೇಲೆ ತೆಗೆದುಕೊಳ್ಳುತ್ತೀರಿ. ಈ ರೀತಿ ತೆರಿಗೆ ವಸೂಲಿ ಮಾಡಿ ಒಂದು ಕೋಟಿ ರೂಪಾಯಿ ಎರಡು ಕೋಟಿ ರೂಪಾಯಿ ಕೊಟ್ಟರೆ ಅದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ತರಹ ಪ್ರಬಲವಾದ ಸಂಸ್ಥೆಯನ್ನಾಗಿ ಮಾಡಬೇಕು. ವಿದ್ಯುಚ್ಛಕ್ತಿ ಮಂಡಳಿಯವರು ಕರೆಂಟ್ ಕೊಡಬೇಕಾದರೆ ಯಾವರೀತಿ ಲೈನ್ ಹಾಕಿ ಕನೆಕ್ಷನ್ ಕೊಡುತ್ತಾರೋ ಅದೇರೀತಿ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ವಸತಿ ಪ್ರದೇಶದಲ್ಲಿ ಲೈನ್ ಹಾಕಿ ನೀರು ಮತ್ತು ಡ್ರೈನೇಜ್ ವ್ಯವಸ್ಥೆ ಮಾಡುವ ವ್ಯವಸ್ಥೆ ಮಾಡಬೇಕು. ಆ ರೀತಿ ಸ್ವತಂತ್ರವಾಗಿ ಕೆಲಸ ಮಾಡುವಂತೆ ಪ್ರಬಲವಾದ ಸಂಸ್ಥೆಯನ್ನಾಗಿ ಮಾಡಬೇಕು. ಇನ್ನೂ ಕಮರ್ಷಿಯಲ್ ಟ್ಯಾಕ್ಸ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಸೇಲ್ಸ್ ಟ್ಯಾಕ್ಸ್ ಕ್ವಾರ್ಟರ್ಲಿ ಬುಲೆಟಿನ್ ಎಂದು ಮೊದಲು ಸರ್ಕಾರದವರು ಹೊರತರುತ್ತಿದ್ದರು. ಇದರಲ್ಲಿ ತೆರಿಗೆಗೆ ಸಂಬಂಧಪಟ್ಟಂತೆ ನೋಟಿಫಿಕೇಷನ್‌ಗಳು, ಆರ್ಡರ್‌ಗಳು, ರೆಗ್ಯುಲೇಷನ್‌ಗಳು ಬರುತ್ತಿತ್ತು. ಅದು ಈಗ ನಿಂತಿದೆ. ೧೯೮೦ನೇ ಇಸವಿಯಿಂದ ಇದು ಬರುತ್ತಿಲ್ಲ. ಇದರಿಂದ ಜನಸಾಮಾನ್ಯರಿಗೆ ಅದರಲ್ಲೂ ಮುಖ್ಯವಾಗಿ ಈ ಸಂಬಂಧವಾಗಿ ಕೆಲಸ ಮಾಡುವವರಿಗೆ ತೊಂದರೆಯಾಗಿದೆ. ಅದೇರೀತಿ ಗೌರ್ನಮೆಂಟ್ ಪಬ್ಲಿಕೇಷನ್ ಕೂಡ ೧೯೭೬ನೇ ಇಸವಿಯಿಂದ ನಿಂತಿದೆ. ಸರ್ಕಾರಿ ಪ್ರಕಟಣೆಗಳು, ನೋಟಿಫಿಕೇಷನ್‌ಗಳು ವರ್ಷಕ್ಕೊಮ್ಮೆ ಪ್ರಕಟ ಮಾಡುವ ಪದ್ಧತಿ ಹಿಂದೆ ಇದ್ದು ಅದನ್ನು ನಿಲ್ಲಿಸಿದ್ದಾರೆ. ಈ ರೀತಿ ಅನ್ಯಾಯವಾಗಿದೆ ಎಂದು ಯಾರಾದರೂ ಕ್ಲಾರಿಫಿಕೇಷನ್ ಕೇಳಿದರೆ ಕ್ಲಾರಿಫಿಕೇಷನ್ ಯಾರು ಕೊಡಬೇಕು, ಅದು ಯಾರ ಜವಾಬ್ದಾರಿ ಎಂಬುದಕ್ಕೆ ನಿಯಮ ಇಲ್ಲವಾಗಿದೆ. ಮುಖ್ಯವಾಗಿ ರಾಜ್ಯದಲ್ಲಿ ಸೇಲ್ಸ್‌ಟ್ಯಾಕ್ಸ್ ವಸೂಲಾತಿಗೆ ತೊಂದರೆಯಾಗಿದೆ.

ಮಾರಾಟ ತೆರಿಗೆ ಬಗ್ಗೆ ಇಷ್ಟು ಮಾತ್ರ ಹೇಳಿ ಇನ್ನು ಆರೋಗ್ಯ ಇಲಾಖೆ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಇವತ್ತು ಈ ಖಾತೆಯನ್ನು ಮಾನ್ಯ ಸಿಂಧ್ಯಾ ಅವರು ಬಹಳ ಉತ್ಸಾಹದಿಂದ ನಿರ್ವಹಿಸುತ್ತಿದ್ದಾರೆ. ಬಹುಶಃ ಇವರು ರಾಜ್ಯ ಮಂತ್ರಿಗಳಾಗಿದ್ದರೂ ಸಹಾ ಇವರ ಪ್ರಭಾವ ಬಹಳ ಜೋರು ಇದೆ ಎಂದು ನನಗನ್ನಿಸುತ್ತದೆ. ೧೯೮೩–೮೪ರಲ್ಲಿ ಈ ಖಾತೆಗೆ ಎಂದರೆ ಮೆಡಿಕಲ್ ಬ್ರಾಂಚ್, ಫ್ಯಾಮಿಲಿ ವೆಲ್‌ಫೇರ್, ಪಬ್ಲಿಕ್ ಹೆಲ್ತ್, ಮೆಡಿಕಲ್ ಎಜುಕೇಷನ್, ಇಂಡಿಯನ್ ಸಿಸ್ಟಮ್, ಡ್ರಗ್ ಕಂಟ್ರೋಲ್—ಇವೆಲ್ಲಕ್ಕೂ ಸೇರಿ ೭೬.೪೯ ಕೋಟಿ ರೂಪಾಯಿ ಇಟ್ಟಿದ್ದರೆ, ಮುಂದಿನ ವರ್ಷದ ಚಿತ್ರವನ್ನು ನೀವು ನೋಡಬೇಕಾಗುತ್ತದೆ. ಈ ಖಾತೆಗೆ ಮುಂದಿನ ವರ್ಷ ೧೩೨.೧೫ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಇದು ಬಹಳ ಸ್ವಾಗತಾರ್ಹವಾದ ಅಂಶ. ಅನೇಕ ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ೧೩೬ ಪಿ.ಎಚ್. ಸೆಂಟರ್‌ಗಳನ್ನು, ಸುಮಾರು ೭೮ ಘಟಕಗಳನ್ನು ತೆರೆಯುವುದೇ ಅಲ್ಲದೆ ಮೆಟರ್ನಿಟಿ ಹಾಸ್ಪಿಟಲ್‌ಗಳನ್ನು ತೆರೆಯುವವರಿದ್ದೀರಿ. ಪ್ರಥಮ ಬಾರಿಗೆ ಸೂಪರ್‌ಸ್ಪೆಷಾಲಿಟಿ ಮಾಡುತ್ತಿದ್ದೀರಿ ಎಂದು ಹೇಳುತ್ತೇನೆ. ಕಾರ್ಡಿಯಾಲಜಿ ಯೂನಿಟ್‌ನ್ನು, ಸಂಜಯಗಾಂಧಿ ಆಕ್ಸಿಡೆಂಟ್ ಟ್ರೀಟ್‌ಮೆಂಟ್ ಹಾಸ್ಪೆಟಲ್‌ನ್ನು ರೆಡ್ಯಾ ಮಾಡಿ ಏನು ಕೆಲಸ ಮಾಡುತ್ತಿದ್ದಾರೆ ಅದನ್ನು ನೋಡುವುದಾದರೆ ಇವರಿಗೆ ಸ್ಟೇಟ್ ರ್‍ಯಾಂಕ್ ಕೊಡುವ ಬದಲು ಸಚಿವಸಂಪುಟ ದರ್ಜೆಯ ಒಂದು ಮಂತ್ರಿ ಪದವಿಯನ್ನು ಕೊಡಬೇಕಾಗುತ್ತದೆ. ಈ ವಿಷಯ ಮಾನ್ಯ ಮುಖ್ಯ ಮಂತ್ರಿಯವರಿಗೆ ಸೇರಿದ್ದು. ಇವರು ಮಂತ್ರಿಗಳಾಗಿ ಏನು ಕೆಲಸ ಮಾಡಿದ್ದಾರೆ ಆ ಬಗ್ಗೆ ನಾವು ಸಂತೋಷಪಡುತ್ತೇವೆ. ಈಗ ಸಮಯದ ಅಭಾವ ಇರುವುದರಿಂದ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ.

ಶ್ರೀ ಹನುಮಂತರಾವ್ ದೇಸಾಯಿ.—ನನಗೆ ಈ ಮಂತ್ರಿ ಪದವಿಯೇ ಬೇಡ, ಸಭ್ಯ ಇದನ್ನು ಬಿಟ್ಟರೆ ಸಾಕು ಎಂದು ಮಾನ್ಯ ಸಿಂಧ್ಯಾ ಅವರು ಹೇಳುತ್ತಿದ್ದಾರೆ. ಆದರೆ ತಾವು ಅವರನ್ನು ಕ್ಯಾಬಿನೆಟ್ ದರ್ಜೆಗೆ ಏರಿಸುವ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ವಿ. ಎಸ್. ಆಚಾರ್ಯ.—ಮಾನ್ಯ ಸಭಾಧ್ಯಕ್ಷರೆ, ಇವತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ಆರೋಗ್ಯ ಖಾತೆಯು ಪುಸ್ತಕದಲ್ಲಿ ವಿಸ್ತಾರವಾಗಿ ಕೊಟ್ಟಿದ್ದಾರೆ. ಹಿಂದೆ ನಮ್ಮ ರಾಜ್ಯದಲ್ಲಿ ಏನು ಕಾಲರ, ಸಿಡುಬು ರೋಗಗಳು ಕಾಣಿಸಿಕೊಳ್ಳುತ್ತಿದ್ದವು ಅವು ವರ್ಷ ದಿಂದ ವರ್ಷಕ್ಕೆ ಕಡಿಮೆ ಆಗುತ್ತಾ ಬಂದಿವೆ. ಇವುಗಳನ್ನು ತಡೆಗಟ್ಟಲು ಕೇಂದ್ರದವರೂ ಸಹ ನೆರವನ್ನು ಕೊಡುತ್ತಾ ಬಂದಿರುತ್ತಾರೆ. ಇವತ್ತು ಏನು ಮಂಗನ ಕಾಯಿಲೆ ನಮ್ಮ ರಾಜ್ಯದಲ್ಲಿ ಕಾಣಿಸಿಕೊಂಡಿದೆ ಅದರ ಬಗ್ಗೆ ನಾವು ಗಂಭೀರ ವಾಗಿ ಯೋಚನೆ ಮಾಡಬೇಕಾಗಿದೆ. ಈ ಒಂದು ಕಾಯಿಲೆಯ ಇತಿಹಾಸವನ್ನು ನೋಡುವುದಾದರೆ ೧೯೩೭ರಲ್ಲಿ ಈ ಕಾಯಿಲೆ ರಷ್ಯಾ ದೇಶದಲ್ಲಿ ಕಾಣಿಸಿಕೊಂಡಿತು. ಈ ಒಂದು ಕಾಯಿಲೆಗೆ ಆಗಿನಿಂದಾ ಬೇರೆ ಬೇರೆ ರೀತಿಯ ಲಸಿಕೆಗಳನ್ನು, ಇನ್ನಿತರ ಔಷಧಿಗಳನ್ನು ತಯಾರಿಸುತ್ತಾ ಬರಲಾಯಿತು. ಈ ಕಾಯಿಲೆ ತಡೆಗಟ್ಟುವ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಈ ಒಂದು ಕಾಯಿಲೆ ಶಿವಮೊಗ್ಗದಲ್ಲಿ ೧೯೫೭ ರಿಂದ ಕಾಣಿಸಿಕೊಳ್ಳುತ್ತಿದೆ. ಆದರೆ ಈ ವರ್ಷ ಮಾರ್ಚ್ ೧೫ ರೊಳಗೆ ಬೆಳ್ತಂಗಡಿಯಲ್ಲಿ ಸುಮಾರು ೧೦೫ ಜನರನ್ನು ಬಲಿ ತೆಗೆದುಕೊಂಡಿದೆ. ಇನ್ನು ಅನಧಿಕೃತವಾಗಿ ಹೇಳ ಬೇಕೆಂದರೆ, ಟೈಫಾಯಿಡ್, ಯೂರಿನರಿ ಇನ್‌ಫೆಕ್ಷನ್ ಎಂದು ಹೇಳಿ ಸುಮಾರು ೩೦೦ ಜನ ಸತ್ತ ವರ್ತ ಮಾನ ಬಂದಿದೆ. ಇನ್ನು ಪಟ್ರಮೆ ಗ್ರಾಮದಲ್ಲೂ ಕೂಡಾ ಸುಮಾರು ೭೭ ಜನ ಸತ್ತಿದ್ದಾರೆ. ಕಾಡು ಇವತ್ತು ಎಲ್ಲಿ ಜಾಸ್ತಿ ಇದೆ ಅಲ್ಲಿ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. ನಮ್ಮ ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಶೇಕಡಾ ೮೦ ರಷ್ಟು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇಕಡಾ ೬೦ರಷ್ಟು ಹಾಗೂ ಶಿವ ಮೊಗ್ಗ ಭೂ ಭಾಗದಲ್ಲಿ ಸುಮಾರು ಶೇಕಡಾ ೩೦ರಷ್ಟು ಅರಣ್ಯ ಇದೆ. ಇವತ್ತು ಚಿಕ್ಕಮಂಗಳೂರಿನಲ್ಲೂ ಕೂಡ ಕಾಯಿಲೆ ಹರಡುತ್ತಿದೆ. ಈ ಒಂದು ವಿಷಯವನ್ನು ಗಂಭೀರವಾಗಿ ಯೋಚನೆ ಮಾಡದೇ ಇದ್ದರೆ ಏನಾದೀತು ? ಈ ಕಾಯಿಲೆ ಇವತ್ತು ನಾಲ್ಕೈದು ಜಿಲ್ಲೆಗಳಿಗೆ ಪಸರಿಸಿದರೆ ಇದನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಎಲ್ಲೆಲ್ಲಿ ಈ ಕಾಯಿಲೆ ಕಾಣಿಸಿಕೊಂಡಿದೆ ಅಲ್ಲೆಲ್ಲಾ ಸ್ಪ್ರೇಯಿಂಗ್ ಆಪರೇಷನ್ ಮಾಡಬೇಕಾಗಿದೆ. ಈ ಕೆಲಸವನ್ನು ಹಿಂದೆಯೇ ಮಾಡಿದ್ದರೆ ಎಷ್ಟೋ ಜನರನ್ನು ಉಳಿಸಬಹುದಾಗಿತ್ತು. ಇನ್ನು ಶಿವಮೊಗ್ಗದ ವ್ಯಾಕ್ಸಿನೇಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ಬೇಕಾದಷ್ಟು ಅಡಿಕ್ವೇಟ್ ಲಸಿಕೆ ಇದೆ. ಇನ್ನು ಈ ಒಂದು ಕಾಯಿಲೆ ಬಗ್ಗೆ ತಿಳಿದುಬರಲು ಇಲ್ಲಿಂದ ಏನು ಜನರನ್ನು ಕಳುಹಿಸುತ್ತೀರಿ ಅವರು ಬಂದ ತಕ್ಷಣ ರಿಟೈರ್ ಆಗುವವರಿದ್ದಾರೆ. ಅಂತಹವರನ್ನು ಏತಕ್ಕೆ ಕಳುಹಿಸುತ್ತೀರಿ ! ಅವರು ಏನು ಪಿಕ್‌ನಿಕ್‌ಗೆ ಹೋಗಿ ಬರುತ್ತಾರೆಯೇ ? ಇವತ್ತು ಯಾರು ಐ.ಎಂ.ಎ.ನಲ್ಲಿ ತಜ್ಞರು ಇದ್ದಾರೆ ಅವರನ್ನು ಔಷಧಿಗಳನ್ನು ತಿಳಿದುಕೊಂಡುಬರಲು ಕಳುಹಿಸಿಕೊಡಿ. ಇನ್ನು ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಂಗಳೂರು, ಉತ್ತರ ಕನ್ನಡ ಜಿಲ್ಲೆಯಲ್ಲಿ ಏನು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿದ್ದೀರಿ ಎಂಬ ಬಗ್ಗೆ ಹೇಳಿದ್ದಿರಿ. ಹಾಗೂ ಅಲ್ಲಿ ಏನು ಸಂಚಾರಿ ಘಟಕ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ ಅದು ಇವತ್ತು ಸಾಕಾಗುವುದಿಲ್ಲ. ಆ ಘಟಕ ಸಾಗರದಲ್ಲಿ ಒಂದು ಬಿಂದು ವಿನ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಇದು ಏನೇನೂ ಸಾಲುವುದಿಲ್ಲ. ಇವತ್ತು ಯಾವ ಯಾವ ಹೆಡ್ಸ್ ಆಫ್ ಅಕೌಂಟ್ಸ್‌ನಲ್ಲಿ ಇದಕ್ಕೆ ಅನುಕೂಲ ಪಡೆಯುವುದು ಇದೆ ಅದನ್ನೆಲ್ಲಾ ಪಡೆದುಕೊಂಡು ಈ ಬಗ್ಗೆ ಯುದ್ಧದೋಪಾದಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಆ ಕಡೆಯ ಜನರಲ್ಲಿ ಈ ಕಾಯಿಲೆ ಬಗ್ಗೆ ಭಯ ಜಾಸ್ತಿಯಾಗಿದೆ. ಈ ಒಂದು ಕಾಯಿಲೆಗೆ ಸಿಕ್ಕಿ ನರಳಿ ಅನಂತರ ಅವರು ಚೇತ ರಿಸಿಕೊಂಡ ನಂತರ ಕೆಲವು ತಿಂಗಳು ಕೆಲಸ ಮಾಡಲು ಆಗುವುದಿಲ್ಲ. ಇಂತಹವರಿಗೆ ಪ್ರಧಾನ ಮಂತ್ರಿ ಯವರ ಪರಿಹಾರ ನಿಧಿಯಿಂದ ಹಣ ಬಂದಿರುತ್ತದೆ. ಇವತ್ತು ಯಾರಿಗೆ ಕಾಯಿಲೆ ಬಂದಿದೆ ಅವರಿಗೆ ರಿಲೀಫ್ ಕೊಡುವ ಬಗ್ಗೆ ಮಾನ್ಯ ಆರೋಗ್ಯ ಖಾತೆ ಮಂತ್ರಿಗಳು ಹೇಳಿದ್ದಾರೆ. ಇವತ್ತು ಆ ಕಾಯಿಲೆ ಯಿಂದ ಪಾರಾಗಿರುವವರಿಗೆ ಒಂದು ಸ್ಪಷ್ಟ ರೂಪ ಕೊಡಬೇಕಾಗಿದೆ. ಇವತ್ತು ಯಾವ ಕುಟುಂಬದಲ್ಲಿ ಸಂಪಾದನೆ ಮಾಡತಕ್ಕ ಒಬ್ಬ ಮನುಷ್ಯ ಇದ್ದ ಅಂತಹ ಮನುಷ್ಯ ಈ ಕಾಯಿಲೆಯಿಂದ ಸತ್ತಿದ್ದರೆ ಅವರ ಕುಟುಂಬದವರಿಗೆ ತಾವು ಪರಿಹಾರವನ್ನು ಕೊಡಬೇಕಾಗುತ್ತದೆ, ಇನ್ನು ಈ ಬಗ್ಗೆ ಇಷ್ಟು ಹೇಳಿ ದೊಡ್ಡ ದೊಡ್ಡ ಆಸ್ಪತ್ರೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಬೆಂಗಳೂರಿನಲ್ಲಿ ಬೌರಿಂಗ್, ವಿಕ್ಟೋರಿಯಾ, ಮೆಂಟಲ್ ಆಸ್ಪತ್ರೆಗಳು ಇವೆ. ಹಾಗೂ ಇನ್ನೂ ದೊಡ್ಡ ದೊಡ್ಡ ಆಸ್ಪತ್ರೆಗಳು

ಇವೆ. ಬೌರಿಂಗ್ ಆಸ್ಪತ್ರೆ ಬಗ್ಗೆ ನನಗೆ ಆದ ಅನುಭವದ ಬಗ್ಗೆ ನಾನು ಹೇಳಬೇಕೆಂದರೆ, ನನ್ನನ್ನು ನೋಡಲು ಒಬ್ಬರು ಶಾಸಕರ ಭವನಕ್ಕೆ ಬಂದಿದ್ದಾರೆ. ಅವರು ಅಲ್ಲಿ ಬಂದಾಗ ಅವರಿಗೆ ಗಿಡ್ಡಿನೆಸ್ ಬಂದು ಅಲ್ಲಿ ಇದ್ದ ಕನ್ನಡಿ ಮೇಲೆ ಬಿದ್ದು ಬಿಟ್ಟಿದ್ದಾರೆ. ಇದರಿಂದ ಅವರ ವೇನ್ ಕಟ್ ಆಗಿ ಬ್ಲೀಡಿಂಗ್ ಪ್ರಾರಂಭವಾಗಿದೆ. ಆತನ ಜೋಬಿನಲ್ಲಿ ನನ್ನ ಅಡ್ರೆಸ್ ಇದ್ದುದನ್ನು ಶಾಸಕರ ಭವನದಲ್ಲಿ ಇದ್ದ ನೌಕರ ವರ್ಗದವರು ಅವರನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಿದ್ದರು. ನಾನು ವಿಷಯವನ್ನು ತಿಳಿದು ಅಲ್ಲಿಗೆ ಹೋಗುವಷ್ಟರಲ್ಲಿ ಅಲ್ಲಿ ಡಾಕ್ಟರ್ ಅವರ ಬ್ಲಡ್ ಗ್ರೂಪ್ ಚೆಕ್ ಮಾಡಿ ಅವರಿಗೆ ಏನೇನನ್ನು ವ್ಯವಸ್ಥೆ ಮಾಡಬೇಕೋ ಅದನ್ನೆಲ್ಲಾ ಮಾಡಿದ್ದರು. ಇದು ಒಂದು ಚಿತ್ರ. ಆದರೆ ಇನ್ನೊಂದು ಚಿತ್ರ ಈ ರೀತಿ ಇದೆ. ಕಳೆದ ತಿಂಗಳು ನಮ್ಮ ಕಡೆಯಿಂದ ಎಂದರೆ, ಶ್ರೀ ವಸಂತ ಸಾಲಿಯಾನಾ ಅವರ ಕ್ಷೇತ್ರದಿಂದ ಕೆಲವು ಶಾಲಾ ಮಕ್ಕಳು ಬೆಂಗಳೂರಿಗೆ ವಿಹಾರಕ್ಕೆಂದು ಬಂದಿದ್ದಾರೆ. ಅವರು ವಿಧಾನ ಸಭೆ ನೋಡಬೇಕೆಂಬ ಆಸೆ ಇಟ್ಟುಕೊಂಡು ಬಸ್ ಮಾಡಿಕೊಂಡು ಬಂದಿದ್ದಾರೆ. ಆದರೆ ಆ ಬಸ್ ಬೆಂಗಳೂರಿಗೆ ಬರುವುದಕ್ಕಿಂತಾ ಮುಂಚೆ ನೆಲಮಂಗಲದ ಬಳಿ ಒಂದು ಲಾರಿಗೆ ಬಡಿದು ಅಪಘಾತಕ್ಕೆ ತುತ್ತಾಗಿದೆ. ಹಾಗೂ ಆಗ ಬಸ್‌ನಲ್ಲಿ ಇದ್ದ ಸುಮಾರು ೪೦ ಜನ ಮಕ್ಕಳಿಗೆ ಹಾಗೂ ೩ ಜನ ಉಪಾಧ್ಯಾಯರಿಗೆ ಗಂಭೀರವಾದ ಪೆಟ್ಟು ಬಿದ್ದು ಹೆಡ್ ಇಂಜ್ಯುರಿ ಕೂಡಾ ಆಗಿರುತ್ತದೆ. ನಾನು ಮತ್ತು ಮಾನ್ಯ ಶ್ರೀ ಡಿ. ವಿ. ಶೆಟ್ಟಿಯವರು ತಕ್ಷಣ ಅಲ್ಲಿಗೆ ಧಾವಿಸಿದೆವು. ನೆಲಮಂಗಲದ ಜನ ಹಾಗೂ ಅಲ್ಲಿನ ಪೋಲೀಸರು ಅಪಘಾತ ನಡೆದ ಸ್ಥಳಕ್ಕೆ ಬಂದು ಆ ಮಕ್ಕಳ ಶುಶ್ರೂಷೆ ಮಾಡಿದ್ದಾರೆ. ಹಾಗೂ ಗಂಭೀರ ಪೆಟ್ಟು ಬಿದ್ದಿದ್ದ ೩ ಜನರು ಎಂದರೆ ಒಬ್ಬರು ಮಾಸ್ಟರ್, ಒಬ್ಬರು ಟೀಚರ್ ಹಾಗೂ ಇನ್ನೊಬ್ಬರಿಗೆ ತಲೆಗೆ ಹೆಚ್ಚು ಪೆಟ್ಟು ಬಿದ್ದಿದ್ದರಿಂದ ಅವರಿಗೆ ವಿಕ್ಟೋರಿಯಾ ಆಸ್ಪತ್ರೆಗೆ ಸುಮಾರು ೯ ಗಂಟೆ ಸಮಯದಲ್ಲಿ ಕರೆತರಲಾಗಿದೆ. ಆದರೆ ಅಲ್ಲಿ ಡಾಕ್ಟರ್‌ಗಳು ಬಂದು ಇವರನ್ನು ಸರಿಯಾದ ಸಮಯಕ್ಕೆ ಬಂದು ನೋಡಿಯೇ ಇರುವುದಿಲ್ಲ.

ಅಲ್ಲಿ ಅವರು ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿದರು. ಮಾರನೆಯ ದಿವಸ ಮಧ್ಯಾಹ್ನದವರೆಗೆ ಅವರ ಬಗ್ಗೆ ಯಾವ ಟ್ರೀಟ್‌ಮೆಂಟ್ ಆಗಲಿಲ್ಲ. ಅವರು ಬೇಸರಪಟ್ಟುಕೊಂಡು ಪ್ರೈವೇಟ್ ಹಾಸ್ಪಿಟಲ್‌ಗೆ ಹೋಗಿ ಟ್ರೀಟ್‌ಮೆಂಟ್ ಕೊಡಿಸಬೇಕಾಯಿತು. ಅಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾವ ರೀತಿ ನಡೆಯುತ್ತದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು. ಅಲ್ಲಿ ನನ್ನ ಸಹೋದ್ಯೋಗಿಗಳು ಇದ್ದಾರೆ. ಆದರೆ ಅಲ್ಲಿರತಕ್ಕವರಿಗೆ ಯಾವ ರೀತಿ ಮಾನವೀಯತೆ ಇಲ್ಲ ಎಂದು ಇವೊತ್ತು ಹೇಳಬೇಕಾಗಿದೆ. ಆದ್ದರಿಂದ ಇದರ ಬಗ್ಗೆ ರೀಅರ್‌ಗ್ನೈಸ್ ಮಾಡಬೇಕು. ಯಾರು ಅಲ್ಲೇ ಇರಬೇಕೆಂದು ಇಷ್ಟಪಟ್ಟಿದ್ದಾರೋ ಅಂತಹವರಿಗೆ ಕಂಪ್ಯೂಟರ್‌ನ್ನಾದರೂ ಬಳಕೆ ಮಾಡಿ, ಟರ್ನ್ ಬೈ ಟರ್ನ್ ಬೇರೆ ಕಡೆಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಇನ್ನು ೫ ಸಾವಿರ ಟೆನೆಮೆಂಟ್ಸ್ ತೆಗೆದು ಆಸ್ಪತ್ರೆಯನ್ನು ಬೃಹತ್ ಮಾಡುವುದು ಗೆಜೆಟ್ ನೋಟಿಫಿಕೇಷನ್‌ನಲ್ಲಿ ಲ್ಯಾಂಡ್ ಅಕ್ವಿಸಿಷನ್‌ಗೆ ಎಲ್ಲಾ ಬಂದಿದೆ ಎಂದು ತಿಳಿದಿದ್ದೇವೆ. ಬೇರೆ ದೇಶಗಳಲ್ಲಿ ರೆಫರಲ್ ಆಸ್ಪತ್ರೆ ಅಡ್ಮಿನಿಸ್ಟ್ರೇಷನ್ ಹೇಗೆ ಇದೆ ಅಂದರೆ ಎಷ್ಟೇ ದೊಡ್ಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇದ್ದರೂ ೫೦೦ ಬೆಡ್‌ಗಿಂತಲೂ ಹೆಚ್ಚು ಇರುವುದಿಲ್ಲ. ಅವರು ನಾಲ್ಕಾರು ಕಡೆ ಆಸ್ಪತ್ರೆಗಳನ್ನು ಕಟ್ಟಿಸಿ ಎಲ್ಲಾ ಕಡೆ ಹಂಚಿಕೆಯಾಗುವ ರೀತಿ ಮಾಡಿದ್ದಾರೆ ನಮ್ಮಲ್ಲಿ ಯಾರಿಗಾದರೂ ಹೃದಯಾಘಾತ ಆಯಿತು ಅಂದರೆ ಅವರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಮುಟ್ಟಿಸಲಿಕ್ಕೆ ಕಷ್ಟ ಇದೆ. ಆಕ್ಸಿಡೆಂಟ್ ಆದವರಿಗೆ ತೆಗೆದುಕೊಂಡು ಹೋಗಲಿಕ್ಕೆ ನಮ್ಮಲ್ಲಿ ಸರಿಯಾದ ಅಪ್ರೋಚ್ ರಸ್ತೆ ಇಲ್ಲ. ಆದ್ದರಿಂದ ನಗರದಲ್ಲಿ ನಾಲ್ಕೈದು ಕಡೆಗಳಲ್ಲಿ ಸುಸಜ್ಜಿತವಾದ ಆಸ್ಪತ್ರೆಗಳನ್ನು ಕಟ್ಟಿಸಿ ಆ ಸಿಬ್ಬಂದಿಗೆ ಅಲ್ಲಿಯೇ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು. ತಾವು ಎರಡು ಸಾವಿರ ಬೆಡ್‌ನಷ್ಟು ಆಸ್ಪತ್ರೆ ಮಾಡುತ್ತೇವೆ ಅಂದರೆ ಅದನ್ನು ನಡೆಸಲಿಕ್ಕೆ ಕಷ್ಟವಾಗುತ್ತದೆ. ಅಲ್ಲಿ ಅನ್‌ಹೈಜೆನಿಕ್ ಕಂಡೀಷನ್ ಕ್ರಿಯೇಟ್ ಆಗುತ್ತದೆ, ಇನ್‌ಫೆಕ್ಷನ್ ಆಗುತ್ತದೆ, ಇದರಿಂದ ಸೆಪ್ಟಿಕ್ ಆಗುತ್ತದೆ, ಇದರಿಂದ ಗಂಡಾಂತರವಾಗುತ್ತದೆ. ಇದನ್ನೆಲ್ಲಾ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಖಾಸಗಿ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಬೌರಿಂಗ್ ಆಸ್ಪತ್ರೆಯಲ್ಲಿ ಅವಕಾಶ ಕೊಡುತ್ತಿರುವುದರಿಂದ ಪೋಸ್ಟ್ ಗ್ರಾಜ್ಯುಯೇಟ್‌ಗಳಿಗೆ ತೊಂದರೆಯಾಗುತ್ತಿದೆ ಎನ್ನುವ ವಿಚಾರ ಇದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಇನ್ನು ಸ್ಟೈಫಂಡ್ ಬಗ್ಗೆ ಯಾವ ವರ್ಷದಿಂದ ಜಾರಿಗೆ ಬರುತ್ತದೆ ಎನ್ನುವುದನ್ನು ತಿಳಿಸಬೇಕು, ಇದು ಮೊನ್ನೆ ಜನವರಿಯಿಂದಲೇ ಜಾರಿಗೆ ಬರಬೇಕು. ತಾವು ಇದರಲ್ಲಿ ಉದಾರತೆ ತೋರಿಸಬೇಕು. ಅವರು ನಿಮ್ಮ ಗವರ್ನಮೆಂಟ್ ಹಾಸ್ಪಿಟಲ್‌ನಲ್ಲಿ ಹೌಸ್ ಸರ್ಜನ್

ಷಿಪ್ ಮಾಡುತ್ತಿರುತ್ತಾರೆ ಆದ್ದರಿಂದ ಕೊಡಬೇಕಾಗುತ್ತದೆ. ಇನ್ನು ಫ್ಯಾಮಿಲಿ ಪ್ಲಾನಿಂಗ್ ಇದು ನ್ಯಾಷನಲ್ ಪ್ರೋಗ್ರಾಮ್. ಈ ಸದನದಲ್ಲಿ ೭ ಜನ ಡಾಕ್ಟರು ಒಬ್ಬರು ಹೆಲ್ತ್ ಮಿನಿಸ್ಟರ್ ಇದ್ದೇವೆ, ಆದ್ದರಿಂದ, ಇದರ ಬಗ್ಗೆ ಹೇಳದೇ ಇದ್ದರೆ ಕೊಂದರೆಯಾಗುತ್ತದೆ. ಇದು ರಾಷ್ಟ್ರಮಟ್ಟದಲ್ಲಿ ಒಪ್ಪಿರತಕ್ಕ ಯೋಜನೆ. ಯಾರು ಎಷ್ಟೇ ದೊಡ್ಡ ಸ್ಪೆಷಲಿಸ್ಟ್ ಹೇಳಿದರೂ ಮಹಿಳೆಯರು, ಪುರುಷರು, ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದರೆ ಅವರು ತಮ್ಮ ಕುಟುಂಬದ ಡಾಕ್ಟರನ್ನು ಕೇಳದೇ ನಿರ್ಣಯ ತೆಗೆದು ಕೊಳ್ಳುವುದಿಲ್ಲ. ಇದು ಒಂದು ತರಹ ಸೈಕಾಲಜಿ ಇದ್ದ ಹಾಗೆ ಇದನ್ನು ನಾವು ರೋಗಿಗಳಿಂದ ತಿಳಿದು ಕೊಂಡಿದ್ದೇವೆ. ಆದ್ದರಿಂದ ನಾವು ಇದರಲ್ಲಿ ಫ್ಯಾಮಿಲಿ ಡಾಕ್ಟರ್ ಇನ್‌ವಾಲ್ವ್ ಮಾಡಬೇಕು. ಫ್ಯಾಮಿಲಿ ಪ್ಲಾನಿಂಗ್ ಯೋಜನೆ ಆಗದದ ಮೇಲೆ ಇರಲಿಕ್ಕೆ ಕಾರಣ ಏನು ? ಜನರಲ್ ಪ್ರಾಕ್ಟೀಸ್‌ನಲ್ಲಿರತಕ್ಕ ಡಾಕ್ಟರ್‌ಗಳನ್ನು ಇನ್‌ವಾಲ್ವ್ ಮಾಡಬೇಕು. ಮಣಿಪಾಲ್‌ನಲ್ಲಿ ಒಬ್ಬರು ತಜ್ಞ ವೈದ್ಯರು ಪದ್ಮನಾಭ ರಾವ್ ಎಂದು ಇದ್ದಾರೆ. ಅವರು ಸಜೆಷನ್ ಮಾಡಿರುತ್ತಾರೆ, ಅವರು ಹೇಳಿದ ಮೇಲೂ ನಮ್ಮಲ್ಲಿ ಬಂದು ಕೇಳುತ್ತಾರೆ. ನಾವು ಅವರು ಹೇಳಿರುವುದು ಸರಿ ಎಂದು ಹೇಳಿದರೆ ಧೈರ್ಯವಾಗಿ ಮಾಡಿಸಿ ಕೊಳ್ಳುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಫ್ಯಾಮಿಲಿ ಫಿಜಿಷಿಯನ್ ಇನ್‌ವಾಲ್ವ್ ಮಾಡಬೇಕು. ನೆನ್ನೆ ಮೈಸೂರಿನಲ್ಲಿ ಒಬ್ಬರು ಲೇಡಿ ಹೆಲ್ತ್ ವಿಸಿಟರ್ ಬೋರಮ್ಮ ಎನ್ನುವವರಿಗೆ ಕರೆದುಕೊಂಡು ಹೋಗಿ ಲೆಪ್ರೊಸ್ಕೋಪಿಕ್ ಶಸ್ತ್ರ ಚಿಕಿತ್ಸೆ ಮಾಡಿಸಿದ್ದಾರೆ ಅದು ಟೈಮ್ ಆಫ್ ಡೆಕ್ಕನ್‌ನಲ್ಲಿ ಬಂದಿದೆ. ಆಕೆಗೆ ಇನ್ನೂ ಒಂದು ಮಗುವಿನ ಡೆಲಿವರಿ ಕೂಡ ಆಗಿಲ್ಲ. ಆಕೆಗೆ ಶಸ್ತ್ರಚಿಕಿತ್ಸೆ ಮಾಡಿರುವ ಬಗ್ಗೆ ಸರ್ಕಾರಕ್ಕೆ ಕಂಪ್ಲೇಂಟ್ ಬಂದಿದೆ. ಇನ್ನೊಂದು ವಿಚಾರ ಹೇಳಬೇಕೆಂದರೆ, ನಮ್ಮ ಬಂಟವಾಳದ ಶಿವರಾವ್ ಅವರು ಹೇಳಿದರು. ಬಂಟವಾಳ ಕ್ಷೇತ್ರದ ಪುಣಚ ಗ್ರಾಮದಲ್ಲಿ ಲೆಪ್ರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಆದ ಮೇಲೆ, ಈಗ ಆಕೆ ೫ ತಿಂಗಳು ಗರ್ಭಿಣಿ ಆಗಿದ್ದಾಳೆ. ಇನ್ನು ಕೆಲವು ಕಡೆಗಳಲ್ಲಿ ಮಕ್ಕಳೇ ಇಲ್ಲದವರು ಹೊಟ್ಟೆನೋವು ಎಂದು ಆಸ್ಪತ್ರೆಗೆ ಹೋಗಿದ್ದಾಗ ಗುಣಪಡಿಸುತ್ತೇವೆಂದು ಆಪರೇಷನ್ ಮಾಡಿರುವಂತಹದ್ದು ಇದೆ. ಇದ ಒಂದು ದೇಶದ ಪ್ಲಾನಿಂಗ್ ಇದು ಯಶಸ್ವಿಯಾಗ ಬೇಕು. ಇದನ್ನು ಬಹಳ ಎಚ್ಚರಿಕೆಯಿಂದ ನಡೆಸಬೇಕೆಂದು ಹೇಳುತ್ತೇನೆ. ಇನ್ನು ಫಿಷರೀಸ್ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ೩೦೦ ಕಿಲೋಮೀಟರ್ ಕರಾವಳಿ ಇದೆ. ಮೀನುಗಾರಿಕೆ ಕ್ಷೇತ್ರ ವಿಸ್ತಾರ ವಾಗಿದೆ. ಇಂಟರ್‌ಕಾಂಟಿನೆಂಟಲ್ ಶೆಲ್‌ವರೆಗೂ ತಲುಪಿದ್ದೇವೆ. ಮೊದಲು ೧೨ ಮೈಲಿ ಮಾತ್ರ ಇತ್ತು ಈಗ ನೋಡಿದರೆ ಹೊಸದಾಗಿ ಮೀನುಗಾರಿಕೆ ಖಾತೆ ವಹಿಸಿಕೊಂಡಿರುವ ಮಂತ್ರಿಗಳಿಗೆ ಕರಾವಳಿ ಮೇಲೆ ಕೋಪ ಬಂದಿದೆ, ೭೮ ಕೋಟಿ ರೂಪಾಯಿ ಇನ್‌ಲ್ಯಾಂಡ್ ಫಿಷರೀಸ್‌ಗೆ ಇಟ್ಟು, ಕೋಸ್ಟಲ್ ಫಿಷರೀಸ್‌ಗೆ ೨೮ ಕೋಟಿ ರೂಪಾಯಿ ಇಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸ ಬೇಕೆಂದು ಹೇಳುತ್ತೇನೆ. ಇನ್ನು ನಮ್ಮಲ್ಲಿ ೨೫೦೦ ಮೆಕನೈಸಡ್ ಫಿಷಿಂಗ್ ಬೋಟ್‌ಗಳು ಇವೆ. ಮೀನುಗಾರಿಕೆ. ಪ್ರಬಲವಾದಂಥ ಫಾರಿನ್ ಎಕ್ಸ್‌ಚೇಂಜ್ ಅರ್ನರ್ ಅಲ್ಲದೆ, ಮೀನು ತುಂಬಾ ಹೆಚ್ಚಿನ ಪ್ರೋಟೀನ್ ಇರತಕ್ಕ ಪೌಷ್ಟಿಕ ಆಹಾರ. ಕರ್ನಾಟಕ ಕರಾವಳಿಯಲ್ಲಿ ಸಿಕ್ಕತಕ್ಕ ಮೀನು ಶೇಕಡಾ ೮೫ ರಷ್ಟು ಮೆಕನೈಸ್ಡ್ ಡೀಸಲ್ ಬೋಟ್‌ನಲ್ಲಿ ಈ ಮೀನುಗಳು ಬರುತ್ತವೆ. ಈಗ ಮಾನ್ಯ ಮುಖ್ಯಮಂತ್ರಿ ಗಳು ಡೀಸಲ್ ಟ್ಯಾಕ್ಸ್ ರಿಲೀಫ್ ಕೊಟ್ಟಿರುವುದರಿಂದ ಅವರಿಗೆ ಅಭಿನಂದನೆಯನ್ನು ಕೊಡಬೇಕಾಗುತ್ತದೆ ಡೀಸೆಲ್ ಮೇಲಿರತಕ್ಕ ಮಾರಾಟಕರಿಗೆ ಶೇಕಡ ೧೫ರಷ್ಟು ವಾಪಸ್ಸು ಕೊಡುವುದು ಶ್ಲಾಘನೀಯವಾದುದು ಕರಾವಳಿಯ ಎಲ್ಲಾ ಶಾಸಕರ ಪರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸು ತ್ತೇನೆ. ಈ ಸಂದರ್ಭದಲ್ಲಿ ಮೀನುಗಾರಿಕೆ ಸಚಿವರಿಗೂ ಹಾಗೂ ಸರ್ಕಾರಕ್ಕೂ ಅಭಿನಂದನೆ ಯನ್ನು ಸಲ್ಲಿಸುತ್ತೇನೆ. ಇದರಲ್ಲಿ ಕೇಂದ್ರ ಅಬ್ಕಾರಿ ಶುಲ್ಕ ಸಾಕಷ್ಟು ಬೀಳುತ್ತಿದೆ. ಕೇಂದ್ರಸರ್ಕಾರದ ಸಚಿವರು, ಕೇಂದ್ರ ಸರ್ಕಾರದಿಂದ ಒಂದು ಪತ್ರವನ್ನು ಬರೆದಿದ್ದಾರೆ. ನಿಮ್ಮ ರಾಜ್ಯಸರ್ಕಾರ ಮೆಕಾನೈಸ್ಡ್ ಬೋಟ್ಸ್ ಡೀಸೆಲ್‌ಗೆ ಮಾರಾಟ ಕರ ರದ್ದತಿ ಮಾಡಿದ್ದಾರೆ ಅವರಿಂದ ಏನಾದರೂ ವಿಚಾರ ಬಂದರೆ ನಾವು ಸೆಂಟ್ರಲ್ ಎಕ್ಸೈಜ್ ರದ್ದತಿ ಮಾಡುತ್ತೇವೆಂದು ಹೇಳಿದ್ದಾರೆ. ಇವೊತ್ತು ಮೆಕನೈಸ್ಡ್ ಬೋಟ್‌ಗಳಿಗೆ ಬೇಕಾದಂಥ ಪರ್‌ಸೀನ್, ಗಿಲ್‌ನೆಟ್ ಮತ್ತಿತರ ಸ್ಪೇರ್‌ಪಾರ್ಟ್‌ಗಳ ಬೆಲೆ ಜಾಸ್ತಿಯಾಗಿದೆ. ಮೆಕನೈಸ್ಡ್ ಫಿಷಿಂಗ್‌ಗೆ ಬೇಕಾಗುವಂತಹ ಎಲ್ಲಾ ಸಾಲಗಳಿಗೂ ಬ್ಯಾಂಕುಗಳಲ್ಲಿ ಕಡಿಮೆ ಬಡ್ಡಿಯಲ್ಲಿ ಕೊಡಬೇಕು ಇನ್‌ಲೆಂಡ್ ಫಿಷರೀಸ್‌ನಲ್ಲಿ ಮೀನಿನ ಮೊಟ್ಟೆ ಹಾಕಿ ಮರಿಗಳನ್ನು ಬೆಳೆಸುತ್ತಾರೆ, ಆದರೆ ಡೀಪ್ ಸೀನಲ್ಲಿ ದೇವರ ದಯೆಯಿಂದ ಮೀನಿನ ಮರಿಗಳು ಉತ್ಪತ್ತಿಯಾಗುತ್ತವೆ. ಇದು ಗದ್ದೆಯಲ್ಲಿ ಭತ್ತವನ್ನು ಬೆಳೆದ ಹಾಗೆ ಅಲ್ಲ. ಮೀನಿನ ಮರಿಗಳನ್ನು ಉತ್ಪತ್ತಿ ಮಾಡಬೇಕಾದರೆ ಸಾಕಷ್ಟು ಪರಿಶ್ರಮಪಡಬೇಕಾಗುತ್ತದೆ ಆದ್ದರಿಂದ, ಅವರಿಗೆ ಕೊಡತಕ್ಕ ಸಾಲದ ಮೇಲೆ ಬಡ್ಡಿಯನ್ನು ಕಡಿಮೆ ಮಾಡಬೇಕು. ಇನ್ನು

ಮಂಗಳೂರು, ಮುಲ್ಕಿ ಗಂಗೊಳ್ಳಿ, ಭಟ್ಕಲ್, ಆ ಒಂದು ತೀರಪ್ರದೇಶಗಳಲ್ಲಿ ಹೂಳು ತೆಗೆಯುವಂತಹ ಕೆಲಸವನ್ನು ಮಾಡಬೇಕು

೧-೩೦ ಪಿ. ಎಂ.

ಈಗ ೩ ಕಡೆ ಲ್ಯಾಂಡಿಂಗ್ ಮಾಡಿದ್ದೀರಿ. ಆದರೆ ಮೊದಲು ಮಾಡಿರುವ ತೀರ್ಮಾನದ ಪ್ರಕಾರ ೧೧ ಕಡೆ ಈ ಲ್ಯಾಂಡಿಂಗ್ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮನೆಗಳ ವಿಚಾರದಲ್ಲಿ ಹೇಳುವುದಾದರೆ, ಕೇಂದ್ರ ಸರ್ಕಾರದವರು ಈ ಬಾಬಿಗೆ ೫೦ ಪರ್ಸೆಂಟ್ ಹಣವನ್ನು ಕೊಡುತ್ತಾರೆ. ತಾವು ಈ ಹಣವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಸಿ ಕೊಡುವ ಕ್ರಮವನ್ನು ಕೈಗೊಳ್ಳಬೇಕು. ಮೀನುಗಾರರ ಯೋಜನೆಗಳಿಗಾಗಿ ೭೦೮ ಕೋಟಿ ರೂಪಾಯಿಗಳನ್ನು ಏನು ಅಲಾಟ್ ಮಾಡಿದೆ ಅದರಲ್ಲಿ ಕೇವಲ ೪೦೦ ಕೋಟಿ ರೂಪಾಯಿಗಳು ಮಾತ್ರ ಖರ್ಚಾಗಿದೆ. ಮೀನುಗಾರರಿಗೆ ಏನು ಯೋಜನೆಗಳನ್ನು ಹಾಕಿಕೊಳ್ಳುತ್ತೀರಿ ಅದು ಅವರಿಗೆ ಮುಟ್ಟಬೇಕು. ಅಲೋಕೇಷನ್‌ನ್ನು ಸರಿಯಾಗಿ ತಾವು ಉಪಯೋಗಿಸಿಕೊಳ್ಳಬೇಕು.

ಇನ್ನು ಸಾಮಾನ್ಯ ಬೊಮ್ಮಾಯಿಯವರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಸಿಂಗಲ್ ವಿಂಡೋ ಸಿಸ್ಟಂ ಎಂದು ಮಾಡುತ್ತಿದ್ದೀರಿ. ಅದು ವಿದ್ಯುಚ್ಛಕ್ತಿಯಾಗಲಿ. ನೀರು ಸರಬರಾಜು ಬಗ್ಗೆ ಆಗಲಿ ಅಥವಾ ಲೈಸೆನ್ಸ್ ಬಗ್ಗೆ ಆಗಲಿ ನೀವು ಏನು ಗುರಿಯನ್ನು ಇಟ್ಟುಕೊಂಡಿದ್ದೀರಿ ಅದರಲ್ಲಿ ಸಾಧನೆ ಮಾಡಿರುವುದು ಕೇವಲ ೭೫೦ ಮಾತ್ರ. ಇನ್ನು ಉಳಿದದ್ದು ಮುಚ್ಚಿಹೋಗಿವೆ. ಈ ಕಿಟಕಿ ಏನಿದೆ ಇದನ್ನು ತಾವು ಬಹಳ ಎತ್ತರದಲ್ಲಿ ಇಟ್ಟಿದ್ದೀರಿ. ಜನಸಾಮಾನ್ಯರು ಯಾರಿಗೂ ಕೂಡ ಸಿಕ್ಕದಂಥ ಜಾಗದಲ್ಲಿ ಎತ್ತರದಲ್ಲಿ ಇಟ್ಟಿದ್ದೀರಿ. ನಾನು ಇತ್ತೀಚೆಗೆ ಬೈಕಂಪಾಡಿಗೆ ಹೋಗಿದ್ದೆ. ಅಲ್ಲಿ ಸಾಮಾನ್ಯ ಉದ್ದಿಮೆದಾರರಿಗೆ. ಏನು ಸಬ್ಸಿಡಿಯನ್ನು ಕೊಡಬೇಕಾಗಿತ್ತೋ ಅದನ್ನು ಇದುವರೆಗೂ ಕೊಟ್ಟಿಲ್ಲ. ಟ್ಯಾಕ್ಸ್ ರೀಲಿಫ್ ಒಬ್ಬರಿಗೂ ಸಿಕ್ಕಿಲ್ಲ. ಇಂಡಸ್ಟ್ರಿಯಲ್ ಷೆಡ್ಡುಗಳ ಬಾಡಿಗೆ ರೆಮಿಷನ್ ಏನು ಕೊಡಬೇಕಾಗಿತ್ತೋ ಅದನ್ನು ಇನ್ನೂ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು.

ಇನ್ನು ಜನಸಾಮಾನ್ಯರಿಗೆ ಕೊಡತಕ್ಕ ಮನೆಗಳ ಬಗ್ಗೆ ಹೇಳುವುದಾದರೆ, ಇದರ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕಳೆದವರ್ಷ ಒಂದು ಜನತಾ ಮನೆಯನ್ನೂ ಹೊಸದಾಗಿ ಕೊಟ್ಟಿಲ್ಲ. ಈ ವರ್ಷ ಕೂಡ ಆಗುವುದಿಲ್ಲ ಎಂದರೆ ಬ್ಲೇಂ ಮಾಡದೇ ಇರಬಹುದು. ಆದರೆ ನಮ್ಮ ನಮ್ಮ ಕ್ಷೇತ್ರದಲ್ಲಿನ ಜನರ ಹತ್ತಿರ ಹೋಗಿ ನಾವು ಯಾವರೀತಿ ಮುಖವನ್ನು ತೋರಿಸಬೇಕು.

ಶ್ರೀ ಜೆ. ಡಿ. ಸೋಮಪ್ಪ.—ಜನತಾ ಮನೆಗಳನ್ನು ಅಲಾಟ್ ಮಾಡುವುದರಲ್ಲೂ ಇವರು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ವಿ. ಎಸ್. ಆಚಾರ್ಯ.—ಸ್ವಾಮಿ, ನಮ್ಮ ರಾಜ್ಯದಲ್ಲಿ ೧೭೪ ತಾಲ್ಲೂಕುಗಳಿವೆ ಒಂದೊಂದು ತಾಲ್ಲೂಕಿಗೂ ಒಂದು ನೂರು ಮನೆಗಳಂತೆ ಕಟ್ಟಿಸಿಕೊಟ್ಟರೆ ೧೭,೪೦೦ ಮನೆಗಳಾಗುತ್ತವೆ. ೪೦ ತಾಲ್ಲೂಕುಗಳಲ್ಲಿ ಬಹಳ ಹೆಚ್ಚು ಮಳೆ ಬೀಳುವುದರಿಂದ ಅಲ್ಲಿ ೨೦೦-೨೫೦ ಹೆಚ್ಚು ಮನೆಗಳನ್ನು ಕಟ್ಟಿಸಿದ್ದರೆ ಅನುಕೂಲವಾಗುತ್ತದೆ. ಇದು ಸುಮಾರು ೧೦ ಸಾವಿರ ಮನೆಗಳಾಗುತ್ತವೆ. ಒಟ್ಟು ೩೭ ಸಾವಿರ ಮನೆಗಳನ್ನು ಹೊಸದಾಗಿ ಕಟ್ಟಿಸಿಕೊಟ್ಟರೆ ಜನರಿಗೆ ಸಂತೋಷವಾಗುವ ಬದಲು ನಮ್ಮ ಶಾಸಕರಿಗೆ ಹೆಚ್ಚು ಸಂತೋಷವಾಗುತ್ತದೆ. ಕುಮಟಾ, ಗದಗ್, ಬೆಟಗೇರಿ, ಉಡುಪಿ, ಮೈಸೂರು ಘಟಪ್ರಭಾ ಈ ೫ ಯೋಜನೆಗಳಿಗೂ ಬೈಲ್ಯಾಟ್ರಲ್ ಅಸಿಸ್ಟೆನ್ಸ್‌ನ್ನು ತೆಗೆದುಕೊಳ್ಳಬೇಕು ಎಂದು ತಾವೇ ಹೇಳಿದ್ದೀರಿ. ಇವು ಬಹಳ ವರ್ಷಗಳ ಹಿಂದಿನ ಯೋಜನೆಗಳಾಗಿರುವುದರಿಂದ ಒಂದೊಂದು ಯೋಜನೆಗೂ ಒಂದೊಂದು ಕೋಟಿಯಂತೆ ೫ ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು. ಆದರೆ ನಿನ್ನೆಯ ದಿವಸ ನಮಗೆ ಕೊಟ್ಟಿರತಕ್ಕ ಪುಸ್ತಕದಲ್ಲಿ ಯಾವುದೇ ಪ್ರಸ್ತಾಪವೂ ಕೂಡ ಇದರ ಬಗ್ಗೆ ಇಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಗಮನಹರಿಸಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಹೇಳುವುದಾದರೆ ಬಡವರು, ಕೂಲಿ ಕಾರ್ಮಿಕರು ಕುಡಿಯತಕ್ಕಂಥ ಷರಾಬಿಗೆ ೧ ಲೀಟರ್‌ಗೆ ೩೫ ರೂಪಾಯಿಗಳನ್ನು ಗೊತ್ತು ಮಾಡಿದ್ದೀರಿ. ಇದರ ಬೆಲೆ

೬.೫೦ ರೂ. ಆದರೂ ಇದಕ್ಕೆ ಇಷ್ಟೊಂದು ಹಣವನ್ನು ನಿಗದಿಮಾಡಿರುವುದು ಸರಿಯಲ್ಲ. ಇದನ್ನು ಪುನರ್ ಪರಿಶೀಲಿಸಿ ೨೫ ರೂ.ಗೆ ಮಿತಿಗೊಳಿಸಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ರಾಜಕೀಯವಾಗಿ ಒಂದು ಪ್ರಶ್ನೆಯನ್ನು ಹೇಳಿದ್ದಾರೆ ಅದು ಏನೆಂದರೆ ನಾವು ಇತ್ತೀಚೆಗೆ ಸಂತೋಷ್ ಹೆಗಡೆಯವರನ್ನು ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡಿದ್ದಕ್ಕೆ ಸಂಬಂಧಪಟ್ಟದ್ದು. ನಾನಾದರೂ ಹೇಳುತ್ತೇನೆ, ನಾವು ರಾಜಕೀಯವನ್ನು ಮಾಡುವವರಲ್ಲ, ನಾವು ಯಾವರೀತಿಯ ರಾಜಕೀಯದಲ್ಲಿ ಜೀವನ ಸಾಗಿಸಿಕೊಂಡು ಬರುತ್ತಿದ್ದೇವೆಂಬುದು ತಿಳಿದವರಿಗೆ ಮಾತ್ರ ಗೊತ್ತಿದೆ. ಇಂದೋರ್‌ನಲ್ಲಿ ಪಾರ್ಲಿಮೆಂಟರಿ ಬೋರ್ಡ್‌ನ ಸಭೆ ನಡೆದಾಗ ನಾವು ಕೆಲವು ಕಂಡಿಷನ್ಸ್ ಹಾಕಿದ್ದೇವೆಂದು ಹೇಳಿದರು ನಾವು ಅಂಥಾದ್ದು ಏನನ್ನೂ ಹಾಕಿಲ್ಲ. ಇವರು ಮಾನ್ಯ ಕೆ. ಎಸ್. ಹೆಗಡೆಯವರ ಮಗ ಎಂದು ತಿಳಿದುಕೊಂಡು ಅವರಿಗೆ ನಾವು ಬೆಂಬಲವನ್ನು ಕೊಟ್ಟಿಲ್ಲ. ಇದರಲ್ಲಿ ಪಕ್ಷಾತೀತವಾಗಿ ನಡೆದುಕೊಂಡಿದ್ದೇವೆ. ನಾವು ಮಾತನಾಡುವಾಗ ಮಾತನಾಡುತ್ತೇವೆ, ಪ್ರತಿಭಟನೆ ಮಾಡುವಾಗ ಪ್ರತಿಭಟನೆ ಮಾಡುತ್ತೇವೆ. ಇದನ್ನು ಅವರು ಜಸ್ಟಿಫೈ ಮಾಡಬೇಕು. ಇಂಥವರನ್ನೇ ಅಡ್ವೋಕೇಟ್ ಜನರಲ್ ಆಗಿ ನೇಮಕ ಮಾಡಬೇಕೆಂದು ಹೇಳಿಲ್ಲ. ಇವತ್ತು ಈ ಸ್ಥಾನಗಳು ಇರುವುದು ಸೇವೆಯನ್ನು ಮಾಡುವುದಕ್ಕೋಸ್ಕರ. ಯಾರಿಗೆ ಯಾವ ಸೇವೆ ಅವಶ್ಯಕವೆಂದು ಕಂಡು ಬರುತ್ತದೆ ಅಂಥವರನ್ನು ಅವರು ನೇಮಕ ಮಾಡಿಕೊಳ್ಳಬಹುದು. ಅದೇ ರೀತಿ ಸರ್ಕಾರದವರೂ ಕೂಡ ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಸಾರ್ವಜನಿಕ ಜೀವನದಲ್ಲಿ ಯಾವರೀತಿ ನಡೆದುಕೊಳ್ಳಬೇಕೋ ಆರೀತಿ ನಂಬಿಕೆ ಇಟ್ಟು ನಡೆದುಕೊಂಡು ಹೋಗುತ್ತಿದ್ದೇವೆ......

ಶ್ರೀ ಎಂ. ವೀರಪ್ಪಮೊಯ್ಲಿ.—ನಿಮ್ಮ ನಂಬಿಕೆ ಬಲವಾಗಿ ಹೋಗುತ್ತಿದೆ ಎಂದು ಕಾಣಿಸುತ್ತದೆ.

ಶ್ರೀ ವಿ. ಎಸ್. ಆಚಾರ್ಯ.—ಕಳೆದಸಾರಿ ನಾವು ಇವರ ಸರ್ಕಾರವನ್ನು ಬಹಳ ಕಟುವಾಗಿ ಟೀಕೆ ಮಾಡಿರಬಹುದು. ಆದರೆ ಇವರು ಏತಕ್ಕೆ ಇಷ್ಟೊಂದು ಟೀಕೆ ಮಾಡುತ್ತಿದ್ದಾರೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ನಾವು ಟೀಕೆ ಮಾಡುವುದು ಅವರಿಂದ ಒಳ್ಳೆಯ ಕೆಲಸಗಳನ್ನು ಇನ್ನೂ ನಿರೀಕ್ಷಣೆ ಮಾಡುವುದಕ್ಕಾಗಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನೀವು ಎಷ್ಟೇ ಬಲವಾಗಿ ಟೀಕೆ ಮಾಡಿದರೂ ಸರ್ಕಾರದವರು ಬಹಳ ಸಂತೋಷದಿಂದ ಸ್ವಾಗತಿಸುತ್ತಾರೆ. ಆದರೆ ಅದೇ ನಾವು ಟೀಕೆ ಮಾಡಿದರೆ ಅದನ್ನು ತೀವ್ರವಾಗಿ ಪ್ರತಿಭಟನೆ ಮಾಡುತ್ತಾರೆ.

ಶ್ರೀ ವಿ. ಎಸ್. ಆಚಾರ್ಯ.—ನಾವು ಯಾವುದೇ ಟೀಕೆಯನ್ನು ಮಾಡಿದರೂ ರಚನಾತ್ಮಕ ದೃಷ್ಟಿಯಿಂದ ಮಾಡುತ್ತೇವೆ. ಅನೇಕ ವಿಚಾರಗಳಲ್ಲಿ ನಾವು ಟೀಕೆ ಮಾಡಿದ್ದೇವೆ. ಎಷ್ಟೋಸಾರಿ ಸರ್ಕಾರವನ್ನು ಟೀಕೆ ಮಾಡಿದ್ದೇವೆ. ಸರ್ಕಾರೀ ನೌಕರವರ್ಗದ ಮೇಲೆ ಟೀಕೆ ಮಾಡಿದ್ದೇವೆ. ಒಳ್ಳೆಯದು ಮಾಡಿದ್ದರೆ ಒಳ್ಳೆಯದೆಂದು ಹೇಳುತ್ತೇವೆ ಅದೇರೀತಿ ಕೆಟ್ಟದ್ದನ್ನು ಮಾಡಿದ್ದರೆ ಕೆಟ್ಟದ್ದು ಎಂದು ಹೇಳುತ್ತೇವೆ, ಕೆಟ್ಟ ಪರಿಸ್ಥಿತಿ ಹೋಗಿ ಒಳ್ಳೆಯ ಪರಿಸ್ಥಿತಿ ಉಂಟಾಗಲಿ ಎನ್ನುವ ಉದ್ದೇಶದಿಂದ ನಾವು ಟೀಕೆ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೆ, ನಾನಾದರೂ ಹೇಳುವುದಿಷ್ಟೆ. ಸರ್ಕಾರದವರು ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡು ಜನರಿಗೆ ಕ್ಷೇಮ, ಸೌಕರ್ಯಗಳನ್ನು ಒದಗಿಸಿಕೊಡುತ್ತಾರೆಂದು ಭಾವಿಸಿ ಇದುವರೆಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ನಮ್ಮ ಬಿ. ಜೆ. ಪಿ. ಯ ಪರವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಮಾನ್ಯ ಶ್ರೀ ಪಿ. ರಾಮದೇವ್‌ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

† ಶ್ರೀ ಎ. ನಾಗರಾಜು (ಮಾಲೂರು).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ಮುಂದೆ ಸುಮಾರು ೨೦ ಬೇಡಿಕೆಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಬಹುಶಃ ಇದು ನಮ್ಮ ಕರ್ನಾಟಕ ವಿಧಾನಮಂಡಲದ ಚರಿತ್ರೆಯಲ್ಲೇ ಒಂದು ದಾಖಲೆ ಎಂದು ಕಾಣಿಸುತ್ತದೆ. ಈ ಬೇಡಿಕೆಗಳ ಪೈಕಿ ವಾಣಿಜ್ಯ ಮತ್ತು ಕೈಗಾರಿಕೆಗಳ ಖಾತೆಯ ಮಾನ್ಯ ಸಚಿವರು ಏನು ಬೇಡಿಕೆಯನ್ನು ಮಂಡಿಸಿದ್ದಾರೆ ಅದಕ್ಕೆ ಸೀಮಿತಗೊಳಿಸಿ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ, ಯಾವುದೇ ರಾಜ್ಯ ತನ್ನ ಆರ್ಥಿಕ ಸ್ಥಿರತೆಯನ್ನು ಹೊಂದಿರಬೇಕಾದರೆ ಅಲ್ಲಿ ಇರತಕ್ಕಂಥ ಕೈಗಾರಿಕಾ ಸ್ಥಿರತೆಯಮೇಲೆ ಅವಲಂಬಿಸಿರುತ್ತದೆ. ರಾಜ್ಯದಲ್ಲಿ ಆರ್ಥಿಕ ಭದ್ರತೆ ಇಲ್ಲದೇ ಹೋದರೆ ರಾಜ್ಯದ ಭದ್ರತೆ ಇರುವುದಿಲ್ಲ. ರಾಜ್ಯಕ್ಕೆ ಭದ್ರತೆ ಇಲ್ಲದೆಹೋದರೆ ಸಾಮಾಜಿಕವಾಗಿ ಭದ್ರತೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ' ನಮ್ಮ ಭಾರತದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಒಂದು ಕೈಗಾರಿಕಾ ನೀತಿ ಇತ್ತು ಎನ್ನುವುದು ಸ್ಪಷ್ಟವಾಗಿ ಕಾಣುತ್ತಿಲ್ಲ. ಆದರೆ ೧೯೪೮ರಲ್ಲಿ ಕೇಂದ್ರ ಸರ್ಕಾರ ಇಂಟರ್ ನ್ಯಾಷನಲ್ ಇಂಡಸ್ಟ್ರಿಯಲ್ ಪಾಲಿಸಿಯನ್ನು ಕಾರ್ಯರೂಪಕ್ಕೆ ತಂದಿತು. ಈ ಇಂಟರ್ ನ್ಯಾಷನಲ್ ಇಂಡಸ್ಟ್ರಿಯಲ್ ಪಾಲಸಿಯನ್ನು ಕಾರ್ಯರೂಪಕ್ಕೆ ತಂದದ್ದು ಯಾವ ಉದ್ದೇಶಕ್ಕಾಗಿ ಎಂದರೆ ಬಡತನ ಮತ್ತು ನಿರುದ್ಯೋಗವನ್ನು ಹೋಗಲಾಡಿಸುವುದಕ್ಕಾಗಿ ಮತ್ತು ಸ್ವಾವಲಂಬಿಗಳಾಗಿ ಬದುಕುವುದಕ್ಕೆ ಈ ಒಂದು ಪಾಲಿಸಿಯನ್ನು ತಂದುದಾಗಿದೆ. ಇದರಿಂದಾಗಿ ಕುಶಲ ಕರ್ಮಿಗಳಿಗೆ, ವ್ಯವಸಾಯ, ಪಶುಸಂಗೋಪನಾ ಉತ್ಪಾದನೆ, ಕೃಷಿಯೇತರ ವಲಯಗಳಲ್ಲಿ ಉದ್ಯೋಗದ ಒಂದು ಉತ್ಪಾದನೆಯನ್ನು ಮಾಡುವವರಿಗೆ ಅನುಕೂಲವಾಯಿತು. ಕೇಂದ್ರ ಸರ್ಕಾರವು ಈರೀತಿಯಾಗಿ ಕೈ ಗೊಂಡ ಉದ್ದೇಶದಿಂದ ಲಕ್ಷಾಂತರ ಜನರಿಗೆ ಉದ್ಯೋಗ ದೊರೆಯಲು ಅನುಕೂಲವಾಯಿತು. ಮತ್ತು ಬೃಹದಾಕಾರವಾಗಿ ಕೈಗಾರಿಕಾ ನೀತಿಯೂ ಕೂಡ ಪ್ರಗತಿಪಥದಲ್ಲಿ ಮುಂದುವರಿಯುತ್ತಾ ಬಂದಿತು. ಇದಕ್ಕೆ ಉದಾಹರಣೆಗಳು ಹಲವಾರು ಇದೆ. ಕೇಂದ್ರ ಸರ್ಕಾರದವರು ಕೂಡ ೧೯೭೮ರಿಂದ ಕೇವಲ ಮೂರು ಜಿಲ್ಲೆಗಳಲ್ಲಿ ಮಾತ್ರ ಕೈಗಾರಿಕೆಗಳನ್ನು ಘೋಷಿಸಿತ್ತು. ಅನಂತರ ೧-೪-೧೯೭೩ರಿಂದ ಅದನ್ನು ೮ ಜಿಲ್ಲೆಗಳಿಗೆ ವಿಸ್ತರಿಸಿತು, ಅಂದರೆ ಹಾಸನ, ತುಮಕೂರು, ಉತ್ತರ ಕನ್ನಡಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಬೆಳಗಾವಿ, ಬಿಜಾಪುರ, ಗುಲ್ಬರ್ಗಾ ಮತ್ತು ಬೀದರ್. ಈ ಎಂಟು ಜಿಲ್ಲೆಗಳ ಪೈಕಿ ಬೀದರ್ ಜಿಲ್ಲೆಯನ್ನು ಕೈಗಾರಿಕಾ ರಹಿತ ಜಿಲ್ಲೆ ಎಂದು ಪರಿಗಣಿಸಿತು. ಕೇಂದ್ರ ಸರ್ಕಾರ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ ತನ್ನ ಕೈಗಾರಿಕಾ ನೀತಿಯನ್ನು ಮುಂದುವರಿಸಿ ಮುಂಚೂಣಿಯಲ್ಲಿ ನಡೆಯು ತ್ತಿದೆ. ಆದರೆ ನಮ್ಮ ಕರ್ನಾಟಕ ಸರ್ಕಾರ ಕೈಗಾರಿಕಾ ನೀತಿಯನ್ನು ಗಮನಿಸಬೇಕಾದ ವಿಚಾರವನ್ನು ನಮ್ಮ ಮುಂದಿಟ್ಟಿದೆ. ನಮ್ಮ ಸರ್ಕಾರದವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಸ್ಪಷ್ಟವಾದ ಚಿತ್ರವನ್ನು ತಮ್ಮಲ್ಲಿ ಕೊಡುತ್ತೇನೆ. ೧೯೮೩-೮೪ನೇ ಇಸವಿಯಲ್ಲಿ ಏನು ಕೈಗಾರಿಕಾ ನೀತಿ ಇದೆ. ಸಜ ವಾಗಿಯೂ ನಮ್ಮ ರಾಜ್ಯದಲ್ಲಿ ಸ್ಥಗಿತಗೊಂಡಿದೆ. ಇದಕ್ಕೆ ಹಲವಾರು ನಿದರ್ಶನಗಳು ನನ್ನಲ್ಲಿ ಇದೆ. ಅದನ್ನು ಈ ಸಭೆಯಲ್ಲಿ ಇಡುವುದಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಇವರು ಏನು ಒಂದು ಪಾಲಿಸಿ ಇಟ್ಟಿದ್ದಾರೆಂದರೆ ವರ್ಷ ಒಂದಕ್ಕೆ ಒಂದು ಸಾವಿರ ಕೈಗಾರಿಕೆಗಳನ್ನು ಕೊಡುತ್ತೇವೆ ಎನ್ನುವ ಪಾಲಿಸಿಯನ್ನು ಇಟ್ಟಿದ್ದರು. ಆದರೆ ೧-೪-೮೩ರಿಂದ ೩೧-೧-೧೯೮೪ರವರೆಗೆ ಕೇವಲ ರಿಜಿಸ್ಟರ್ ಮಾಡಿರುವುದು ೫೦೩ ಕೈಗಾರಿಕೆಗಳು ಮಾತ್ರ. ನೋಂದಾ ವಣೆಯ ವಿಚಾರದಲ್ಲಿಯೇ ಕೇವಲ ೫೦೩ ಮಾಡಿರಬೇಕಾದರೆ ಇವರ ಆಡಳಿತದ ವೈಖರಿ ಏನು ಎನ್ನುವುದು ಗೊತ್ತಾಗುತ್ತದೆ. ಜನತೆಗೆ ಆಶ್ವಾಸನೆಯನ್ನು ಏನು ಕೊಟ್ಟಿದ್ದರು ಅದರಲ್ಲಿ ಸಂಪೂರ್ಣ ವಾಗಿ ಇವರು ವಿಫಲರಾಗಿದ್ದಾರೆಂದು ಹೇಳಬಹುದು. ಹಾಗೆನೇ ಇನ್ನೂ ಅನೇಕ ಚಿತ್ರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ 'ಕೆಲವಾರು ವಿಚಾರಗಳನ್ನು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮತ್ತು' ಕೈಗಾರಿಕಾ ಓನರ್ಸ್ ಏನು ಇದ್ದಾರೆ ಅವರ ಒಂದು ಹಿತದೃಷ್ಟಿಯಿಂದ ಹೇಳಬೇಕಾಗುತ್ತದೆ.

ಈಗ ಜಿಲ್ಲಾ ಕೈಗಾರಿಕಾ ಕೇಂದ್ರ ಎಂದು ಹೇಳಿದ್ದಾರೆ. ೧೯೮೧-೮೨ರಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ೧೩ ಇತ್ತು ೧೯೮೩-೮೪ರಲ್ಲಿ ೧೯ ಆಯಿತು. ಉದ್ಯೋಗವನ್ನು ಕೊಟ್ಟಿದ್ದು ಎಷ್ಟು ಜನರಿಗೆ ಅಂದರೆ ೧೯೮೧-೮೨ರಲ್ಲಿ ೩೭,೫೪೨ ಜನರಿಗೆ, ೧೯೮೨-೮೩ರಲ್ಲಿ ೪೩,೯೩೩ ಜನರಿಗೆ ಉದ್ಯೋಗ ಅವಕಾಶವನ್ನು ಮಾಡಿಕೊಟ್ಟರೆ ೧೯೮೩-೮೪ರಲ್ಲಿ ಕೇವಲ ಅಂದರೆ ೩೦.೧.೧೯೮೪ರವರೆಗೆ ತಾವು ಕೊಟ್ಟಿರುವ ಅಂಕಿಅಂಶ ಗಳ ಪ್ರಕಾರ ೨೦,೯೫೪ ಜನರಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ತಾವು ಇಟ್ಟುಕೊಂಡಿರ ತಕ್ಕಂಥ ಗುರಿಯ ಅಂಕಿಅಂಶಗಳನ್ನು ಕೊಡುತ್ತಾ ಇಲ್ಲ. ೧೯೮೦ರಲ್ಲಿ ಲೋಕಸಭಾ ಚುನಾವಣೆಯು ನಡೆದಾಗ ನಮ್ಮ ಕಾಂಗ್ರೆಸ್(ಐ) ಪಕ್ಷದ ಪ್ರಣಾಳಿಕೆಯಲ್ಲಿ ಏನು ಇದೆ ಎಂದರೆ ನಾವು ವಿದ್ಯಾವಂತ ನಿರು ದ್ಯೋಗಿಗಳಿಗೆ ಉದ್ಯೋಗವನ್ನು ಕೊಡುವಂಥ ಘೋಷಣೆಯನ್ನು ಮಾಡಿ, ಉದ್ಯೋಗವಿಲ್ಲದ ಕುಟುಂಬ ದಲ್ಲಿ ಒಬ್ಬರಿಗೆ ಉದ್ಯೋಗವನ್ನು ಕೊಡುವಂತೆ ಮಾಡಿದ್ದೆವು.

ಶ್ರೀ ಬಿ. ದೊಡ್ಡ ಬೋರೇಗೌಡ.—ಕುಟುಂಬದಲ್ಲಿ ಉದ್ಯೋಗ ಇಲ್ಲದವರಿಗೆ ಒಬ್ಬರಿಗೆ ಉದ್ಯೋಗವನ್ನು ಒದಗಿಸುವಂಥ ಘೋಷಣೆಯನ್ನು ಮಾಡಿ ಪ್ರಣಾಳಿಕೆಯನ್ನು ಹೊರಡಿಸಿದಿರಿ. ಅದರಂತೆ ಎಷ್ಟು ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಿದಿರಿ ಎಂಬುದಕ್ಕೆ ಅಂಕಿಅಂಶಗಳನ್ನು ಕೊಡುತ್ತೀರಾ ?

ಶ್ರೀ ಎ. ನಾಗರಾಜ್.—ಮಾನ್ಯ ಅಧ್ಯಕ್ಷರೇ ನಮ್ಮ ಪ್ರಧಾನಿಯವರು ಮೊನ್ನೆ ನಡೆದಂಥ ಸ್ವಾತಂತ್ರ್ಯೋತ್ಸವ ದಿನಾಚರಣೆಯಂದು ಕೆಂಪುಕೋಟೆಯಲ್ಲಿ ಭಾಷಣ ಮಾಡುತ್ತಾ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆಯನ್ನು ಘೋಷಣೆ ಮಾಡಿದರು. ನಮ್ಮ ಕರ್ನಾಟಕದಲ್ಲಿ ಅವರಿಗೆ ಹಣವನ್ನು ಬ್ಯಾಂಕುಗಳ ಮೂಲಕ ಕೊಡುವಾಗ, ಸಂಘ ಸಂಸ್ಥೆಗಳು ಅವರಿಗೆ ಸಹಾಯ ಮಾಡಬೇಕು, ಅವರಿಗೆ ಉದ್ಯೋಗವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಹಾಯ ಮಾಡಬೇಕು ಎಂಬ ಕಾರ್ಯನೀತಿಯನ್ನು ದೇಶದ ಮುಂದೆ ಇಟ್ಟಾಗ, ಇವರು ನಮ್ಮ ಕರ್ನಾಟಕ ರಾಜ್ಯದಲ್ಲಿ ೧೩,೭೦೦ ಜನರಿಗೆ ಉದ್ಯೋಗವನ್ನು ಒದಗಿಸುವಂಥ ಟಾರ್ಗೆಟನ್ನು ಫಿಕ್ಸ್ ಮಾಡಿದ್ದರು. ಆದರೆ ಈ ಬ್ಯಾಂಕುಗಳಿಗೆ ಶಿಫಾರಸು ಮಾಡುವುದು ಕೇವಲ ೭,೩೪೧ ಮಾತ್ರ. ಈ ಅಂಕಿಅಂಶಗಳನ್ನು ನೋಡಿದರೆ ಯಾವುದೇ ಒಂದು ಕಾರ್ಯಾಚರಣೆಯಲ್ಲಿಯೂ ಆಸಕ್ತಿ ಇಲ್ಲವೆನ್ನುವುದು ಸ್ಪಷ್ಟವಾಗಿ ಜನತೆಯ ಮುಂದೆ ಹೇಳಬೇಕಾಗುತ್ತದೆ. ಹಾಗೆಯೇ ಇಂಡಸ್ಟ್ರೀಸ್‌ಗಳಲ್ಲಿ ಯಾವ ಮಟ್ಟದಲ್ಲಿ ಉತ್ಪಾದನೆಯಾಗುತ್ತಿದೆ ಎನ್ನುವ ಬಗ್ಗೆ ಎಕನಾಮಿಕ್ ಸರ್ವೆ ಆಫ್ ಇಂಡಿಯಾ ೧೯೮೩-೮೪ರಲ್ಲಿ ಕೊಟ್ಟಿದ್ದಾರೆ. ಅದನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

"Sir, I am referring to Economic Survey 1983-84 Planning Department page 49, Chapter-VIII, Industry which reads thus ;

"INDUSTRIAL PRODUCTION"

> The production of selected industries during the current year 1983-84 (Upto December 1983) indicates a mixed trend as compared to the position in the corresponding period of the previous year. A review of the production during the first three quarters of 1983-84 reveals that there is increase in the production of silk fabrics, motor cycles, Cement, vanaspati, Paper Iron, Gold and Silver over the previous year's levels. The production was marginally lower in case of saleable steel and supetphospabe, with a steep decline in production of aluminium, pig iron, steel ingots, sugar soap, Urea, Cigarettes, Wristwatches and Sandalwood oil.

೧೯೮೩-೮೪ ರ ಎಕನಾಮಿಕ್ಸ್ ಸರ್ವೆ ರಿಪೋರ್ಟ್ ಪ್ರಕಾರ ಸಾಮಾನ್ಯ ಮನುಷ್ಯನು ಬಳಸತಕ್ಕಂಥ ಶುಗರ್, ಸೋಪ್ ಮತ್ತು ರೈತರು ಬಳಸತಕ್ಕಂಥ ಗೊಬ್ಬರ ಇದೆಲ್ಲದರ ಪ್ರೊಡಕ್ಷನ್ ಡಿಕ್ರೀಸ್ ಆಗಿರುವುದರಿಂದ ಇದರ ಪರಿಣಾಮ ಬೆಲೆ ಏರಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಗಮನಿಸಬೇಕಾಗುತ್ತದೆ.

ಶ್ರೀ ಕೆ.ಜಿ. ಮಹೇಶ್ವರಪ್ಪ.—ಶುಗರ್ ಪ್ರೊಡಕ್ಷನ್ ಹೆಚ್ಚಾಗಿದೆ.

ಶ್ರೀ ಎ, ನಾಗರಾಜ್.—ಮಾನ್ಯ ಮಹೇಶ್ವರಪ್ಪನವರು ಸಕ್ಕರೆ ಉತ್ಪಾದನೆ ಜಾಸ್ತಿಯಾಗಿದೆ ಎಂದು ಹೇಳಿದರು. ಆದರೆ ಎಕನಾಮಿಕ್ ಸರ್ವೆ ವರದಿಯ ಪ್ರಕಾರ ೧೯೮೧-೮೨ರಲ್ಲಿ ೪,೯೯,೧೪೧ ಟನ್ ಸಕ್ಕರೆ ಉತ್ಪಾದನೆಯಾಗಿದೆ. ೧೯೮೨-೮೩ರಲ್ಲಿ ೩,೬೦,೨೨೯ ಟನ್ ಸಕ್ಕರೆ ಉತ್ಪಾದನೆಯಾಗಿದೆ. ೧೯೮೩-೮೪ರಲ್ಲಿ ೨,೮೮,೬೨೩ ಟನ್ ಮಾತ್ರ ಉತ್ಪಾದನೆಯಾಗಿದೆ. ೧೯.೮೮ ರಷ್ಟು ಉತ್ಪಾದನೆ ಕಡಿಮೆಯಾಗಿದೆ. ಎಂದು ತಜ್ಞರು ಹೇಳುತ್ತಾರೆ. ಹಾಗೆಯೇ ಸಿಮೆಂಟ್ ಕೂಡ ಫ್ಲಸ್ ೪-೬೭ ನಷ್ಟು

ಮಾತ್ರ ಜಾಸ್ತಿ ಉತ್ಪಾದನೆಯಾಗಿದೆ. ಪೇಪರ್ ಫ್ಲಸ್ ೦.೫೯ ನಷ್ಟು ಜಾಸ್ತಿ ಉತ್ಪಾದನೆಯಾಗಿದೆ. ಅಲ್ಯೂಮಿನಿಯಂ–೪೦.೯೮ ನಷ್ಟು ಉತ್ಪಾದನೆಯಲ್ಲಿ ಕಡಿಮೆಯಾಗಿದೆ. ಈ ಒಂದು ಪರಿಸ್ಥಿತಿಯನ್ನು ನೋಡಿದಾಗ, ಇವುಗಳ ಒಂದು ಹೆಚ್ಚಿನ ಉತ್ಪಾನೆಯ ಕಡೆಗೆ ಸರ್ಕಾರ ಹೆಚ್ಚು ಗಮನಹರಿಸಿಲ್ಲವೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅದೇ ರೀತಿ No. of industrial units registered by tyre of industry, ಬಗ್ಗೆ ತೆಗೆದುಕೊಂಡರೆ, ೧೯೮೨ರಲ್ಲಿ ೩೩೩ ಇಂಡಸ್ಟ್ರಿಯಲ್ ಯೂನಿಟ್ಸ್ ರಿಜಿಸ್ಟರ್ ಆಗಿದ್ದರೆ ೧೯೮೩ರಲ್ಲಿ ೨೮೭ ಮಾತ್ರ ಆಗಿವೆ. ಅಂದರೆ–೧೩.೮೧ ರಷ್ಟು ಕಡಿಮೆಯಾಗಿದೆ. K S I I D C Loance and Investments ಬಗ್ಗೆ ಹೇಳಬೇಕೆಂದರೆ, ೧೯೮೨–೮೩ರಲ್ಲಿ ೧೮೩೨.೦೩ ಲಕ್ಷದಷ್ಟು ಸಾಲ ಕೊಟ್ಟಿದ್ದಾರೆ. ೧೯೮೩–೮೪ರಲ್ಲಿ ೬೭೯.೪೫ ಲಕ್ಷದಷ್ಟು ಮಾತ್ರ ಕೊಟ್ಟಿದ್ದಾರೆ. ಈ ವರ್ಷದ ಕೊನೆಯೊಳಗಾಗಿ ಇವರು ಬಹುಶಃ ಹನ್ನೊಂದು ಕೋಟಿ ರೂಪಾಯಿಗಳ ಟಾರ್ಗೆಟ್‌ನ್ನು ಮುಟ್ಟಬಹುದೆಂದು ಕಾಣುತ್ತದೆ. ಇಂಡಸ್ಟ್ರಿಯಲ್ ಯೂನಿಟ್ಸ್ ೧೯೮೨–೮೩ರಲ್ಲಿ ೮೬ ಬಂದಿದ್ದರೆ ೧೯೮೩–೮೪ರಲ್ಲಿ ೩೪ ಮಾತ್ರ ಬಂದಿವೆ. ಇನ್‌ವೆಸ್ಟ್‌ಮೆಂಟ್ಸ್ ಎಷ್ಟಾಗಿದೆ. ಎಂದರೆ, ೧೯೮೨–೮೩ರಲ್ಲಿ ೩೩೯.೦೩ ಲಕ್ಷ ಆಗಿದ್ದರೆ ೧೯೮೩–೮೪ರಲ್ಲಿ ೪೬.೬೬ ಲಕ್ಷದಷ್ಟು ಮಾತ್ರ ಡಿಸೆಂಬರ್‌ವರೆಗೆ ಆಗಿದೆ ಇನ್ನು ಮೂರು ತಿಂಗಳಲ್ಲಿ ಇವರು ತಮ್ಮ ಗುರಿಯನ್ನು ಮುಟ್ಟುವುದು ಕಷ್ಟ ಎಂದು ಕಾಣುತ್ತದೆ.

ಇನು Karnataka State Financial Corporation ಅವರು ಯಾವ ರೀತಿ ಫೈನಾನ್ಸ್ ಮಾಡಿದ್ದಾರೆಂಬುದನ್ನು ಅಂಕಿಅಂಶಗಳ ಮೂಲಕ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ೧೯೮೧–೮೨ರಲ್ಲಿ ಒಟ್ಟು ಕೇಸ್‌ಗಳು ೧೨೯೭, ಇವುಗಳಿಗೆ ಹಣ ಮಂಜೂರಾಗಿರುವುದು ೩೨೪೯.೬೦ ಲಕ್ಷ ರೂಪಾಯಿಗಳು ಅದೇ ರೀತಿ ೧೯೮೨–೮೩ರಲ್ಲಿ ಒಟ್ಟು ಕೇಸ್‌ಗಳು ೧೮೭೧ ಹಣ ಮಂಜೂರಾಗಿರುವುದು ೪೩೭೨.೩೧ ಲಕ್ಷ ರೂಪಾಯಿಗಳು ಅದೇ ರೀತಿ ೧೯೮೩–೮೪ರಲ್ಲಿ ಏಪ್ರಿಲ್‌ನಿಂದ ನವೆಂಬರ್‌ಗೆ ಇದ್ದಂಥ ಕೇಸ್‌ಗಳ ಸಂಖ್ಯೆ ೧೨೨೭. ಇವುಗಳಿಗೆ ಕೊಟ್ಟ ಹಣ ಕೇವಲ ೨೭೦೧.೪೯ ಲಕ್ಷ ರೂಪಾಯಿಗಳು. Diseburseme nts ಕೂಡ ತೀರಾ ಕಡಿಮೆ ಇದೆ ಎಂಬುದು ಇಲ್ಲಿರುವ ಅಂಕಿಅಂಶಗಳನ್ನು ನೋಡಿದರೆ ತಿಳಿಯುತ್ತದೆ. ಒಟ್ಟಿನಲ್ಲಿ ಇವರು ಇಂಡಸ್ಟ್ರಿಯಲ್ ಪ್ರೊಗ್ರೆಸ್ ಕಡೆ ಸಾಕಷ್ಟು ಗಮನಕೊಟ್ಟಿಲ್ಲವೆಂದು ತಿಳಿದುಬರುತ್ತದೆ. ಈ ಕೈಗಾರಿಕೆಗಳ ಬೆಳವಣಿಗೆಗೆ ಸಂಬಂಧಪಟ್ಟಂತೆ ಕೆಲವೊಂದು ನ್ಯೂನತೆಗಳಿವೆ ಎಂಬುದಾಗಿ ಮಾನ್ಯ ಸದಸ್ಯರು ಅನೇಕರು ಹೇಳಿದ್ದಾರೆ ಮತ್ತು ಕೆಲವು ಕೈಗಾರಿಕೋದ್ಯಮಿಗಳು ಸಹ ಈ ಮಾತನ್ನು ಹೇಳಿದ್ದಾರೆ, ಈಗ ಸರ್ಕಾರದವರು ೨೫೦ ಕೆ.ವಿ. ಗಿಂತ ಕಡಿಮೆ ವಿದ್ಯುತ್‌ನ್ನು ಉಪಯೋಗಿಸುವ ಕೈಗಾರಿಕೆಗಳಿಗೆ ವಿದ್ಯುತ್ ಕಡಿತವನ್ನು ವಿಧಿಸಿಲ್ಲ. ಇದಕ್ಕಿಂತ ಹೆಚ್ಚು ವಿದ್ಯುತ್ ಬಳಸುವ ಕೈಗಾರಿಕೆಗಳಿಗೆ ವಿದ್ಯುತ್ ಕಡಿತವನ್ನು ವಿಧಿಸಲಾಗಿದೆ ಇದೇ ಕಾರಣದಿಂದ ಕೆಲವು ಕೈಗಾರಿಕೆಗಳು ನಷ್ಟಕ್ಕೆ ಒಳಗಾಗಿವೆ. ಸಾಲದ ಹಣ ಮತ್ತು ಸಾಲದ ಮೇಲಿನ ಬಡ್ಡಿಯನ್ನು ಕೊಡಲು ಇವುಗಳಿಗೆ ಸಾಧ್ಯವಾಗುತ್ತಿಲ್ಲ ಆದ್ದರಿಂದ ಈ ಪವರ್ ಕಟ್‌ನ್ನು ಹೋಗಲಾಡಿಸುವುದು ಹೇಗೆಂಬ ಬಗ್ಗೆ ಸರ್ಕಾರದವರು ಬಹಳ ಸೀರಿಯಸ್ ಆಗಿ ಯೋಚನೆ ಮಾಡಬೇಕಾಗಿದೆ. ಕೆಲವು ಇಂಡಸ್ಟ್ರಿಗಳಿಗೆ ಈ ಸರ್ಕಾರದವರು ಮತ್ತು ಈ ಹಿಂದಿನ ಸರ್ಕಾರದವರು ಅವರಿಗೆ ಬೇಕಾದುದಕ್ಕಿಂತ ಹೆಚ್ಚು ವಿದ್ಯುತ್‌ನ್ನು ಮಂಜೂರು ಮಾಡಿದ್ದಾರೆ. ಈ ಬಗ್ಗೆ ನನ್ನ ಹತ್ತಿರ ವಿವರಗಳಿವೆ. ಇದು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಆದ್ದರಿಂದ ಮಂಜೂರು ಮಾಡಿರುವ ಹೆಚ್ಚುವರಿ ವಿದ್ಯುತ್‌ನ್ನು ವಿತ್‌ಡ್ರಾ ಮಾಡಿಕೊಂಡು ಸಣ್ಣ ಸಣ್ಣ ಕೈಗಾರಿಕೆಗಳಿಗೆ ಒದಗಿಸಬೇಕೆಂದು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇವೆ. ಉದಾಹರಣೆಗೆ ಹೇಳಬೇಕೆಂದರೆ. ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಫೆರೋ ಅಲಾಯ್ಸ್ ಫ್ಯಾಕ್ಟರಿ ಇದೆ. ಇದಕ್ಕೆ ಸುಮಾರು ೧೮.೫೦ ಮೆಗಾವಾಟ್‌ನಷ್ಟು ವಿದ್ಯುತ್‌ನ್ನು ಮಂಜೂರು ಮಾಡಿದ್ದಾರೆ. ಆದರೆ ಅವರು ಇಷ್ಟನ್ನು ಉಪಯೋಗ ಮಾಡುತ್ತಿಲ್ಲ. ಆದ್ದರಿಂದ ಇಂತಹ ಹೆಚ್ಚುವರಿ ವಿದ್ಯುತ್‌ನ್ನು ವಾಪಸ್ ಪಡೆದು ಸಣ್ಣ ಕೈಗಾರಿಕೆಗಳಿಗೆ ಒದಗಿಸಬೇಕು. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡಬೇಕೆಂದು ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ೭–೮ ಲಕ್ಷದಷ್ಟು ಕುಶಲಕರ್ಮಿಗಳಿದ್ದರೂ ಸಹ ಇಲ್ಲಿಯವರೆಗೆ ಗುರುತು ಮಾಡಿರುವುದು ೪೫೬ ಜನರನ್ನು ಮಾತ್ರ. ಅದೇ ರೀತಿ ೨೦೨ ಟರ್ನರ್‌ಗಳನ್ನು ಮಾತ್ರ ಗುರುತು ಮಾಡಿದ್ದಾರೆ. ಇವರನ್ನು ಗುರುತು ಮಾಡುವಲ್ಲಿ ನಿಮ್ಮ ಇಲಾಖೆ ಚುರುಕಿನಿಂದ ಕೆಲಸ ಮಾಡಿಲ್ಲ. ಈ ಬಗ್ಗೆ ಒಂದು ಆಂದೋಳನವನ್ನೇ ನಡೆಸಬೇಕು. ಹಳ್ಳಿಗಳಲ್ಲಿ ಇವರು ಜೀವನ ಮಾಡುವುದೇ ಕಷ್ಟವಾಗಿದೆ. ಆದ್ದರಿಂದ ಇವರನ್ನು ಗುರುತು ಮಾಡಿ ಎಲ್ಲರಿಗೂ ಉದ್ಯೋಗವನ್ನು ಕಲ್ಪಿಸಿಕೊಡಬೇಕು

ಮತ್ತು ಸ್ವಂತ ಉದ್ಯೋಗ ಮಾಡುವವರಿಗೆ ಸಾಲದ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ನಿವೇದನೆ ಮಾಡುತ್ತೇನೆ.

ಇನ್ನು ಸಾರ್ವಜನಿಕ ಉದ್ದಿಮೆಗಳಲ್ಲಿ ನಿವ್ವಳ ಲಾಭಕ್ಕಿಂತ ನಿವ್ವಳ ನಷ್ಟವೇ ಜಾಸ್ತಿಯಾಗುತ್ತಿದೆ. ಈ ರೀತಿ ನಷ್ಟವಾಗಲು ಕಾರಣವೇನೆಂಬುದೆಲ್ಲಾ ಆಡಿಟ್ ವರದಿಯಲ್ಲಿದೆ. ಈಗ ಅದನ್ನೆಲ್ಲಾ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಬೆಂಗಳೂರು ಸುತ್ತ ಮುತ್ತಲೂ ಹೊಸ ಈ ಕೈಗಾರಿಕೆಗಳು ಬರಲು ಅವಕಾಶ ಕೊಡುವುದಿಲ್ಲವೆಂದು ನೀವು ಹೇಳಿದ ಮೇಲೂ ಸಹ ಮತ್ತೆ ೬೬ ಹೊಸ ಕೈಗಾರಿಕೆಗಳು ಬರಲು ಒಪ್ಪಿಗೆ ಕೊಟ್ಟಿದ್ದೀರಿ. ಈ ವಿಚಾರದಲ್ಲಿ ಹೇಳುವುದೊಂದು ಮಾಡುವುದೊಂದು ಆಗಬಾರದು. ನೀವು ಮೊದಲು ಹೇಳಿದಂತ ರೀತಿಯಲ್ಲಿ ಕಾರ್ಯಾಚರಣೆ ಆಗಬೇಕು. ಜನರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ನಿಮ್ಮ ಕಾರ್ಯಾಚರಣೆ ಇರಬೇಕು ಬೆಂಗಳೂರಿನ ಸುತ್ತ ಮುತ್ತಲೂ ಹೊಸ ಕೈಗಾರಿಕೆಗಳು ಬರಲು ತಾವು ಅನುಮತಿ ಕೊಟ್ಟರೆ ಜನಸಾಂದ್ರತೆ ಹೆಚ್ಚುತ್ತದೆ. ಜೊತೆಗೆ ಬಂಡವಾಳ ಒಂದೇ ಕಡೆ ಕೇಂದ್ರೀಕೃತವಾಗುತ್ತದೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗ ಸಿಗುವುದು ಕಡಿಮೆಯಾಗುತ್ತದೆ. ಆದ್ದರಿಂದ ಇನ್ನು ಮುಂದೆ ಬೆಂಗಳೂರಿನ ಸುತ್ತ ಮುತ್ತ ಹೊಸ ಕೈಗಾರಿಕೆಗಳಿಗೆ ಅನುಮತಿ ಕೊಡುವುದನ್ನು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

೨.೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಇನ್ನು ವಿಜಯನಗರದ ಉಕ್ಕಿನ ಕಾರ್ಖಾನೆಯ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಶ್ರೀಮಾನ್ ಮೇಕಾನ್ ಎಂಬುವರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರಿಂದ ಸುಮಾರು ೨೨ ಸಾವಿರ ಜನಗಳಿಗೆ ನೇರವಾಗಿ ಉದ್ಯೋಗ ಸಿಗುತ್ತದೆ. ಮತ್ತೆ ಇನ್ ಡೈರೆಕ್ಟ್ ಆಗಿ ಸುಮಾರು ೭೦–೮೦ ಸಾವಿರ ಜನರಿಗೆ ಉದ್ಯೋಗ ದೊರೆಯುತ್ತದೆ. ಎನ್ನತಕ್ಕಂತ ಒಂದು ಮಾತನ್ನು ಕೂಡ ಮಾನ್ಯ ಮೇಕಾನ್ ರವರು ತಮ್ಮ ವರದಿಯನ್ನು ತಿಳಿಸಿದ್ದಾರೆ, ಈ ಒಂದು ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದರಿಂದ ಸುಮಾರು ಮೂರು ದಶಲಕ್ಷ ಟನ್ ಉಕ್ಕು ಈ ಕಾರ್ಖಾನೆಯ ಲ್ಲಿ ಉತ್ಪಾದನೆಯಾಗಬಹುದು ಎನ್ನತಕ್ಕಂಥ ಮಾತನ್ನು ಕೂಡ ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ನಮ್ಮ ಮಾನ್ಯ ಕೈಗಾರಿಕಾ ಸಚಿವರು ದಿನಾಂಕ ೮–೭–೮೩ರಲ್ಲಿ ಒಂದು ಹೇಳಿಕೆಯನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದು ಈ ರೀತಿ ಇದೆ.

> "Bommai accepts the offer on SteelPlant theIndustries Minister, Sri S. R. Bommai has responded positively to the suggestion of Mr, R. Y. Ghorpade, Cong (I) M. P. for taking on all party delegation to Delhi on the Vijayanagar steel plant Issue."

ಮಾನ್ಯ ಮಂತ್ರಿಗಳು ೧೯೮೩ನೇ ಇಸವಿ ಏಳನೇ ತಿಂಗಳಲ್ಲಿ ಈ ಹೇಳಿಕೆಯನ್ನು ಕೊಟ್ಟಿರುವುದು ಆದರೆ ನಾವು ೧೯೮೪ನೇ ಇಸವಿ ಮಾರ್ಚಿಯಲ್ಲಿ ಇದ್ದೇವೆ. ಆದರೆ ಇವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಲು ಡೆಲಿಗೇಷನ್ ಏನಾದರೂ ಹೋಗಿದ್ದರೆ ? ಈ ಬಗ್ಗೆ ಇದುವರೆವಿಗೂ ಯಾವುದಾದರೊಂದು ನಿಗದಿಯಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಯೋ ? ಮತ್ತೆ ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯಲ್ಲಿ ಕೆಲವಾರು ವಿರುಪೇರುಗಳನ್ನು ಮಾಡಿದ್ದಾರೆ. ಆ ಬಗ್ಗೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ದಾಂಡೇಲಿ "ಪೇರಿ ಅಲಾಯ್ಸ್ ಕಂಪನಿಯ ವರ್ಕಿಂಗ್ ಕ್ಯಾಪಿಟಲ್ ಸುಮಾರು ೨೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಇನ್ನು ಉಳಿದ ೧–೧೫ ಫ್ಯಾಕ್ಟರಿಗಳಿಗೆ ತಾವು ಹಣವನ್ನು ಮಂಜೂರು ಮಾಡದೆ ಈ ಫ್ಯಾಕ್ಟರಿಗೆ ಮಾತ್ರ ಸುಮಾರು ೨೫ ಲಕ್ಷ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಟ್ಟಿದ್ದೀರಿ ಇದು ಸರಿಯೇ ? ಈ ಕಂಪನಿಗೆ ತಾವು ಹಣವನ್ನು ಕೊಡುವುದಕ್ಕೆ ಬಡ್ಜೆಟ್ ಪ್ರಾವಿಜನ್ ಏನಾದರೂ ಮಾಡಿದ್ದೀರಾ ? ಆದರೆ ನಾನು ಮಾನ್ಯ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಕೊಡುವುದಾದರೂ ಏನೆಂದರೆ ತಾವು ಏನಾದರೂ ಒಂದು ಕೆಲಸವನ್ನು ಮಾಡುವಾಗ ಒಂದು ಸ್ತಿಮಿತ ಇಟ್ಟುಕೊಂಡು ಮಾಡಿದರೆ ಒಳ್ಳೆಯದು ತಾವು ತಾರತಮ್ಯ ಮನೋಭಾವನೆಯನ್ನು ಇಟ್ಟುಕೊಳ್ಳಬಾರದು. ಎಲ್ಲರಿಗೂ ಒಂದೇ ನ್ಯಾಯವನ್ನು ತಾವು ಕಲ್ಪಿಸಿಕೊಡ

ಬೇಕು. ಇನ್ನು ನಮ್ಮ ಮಾನ್ಯ ಮಂತ್ರಿಗಳು ತಮ್ಮ ವರದಿಯಲ್ಲಿ ಇಂಡಸ್ಟ್ರೀಸ್ ಸಿಕನೆಸ್ ಮತ್ತು ಇಂಡಸ್ಟ್ರೀಸ್ ಗ್ರೋತ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರಲ್ಲಿ ಕೆಲವಾರು ವಿಷಯಗಳನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ.

" Industrial sickness on a large scale is a edevastaing phenomenon for any country and more so, for a daveloping Country like India. Out of 5 lakh industrial uuits over 50000 or 10% are sick. The reason is the vast growth of industries under various schemes of the Central and State Government Project Reports are prepared by Cousultants lankicg practical experience and the machines and inventaries recommended by them are absolutely redundant involing lot of capital out lay Usually it takes 3 years to get a loan from financial in stitutions by which time the cost of the project goes up from 30-40% Most of the enterpreneurs lack administrative and financial management experience and traiuin. If it is made compulsory that every enterpreneur must have 3-5 years manufacturing experience and two or three years administrrtive and financial management experience "

ಈಗ ಮಾನ್ಯ ಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಏನು ಉತ್ಪಾದನೆ ಮಾಡುತ್ತಾರೋ ಅದು ಅವರಿಗೆ ಮ್ಯಾನುಫ್ಯಾಕ್ಚರಿಂಗ್ ಎಕ್ಸ್‌ಪೀರಿಯನ್ಸ್ ಮತ್ತು ಫೈನಾನ್ಸ್ ಅಡ್ಮಿನಿಸ್ಟ್ರೇಟೀವ್ ಎಕ್ಸ್‌ಪೀರಿಯೆನ್ಸ್‌ಗೆ ಸಂಬಂಧ ಪಟ್ಟ ಹಾಗೆ ಒಂದು ಕಾಲೇಜನ್ನು ತೆರೆದರೆ ಒಳ್ಳೆಯದು. ಇದರಿಂದ ಏನಾಗುತ್ತದೆ ಎಂದರೆ ಇಂಡಸ್ಟ್ರಿಯಲ್ ಸಿಕನ್ಸ್ ಮತ್ತು ಗ್ರೋತ್ ರೇಟ್ ಕಡಿಮೆಯಾಗಬಹುದು.

ಇನ್ನು ನಮ್ಮ ರಾಜ್ಯದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಯಾವ ರೀತಿಯಲ್ಲಿ ನಡೆಯುತ್ತಿ ಎನ್ನುವ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

" The perfomance of the small units in 1980-81 was truly Goliath sized, they provided the means of employement to about 10 million people, produced half of all industrial out put and on the export frout over Rs. 11 out of every Rs. 100 in foriegn exchange,

ನಾವು ಇಂಡಸ್ಟ್ರೀಸ್‌ಗೆ ೧೦೦ ರೂಪಾಯಿಗಳನ್ನು ಕೊಟ್ಟು ೧೧ ರೂಪಾಯಿಗಳ ಫಾರಿನ್ ಎಕ್ಸ್‌ಚೇಂಜ್ ಪಡೆಯುತ್ತಿದ್ದೇವೆ. ಇದು ಹೇಗಿದೆ ಎಂಬುದನ್ನು ಸ್ವಲ್ಪ ನೋಡಿ. ನಾವು ಫಾರಿನ್ ಎಕ್ಸ್‌ಛೇಂಜಿನಲ್ಲಿ ಲೋನ್ ತೆಗೆದುಕೊಂಡು ಬಂದಾಗ ಎಷ್ಟು ಹಣವನ್ನು ಕೊಡುತ್ತಿದ್ದೇವೆಂದರೆ ೧೦೦ ರೂಪಾಯಿಗಳನ್ನು ಕೊಟ್ಟು ನಾವು ಅವರಿಂದ ೮ ರೂಪಾಯಿಗಳನ್ನು ಮಾತ್ರ ಪಡೆಯುತ್ತಿದ್ದೇವೆ.

"The Money invested in small units as fixed assets is ba rely 1/3 of such investments in our public sector alone."

ನಾವು ಇವತ್ತು ಇಂಡಸ್ಟ್ರೀಸ್‌ಗೆ ಸುಮಾರು ೨೪೬.೭೨ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೇವೆ. ಆದರೆ ನಿಜವಾಗಿ ನಾವು ಇವತ್ತು ಸುಮಾರು ೧೦ ಲಕ್ಷ ರೂಪಾಯಿಗಳನ್ನು ಮಾತ್ರ ಇನ್‌ವೆಸ್ಟ್ ಮಾಡಿದ್ದೇವೆ.

" It is intresting to analyse the growth of small units in Karnataka. A sum of Rs 246.72 crores barely enough to buy 10 Mirage 2000 aircrafts. The everage capital cost of genrating one job was Rs. 7.843."

"It is heartening to note that in the eight years ending March, 1981, the number of small units in the state had increased by more than double-to be exact, by 106% from the 19,342 units in 1973-74 to 27,533 units in 1980-81. During the same period, their number all over the country increased from five lakhs to eight lakhs i.e., by 60%."

ಈ ಎಲ್ಲಾ ಕಾರಣಗಳಿಂದ ನಿಜವಾಗಿಯೂ ಇದರ ಕಡೆಗೆ ಗಮನಹರಿಸುವುದು ಅತ್ಯಾವಶ್ಯಕ. Regarding job generation.—

"To be meaningful however, the data on small units in Karnataka, requires to be analysed within the perspectives, already cited that make the relevance of small units urgent. The ratio of employment generation to capital investments should be the first basis of evaluation. The pride of place goes to Uttara Kannada where the average one job was only Rs. 4,849 as against the State average of Rs. 7843 per job.

Shimoga is the least efficient since the capital needed to generate one job there was Rs. 13,391."

ಉತ್ತರ ಕನ್ನಡದಲ್ಲಿ ಬರೇ ೪,೮೦೦ ರೂಪಾಯಿ ಖರ್ಚು ಮಾಡುವುದರಿಂದ ಒಂದು ಜಾಬ್‌ನ್ನು ಕ್ರಿಯೇಟ್ ಮಾಡಬಹುದು. ಈ ಎಲ್ಲಾ ಆಧಾರಗಳನ್ನು ಇಟ್ಟುಕೊಂಡು ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾಲ್ಕು ಜೋನ್‌ಗಳನ್ನು ಮಾಡಿದ್ದೀರಿ. ಇದನ್ನು ಯಾವ ತರಹದ್ದು, ಯಾವ ಆಧಾರದಮೇಲೆ ಮಾಡಿದ್ದೀರಿ ಎಂದು ಸ್ಪಷ್ಟವಾಗಿ ವರದಿಯಲ್ಲಾಗಲೀ, ಸರ್ಕಾರಿ ಆಜ್ಞೆಯಲ್ಲಾಗಲೀ ಇಲ್ಲ. Zone 1... Industrially more developed area, Zone 2 Industrially less developed area... Zone-3... Areas identified by the State for industrial growth... Zone-4... Centrally declared industrially backward areas... ಯಾವ ಆಧಾರದಮೇಲೆ ಈ ಜೋನ್‌ಗಳ ಅಡಿಯಲ್ಲಿ ಬರುವ ತಾಲ್ಲೂಕುಗಳನ್ನು ಸೇರಿಸಿಕೊಂಡಿದ್ದೀರಿ ಎಂದು ಸ್ಪಷ್ಟವಾಗಿ ವರದಿಯಲ್ಲಿ ಸಿಗುತ್ತಿಲ್ಲ. ಹೀಗೇನೇ ಕೆಲವು ತಾಲ್ಲೂಕುಗಳನ್ನು ಈ ಜೋನ್ ಪ್ರಕಾರ ನಿಮಗೆ ಸೂಚನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ಕೋಲಾರ ಜಿಲ್ಲೆಯಲ್ಲಿ ನನ್ನ ಮಾಲೂರು ಕ್ಷೇತ್ರ ಇದೆ ಮಾಲೂರು ಕ್ಷೇತ್ರದ ಪಕ್ಕದಲ್ಲಿ ತಮಿಳುನಾಡಿನ ಹೊಸೂರು ತಾಲ್ಲೂಕು ಬರುತ್ತದೆ. ಅಲ್ಲಿ ಸಿಕ್ಕಾಪಟ್ಟೆ ಕೈಗಾರಿಕೆಗಳು ಬಂದು ಮಾಲೂರು ತಾಲೂಕಿನಿಂದ ಸುಮಾರು ನಾಲ್ಕೈದು ಸಾವಿರ ಜನ ಅಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರದವರು ಮಾಲೂರು ತಾಲ್ಲೂಕನ್ನು ಈ ನಾಲ್ಕು ಜೋನ್ ಕೆಳಗೆ ಏನು ಕೈಗಾರಿಕೆಗಳು ಬರುತ್ತವೆ ಅದನ್ನು ತಂದರೆ ಆಗ ನಮ್ಮ ತಾಲ್ಲೂಕಿನ ಜನಕ್ಕೆ ಅದು ಉಪಯೋಗವಾಗಿ ಅಲ್ಲೂ ಕೂಡ ಕೈಗಾರಿಕೆಗಳು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಹಾಗೇನೆ ಬಿಜಾಪುರ ಜಿಲ್ಲೆಯಲ್ಲಿ ಮುಡಿಬೆಳ್ಳ ತಾಲ್ಲೂಕು ಇದೆ. ಅಲ್ಲಿ ಹೊಸದಾಗಿ ಕೈಗಾರಿಕೆಗಳು ಬರುತ್ತಿವೆ. ಅದನ್ನು ಜೋನ್ ಎರಡರಲ್ಲಿ ಇಟ್ಟಿದ್ದೀರಿ. ಜೋನ್ ಮೂರರಲ್ಲೋ ಅಥವಾ ನಾಲ್ಕರಲ್ಲೋ ಮಾಡಿದರೆ ಅಲ್ಲಿ ಕೈಗಾರಿಕೆಗಳು ಬರುತ್ತವೆ ಮತ್ತು ಅವರಿಗೆ ಎಲ್ಲಾ ಉಪಯೋಗ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸರ್ಕಾರ ಕೈಗಾರಿಕೆಗಳನ್ನು ಮಾಡುವವರಿಗೆ ಹಲವಾರು ಅನುಕೂಲಗಳನ್ನು ಮಾಡಿಕೊಟ್ಟಿದೆ. ಆದರೆ ಈ ಅನುಕೂಲತೆಗಳು ಏನಿವೆ, ನಿಜವಾಗಿಯೂ ನಮ್ಮ ಸಾಮಾನ್ಯ ಜನತೆಗೆ ಅವುಗಳು ಗೊತ್ತಿಲ್ಲ. ಇದನ್ನು ನೀವು ಪ್ರಜಾವಾಣಿ, ಕನ್ನಡಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್. ಡೆಕ್ಕನ್ ಹೆರಾಲ್ಡ್ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಅಚ್ಚು ಹಾಕಿಸಿದರೆ ಹೆಚ್ಚು ಪ್ರಯೋಜನ ಆಗುತ್ತದೆ. ಹೌಸಿಂಗ್ ಸಬ್ಸಿಡಿ ಬಗ್ಗೆ ಜನಕ್ಕೆ ಗೊತ್ತಿರುವುದಿಲ್ಲ. ತಾಂತ್ರಿಕ ತಿಳುವಳಿಕೆಗೆ ಧನಸಹಾಯ ಮಾಡುತ್ತಿದ್ದಾರೆ. Assistance in the procurement of technical know-how ಇದು ನನಗೆ ಗೊತ್ತಿರಲಿಲ್ಲ. ರಾತ್ರಿ ನೋಡಿದ್ದಕ್ಕೆ ಗೊತ್ತಾಯಿತು. ಇಂತಹ ಒಳ್ಳೆಯ ಸ್ಕೀಮ್‌ಗಳು ಇರುವಾಗ ಪತ್ರಿಕೆಗಳ ಮುಖಾಂತರ

ಅದರ ಬಗ್ಗೆ ಇಂಟೆನ್ಸಿವ್ ಆಗಿ ಜನರಿಗೆ ತಿಳಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಈಗ ಕೇಂದ್ರ ಸರ್ಕಾರದವರು ಒಂದು ರಿವೈಸ್ಡ್ ಪಾಲಿಸಿ ಮಾಡಿದ್ದಾರೆ. ಸ್ಮಾಲ್ ಸ್ಕೇಲ್ ಯೂನಿಟ್ಸ್‌ನಲ್ಲಿ ಪ್ಲಾಂಟ್ಸ್ ಅಂಡ್ ಇಕ್ವಿಪ್‌ಮೆಂಟ್ಸ್‌ಗೆ ೨೦ ಲಕ್ಷ ರೂಪಾಯಿ ಫಿಕ್ಸ್ ಮಾಡಿದ್ದಾರೆ. ಆದರೆ ಏನ್ಸಿಲಿಯರಿ ಯೂನಿಟ್ಸ್‌ಗೆ ೨೫ ಲಕ್ಷ ಮಾಡಿದ್ದಾರೆ. ಈಗ ಮೆಟೀರಿಯಲ್ ಕಾಸ್ಟ್ ೨೨ ಲಕ್ಷ ಏರಿದೆ ಇದು ನಿಜವಾಗಿಯೂ ಸಾಲುವುದಿಲ್ಲ. ನೀವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ೨೦ ಲಕ್ಷದಿಂದ ೨೫ ಲಕ್ಷಕ್ಕೆ ಹೆಚ್ಚು ಮಾಡಬೇಕು. ಪ್ಲಾಂಟ್ ಅಂಡ್ ಮೆಶಿನರಿಗೆ ೩೦ ಲಕ್ಷ ಮಾಡುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಾಗೇನೇ ಕಾರ್ಮಿಕ ಸಮಸ್ಯೆ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಒಂದೇ ಒಂದು ಅಂಶವನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಜನರು ಹೇಗೆ ಎಂದರೆ ಜಪಾನ್‌ನಲ್ಲಿ ತಯಾರಾದ ವಾಚ್‌ಗೆ ಚೆನ್ನಾಗಿದೆ ಎಂದು ಹೇಳುತ್ತೇವೆ, ಆದರೆ ಜಪಾನ್‌ನಲ್ಲಿ ಯಾವ ರೀತಿ ಕೆಲಸ ಮಾಡುತ್ತಾರೆ ಅವರ ಧ್ಯೇಯೋದ್ದೇಶಗಳು ಅವರ ಕೈಗಾರಿಕಾ ಬೆಳವಣಿಗೆ ಬಗ್ಗೆ ಮಾಹಿತಿ ತರಿಸಿಕೊಂಡು ಸರ್ಕಾರದವರು ನಮ್ಮ ಜನಕ್ಕೆ ತಿಳಿಸಬೇಕು.

> "Accroding to the latest information from the Ministry of Labour, salaried workers in Japan avail themselves of only 60 per cent of thei paid leave every year. In other words, they forego 40 per cent of their paid leave voluntarily. Yet in small factories or establishments employing about 100 workers or so workers on their accord spend 50 per cent or half of their vacation time on operating machines or working at their desks"

ಅಲ್ಲಿಯ ಕೆಲಸಗಾರರು ಏನು ಇದ್ದಾರೆ, ಅವರ ಶೇಕಡಾ ಅರವತ್ತು ಭಾಗದಷ್ಟು ಮಾತ್ರ ತಮ್ಮ ರಜೆಯನ್ನು ಉಪಯೋಗಿಸಿಕೊಂಡು ಉಳಿದ ನಲ್ವತ್ತು ಭಾಗದಷ್ಟು ರಜೆಯನ್ನು ಕೈಗಾರಿಕೆ ಬೆಳವಣಿಗೆಗೆ ಮುಡಿಪಿಡುತ್ತಾರೆ. ಇಂತಹ ಪಾಲಿಸಿಯನ್ನು ನಮ್ಮ ರಾಜ್ಯದಲ್ಲೂ ಅಳವಡಿಸುವುದಕ್ಕೆ ಏನು ಪ್ರಯತ್ನ ಪಡುತ್ತೀರಿ ಎಂದು ಕೇಳಿಕೊಂಡು...

ಚೇರ್ಮನ್.—ಬೇಗ ಮುಗಿಸಿಬಿಡಿ.

ಶ್ರೀ . ನಾಗರಾಜ್.—ಇನ್ನು ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ರಾಯಚೂರು ತಾಲ್ಲೂಕಿನಲ್ಲಿ ಚಿಂಚೋಳಿಯಲ್ಲಿ ಕೃಷ್ಣದೇವರಾಯ ಕಾರ್ಡ್‌ಬೋರ್ಡ್ ಕಾರ್ಖಾನೆಗೆ ೧೯೭೪ ರಲ್ಲಿ ಅಡಿಗಲ್ಲು ಆಯಿತು. ಅದಕ್ಕೆ ೯೫ ಲಕ್ಷ ಸಾಲವನ್ನು ಕೆ.ಎಸ್.ಎಫ್.ಸಿ. ಯಿಂದ ಕೊಟ್ಟಿದ್ದೀರಿ. ಬಿಲ್ಡಿಂಗ್ ಮಾತ್ರ ಇದೆ. ಉತ್ಪಾದನೆ ನಡೆಯುತ್ತಿಲ್ಲ. ೧೯೭೪ ರಿಂದ ೧೯೮೩ರವರೆಗೆ ಇದರ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಎಂದು ಕೇಳುತ್ತಿದ್ದೇನೆ ಕೆ.ಎಸ್.ಎಫ್.ಸಿ. ಯಿಂದಾಗಲೀ, ಅಥವಾ ಕೈಗಾರಿಕೆ ಇಲಾಖೆಯಿಂದಾಗಲೀ ಇದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಮಾನ್ಯ ಕೈಗಾರಿಕಾ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಆದೇ ರೀತಿ ಅವರು ಈ ಫ್ಯಾಕ್ಟರಿಯಲ್ಲಿ ಏನು ಮೆಷಿನರಿಗಳು ಇವೆ, ಅವುಗಳನ್ನು ಮಾರಿಕೊಳ್ಳುತ್ತಿದ್ದಾರೆ. ಮತ್ತು ಅಲ್ಲಿ ಆದರ ದುರುಪಯೋಗವಾಗುತ್ತಿವೆ. ಅದನ್ನು ಕೂಡಲೇ ತಾವು ತಡೆಗಟ್ಟಬೇಕೆಂದು ತಮ್ಮ ಮುಖೇನ ನಿವೇದನೆ ಮಾಡಿಕೊಳ್ಳುತ್ತೇನೆ. ಹಾಗೆಯೇ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಸ್ಕೀಂ ಆಗಿ ನಮ್ಮ ರಾಜ್ಯದಲ್ಲಿ ಬೆಳೆಯಬೇಕಾದರೆ ಮತ್ತು ಬೆಳೆದಂಥ ಇಂಡಸ್ಟ್ರಿಯಲ್‌ನಲ್ಲಿ ಪ್ರೊಡಕ್ಷನ್ ಬರಬೇಕಾದರೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬಹಳ ಪ್ರಾಮುಖ್ಯ. ಲಾ ಅಂಡ್ ಆರ್ಡರ್ ಸರಿಯಾಗಿ ಇಲ್ಲದೇ ಇದ್ದರೆ, ಇಂಡಸ್ಟ್ರಿಯಲ್ ಪ್ರೊಡಕ್ಷನ್ ಬಹಳವಾಗಿ ಇಳಿಮುಖವಾಗುತ್ತದೆ ಅದರ ಬಗ್ಗೆ ನನ್ನಲ್ಲಿ ಮಾಹಿತಿಗಳು ಇವೆ. ಆದರೆ ವೇಳೆ ಆಗಿರುವುದರಿಂದ ಸವಿಸ್ತಾರವಾಗಿ ಅದನ್ನು ಹೇಳುವುದಕ್ಕೆ ಹೋಗದೆ ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಕೆಲವು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಅನೇಕ ಬೇಡಿಕೆಗಳು ನಮ್ಮ ಮುಂದಿವೆ. ಕೈಗಾರಿಕಾ ಮಂತ್ರಿಗಳದ್ದು, ಮುಖ್ಯಮಂತ್ರಿಗಳದ್ದು ಹಾಗೂ ಆರೋಗ್ಯ ಮಂತ್ರಿಗಳಾದ ಶ್ರೀ ಸಿಂಧ್ಯ ಅವರದ್ದು ಇದೆ. ಆದರೆ ಎಲ್ಲಾ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಕೆಲವು ವಿಷಯಗಳ ಬಗ್ಗೆ ನನ್ನ ಗೆಳೆಯರಾದ ಶ್ರೀ ಶಾನಪ್ಪನವರು ಮಾತನಾಡುತ್ತಾರೆ ನಾನು ಕೈಗಾರಿಕೆಗೆ ಸೀಮಿತವಾಗಿ ಮತ್ತು ಸ್ವಲ್ಪಮಟ್ಟಿಗೆ ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟ ಹಾಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಕೈಗಾರಿಕೆಯ ಬಗ್ಗೆ ಬಹಳ ಸಂತೋಷದಾಯಕವಾಗಿ ಒಬ್ಬ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅನೇಕ ಅಂಕಿಅಂಶಗಳನ್ನು ಕೂಡ ಕೊಟ್ಟಿದ್ದಾರೆ. ನಾನಾದರೂ ಕಳೆದ ಸಾರಿ ಈ ಕೈಗಾರಿಕಾ ಧೋರಣೆಯ ಬಗ್ಗೆ ವಿವರವಾದ ಬಹಳ ಧೀರ್ಘವಾಗಿ ಮಾತನಾಡಿ, ಈ ಸರ್ಕಾರದ ಧೋರಣೆಗೆ ಅನುಗುಣವಾಗಿ ರಾಜ್ಯ ಸರ್ಕಾರದ ಧೋರಣೆ ಇರಬೇಕೇ ಹೊರತು ಅದಕ್ಕೆ ವಿರುದ್ಧವಾದ ಧೋರಣೆ ಆದರೆ ಕಷ್ಟವಾಗುತ್ತದೆಂದೂ ಸಹ ಹೇಳಿದ್ದೆ. ೧೯೫೬ರಲ್ಲಿ ಏನು ಒಂದು ನಿರ್ಣಯ ಮಾಡಿದರೂ, ೧೯೭೭ರಲ್ಲಿ ಜನತಾ ಪಕ್ಷದ ಸರ್ಕಾರ ಕೇಂದ್ರದಲ್ಲಿ ಬಂದಾಗ ಏನು ಒಂದು ನಿರ್ಣಯ ಆಯಿತು, ನಂತರ ೧೯೮೦ರಲ್ಲಿ ಪುನಃ ಶ್ರೀಮತಿ ಇಂದಿರಾಗಾಂಧಿಯವರ ಸರ್ಕಾರ ಬಂದಾಗ ಏನು ನಿರ್ಣಯವಾಗಿದೆ, ಆ ನಿರ್ಣಯಗಳ ಆಧಾರದ ಮೇಲೆ ಕೈಗಾರಿಕೆಗಳ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಆಗಬೇಕಾದರೆ ಮೊದಲು ನಾವು ದೊಡ್ಡ ದೊಡ್ಡ ಕೈಗಾರಿಕೆಗಳನ್ನು, ಸೆಕ್ಟರ್ ಕೈಗಾರಿಕೆಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತರಬೇಕು. ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಎಷ್ಟು ಕೈಗಾರಿಕೆಗಳನ್ನು ಬೆಳೆಯುತ್ತವೆ ಅಷ್ಟನ್ನು ಬೆಳೆಸಬೇಕೆಂದೂ ಮತ್ತು ಇದರ ಜೊತೆಯಲ್ಲಿ ಮಧ್ಯಮ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿದ್ದೆ. ಆ ರೀತಿ ಮಾಡಿದರೆ ಮಾತ್ರ ಇನ್‌ಫ್ರಾಸ್ಟ್ರಕ್ಚರ್ ಎಂದು ಏನು ಹೇಳುತ್ತೇನೆ ಅದು ಇರುತ್ತದೆ, ಮತ್ತು ಕೆಲಸವೂ ಆಗುತ್ತದೆ. ಮತ್ತು ದೇಶದ ಸಂಪತ್ತೂ ಸಹ ಜಾಸ್ತಿಯಾಗುತ್ತದೆ. ಹಾಗೂ ಉಪ ಕೈಗಾರಿಕೆಗಳು ಸುತ್ತಮುತ್ತ ಬರುತ್ತವೆ. ಇದರಿಂದ ಉದ್ಯೋಗಾವಕಾಶಗಳು ಜಾಸ್ತಿಯಾಗುತ್ತದೆ, ಸಂಪತ್ತು ಜಾಸ್ತಿಯಾಗುತ್ತದೆ ಮತ್ತು ಗೃಹ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳು ಬರುವುದಕ್ಕೆ ಅವಕಾಶವಾಗುತ್ತದೆಂದು ಹೋದ ಸಾರಿಯೇ ಹೇಳಿದ್ದೆ. ಆ ಧೋರಣೆ ಈಗ ಇಲ್ಲ. ಕೇಂದ್ರದಲ್ಲಿ ಜನತಾ ಪಕ್ಷದ ಆಳ್ವಿಕೆಯಲ್ಲಿದ್ದಾಗ ಏನು ಧೋರಣೆ ತಾಳಿತ್ತೋ ಅದೇ ಧೋರಣೆಯನ್ನು ಈಗ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಹೇಳಿರುವುದು ಏನು ಮತ್ತು ಆಗಿರುವುದು ಏನು ಎಂಬುದನ್ನು ಸ್ವಲ್ಪ ಮಟ್ಟಿಗೆ ವಿಮರ್ಶೆ ಮಾಡಬೇಕಾಗಿದೆ. ಇದರಲ್ಲಿ ನಾನಂತೂ ಆ ಧೋರಣೆಯನ್ನು ವಿಮರ್ಶೆ ಮಾಡಿ ಅಥವಾ ಟೀಕೆ ಮಾಡಿ ಒಪ್ಪಿಕೊಳ್ಳುವವನಲ್ಲ. ಈ ನೀತಿಯನ್ನೇ ಬದಲಾವಣೆ ಮಾಡಬೇಕೆಂದು ಹೇಳುವವನು ನಾನು, ಅವರು ಹೇಳಿದ್ದು, ಇನ್ನೂ ಪುಷ್ಟೀಕರಣವಾಗಿದೆಯೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ ಏಕೆಂದರೆ ಕೈಗಾರಿಕೆಯ ಬಗ್ಗೆ ಮಾತನಾಡುತ್ತಾ ಏನು ಹೇಳಿದ್ದಾರೆ ಅಂದರೆ ಮೊದಲನೆಯದಾಗಿ ಅವರು ಹೇಳುವುದು ಒಂದು ಸಾವಿರ ಸಣ್ಣ ಕೈಗಾರಿಕೆಗಳನ್ನು ಪ್ರತಿ ತಿಂಗಳು ಕೊಡುತ್ತೇವೆಂದು ಹೇಳಿದ್ದಾರೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಗಳಿಗೆ ಹೆಚ್ಚಿನ ಉತ್ತೇಜನ ಕೊಡುತ್ತೇವೆಂದು ಹೇಳಿದ್ದಾರೆ. ಲೆದರ್ ಇಂಡಸ್ಟ್ರೀಸ್, ಹ್ಯಾಂಡಲೂಮ್ ಇಂಡಸ್ಟ್ರೀಸ್ ಇವುಗಳಿಗೂ ಉತ್ತೇಜನ ಕೊಡುತ್ತೇವೆಂದು ಹೇಳಿದ್ದಾರೆ, ಹೀಗೆ ೩–೪ ಅಂಶಗಳನ್ನು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಅದಕ್ಕೆ ಎಷ್ಟು ಹಣ ಒದಗಿಸಿದ್ದಾರೆಂದರೆ, ವಿಲೇಜ್ ಅಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ೧೩೯೧.೪೮ ಲಕ್ಷ, ಲಾರ್ಜ್ ಅಂಡ್ ಮೀಡಿಯಂ ಸ್ಕೇಲ್ ಇಂಡಸ್ಟ್ರಿಗಳಿಗೆ ೧೯೦೧ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅವರು ಹೇಳಿದ ಪ್ರಕಾರವೇ ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳು ಬಂದಿದ್ದರೆ ಒಂದು ವರ್ಷದಲ್ಲಿ ಒಂದು ಲಕ್ಷ ಕೈಗಾರಿಕೆಗಳು ಬಂದಂತಾಗುತ್ತವೆ. ನೀವು ಕೊಟ್ಟಿರತಕ್ಕ ಹಣವನ್ನು ಸಾವಿರದಿಂದ ಭಾಗಿಸಿದರೆ ಒಂದೊಂದು ಯೂನಿಟಿಗೆ ೧,೩೯,೧೪೮ ರೂ. ಆಗುತ್ತದೆ. ಆ ರೀತಿ ಕೈಗಾರಿಕೆಗಳು ಬಂದರೆ ಬಜೆಟ್ಟಿನಲ್ಲಿ ಹಣ ಉಳಿಯುತ್ತದೆಯೋ !

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಾರಿ ಬಜೆಟ್ಟಿನಲ್ಲಿ ಅದಕ್ಕೋಸ್ಕರ ೧೪ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಅದರ ಜೊತೆಗೆ ಫೈನಾನ್ಸಿಂಗ್ ಏಜೆನ್ಸಿಗಳು ಬೇರೆ ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ಡಾ. ಆಚಾರ್ಯ ಅವರ ಹೇಳಿದ ಹಾಗೆ ನೀವು ಕೊಟ್ಟಿರುವುದು ೩.೮ ಲಕ್ಷ ನನ್ನ ಅಂಕಗಣಿತದ ಪ್ರಕಾರ ಲೆಕ್ಕಾಚಾರ ಹಾಕಿದಾಗ ನೀವು ತಿಂಗಳಿಗೆ ಒಂದು ಸಾವಿರ ಕೈಗಾರಿಕೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಮಾಡುತ್ತೀರೋ, ಬಿಡುತ್ತೀರೋ ಆ ಮಾತು ಬೇರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಸಬ್ಸಿಡಿ ಬೇರೆ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳುವುದು ಸಬ್ಸಿಡಿ ಪ್ರಶ್ನೆಯಲ್ಲ. ಬಡ್ಜೆಟ್ ಔಟ್‌ಲೇಯಲ್ಲಿ ಒಂದು ಯೂನಿಟ್ಟಿಗೆ ಒಂದು ಲಕ್ಷದ ೩೯ ಸಾವಿರದ ೧೪೮ ರೂಪಾಯಿ ಬರುತ್ತದೆ. ಇದರ ಜೊತೆಗೆ ಲಾರ್ಜ್ ಸ್ಕೇಲ್ ಮತ್ತಿತರ ಇಂಡಸ್ಟ್ರಿಗಳು ಇವೆ. ಆದರೆ ಅವು ಬೇರೆ ಬಿಡಿ, ನಿಮ್ಮ ಯೋಜನೆ ಹೇಳಿ. ನಿಮ್ಮ ಯೋಜನೆಯ ಆಧಾರದ ಮೇಲೆ ಹೋದರೆ ನೀವು ಹೇಳಿದ ಪ್ರಕಾರ ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಧ್ಯ ಇಲ್ಲ, ನಮಗೆ ನೀವು ಕೊಡಬೇಕಾದ ಅಂಕಿಅಂಶಗಳು ಏನೆಂದರೆ ಸಾವಿರದಲ್ಲಿ ಎಷ್ಟು ಕೈಗಾರಿಕೆಗಳು ಬಂದಿವೆ ? ಅದರಲ್ಲಿ ನಿಜವಾಗಿ ನಮ್ಮ ರಾಜ್ಯಕ್ಕೆ ಉಪಯೋಗವಾಗಿರುವ ಕೈಗಾರಿಕೆಗಳ ಬಗ್ಗೆ ಸ್ಪಷ್ಟವಾಗಿ ವಿವರ ಕೊಡಬೇಕಾಗಿದೆ.

ಶ್ರೀ. ವಿ. ಎಸ್. ಆಚಾರ್ಯ.—ಕೆಲವು ದಿನಗಳ ಹಿಂದೆ ೩೮ ಲಕ್ಷ ರೂಪಾಯಿಗಳ ಜೊತೆಗೆ ಎರಡು ಲಕ್ಷ ರೂಪಾಯಿ ಸಬ್ಸಿಡಿ ಎಂದು ಕೊಟ್ಟಿದ್ದೀರಿ. ಸಾವಿರ ಲಕ್ಷಕ್ಕೂ ೩೮ ಲಕ್ಷಕ್ಕೂ ವ್ಯತ್ಯಾಸ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೈಗಾರಿಕೆಗಳನ್ನು ಕೊಡುವ ವಿಚಾರ ಬೇರೆ ಅವುಗಳಿಗೆ ಬೇರೆ ಬೇರೆ ಸಂಸ್ಥೆಯವರು ಹಣ ಕೊಡುತ್ತಾರೆ.

ಡಾ. ವಿ. ಎಸ್. ಆಚಾರ್ಯ.—ನಿಮ್ಮ ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ಆಗಲೇ ಪ್ರಸ್ತಾಪ ಮಾಡಿದಾಗ ತಾವು ಇರಲಿಲ್ಲ. ಆದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಖಾದಿ ಮತ್ತು ಗ್ರಾಮೋದ್ಯೋಗದ ವಿಷಯ ಏನಿದೆ ಅದೊಂದು ಕರ್ಮಕಾಂಡ. ಅದು ದಿವಂಗತ ಸಿದ್ಧವೀರಪ್ಪನವರ ಕಾಲದಿಂದ ಇದೆ. ಅದನ್ನು ನೀವು ಮುಂದು ವರಿಸಿಕೊಂಡು ಹೋಗುತ್ತಿದ್ದೀರಿ. ಅದನ್ನು ಸರಿಪಡಿಸುವುದಕ್ಕೆ ಶ್ರೀ ಬೊಮ್ಮಾಯಿಯವರಿಂದ ಅಂತೂ ಸಾಧ್ಯವೇ ಇಲ್ಲ. ಅವರು ಸರಿ ಮಾಡುತ್ತೇವೆಂದರೂ ಅದರಲ್ಲಿ ನನಗೆ ನಂಬಿಕೆ ಇಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಇವೊತ್ತಿನ ದಿವಸ ಅಲ್ಲಿ ೧೦೦–೧೫೦ ರೂಪಾಯಿ ಗಳಿಗೆ ದುಡಿಸಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಕೊಡತಕ್ಕ ಸಂಬಳ ಕೂಡಾ ಬಹಳ ಕಡಿಮೆ. ಅವರಿಗೆ ಯಾವ ರೀತಿಯಾದ ಸೇವಾ ಭದ್ರತೆಯೂ ಇಲ್ಲ. ತಾವು ಈ ಸದನದಲ್ಲಿ ಸದಸ್ಯರಾಗಿದ್ದಾಗ ಅದರ ಬಗ್ಗೆ ದೀರ್ಘವಾಗಿ ಪ್ರಸ್ತಾಪ ಮಾಡಿ ಆಗಿದ್ದ ಸರ್ಕಾರವನ್ನು ಹರಿದು ಹಂಚಿ ಹಾಕಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನನಗೆ ಗೊತ್ತಿರುವ ಹಾಗೆ ಇದು ಒಂದು ಕರ್ಮ ಕಾಂಡವೇ ನಿಜ. ಇದರ ಬಗ್ಗೆ ಮೂರು ದಿವಸ ಚರ್ಚೆ ಮಾಡಬೇಕು. ಅಲ್ಲಿ ಸುಮಾರು ಹದಿ ನೆಂಟು–ಇಪ್ಪತ್ತು ವರ್ಷಗಳಿಂದ ೧೦೦–೧೫೦ ರೂಪಾಯಿ ಸಂಬಳಕ್ಕೆ ಕೆಲಸ ಮಾಡುವವರಿದ್ದಾರೆ. ಅವರಿಂದ ಎರಡೆರಡು ಓಚರ್‌ಗಳನ್ನು ತೆಗೆದುಕೊಂಡು ಸಂಬಳ ಕೊಡುತ್ತಿದ್ದಾರೆ.

ಶ್ರೀ. ವಿ. ಎಸ್. ಆಚಾರ್ಯ.—ಆ ಕೆಲಸಗಾರರೆಲ್ಲಾ ಖಾದಿ ಮತ್ತು ಗ್ರಾಮೋದ್ಯೋಗದ ಅಧ್ಯಕ್ಷರನ್ನು ನೋಡಲು ನಿಯೋಗ ಹೋದಾಗ ಅಲ್ಲಿದ್ದಂಥ ಅವರ ಪಿ. ಎ. ಅವರು ಅವರನ್ನೆಲ್ಲಾ ಬೈದು ಕಳುಹಿಸಿದ್ದಾರೆ. ಅವರ ಬಗ್ಗೆ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—೩೦ ವರ್ಷಗಳ ಕಾಲ ದುಡಿದು, ಕೈಕಾಲು ಗಳೆಲ್ಲಾ ಬಿದ್ದು ಹೋಗಿವೆಯೆಂದು ಅವರು ಬಂದು ಹೇಳಿದರು

ಛೇರ್‌ಮನ್.—ಸಾಮಾಜಿಕ ನ್ಯಾಯ ದೊರೆಕಿಲ್ಲ ಎಂಬುದರ ಬಗ್ಗೆ ಮಾತನಾಡಬಹುದು.

ಶ್ರೀ ಎಂ, ಎಸ್. ಕೃಷ್ಣನ್.—ಅದು ಗೊತ್ತಿದ್ದರೆ, ಈ ರೀತಿ ನಡೆಯುತ್ತಿರಲಿಲ್ಲ.

ಶ್ರೀ ವಿ. ಎಸ್. ಆಚಾರ್ಯ.—ಅದನ್ನು ಪರಿಶೀಲನೆ ಮಾಡುತ್ತೇವೆ ಎಂದಾದರೂ ಹೇಳಬಹುದಲ್ಲಾ.

ಛೇರ್‌ಮನ್.—ಅದರ ಅಧ್ಯಕ್ಷರಿಗೆ ವಯಸ್ಸು ಜಾಸ್ತಿಯಾಗಿರುವುದರಿಂದ......

೨-೩೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.–ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ನಮ್ಮ ರಾಜ್ಯದಲ್ಲಿ ಮಾತ್ರ ಈ ಪರಿಸ್ಥಿತಿ ಇಲ್ಲ. ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ದೇಶಗಳಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ನನ್ನ ಹತ್ತಿರ ವಿವರಗಳಿವೆ. ಕೇಂದ್ರ ಸರ್ಕಾರದವರು ಒಂದು ಅನಾಲಿಸಿಸ್ ಮಾಡಿ ಈ ತೀರ್ಮಾನಕ್ಕೆ ಬಂದಿದ್ದಾರೆ. ನಿಜವಾಗಿ ಇದು ಮುಂದುವರೆಯುತ್ತದೋ ಇಲ್ಲವೋ ಎಂಬ ಸಂಶಯ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯದೊಳಗೆ ಹ್ಯಾಂಡ್‌ಲೂಮ್ ಕೈಗಾರಿಕೆಗಳಿವೆ. ಇದನ್ನು ನಿಮ್ಮ ಚೌಕಟ್ಟಿನೊಳಗೆ ಬೆಳೆಸುವುದಕ್ಕೆ ಅವಕಾಶವಿದೆ. ಇದನ್ನು ಬೆಳೆಸುವುದಕ್ಕೆ ತಾವು ಹೆಚ್ಚು ಅವಕಾಶ ಮಾಡಿಕೊಟ್ಟಿಲ್ಲವೆಂದು ನನ್ನ ಅಭಿಪ್ರಾಯ.

Regarding Handloom Development, you have stated in the Annual Report about the schemes. It reads.

1. Intensive Handloom Development Projects at Rabkavi-Banahatti and ilkal
2. Export-oriented Cotton projects in Dharwar and Chitradurga Districts.
3. Three new Intensive Handloom Development Projects at Chitradurga, Hassan and Gulbarga for Cotton Handlooms...

ಎಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳಿದ್ದೀರಿ. ತಾವು ಯೋಚನೆ ಮಾಡಬೇಕು ಇಷ್ಟು ಮಾತ್ರ ಮಾಡಿದರೆ ಸಾಕಾಗುವುದಿಲ್ಲ. ಕೈಮಗ್ಗದವರು ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನರಿದ್ದಾರೆ. ರಬಕವಿ, ಬನಹಟ್ಟಿ ಇದು ಕಾನ್‌ಸೆಂಟ್ರೇಟ್ ಆಗಿರುವ ಜಾಗ. ದೊಡ್ಡಬಳ್ಳಾಪುರದಲ್ಲೂ ಕೂಡ ಇದ್ದಾರೆ. ಆದ್ದರಿಂದ ದೊಡ್ಡ ಪ್ರಮಾಣದಲ್ಲಿ ತಾವು ಇದರ ಬಗ್ಗೆ ಯೋಚನೆ ಮಾಡಬೇಕೆಂದು ನನ್ನ ಅಭಿಪ್ರಾಯ. ತಮಿಳುನಾಡಿನಲ್ಲಿ ಇದಕ್ಕೆ ಹೆಚ್ಚಿನ ಉತ್ತೇಜನ ಕೊಟ್ಟಿದ್ದಾರೆ. ಇದರಿಂದ ಲಕ್ಷಾಂತರ ಜನರಿಗೆ ಉದ್ಯೋಗಗಳು ಸಿಕ್ಕಿವೆ, ಆ ಪ್ರದೇಶದ ಜನರ ಜೀವನಮಟ್ಟ ಉತ್ತಮಗೊಳ್ಳುವುದಕ್ಕೆ ಅವಕಾಶವಾಗಿದೆ. ಮತ್ತು ಅವರು ತಯಾರು ಮಾಡುತ್ತಿರುವ ಬಟ್ಟೆಗಳು ಎಲ್ಲ ಕಡೆ ಹೋಗುತ್ತಿವೆ. ಅವರಿಗೆ ದಾರ ಬೇಕಾಗಿದೆ. ನನಗೆ ತಿಳಿದಮಟ್ಟಿಗೆ ತಮಿಳುನಾಡಿನಲ್ಲಿ ಸಿಕ್‌ಮಿಲ್‌ಗಳೇನಿವೆ ಅವರು ದಾರವನ್ನು ಒದಗಿಸುತ್ತಾರೆ. ಪಾಲಿಯೆಸ್ಟರ್. ಟೆರಿಕಾಟ್ ಮತ್ತು ಟೆರಿಲಿನ್ ಬಟ್ಟೆಗೆ ಉತ್ತೇಜನ ಕೊಡುವುದು ಬೇಡ, ಹತ್ತಿಗೆ ಉತ್ತೇಜನ ಕೊಡಬೇಕು ಎಂದು ಅದಕ್ಕೆ ಉತ್ತೇಜನ ಕೊಡುತ್ತಿದ್ದಾರೆ. ನಮ್ಮ ದೇಶದಲ್ಲಿ ಪಾಲಿಯೆಸ್ಟರ್ ಬಟ್ಟೆಯನ್ನು ಹಾಕಿಕೊಳ್ಳುತ್ತಿದ್ದೇವೆ. ವಿದೇಶಗಳಿಗೆ ಹೋದರೆ ಹತ್ತಿಯಿಂದ ತಯಾರಿಸಿದ ಬಟ್ಟೆಯನ್ನು ಕೊಡಿ ಎಂದು ಕೇಳುತ್ತಿದ್ದಾರೆ. ವಿದೇಶದಲ್ಲಿ ಇದಕ್ಕೆ ಬೇಡಿಕೆ ಇದೆ. ಅಲ್ಲಿ ಇದಕ್ಕೆ ಉತ್ತೇಜನ ಇದೆ. ಕರ್ನಾಟಕ ರಾಜ್ಯದಲ್ಲಿ ಇದನ್ನು ಉಪಯೋಗ ಮಾಡದೇ ಇರುವುದನ್ನು ನೋಡಿದರೆ ನನಗೆ ಅಸಮಾಧಾನ ಆಗುತ್ತದೆ. ಈ ವಿಚಾರದಲ್ಲಿ ಯೋಜನೆ ಹಾಕಿಯೇ ಇಲ್ಲ ಎಂಬುದು ನನ್ನ ಅಭಿಪ್ರಾಯ. ಇನ್ನೊಂದು ಮುಖ್ಯವಾದುದು ಎಂದರೆ ಹೊಸ್ಯೆರಿ ವಿಷಯ. ಇದರಲ್ಲಿ ಬನಿಯನ್‌ಗಳು ನಿಕ್ಕರ್‌ಗಳು ಮತ್ತು ಟವಲ್‌ಗಳನ್ನು ಮಾಡುತ್ತಾರೆ. ಇದನ್ನು ಕೂಡ ದೊಡ್ಡ ಪ್ರಮಾಣದಲ್ಲಿ ತಮಿಳುನಾಡಿನಲ್ಲಿ ಆಂಧ್ರದಲ್ಲಿ ಮಾಡುತ್ತಾರೆ. ಇದಕ್ಕೆ ಹೆಚ್ಚಿನ ಉತ್ತೇಜನ ಅಲ್ಲಿ ಸಿಕ್ಕಿದೆ. ಗ್ರಾಮಾಂತರ ಕೈಗಾರಿಕೆಗಳನ್ನು ಬೆಳೆಸಬೇಕೆಂಬ ಉದ್ದೇಶ ನಿಮಗಿದ್ದರೆ ಇದಕ್ಕೆ ಹೆಚ್ಚು ಅವಕಾಶ ಕೊಡಬೇಕು. ಹೊಸ್ಯೆರಿಗಳಿಗೆ ಉತ್ತೇಜನ ಕೊಟ್ಟರೆ ಮನೆ ಮನೆಗಳಲ್ಲಿ ಹೆಣ್ಣು ಮಕ್ಕಳು ಸಣ್ಣ ಸಣ್ಣ ಮೆಷಿನ್‌ಗಳನ್ನು ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ಅವಕಾಶವಿದೆ. ಇದಕ್ಕೆ ಉತ್ತೇಜನ ಮತ್ತು ಬೇಕಾದಂಥ ಅನುಕೂಲಗಳನ್ನು ಕೊಡಬೇಕು. ಕರೂರು ಮತ್ತು ತಿರುಪ್ಪೂರ್‌ನಲ್ಲಿ ಇದಕ್ಕೆ ಅವಕಾಶವಿದೆ. ದೇಶದಲ್ಲೆಲ್ಲಾ ಅಲ್ಲಿ ತಯಾರಿಸಿದ ಉಡುಪುಗಳು ಮಾರಾಟವಾಗುತ್ತಿದೆ. ವಿಷಯ

ತಿಳಿದುಕೊಂಡಿರುವ ತಜ್ಞರಿದ್ದರೆ ಅವರಿಂದ ವಿಷಯ ತಿಳಿದುಕೊಳ್ಳಿ. ಇಲ್ಲವೇ ಯಾರಾದರೂ ಒಬ್ಬರನ್ನು ತಜ್ಞರ ಸಲಹೆಯನ್ನು ತಿಳಿದುಕೊಂಡು ಬರುವುದಕ್ಕೆ ಅಲ್ಲಿಗೇ ಕಳುಹಿಸಿ ನಂತರ ಈ ವ್ಯವಸ್ಥೆಯನ್ನು ಮಾಡಿ. ಈ ರೀತಿ ಮಾಡಿದರೆ ನಿಮ್ಮ ಪಾಲಿಸಿ ಜಾರಿಗೆ ತರುವುದಕ್ಕೆ ಅವಕಾಶವಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಮಹಿಳಾ ದಶಕ ಇದು. ಮಾನ್ಯ ನಾಗರತ್ನಮ್ಮನವರಿಗೆ ಇದು ಗೊತ್ತಿರಬೇಕು. ಯುನೈಟೆಡ್ ನೇಷನ್ಸ್ ಆರ್ಗನೈಸೇಷನ್ನಿನವರು ಇದನ್ನು ಮಹಿಳಾ ವರ್ಷವೆಂದು ಕರೆದಿದ್ದಾರೆ. ಮಾರ್ಚ್ ೮ನೇ ತಾರೀಖು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮೊನ್ನೆ ಬೆಂಗಳೂರಿನಲ್ಲಿ ನಡೆದಾಗ ಕೆಲವರು ಮಹಿಳಾ ವರ್ಷವನ್ನು ಆಚರಿಸಿ ಜೈಲಿಗೆ ಹೋದರು. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಹಿಳೆಯರ ಮೇಲೆ ಪ್ರಪಂಚದಲ್ಲಿ ಅತ್ಯಾಚಾರಗಳು ನಡೆಯುತ್ತಿರುವುದನ್ನು ಖಂಡಿಸಿ ಪ್ರತಿಭಟನೆ ಮಾಡುವುದಕ್ಕೆ ಬಂದವರಿಗೆ ಲಾಠಿ ಚಾರ್ಜ್ ಮಾಡಿ ಪೋಲೀಸರು ಕರೆದುಕೊಂಡು ಹೋದರು ಎಂದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಮಹಿಳೆಯರಿಗೆ ಉದ್ಯೋಗಾವಕಾಶ ಒದಗಿಸುವುದಕ್ಕೆ ತಾವು ಏನು ಮಾಡಿದ್ದೀರಿ? ತಮ್ಮ ವರದಿಯ ಪುಟ (೮)ರಲ್ಲಿ 'In order to induce more women to set up their own industries for gainful employment during their leisure hours, the Government has come out with special package of incentives and concessions for women enterpreneurs. During 1983–84, 14 EDPs have been proposed exclusively for women enterpreneurs out of which 7 programmes have already been conducted upto December 1983 in Bangalore, Tumkur. Dharwad, Belgaum, Hassan, Raichur and Shimoga and about 200 candidates participated. The programme is for 7 days which consists of motivation games, lectures on all aspects of starting small scale industrial units, unit visits, group discussions with Government organisations etc...

ಎಂದು ಹೇಳಿದ್ದೀರಿ. ಇಷ್ಟು ಮಾತ್ರ ಮಾಡಿದರೆ ಮಹಿಳೆಯರಿಗೆ ಉತ್ತೇಜನ ಕೊಟ್ಟಂತೆ ಆಗುವುದಿಲ್ಲ. ಇನ್ನೂ ಉತ್ತೇಜನ ಕೊಡಬೇಕು. ತರಗತಿಗಳನ್ನು ಮಾಡಿದ್ದೇವೆ, ಸೆಮಿನಾರ್‌ಗಳನ್ನು ನಡೆಸಿದ್ದೇವೆ. ಲೆಕ್ಚರ್ಸ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇಷ್ಟು ಮಾತ್ರ ಮಾಡಿದರೆ ಸಾಲದು. ಅಗರ್‌ಬತ್ತಿ ಕಾರ್ಖಾನೆ ಮೈಸೂರಿನಲ್ಲಿ ಒಂದು ಇದೆ, ಅಲ್ಲಿ ಒಂದು ಸಾವಿರ ಜನರು ಕೆಲಸ ಮಾಡುತ್ತಾರೆ ಅದರಲ್ಲಿ ಬಹುಭಾಗ ಹೆಣ್ಣುಮಕ್ಕಳೇ ಇದ್ದಾರೆ ಎಂದು ಹೇಳಿದ್ದಾರೆ. ಆದರೆ ಒಂದು ಸಾವಿರ ಜನ ಅಗರ್‌ಬತ್ತಿ ಕಾರ್ಮಿಕರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗುವುದಾದರೆ, ಬಹುಭಾಗ ಬೆಂಗಳೂರು ನಗರದಲ್ಲಿ ೩ ಲಕ್ಷ ಜನರು ಅಗರಬತ್ತಿ ಕಾರ್ಮಿಕರಿದ್ದಾರೆ. ಅದರಲ್ಲೂ ಕೂಡ ಬಹುಭಾಗ ಮಹಿಳೆಯರಿದ್ದಾರೆ ಅವರಿಗೆ ಷೆಡ್‌ಗಳನ್ನು ನೀವೇ ಮಾಡಿಸಿದ್ದರೆ ಕೋಟ್ಯಾಂತರ ರೂಪಾಯಿ ಸಂಪಾದಿಸುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೂ ಕೂಡ ಜಾಸ್ತಿ ಸಂಬಳ ಸಿಗುತ್ತದೆ. ಮನೆಗಳಲ್ಲಿ ಅವರು ಕೆಟ್ಟ ಪರಿಸರದಲ್ಲಿ ಕುಳಿತುಕೊಂಡು ಈ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಕೈರೋಗ ಹೃದ್ರೋಗ ಮತ್ತು ಮಾನಸಿಕ ರೋಗ ಎಲ್ಲಾ ತರಹ ರೋಗಗಳು ಬರುತ್ತವೆ. ಆದ ದರಿಂದ ತಾವುಗಳು ಷೆಡ್‌ಗಳನ್ನು ಕಟ್ಟಿಸಿ ಅಲ್ಲಿ ಅವರು ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಇಂಥದ್ದಕ್ಕೆ ಏತಕ್ಕೆ ಯೋಜನೆ ಮಾಡಿಲ್ಲ? ಈಗಲೂ ಕಾಲ ಮಿಂಚಿಲ್ಲ. ಸರ್ಕಾರ ತಕ್ಷಣ ಇದರ ಕಡೆ ಗಮನಕೊಟ್ಟು ಆಸಕ್ತಿ ವಹಿಸಿ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಗರ, ಮೈಸೂರು ನಗರ ಮುಂತಾದ ಕಡೆಗಳಲ್ಲಿ ಅಗರಬತ್ತಿಯ ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ತಮಗೂ ಅನುಕೂಲ ಜನರಿಗೂ ಅನುಕೂಲವಾಗುತ್ತದೆ. ಇದೇರೀತಿ ಇನ್ನೊಂದು ಗಾರ್ಮೆಂಟ್ಸ್ ವಿಚಾರ. ಬಟ್ಟೆ ಹೊಲಿಯುವ ಉದ್ಯಮ. ಹೊಲಿಗೆ ಯಂತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ಹಿಂದೂಜಾ ಜನರಿಗೆ ಕೊಡುತ್ತಿದ್ದಾರೆ. ಅದನ್ನು ಕೊಟ್ಟ ತಕ್ಷಣ ಕೆಲವರು ಉಪಯೋಗ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ಮಾರಿಕೊಳ್ಳುತ್ತಾರೆ. ಗಾರ್ಮೆಂಟ್ಸ್ ಇಂಡಸ್ಟ್ರಿಯನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತಿರುವವರು ಹಿಂದೂಜಾ ಕಂಪನಿಯವರು. ಹಿಂದೂಜಾವೋ, ಮುಂದೂಜವೋ ಲಕ್ಷಾಂತರ ರೂಪಾಯಿ ಸಂಪಾದಿಸುತ್ತಿದ್ದಾರೆ. ಈ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುವವರು ಹೆಚ್ಚಾಗಿ ಹೆಣ್ಣು ಮಕ್ಕಳೆ ಎಂದು ಗೊತ್ತಾಗಿದೆ.

ಛೇರ್ಮನ್.—ಅವರಿಗೆ ಎಂಪ್ಲಾಯ್‌ಮೆಂಟ್ ಸೆಕ್ಯೂರಿಟಿ ಇಲ್ಲ.

Sri M. S. Krishnan.—There is a terrific exploitation, worst type of exploitation is being made by the private people...

ಇವರು ಎಕ್ಸ್‌ಪೋರ್ಟ್ ಬೇರೆ ಮಾಡುತ್ತಾರೆ. ಪ್ರಪಂಚದ ನಾನಾ ಕಡೆ ಸಂಪತ್ತಿ ಕೊಂಡು ಬರುತ್ತಾರೆ. ಆದ್ದರಿಂದ ನೀವೇ ಏತಕ್ಕೆ ಷೇಡ್‌ಗಳನ್ನು ಮಾಡಿ ನಡೆಸಬಾರದು ? ತಾವು ಬೆಂಕಿಪೊಟ್ಟಣ ಸಣ್ಣ ಸಣ್ಣ ಸೋಪುಗಳನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಹಿಂದೂಸ್ತಾನ್ ಲೀವರ್ ಅವರ ಜೊತೆ ಕಾಂಪಿಟ್ ಮಾಡುವುದಕ್ಕೆ ಆಗುತ್ತದೆಯೋ ಎಂಬ ಅನುಮಾನ ನನಗಿದೆ, ಅವರು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪಬ್ಲಿಸಿಟಿ ಎಲ್ಲಾ ಮಾಡಿ ನಿಮ್ಮನ್ನು ನುಂಗಿ ಹಾಕಿಬಿಡುತ್ತಾರೆ.

ಇಂತಹ ಕೈಗಾರಿಕೆಗಳ ಬಗ್ಗೆ ಗಮನಹರಿಸಿದರೆ, ಇನ್ನೂ ಹೆಚ್ಚು ಅನುಕೂಲವಾಗುತ್ತದೆಂದು ಹೇಳುತ್ತೇನೆ. ತಾವು ಸರ್ಕಾರ ವಹಿಸತಕ್ಕಂಥ ಕೈಗಾರಿಕೆಗಳ ಬಗ್ಗೆ ವಿವರ ಕೊಟ್ಟಿದ್ದೀರಿ. ಇವುಗಳ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋದರೆ, ವೇಳೆ ಸಾಕಾಗುವುದಿಲ್ಲ ಈ ಕಾರ್ಖಾನೆಗಳ ಬಗ್ಗೆ ಹೇಳುತ್ತಾ ಹೋದರೆ ನಮ್ಮ ಕಣ್ಣಲ್ಲಿ ರಕ್ತ ಬರುತ್ತದೆ, ನೀರು ಬರುವುದಿಲ್ಲ. ಇದರಲ್ಲಿ ಏನಾಗಿದೆ ಎಂದರೆ ಪುಟ ೧೯ ರಲ್ಲಿ ೨೯ ಕಂಪನಿಗಳಲ್ಲಿ ೧೩ ಕಂಪನಿಗಳು ಲಾಭ ಮಾಡಿವೆ ಮತ್ತು ೮ ಕಂಪನಿಗಳು ನಷ್ಟ ಮಾಡಿವೆ ಎಂದು ಹೇಳಿದ್ದೀರಿ. ಯಾರ ಕಣ್ಣು ಒರೆಸುವುದಕ್ಕೆ ತಾವು ಈ ರೀತಿ ಹೇಳುತ್ತಿದ್ದೀರಿ ? ತಾವು ಇಲ್ಲಿ ಬ್ರಾಕೆಟ್ ನಲ್ಲಿ ಬಿ. ಟಿ. ಎಂದು ಹಾಕಿದ್ದೀರಿ. ಇನ್ನೊಂದು ಕಡೆ "ಪ್ರೊ" ಎಂದು ಹೇಳಿದ್ದೀರಿ. ಬಿ. ಟಿ. ಎಂದರೆ ಬ್ಯಾಕ್‌ವರ್ಡ್ ಟ್ರೈಬೂ ಅಲ್ಲ, ಬಿ.ಟಿ. ಸೋಮಣ್ಣನವರೂ ಅಲ್ಲ. ಬಿಫೋರ್ ಟ್ಯಾಕ್ಸ್ ಅಂಥ ಅರ್ಥ ಇರುತ್ತದೆ. "ಪ್ರೊ" ಎಂದರೆ ಪ್ರಾವಿಷನೋ, ಬಿ. ಟಿ. ತೆಗೆದುಕೊಂಡು ಬಂದು, ಇಷ್ಟು ಪ್ರಾಫಿಟ್‌ನಲ್ಲಿ ನಡೆಯುತ್ತಿವೆ ಎಂದು ಹೇಳಿಕೊಂಡು ರನ್ ಆಗುತ್ತಿವೆ ಎಂದು ಹೇಳಿದರೆ ಹೇಗೆ ನಂಬುವುದಕ್ಕಾಗುತ್ತದೆ ? ಈ ರೀತಿಯ ಅಂಕಿ ಅಂಶಗಳನ್ನು ಏಕೆ ಕೊಡುತ್ತಿದ್ದೀರಿ. ಈ ಬಗ್ಗೆ ನೀವು ನೇರವಾಗಿ ಹೇಳಿ, ಟ್ಯಾಕ್ಸ್ ಇಷ್ಟು ಕೊಟ್ಟರೆ, ಇಷ್ಟು ನಷ್ಟವಾಗುತ್ತದೆ ಎಂದು ಹೇಳಿ. ೧೯೬೧–೧೯೬೨ರಲ್ಲಿ ಏನು ಚಿತ್ರ ಇತ್ತೋ ಅದಕ್ಕಿಂತ ಕಡಿಮೆಯಾಗುತ್ತದೆಯೋ ವಿನಹ ಜಾಸ್ತಿಯಾಗುವುದಿಲ್ಲ. ನಾನು ಒಂದೆರಡು ಕಂಪನಿಗಳ ಬಗ್ಗೆ ಲೆಕ್ಕಾಚಾರ ಹಾಕಿ ನೋಡಿದ್ದೇನೆ. ೧೯೬೨–೬೩ಕ್ಕೆ ನಿಮ್ಮ ಪರಿಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆ. ಉದಾಹರಣೆಗೆ ಎಂ ಎಸ್ ಐ ಎಲ್, ಮೈಸೂರು ಮಿನರಲ್ಸ್, ಕೆ ಎಸ್ ಐ ಐ ಡಿ ಸಿ, ಇಲ್ಲೆಲ್ಲಾ ಕಡಿಮೆಯಾಗುತ್ತಿದೆ. ಇನ್ನು ೮ರಲ್ಲಿ ಲಾಸ್ ಆಗಿದೆಯೆಂದು ನೀವೇ ಹೇಳಿದ್ದೀರಿ ನಿಮ್ಮ ಕೈಗಾರಿಕೆಗಳ ಚಿತ್ರ ಏನಿದೆ, ಇದು ಶೀರಾ ಅಧಮ ಸ್ಥಿತಿಗೆ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ೧೯೬೩–೬೪ರಲ್ಲಿ ಏನಾಗುತ್ತದೆಂಬುದನ್ನು ಹೇಳಿಲ್ಲ. ೧೯೬೨–೬೩ರ ಚಿತ್ರವನ್ನು ಮಾತ್ರ ಕೊಟ್ಟಿದ್ದೀರಿ. ೧೯೬೩–೬೪ರ ಚಿತ್ರವನ್ನು ಕೊಟ್ಟಿಲ್ಲ ಮಾರ್ಚಿ ಇನ್ನೂ ಪೂರ್ಣವಾಗಿಲ್ಲ, ಆಡಿಟ್ ಆಗಿಲ್ಲವೆಂದು ಹೇಳುತ್ತೀರಿ. ನನಗೆ ತಿಳಿದಮಟ್ಟಿಗೆ ೧೯೬೩–೬೪ರಲ್ಲಿ ಕೆಲವು ಕೈಗಾರಿಕೆಗಳ ಪರಿಸ್ಥಿತಿ ಏನೂ ಉತ್ತಮವಾಗಿಲ್ಲ. ಆದರೆ ಇದಕ್ಕಿಂತ ಬಹಳ ಮುಖ್ಯವಾದ ವಿಷಯ ಎಂದರೆ, ವರ್ಷದಿಂದ ವರ್ಷಕ್ಕೆ ಇವುಗಳಲ್ಲಿ ಲಾಸ್ ಕಡಿಮೆಯಾಗುತ್ತಾ ಹೋದರೆ ಎಷ್ಟೋ ಸ್ವಲ್ಪ ಪ್ರಗತಿಯನ್ನು ಸಾಧಿಸಿದ್ದೀರೆಂದು ಹೇಳಬಹುದು. ಆದರೆ ವರ್ಷೇ ವರ್ಷೇ ಲಾಸ್ ಜಾಸ್ತಿಯಾಗುತ್ತಿದೆ. ಇದಕ್ಕಾಗಿ ಏನು ಮಾಡಬೇಕು, ಯಾವ ರೀತಿ ಲಾಸ್ ಕಡಿಮೆ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಈ ಕೈಗಾರಿಕೆಗಳಲ್ಲಿ ಅತಿರಥಮಹಾರಥರು ಇದ್ದಾರೆ. ೧೯೬೧–೬೨ರಲ್ಲಿ ಎ ಐ ಎಸ್ ಎಲ್. ನಲ್ಲಿ ೯೩.೭೪ ಲಕ್ಷ ರೂಪಾಯಿ ನಷ್ಟ ಇದ್ದುದು ೧೯೬೨–೬೩ರಲ್ಲಿ ೨೨೪೯.೦೨ ಲಕ್ಷ ರೂಪಾಯಿ ನಷ್ಟವಾಗಿದೆ. ಒಂದೇಸಾರಿ ಈ ನಷ್ಟ ಗಗನಕ್ಕೆ ಹೋಗಿದೆ. ಆದ್ದರಿಂದ ಇದನ್ನು ಉಳಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ? ದಯಮಾಡಿ ನಾವು ಹಿಂದೆ ಹೇಳಿದಹಾಗೆ ಇದನ್ನು ಎಸ್ ಎ ಐ ಎಲ್.ಗೆ ಕೊಟ್ಟುಬಿಡಿ. ಅವರು ಇದನ್ನು ನಡೆಸಿಕೊಂಡು ಹೋಗಲಿ. ನಿಮಗೆ ಅಧಿಕಾರ ಇರಬೇಕೆಂದು ಹೇಳಿ ನೀವೇ ನಡೆಸಿಕೊಂಡು ಹೋಗುತ್ತಿದ್ದೀರಿ. ಈ ಒಂದು ಜಂಜಾಟದಲ್ಲಿ ಕೈಗಾರಿಕೆಗಳು ಹೇಗೆ ಅಭಿವೃದ್ಧಿಯಾಗುತ್ತವೆ ? ರಾಜಕೀಯ ಕೋಮುವಾರು ಮನೋಭಾವನೆ, ಕಾರ್ಮಿಕರಲ್ಲಿ ಕೋಮುವಾರು ಮನೋಭಾವನೆ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಅಧೋಗತಿಯ ಪರಮಾವಧಿಗೆ ಹೋಗುತ್ತವೆಂದು ನಾನು ಹೇಳುತ್ತೇನೆ. ಈಗಲೂ ವಿವೇಚನೆಯಿಂದ ಇದನ್ನು ಎಸ್. ಎ. ಐ. ಎಲ್.ಗೆ ಕೊಟ್ಟುಬಿಡಿ.

ಚೇರ್ಮನ್.—ಕೃಷಿ ಕೈಗಾರಿಕೆಗಳನ್ನೆಲ್ಲಾ ಕೊಟ್ಟುಬಿಡಬೇಕೆಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಾ ಕೈಗಾರಿಕೆಗಳು ಎಂದು ಹೇಳಲಿಲ್ಲ. ನನ್ನ ಅಭಿಪ್ರಾಯವನ್ನು ನಾನು ಹೇಳುತ್ತಿದ್ದೇನೆ.

ಚೇರ್ಮನ್.—ಬಿ. ಹೆಚ್. ಇ. ಎಲ್. ಗೆ ಕೆಲವು ಕೊಟ್ಟಿದ್ದಾರೆ. ಅದೇರೀತಿ ಇದನ್ನೂ ಕೊಡಬೇಕೆಂದು ಹೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಅವುಗಳನ್ನು ಬಿ. ಹೆಚ್. ಇ. ಎಲ್.ಗೆ ಕೊಡುವುದಕ್ಕೆ ನಾನೇ ಸ್ವತಃ ಸತ್ಯಾಗ್ರಹ ಮಾಡಿದ್ದು, ಅದಕ್ಕೆ ನೀವು ಸಹಕಾರ ಕೊಟ್ಟಿದ್ದು ನಿಮಗೆ ನೆನಪಿರಬಹುದು.

ಚೇರ್ಮನ್.—ಹೀಗಾದರೆ ತಮ್ಮ ಎಫಿಷಿಯೆನ್ಸಿ ಮೇಲೆ ರಿಫ್ಲೆಕ್ಟ್ ಆಗುವುದಿಲ್ಲವೇ ?

ಶ್ರೀ ಎಂ. ಎಸ್. ಕೃಷ್ಣನ್.—ಯಾವ ಕೈಗಾರಿಕೆಗಳಲ್ಲಿ ಕೆಲಸ ಆಗುತ್ತಿಲ್ಲ, ಅವುಗಳನ್ನು ಇಟ್ಟುಕೊಂಡಿರಬೇಕಾಗುತ್ತದೆಯೇ? ಎಷ್ಟಾದರೂ ಹಾಳಾಗಲೀ ಎಲ್ಲಕ್ಕೂ ನಮ್ಮ ಶ್ರೀ ದೊಡ್ಡಬೋರೇಗೌಡರೇ ಇರಬೇಕು ಎಂಬುದು ನ್ಯಾಯವೇ ?

ಒಬ್ಬ ಮಾನ್ಯ ಸದಸ್ಯರು.—ವಿ.ಐ.ಎ.ಎಸ್.ಎಲ್. ನಲ್ಲಿ ಲಾಸ್ ಆಗಿರುವುದಕ್ಕೆ ಇದೊಂದೇ ಕಾರಣ ಅಲ್ಲ, ಬೇರೆ ಕಾರಣಗಳೂ ಇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಇದೊಂದೇ ಕಾರಣ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರು ಷುಗರ್ ಕಂಪನಿಯಲ್ಲಿ ೪೧.೮೧ ಲಕ್ಷ ರೂಪಾಯಿ ಇದ್ದುದು, ೧೫೫ ಲಕ್ಷ ರೂಪಾಯಿ ಲಾಸ್ ಆಗಿದೆ. ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ೪೦,೦೫ ಇದ್ದುದು ೭೩.೦೭ ಲಕ್ಷ ರೂಪಾಯಿ ಆಯಿತು ಕಿಂಕೋನಲ್ಲಿ ಸ್ವಲ್ಪ ಕಡಿಮೆಯಾಗಿದೆ, ೭೭.೨೦ ಲಕ್ಷ ರೂ. ಇದ್ದುದು ೬೦.೬೨ ಲಕ್ಷ ರೂಪಾಯಿ ಆಗಿದೆ. ಕೆ.ಸಿ.ಸಿ. ಲಿಮಿಟೆಡ್‌ನಲ್ಲಿ ೧೬.೩೮ ಲಕ್ಷ ರೂಪಾಯಿ ಇದ್ದುದು ೫೧.೮೯ ಲಕ್ಷ ರೂಪಾಯಿ ನಷ್ಟವಾಗಿದೆ. ಉಳಿದ ಎರಡು ಕಾರ್ಖಾನೆಗಳಲ್ಲಿಯೂ ನಷ್ಟ ಕಡಿಮೆಯಾಗಿದೆ. ಇದನ್ನೆಲ್ಲಾ ನೋಡಿದರೆ ನಷ್ಟ ಜಾಸ್ತಿಯಾಗುತ್ತಾ ಹೋಗುತ್ತಿದೆ ಎಂದು ಕಂಡುಬರುತ್ತಿದೆಯೇ ಹೊರತು ಕಡಿಮೆ ಆಗುತ್ತಿಲ್ಲ ಇದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ, ಇದರ ಬಗ್ಗೆ ಸರ್ಕಾರ ಗಮನ ಹರಿಸಿಲ್ಲವೆಂದು ನನ್ನ ಭಾವನೆ. ಇದನ್ನು ಮಾನ್ಯ ಬೊಮ್ಮಾಯಿಯವರಿಗೆ ಹೇಳುತ್ತಿದ್ದೇನೆ. ಗಮನ ಹರಿಸದಿದ್ದರೆ ಒಂದುಸಾರಿ ನಮ್ಮನ್ನು ಕರೆಸಬೇಕಾಗಿತ್ತು. ತಾವು ಇದಕ್ಕಾಗಿ ಒಂದು ಕನ್‌ಸಲ್‌ಟೆಟಿವ್ ಕಮಿಟಿಯನ್ನು ಮಾಡಿದ್ದೀರಿ. ಆ ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿದ್ದೇನೆ. ಆದರೆ ಈ ಕಮಿಟಿ ಈ ಒಂದು ವರ್ಷದಲ್ಲಿ ಸಭೆ ಸೇರಿಲ್ಲ ಮೊನ್ನೆ ತಾನೆ ನಾನು ಇಲ್ಲಿಗೆ ಬರಬೇಕಾದರೆ ೧೧-೩೦ರ ಸಮಯದಲ್ಲಿ ಸಡನ್ ಆಗಿ ನಮಗೆ ನೋಟೀಸ್ ಬಂತು. ಮೂಲಭೂತವಾಗಿ ಇದರಲ್ಲಿ ಬದಲಾವಣೆ ಆಗಬೇಕೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ತಾವು ಈ ದಿನ ಇದೇ ದಾರಿಯಲ್ಲಿ ಹೋದರೆ, ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಿಗೆ ಉಳಿಗಾಲವಿಲ್ಲದಂತಾಗುತ್ತದೆ. ಈಗಾಗಲೇ ನನಗೆ ತಿಳಿದಮಟ್ಟಿಗೆ ನಮ್ಮ ರಾಜ್ಯದಲ್ಲಿ ಕೆಲವು ರಣಹದ್ದುಗಳು, ಇವುಗಳನ್ನು ತಿಂದುಹಾಕುವುದಕ್ಕೆ ಪ್ರಯತ್ನಪಡುತ್ತಿರುವ ವಿಷಯ ನಿಮಗೆ ತಿಳಿದಿರಬಹುದು. ಅದಕ್ಕೆ ಅವಕಾಶ ಕೊಡಬೇಡಿ ಎಂದು ಹಿಂದೆಯೇ ಹೇಳಿದ್ದೇನೆ. ಎರಡನೆಯದಾಗಿ ಈ ಕಾರ್ಖಾನೆಗಳಲ್ಲಿನ ಕಾರ್ಮಿಕರ ಸಹಕಾರವನ್ನು ತೆಗೆದುಕೊಳ್ಳಬೇಕು. ಈ ದಿನ ಇಲ್ಲದಿದ್ದರೆ ಸಾರ್ವಜನಿಕ ಕೈಗಾರಿಕೆಗಳು ಬೆಳವಣಿಗೆ ಆಗುವುದಿಲ್ಲ. ಈ ದಿನ ಖಾಸಗಿ ಕ್ಷೇತ್ರದಲ್ಲಿ ಕಾರ್ಮಿಕರ ಸಹಕಾರ ಅವರಿಗೆ ಸಿಗುವುದಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಕಾರ್ಮಿಕರ ಸಹಕಾರ ಪಡೆದು ಕೆಲಸ ಮಾಡಬೇಕಾಗುತ್ತದೆ. ಈ ಬಗ್ಗೆ ನೀವು ಮಾಂದ್ಯವಾಗಿದ್ದೀರಿ ಎಂದು ನನ್ನ ಭಾವನೆ.

ಸೋಪ್ ಡಿಟರ್ಜೆಂಟ್ ಫ್ಯಾಕ್ಟರಿಯಲ್ಲಿ ನಮ್ಮ ಯೂನಿಯನ್‌ನವರೇ ಆದ ಒಬ್ಬರನ್ನು, ಮ್ಯಾನೇಜ್‌ಮೆಂಟಿನವರು ಗುಂಪುಕಟ್ಟಿಕೊಂಡು ಬಂದು ಇವರ ಕಾಲನ್ನು ಕತ್ತರಿಸಿ ಹೋಗಿದ್ದಾರೆ. ಈಗ ಇವರನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸೇರಿಸಲಾಗಿದೆ. ಸೋಪು ಫ್ಯಾಕ್ಟರಿಯವರು ಒಂದೂವರೆ ತಿಂಗಳಿಂದ ಸರದಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆ ಫ್ಯಾಕ್ಟರಿಯಲ್ಲಿ ಆರು ಜನರನ್ನು ಡಿಸ್‌ಮಿಸ್ ಮಾಡಿದ್ದಾರೆ. ಈ ಬಗ್ಗೆ ನಾನು ವಿವರಗಳಿಗೆ ಹೋಗುವುದಿಲ್ಲ. ಅಲ್ಲಿ ಇಲ್ಲಿಯತನಕ ಸಮಾಧಾನಕರವಾಗಿಯೇ ಪರಿಸ್ಥಿತಿ ಇತ್ತು.

ಮ್ಯಾನೇಜ್‌ಮೆಂಟ್‌ನವರು ಕಾರಿನಲ್ಲಿ ಗೂಂಡಾಗಳನ್ನು ಕರೆದುಕೊಂಡು ಬಂದು ಈ ಕಾರ್ಖಾನೆಯ ಮುಖಂಡರುಗಳಿಗೆ ಹೊಡೆಸುತ್ತಿದ್ದಾರೆ. ಈಗಾಗಲೇ ಅನೇಕ ಮುಖಂಡರುಗಳು ಬಹಳ ಪೆಟ್ಟು ತಿಂದು ಆಸ್ಪತ್ರೆ ಸೇರಿದ್ದಾರೆ. ವರ್ಕರ್ಸ್ ಪಾರ್ಟಿಸಿಪೇಶನ್ ಮ್ಯಾನೇಜ್‌ಮೆಂಟಿನಲ್ಲಿ ಬಹಳ ಅವಶ್ಯಕ ಇದನ್ನು ಸರಕಾರ ತಿಳಿದುಕೊಳ್ಳಬೇಕು. ಯಾವ ಮ್ಯಾನೇಜ್‌ಮೆಂಟ್ ಕೆಲಸಗಾರರಿಗೆ ವಿರೋಧವಾಗಿದೆ ಅದು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಯಾವುದೇ ಅಧಿಕಾರಿ ಕಾರ್ಮಿಕರ ಸಹಕಾರವನ್ನು ಮ್ಯಾನೇಜ್‌ಮೆಂಟಿನಲ್ಲಿ ತೆಗೆದುಕೊಳ್ಳದಿದ್ದರೆ ಅಂತಹ ಅಧಿಕಾರಿಯನ್ನು ಕಿತ್ತುಹಾಕಿ. ನಷ್ಟ ಆಗಲು ಇದೊಂದು ಕಾರಣವಾಗಿದೆ. ನಷ್ಟವಾಗಲು ಮತ್ತೊಂದು ಕಾರಣ ಏನೆಂದರೆ ಮಾಲ್ ಅಡ್ಮಿನಿಸ್ಟ್ರೇಶನ್. ಅನೇಕ ಕಾರ್ಖಾನೆಗಳಲ್ಲಿ ಇರುವಂತೆ ಸರಕಾರ ನಡೆಸುವ ಕಾರ್ಖಾನೆಗಳಲ್ಲೂ ಸಹ ಇಂತಹ ವ್ಯವಹಾರಗಳು ಇವೆ.

ಒಂದು ಕಾರ್ಖಾನೆಯಲ್ಲಿ ಒಬ್ಬ ಜನರಲ್ ಮ್ಯಾನೇಜರ್‌ರವರಿಗೆ ವರ್ಷಕ್ಕೆ ಎರಡು ಸಲ ವಿದೇಶಕ್ಕೆ ಹೋಗದಿದ್ದರೆ ಅವರಿಗೆ ನಿದ್ದೆಯೇ ಬರುವುದಿಲ್ಲ. ಹೀಗಾಗಿ ಪ್ರತಿಯೊಂದೂ ಕಾರ್ಖಾನೆಯಲ್ಲಿಯೂ ದೊಡ್ಡ ದೊಡ್ಡ ಅಧಿಕಾರಿಗಳು ವಿಶ್ವಪರ್ಯಟನೆ ಮಾಡಿಕೊಂಡು ಹಣವನ್ನು ದುರುಪಯೋಗ ಮಾಡುತ್ತಿದ್ದಾರೆ. ಕೊಲಾಬ್ರೇಶನ್ ಅಗ್ರಿಮೆಂಟ್ ಎಂದು ಹೇಳಿಕೊಂಡು ವಿದೇಶಕ್ಕೆ ಹೋಗುತ್ತಿದ್ದಾರೆ.

ಅಧ್ಯಕ್ಷರು.— ಸೇಲ್ಸ್ ಪ್ರಮೋಶನ್ ಎಂದು ಹೇಳಿಕೊಳ್ಳುತ್ತಾರೆ.

ಶ್ರೀ ಎಂ. ಎಸ್ ಕೃಷ್ಣನ್.— ಸೇಲ್ಸ್ ಪ್ರಮೋಶನ್, ಕೊಲಾಬರೇಶನ್, ಇವುಗಳೆಲ್ಲಾ ದೊಡ್ಡ ದೊಡ್ಡ ಪದಗಳು. ಇವುಗಳ ಹೆಸರಿನಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರಿಂದ ಕಾರ್ಖಾನೆಗಳು ನಷ್ಟ ಹೊಂದುತ್ತಿವೆ. ಇನ್ನೊಂದು ಕಾರ್ಖಾನೆಯಲ್ಲಿ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಅವರಿಗೆ ಯಾವ ಟೆಕ್ನಿಕಲ್ ಕ್ವಾಲಿಫಿಕೇಶನ್ ಸಹ ಇಲ್ಲ. ಅವರು ಇಂಗ್ಲೀಷ್‌ನಲ್ಲಿ ಎಮ್.ಎ. ಅವರು ಮಾರ್ಕೆಟಿಂಗ್ ಮ್ಯಾನೇಜರ್. ಅವರು ನಮ್ಮ ರಾಜ್ಯದವರೂ ಅಲ್ಲ. ಎಲ್ಲಿಂದಲೋ ಬಂದಿರುವವರು. ಆದರೆ ನಮ್ಮ ರಾಜ್ಯದವರು ಅಲ್ಲವೆಂದು ನಾನು ಅವರ ಬಗ್ಗೆ ಹೇಳುತ್ತಿಲ್ಲ. ಯಾರಾದರೂ ಸರಿಯೇ.

ಅಧ್ಯಕ್ಷರು.— ಯಾವ ಕಾರ್ಖಾನೆ, ಯಾವ ಕೈಗಾರಿಕೆ ಎಂಬುದನ್ನು ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.— ಮೈಸೂರ್ ಲ್ಯಾಂಪ್ ವರ್ಕ್ಸ್‌ನಲ್ಲಿ. ಈ ಸಂಸ್ಥೆಗೆ ಸರಕಾರದವರು ಸಾಕಷ್ಟು ಧನ ಸಹಾಯ ಮಾಡಿದ್ದಾರೆ. ಆದರೆ ಅಲ್ಲಿನ ಅಧಿಕಾರಿಗಳು ಏನು ಮಾಡಿದ್ದಾರೆ ಎಂದರೆ ದುರುಪಯೋಗ ಮಾಡಿಕೊಂಡು ಮನೆಕಟ್ಟಿಸಿಕೊಂಡಿದ್ದಾರೆ. ಅವರಿಗೆ ಬೇಕಾದುದನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಇನ್ನೂ ಹೇಳಬೇಕಾದುದು ಬೇಕಾದಷ್ಟು ಇದೆ. ಅಲ್ಲಿನ ಅಧಿಕಾರಿಯವರು ಅವರ ಮನೆಯವರನ್ನು ಪ್ರಪಂಚ ಪರ್ಯಟನೆಗೆ ಕರೆದುಕೊಂಡು ಹೋಗಿದ್ದಾರೆ. ಇದನ್ನೆಲ್ಲಾ ನೋಡಿದರೆ ಇಂತಹವರು ಇರಬೇಕೆ ? ಎಂಬುದನ್ನು ಯೋಚನೆ ಮಾಡಬೇಕು. ನಾವು ನಮ್ಮ ಮನೆಯವರನ್ನು ಪ್ರಪಂಚ ಸುತ್ತಲು ಕರೆದುಕೊಂಡು ಹೋಗುವುದು ಸಾಧ್ಯವೆ ? ಆದರೆ ಅವರು ಅವರ ಮನೆಯವರನ್ನು ಫ್ಯಾಕ್ಟರಿ ಹಣದಲ್ಲಿ ಕರೆದುಕೊಂಡು ಹೋಗುವುದು ಸರಿಯಲ್ಲ. ಅಲ್ಲಿಯ ಅಧಿಕಾರಿಯ ಪ್ರವಾಸದ ವಿವರ ಈ ರೀತಿಯಲ್ಲಿದೆ.

Bangalore-Delhi-Jodhpur-Delhi-Bangalore ...Rs. 1014 (single fare) Bangalore-Madras-Calcutta -Patna-Delhi-B'lore ... Rs. 10,422/- Air Ticket free by Trade Wings-foregin exchange allowance-155 dollars... Bangalore-Delhi-Bangalore-Delhi-Katmandu-Delhi... Rs. 3902/- Goa... etc.,

ಇಂತಹವರನ್ನು ಕೆಲಸದಲ್ಲಿ ಇಟ್ಟುಕೊಂಡರೆ ಕೈಗಾರಿಕೆಗಳು ನಷ್ಟ ಹೊಂದುತ್ತವೆ. ಮತ್ತೊಂದು ಕಡೆ ಟಾಪ್‌ನಲ್ಲಿ ಹೆವಿ ಅಡ್ಮಿನಿಸ್ಟ್ರೇಶನ್ ಇದೆ. ಉದಾಹರಣೆಗಾಗಿ ಎನ್.ಜಿ.ಇ.ಎಫ್ ತೆಗೆದುಕೊಂಡರೆ ಅಲ್ಲಿ ಮ್ಯಾನೇಜರ್‌ಗಳು ಜಾಸ್ತಿ ಇದ್ದಾರೆ. ಹತ್ತು ಜನ ಕೆಲಸಗಾರರಿಗೆ ಒಬ್ಬ ಮ್ಯಾನೇಜರ್ ಇದ್ದಾರೆ. ಅಲ್ಲಿ ಜನರಲ್ ಮ್ಯಾನೇಜರ್, ಡೆಪ್ಯುಟಿ ಮ್ಯಾನೇಜರ್ ಎಲ್ಲರೂ ಇದ್ದಾರೆ. ಈ ರೀತಿ ಸರಕಾರಿ ಸಂಸ್ಥೆ

ಗಳಲ್ಲಿ ಅಧಿಕಾರಿಗಳು ಹೆಚ್ಚಾಗಲು ಕಾರಣ ಏನು ಎಂಬುದನ್ನು ಯೋಚನೆ ಮಾಡಬೇಕು. ಮಂತ್ರಿಗಳು, ಕೆಲವು ಶಾಸಕರು, ಅಧ್ಯಕ್ಷರನ್ನು ಬಿಟ್ಟು ಎಲ್ಲರೂ ಕೂಡಿ ರಾಜಕಾರಣ ಮಾಡಿ ಅವರ ಮಕ್ಕಳನ್ನು ಇಂಜಿನೀಯರಿಂಗ್ ಪಾಸಾದ ಮೇಲೆ ಸೇರಿಸಿ ಬಿಡುತ್ತಾರೆ. ಆ ಮಕ್ಕಳಿಗೆ ಹಾಗೂ ಅಧಿಕಾರಿಗಳ ಮಕ್ಕಳಿಗೆ ಬೇರೆ ಕಡೆಗಳಲ್ಲಿ ಕೆಲಸ ಸಿಗುವುದಿಲ್ಲ. ಆದಕ್ಕಾಗಿ ಇಲ್ಲಿ ಸೇರಿಸಿ ಬಿಡುತ್ತಾರೆ. ಮತ್ತೆ ಕೆಲವೇ ದಿವಸಗಳಲ್ಲಿ ಅವರಿಗೆ ಮ್ಯಾನೇಜರ್ ಮುಂತಾದ ಹುದ್ದೆಗಳಿಗೆ ಭಡ್ತಿ ಕೊಡುತ್ತಾರೆ. ಇನ್ನು ಸಿಕ್ ಇಂಡಸ್ಟ್ರಿ ಬಗ್ಗೆ ಮಾತನಾಡುವುದು ಬಹಳ ಇದೆ. ಅಲ್ಲಿ ಏನು ಮಾಡುತ್ತಿದ್ದಾರೆಂದರೆ ಕೋತಿ ಕೆಲಸ ಮಾಡುತ್ತಿದ್ದಾರೆ. ತಾನು ತಿಂದು ಮೇಕೆಗೆ ಒರೆಸುವ ಕೆಲಸವನ್ನು ಮಾಡುತ್ತಾರೆ. ಸರಕಾರದಿಂದ ಹಣವನ್ನು ಪಡೆದು ಆ ದುಡ್ಡನ್ನೆಲ್ಲಾ ಹೊಡೆದು ಈ ಕೈಗಾರಿಕೆಯನ್ನು ಸಿಕ್ ಮಾಡಿ ಸರಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಉದಾಹರಣೆಗೆ ಹೇಳ ಬೇಕಾದರೆ ಕೆಲವು ಖಾಸಗಿಯವರು ಮಾಲ್ ಅಡ್ಮಿನಿಸ್ಟ್ರೇಶನ್‌ನಿಂದ ನಷ್ಟವನ್ನುಂಟುಮಾಡಿ ಅದನ್ನು ಸರಕಾರ ತೆಗೆದುಕೊಳ್ಳುವಂತೆ ಮಾಡಿದರೆ ಅಂತಹ ಖಾಸಗಿ ಜನರ ಮೇಲೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ ಎಂಬುದು ಮುಖ್ಯವಾದ ಪ್ರಶ್ನೆ. ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಡಿ.ಐ.ಸಿ.ಸಿ. ಮಾಡಿದ್ದಾರೆ.

It should not become decentralised centre for increased corruption. ಡಿ.ಐ.ಸಿ.ಸಿ. ಎಂದರೆ ಡಿಸೆಂಟ್ರಲೈಸ್ಡ್ ಸೆಂಟರ್ ಫಾರ್ ಇನ್‌ಕ್ರೀಸ್ಡ್ ಕರ್‌ಪ್‌ಷನ್ ಆಗಬಾರದು. ಆದುದರಿಂದ ತಾವು ದಯಮಾಡಿ ಯೋಚನೆಮಾಡಿ ಅದು ಆಗದ ರೀತಿಯಲ್ಲಿ ಮಾಡಬೇಕು. ಒಂದು ಸೋಷಿಯಲ್ ಸೈಂಟಿಸ್ಟ್ ಎಂಬ ಮ್ಯಾಗಜಿನ್‌ನಲ್ಲಿ ಇದರ ಬಗ್ಗೆ ಬರೆದಿದ್ದಾರೆ. ಅಕ್ಟೋಬರ್ ೧೯೭೭ರಲ್ಲಿ ಜನತಾ ಪಕ್ಷದ ಆಳ್ವಿಕೆ ಇದ್ದಾಗ ಈ ಸಣ್ಣ ಕೈಗಾರಿಕೆಗಳ ಬಗ್ಗೆ ಏನು ಮಾಡಬೇಕೆಂದಿದ್ದರು ಎಂಬುದು ಇದರಲ್ಲಿ ಸೇರಿಸಿದ್ದಾರೆ.

A very interesting research was made by Sri. N. K. Chandran, on Industrialisation and the left movement on several course of strategy of west Bengal–. The same may also be applicable to us. He has mentioned about the totality of the problems of the small scale units.

೩-೦೦ ಪಿ.ಎಂ.

ಮುಖ್ಯಮಂತ್ರಿಗಳ ಇಲಾಖೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ನಮಗೆ ಅನೇಕ ಅಂಶಗಳ ಬಗ್ಗೆ ಹೇಳುವುದಕ್ಕೆ ಅವರು ಅವಕಾಶ ಮಾಡಿ ಕೊಟ್ಟಿದ್ದಾರೆ. ಆದರೆ ಎಲ್ಲದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ. ಆದರೂ ಸಹ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಚೇರ್ಮನ್.—ಕೃಷ್ಣನ್ ಅವರೇ, ಪಂಪಾಪತಿಯವರಿಗೂ ಸ್ವಲ್ಪ ವಿಷಯಗಳನ್ನು ಬಿಡಿ

ಶ್ರೀ ಎಂ. ಎಸ್. ಕೃಷ್ಣನ್.—ಪಂಪಾಪತಿಯವರು ಮಾತನಾಡುವುದಿಲ್ಲ, ಶ್ಯಾಣಪ್ಪನವರು ಮಾತನಾಡುತ್ತಾರೆ. ಅವರಿಗೇ ಬಹಳ ಬಿಡುತ್ತೇನೆ, ನಾನು ಕಡಿಮೆ ಮಾತನಾಡುತ್ತೇನೆ.

ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೋ ಜಾಸ್ತಿ ಇದೆ. ಇಲ್ಲಿ ಜನ ಸರ್ಕಾರದ ಬಗ್ಗೆ ಏನೇನು ಮಾತನಾಡುತ್ತಾರೆ ಅದು ಮುಖ್ಯ ಪೋರ್ಟ್‌ಫೋಲಿಯೋ ಬಗ್ಗೆ ಮಾತನಾಡುವುದು ಇರಲಿ. ಹೋದ ವರ್ಷ ಮಾತನಾಡುತ್ತಾ ನಾನು ಏನು ಹೇಳಿದೆ ಎಂದರೆ "ಟ್ರೈಕಾರ್ ತರಹ ಅಂದರೆ ಮೂರು ಕಂದರೆ ಗಳು. ಒಬ್ಬ ಜೇನು ಹಿಡಿದುಕೊಂಡು ಹೋಗುವುದು. ಆದರೆ ಅದಕ್ಕೆ ನೀವು ಮೂರು ಜನ ಅಧಿಪತಿ ಗಳಾಗಿದ್ದೀರಿ. ನಾನು ಹಿಂದೆ ಈ ರೀತಿ ಹೇಳಿದಾಗ ಮಾನ್ಯ ಬೊಮ್ಮಾಯಿಯವರು ನಕ್ಕಿದ್ದರು, ಈಗಲೂ ನಗುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಬೊಮ್ಮಾಯಿಂಗಳು, ಮಾನ್ಯ ದೇವೇಗೌಡರು ಈ ಮೂರುಜನದ್ದೇ ಈ ಸರಕಾರ. ಮಿಕ್ಕಿದವರೂ ಇದ್ದಾರೆ. ಮಾನ್ಯ ಸಿಂಧ್ಯಾ ಅವರು ಇದ್ದಾರೆ, ಮಾನ್ಯ ಜಿಗಜಿಣಗಿಯವರು ಇದ್ದಾರೆ, ಮಾನ್ಯ ಚಂದ್ರಶೇಖರ್‌ರವರು ಇದ್ದಾರೆ, ನಿಜ ಅವರಿಗೆಲ್ಲಾ ಅಪಚಾರ ಮಾಡಬೇಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ, ಆದರೆ ಜೇನು ಕೆಲವರು ತಾನೆ ಹಿಡಿಯಬೇಕು.

ಎಲ್ಲರೂ ಹಿಡಿಯುವುದಕ್ಕೆ ಆಗುವುದಿಲ್ಲ ಈಗ ಏನಾಗಿದೆ ಎಂದರೆ ಸರ್ಕಾರ ಅಡ್ಡಾದಿಡ್ಡಿಯಾಗಿ ಹೋಗುತ್ತಿರುವುದು ಕಂಡು ಬರುತ್ತಿದೆ. ಈ ಅಡ್ಡಾದಿಡ್ಡಿಯಾಗಿ ಹೋಗುತ್ತಿರುವುದರ ಬಗ್ಗೆ ಕೆಲವು ಅಂಶಗಳನ್ನು ನಾನು ಹೇಳುತ್ತೇನೆ. ಇನ್ನು ಕೆಲವು ಅಂಶಗಳನ್ನು ನಮ್ಮ ಗೆಳೆಯರು ಹೇಳುತ್ತಾರೆ. ಜನ ಏನು ತಿಳಿದುಕೊಂಡಿದ್ದಾರೆ ಎಂದರೆ, ಮಾನ್ಯ ಮೊಯಿಲಿಯವರು ಮಾತನಾಡುವಾಗ ಹೇಳಿದರು, ಮಾನ್ಯ ಆಚಾರ್ಯ ಅವರು ಮಾತನಾಡುವಾಗ ಹೇಳಿದರು. ಅವರು ಏನು ಹೇಳಿದರು ಎಂದರೆ ಪ್ರತಿ ಸರಕಾರ ಬಂದಿದೆ. ಒಳ್ಳೆಯ ಅವಕಾಶ ಮಾಡಿಕೊಟ್ಟಿದ್ದೇವೆ, ಒಳ್ಳೆಯ ಕೆಲಸ ಮಾಡಿ ಎಂದು ಅವಕಾಶ ಮಾಡಿ ಕೊಟ್ಟಿದ್ದೇವೆ, ಆದರೆ ಏಕೋ ಈ ಸರಕಾರ ಕುಂಟಿಕೊಂಡು ಹೋಗುತ್ತಿದೆಯಲ್ಲ ಎಂದು ಏತಕ್ಕೆ ಇವರು ಧೈರ್ಯವಾಗಿ ಮುನ್ನುಗ್ಗಿ ಹೋಗುತ್ತಿಲ್ಲ ? ಏತಕ್ಕೆ ಮುನ್ನುಗ್ಗಿ ಕೆಲಸ ಮಾಡುತ್ತಿಲ್ಲ? ಏತಕ್ಕೆ ಇವತ್ತಿನ ದಿವಸ ಜನಗಳ ಸಮಸ್ಯೆಗಳನ್ನು, ಬಡವರ ಸಮಸ್ಯೆಗಳನ್ನು ಗಮನಕ್ಕೆ ತೆಗೆದುಕೊಂಡು, ಅದನ್ನು ಬಗೆ ಹರಿಸತಕ್ಕ ರೀತಿಯಲ್ಲಿ ಮೂಲಭೂತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ? ಈ ಮೂಲಭೂತ ಕಾರ್ಯಕ್ರಮ ಎಂಬ ಅಂಶವನ್ನು ನಾನು ಒತ್ತಿ ಹೇಳಬೇಕಾಗಿದೆ. ಈ ಮೂಲಭೂತ ಕಾರ್ಯಕ್ರಮವನ್ನು ಸರಕಾರ ಏತಕ್ಕೆ ತೆಗೆದುಕೊಂಡು ಬರುತ್ತಿಲ್ಲ ? ಈ ಪ್ರಶ್ನೆ ಬರುತ್ತದೆ, ಅದು ತಪ್ಪಿಹೋಗುತ್ತದೆ. ಈಗ ತಲೆನೋವು ಬಂದಾಗ, ಈ ಆಸ್ಪ್ರೋ, ಸಾರಿಡಾನ್ ತೆಗೆದುಕೊಂಡರೆ, ತಲೆನೋವು ಹೋಗುತ್ತದೆ, ಆದರೆ ಮತ್ತೆ ತಲೆನೋವು ಬರುತ್ತದೆ. ಈ ರೀತಿ ಮಾಡುವುದು, ಈ ಸರಕಾರದ ಪ್ರವೃತ್ತಿಯನ್ನು ತೋರಿಸುತ್ತಿದೆ. ಈ ಅಭಿಪ್ರಾಯ ಜನಗಳ ಮನಸ್ಸಿನಲ್ಲಿ ಹೆಚ್ಚು ಹೆಚ್ಚಾಗಿ ಬರುತ್ತದೆ. ಹಾಗೆ ಬರದಂತೆ ಸರಕಾರ ಮಾಡಬೇಕು ಎಂದು ಹೇಳಬೇಕಾಗಿದೆ. ಅಷ್ಟು ಮಾತ್ರವಲ್ಲ ಈ ತರಹ ಅಭಿಪ್ರಾಯಗಳು ಜನಗಳ ಮನಸ್ಸಿನಲ್ಲಿ ಏತಕ್ಕೆ ಬಂದಿದೆ ಎಂದರೆ, ಬೆಲೆ ಏರಿಕೆ ಬಗ್ಗೆ ಹೇಳುವುದಾದರೆ, it is a collosal and dismal failure. That is the opinion. ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಬೆಲೆ ಏರಿಕೆ ತಡೆಗಟ್ಟುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಜನಗಳ ಕಣ್ಣಿಗೆ ಕಾಣುವಹಾಗೆ ಕ್ರಮ ತೆಗೆದುಕೊಳ್ಳಬೇಕು. ವಿಜಿಲೆನ್ಸ್ ಕಮಿಟಿ ಮಾಡಿದ್ದೇವೆ ಎಂದರೆ, ಇದರಿಂದ ಯಾರಿಗೂ ಸಮಾಧಾನವಾಗುವುದಿಲ್ಲ. ಈ ಮೂಲಭೂತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಿಮಗೆ ಛಾತಿ ಇದೆಯೋ, ಶಕ್ತಿ ಇದೆಯೋ, ಎದೆಗಾರಿಕೆ ಇದೆಯೋ ? ಎಂದು ನಾನು ಕೇಳಬೇಕಾಗಿದೆ. ಇಲ್ಲದಿದ್ದರೆ ಇಲ್ಲ ಎಂದು ಹೇಳಿಬಿಡಿ, ಆಗ ತೀರ್ಮಾನ ಮಾಡುತ್ತಾರೆ. ಇದ್ದರೆ ಸಂತೋಷ. ಅದನ್ನು ಮಾಡಿಲ್ಲ ಎಂದು ನನ್ನ ಆಪಾದನೆ. ಈಗ ಪ್ರಶ್ನೆ ಏನೆಂದರೆ, ಪೋಲೀಸ್ ಇಲಾಖೆ ಬಗ್ಗೆ ತಾವು ಹೇಳಿರುವುದು to protcet the life and properity of the people ಎಂದು ಹೇಳಿದ್ದೀರಿ, ನಿಜ How many lives have been protected ! ಎಂಬುದನ್ನು ನೋಡಬೇಕಾಗಿದೆ. ಪ್ರಶ್ನೆ ಇರುವುದು ಇಲ್ಲಿ, ಬಹಳ ಲೈವ್ಸ್ ಹೋಗಿದೆ. ಇನ್ನು ನಮ್ಮಂಥವರು ಕೆಲವರದ್ದು ಉಳಿದಿರತಕ್ಕಂಥಾದ್ದು I would like to quot few lines from the Annual Report of the Police Department. which says thus.

> "It is the basic objective of the Department to maintain public order, peace and stability in the society through maintenance of law and order, detection as well as prevention of crimes. By and large the Police Force has discharged its duties"

This is what they have stated in the report

ಇದು ಬಹಳ ಮುಖ್ಯ ೧೯ನೇ ಪೇಜ್‌ನಲ್ಲಿ ಕೊಟ್ಟಿದ್ದೀರಿ. Crime situation in the State was well under control 1982-1983 ಎರಡು ವರ್ಷದ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ

ಮರ್ಡರ್ಸ್ ೧೯೮೨ರಲ್ಲಿ ೮೮೬, ೧೯೮೩ರಲ್ಲಿ ೯೪೭

ಛೇರ್ಮನ್.—ಕೃಷ್ಣನ್‌ರವರೇ, ಅದನ್ನೆಲ್ಲಾ ಅವರು ಓದಿದ್ದಾರೆ. ಅದನ್ನು ಓದಬೇಡಿ, ಕವರ್ ಪಾಯಿಂಟ್ಸ್ ಬಿಟ್ಟುಬಿಡಿ

ಶ್ರೀ ಎಂ. ಎಸ್. ಕೃಷ್ಣನ್.—ಆಯಿತು, ಇದೊಂದೇ ಸಾರಿ, ಇವತ್ತಿನದಿವಸ ತಮ್ಮ ಹೇಳಿಕೆಗೂ ನಡವಳಿಕೆಗೂ ವ್ಯತ್ಯಾಸ ಇದೆ ಎಂಬುದನ್ನು ತೋರಿಸ ವುದಕ್ಕೆ. ಮುಖ್ಯವಾಗಿ ಈ ಕಮ್ಯುನಲ್ ಇನ್ಸಿಡೆಂಟ್ಸ್ ಜಾಸ್ತಿಯಾಗಿದೆ. ಕೋಮುವಾರು ಪ್ರಚೋದನೆ, ಕೋಮುವಾರು ಭಾವನೆ ಎಲ್ಲಿಂದಲೇ ಬರಲಿ, ಅದನ್ನು ಮಟ್ಟ ಹಾಕುವ ಜವಾಬ್ದಾರಿ ಸರಕಾರದ್ದಾಗಿದೆ. ದುರಾದೃಷ್ಟವಶಾತ್ ಅದನ್ನು ಮಾಡುವುದಕ್ಕೆ ಸಾಧ್ಯ ಇದೆ ಎಂಬುದನ್ನು ಪೋಲೀಸ್ ಇಲಾಖೆ ತೋರಿಸಿಲ್ಲ. ಈ ವರದಿಯಲ್ಲಿ ೧೭ನೇ ಪೇಜ್ ನೋಡಿದರೆ ಅವರ ಪ್ರಕಾರ ಇನ್ನೂ ಜಾಸ್ತಿಯಾಗಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ

> "The communal situation in the State was well under control. 3 major and 5 minor incidents of communal violence were reported. There were 73 other incidents of communal nature, during the year"

ಕಳೆದ ವರ್ಷ ೭೩ ಇನ್‌ಸಿಡೆಂಟ್ಸ್ ಆಗಿದೆ ಸ್ವಾಮಿ. ಈ ಕಮ್ಯುನಲ್ ಸಿಚುಯೇಷನ್ ಜಾಸ್ತಿಯಾಗಿ ನಮ್ಮ ರಾಜ್ಯ ಇನ್ನೊಂದು ಖಲಿಸ್ತಾನದ ತರಹ ಆಗಕೂಡದು. ಪಂಜಾಬ್ ತರಹ ಆಗಕೂಡದು. ನಿಮ್ಮ ಕೋರ್ ಆಫ್ ಡಿಟೆಕ್ಟೀವ್ಸ್ ಏನು ಮಾಡುತ್ತಾರೆ ಎಂದರೆ ಕಮ್ಯುನಲ್ ಫ್ಲೇರ್ ಅಪ್ ಅದನಂತರ ಹೋಗುತ್ತಾರೆ. ಅವರು ಇವು ಆಗುವುದಕ್ಕೆ ಮುಂಚೆಯೇ ಹೋಗಿ, ಪತ್ತೆ ಮಾಡಿ, ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ? ೫-೪-೧೯೮೩ ರಿಂದ ೧೯-೧೨-೧೯೮೩ರವರೆಗೆ ೧೦ ಕೇಸಸ್‌ನಲ್ಲಿ ಫೈರಿಂಗ್ ಆಗಿದೆ. ಇದರಲ್ಲಿ ಸತ್ತವರು ೧೮, ಗಾಯಗೊಂಡವರು ೨೭ ಒಂದು ಲೆಕ್ಕಾಚಾರದ ಪ್ರಕಾರ ೧೯೮೪ರ ತನಕ ಸತ್ತವರು ೨೫, ಗಾಯಗೊಂಡವರು ೨೨ ಆಗುತ್ತದೆ. ಇದು ಏನು ತೋರಿಸುತ್ತದೆ ಎಂದರೆ, ಗುಂಡೂರಾಯರ ಕಾಲದಲ್ಲಿ ಇನ್ನೂ ಜಾಸ್ತಿ ಇತ್ತು ಎಂದು ಹೇಳಬಹುದು. ಗುಂಡೂರಾಯರ ಕಾಲದಲ್ಲಿ ೧೩೦ ಜನ ರೈತರನ್ನು ಕೊಂದುಹಾಕಿದರು, ನಮ್ಮ ಕಾರ್ಮಿಕರನ್ನು ಕೊಂದು ಹಾಕಿದರು, ಎಂದರೆ, ಜನ ಆಗಲೇ ಅವರಿಗೆ ಶಿಕ್ಷೆ ಕೊಟ್ಟು ಬಿಟ್ಟಿದ್ದಾರೆ. ಮಾನ್ಯ ಮೊಯಿಲಿಯವರು ಮಾತನಾಡುವಾಗ ಹೇಳಿದರು, ಜನಗಳು ಶಿಕ್ಷೆ ಕೊಟ್ಟಿದ್ದಾರೆ, ಅದಕ್ಕೆ ನಾವು ಅಲ್ಲಿ ಇಲ್ಲ ಎಂದು ನೀವು ಅದನ್ನು ಹೇಳಿ ಪ್ರಯೋಜನ ಇಲ್ಲ, ಆದರೆ ಈ ಸರಕಾರ ಬಂದಮೇಲೆ ಏನು ಮಾಡಿದೆ ಎಂಬುದನ್ನು ಪ್ರಶ್ನೆ. ಏತಕ್ಕೆ ಹೀಗೆ ಆಗುತ್ತದೆ ಎಂದರೆ, ಇವರು ಇನ್‌ವೆಸ್ಟಿಗೇಷನ್ ಸರಿಯಾಗಿ ಮಾಡುವುದಿಲ್ಲ.

ಚೇರ್ಮನ್.—೫೦ ನಿಮಿಷ ಆಯಿತು. ನಿಮ್ಮ ಪಕ್ಷದವರು ಇತರ ಸದಸ್ಯರು ಮಾತನಾಡಬೇಕೆಂದು ಇದ್ದಾರೆ, ದಯವಿಟ್ಟು ಮುಕ್ತಾಯ ಮಾಡಿ

ಶ್ರೀ ಎಂ. ಎಸ್. ಕೃಷ್ಣನ್.— ಈ ಪೋಲೀಸರ ಒಂದು ಮನೋಭಾವ ಬ್ರಿಟೀಷರ ಕಾಲದಿಂದಲೂ ಬದಲಾವಣೆಯಾಗಿಲ್ಲ. ಕಾಂಗ್ರೆಸ್ ಸರಕಾರ ಬಂದ ಮೇಲೆ ಬದಲಾವಣೆಯಾಗಿಲ್ಲ. ಈ ಜನತಾ ಪಕ್ಷದ ಸರಕಾರ ಇರುವಾಗಲೂ ಬದಲಾವಣೆಯಾಗಿಲ್ಲ. ಇದು ಬಹಳ ಮುಖ್ಯ ಇದನ್ನು ತಿಳಿದುಕೊಳ್ಳಬೇಕು. ಮೀಡಿಯಾ ಇಂಡಿಯಾ ಲಿಮಿಟೆಡ್‌ನಲ್ಲಿ ಸ್ಟ್ರೈಕ್ ಆಯಿತು

ಶ್ರೀ ಎಂ. ಎಸ್. ಪಾಟೀಲ್.—ತಮ್ಮ ಸರಕಾರ ಬಂದಮೇಲೆ ಏನಾದರೂ ಬದಲಾವಣೆ ಆಗಬಹುದು

ಶ್ರೀ ಎಂ. ಎಸ್. ಕೃಷ್ಣನ್.—ನಾವು ಬರುವ ಹಾಗೆ ತಾವೆಲ್ಲಾ ಸಹಕಾರ ಮಾಡಿ ಏತಕ್ಕೆ ಅಡ್ಡಿ ಮಾಡುತ್ತೀರಿ?

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾವು ಬಂದರೆ ಬದಲಾವಣೆ ಮಾಡುತ್ತೇವೆಂದು ತಿಳಿದುಕೊಂಡು, ಬದಲಾವಣೆ ಆಗದಿರಲಿ ಎಂದು ನಮ್ಮನ್ನು ಬಿಡುತ್ತಿಲ್ಲ.

ಚೇರ್ಮನ್.—ಕೃಷ್ಣನ್‌ರವರೇ, ಪೊಲೀಸರು ಕಾಳಿದಾಸನ ಕಾಲದಲ್ಲೂ ಹಾಗೇ ಇದ್ದರು. ಉಂಗುರ ಸಿಕ್ಕಿದ ತಕ್ಷಣ ಏನಾಯಿತು ಎಂದು ಗೊತ್ತಿದೆಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸರ ಮನೋಭಾವನೆ ಬದಲಾವಣೆ ಆಗಬೇಕು. ಪೊಲೀಸರ ಮನೋಭಾವನೆಗೂ, ಜನಗಳ ಮನೋಭಾವನೆಗೂ ವ್ಯತ್ಯಾಸ ಏನಿದೆ ಎಂದು ತಿಳಿದುಕೊಳ್ಳಬೇಕು. ಮೀಡಿಯಾ ಇಂಡಿಯಾ ಸ್ಟ್ರೈಕ್‌ನಲ್ಲಿ ಪೊಲೀಸರ ಮನೋಭಾವನೆಗೂ ಜನಗಳ ಮನೋಭಾವನೆಗೂ ಇರುವ ವ್ಯತ್ಯಾಸ ತೋರಿಸುತ್ತೇನೆ. ಆ ಸ್ಟ್ರೈಕ್ ನಡೆಯುವಾಗ ಒಬ್ಬ ಪೊಲೀಸರ ಕೈಗೆ ಗಾಯ

ಆಯಿತು. ರಕ್ತ ಬರುತ್ತಿತ್ತು. ಡಿ.ಸಿ.ಪಿ. ನಾಗರಾಜ್‌ರವರು ಅಲ್ಲಿದ್ದರು. ನಾವೂ ಹಂಗರ್ ಸ್ಟ್ರೈಕ್ ಕುಳಿತಿದ್ದೆವು. ಡಿ.ಸಿ.ಪಿ. ನಾಗರಾಜ್‌ರವರು ನಮ್ಮ ಹತ್ತಿರ ಬಂದು ಈ ಮನುಷ್ಯನನ್ನು ಸಾಗಿಸಬೇಕು, ಕಾರ್ಮಿಕರು ಆ ಕಡೆಯಲ್ಲಿಯೂ ಬ್ಲಾಕೇಡ್ ಮಾಡಿದ್ದಾರೆ. ಈ ಕಡೆಯಲ್ಲಿಯೂ ಬ್ಲಾಕೇಡ್ ಮಾಡಿದ್ದಾರೆ. ಕಲ್ಲು ಹೊಡೆಯುತ್ತಿದ್ದಾರೆ. ನೀವು ದಯವಿಟ್ಟು ಬಂದು ಕರೆದುಕೊಂಡು ಹೋದರೆ ಈ ಪೊಲೀಸ್ ಬದುಕುತ್ತಾನೆ. ಇಲ್ಲದೇ ಹೋದರೆ ಬದುಕುವುದಿಲ್ಲ ಎಂದು ಹೇಳಿದರು.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ವಿಡಿಯಾ ಇಂಡಿಯಾ ಕಂಪನಿ ಸ್ಟ್ರೈಕ್ ಆದಾಗ ಒಬ್ಬ ಪೊಲೀಸ್ ಪೇದೆಗೆ ಏಟು ಬಿದ್ದಿತ್ತು. ಆಗ ಡಿ.ಸಿ.ಪಿ. ಯವರು ನನ್ನ ಬಳಿ ಬಂದು ನೀವು ಈಗ ಸಹಾಯ ಮಾಡದೆ ಇದ್ದರೆ ಈ ಪೊಲೀಸ್ ಪೇದೆಯು ಬದುಕುವುದಿಲ್ಲ. ಆದ್ದರಿಂದ ಏನಾದರೂ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡರು. ಆಗ ನಾನು ಮತ್ತು ಎ.ಐ.ಟಿ.ಯು.ಸಿ.ಯ ಕಾರ್ಯದರ್ಶಿಯವರಾದ ಶ್ರೀ ಬಾಬು ಮಾಥ್ಯೂಸ್ ಸೇರಿಕೊಂಡು ಆ ಪೇದೆಯನ್ನು ಜೀಪಿನೊಳಗೆ ಮಲಗಿಸಿಕೊಂಡು ನಾವು ಜೀಪಿನ ಬ್ಯಾನೆಟ್ ಮೇಲೆ ಕುಳಿತುಕೊಂಡು ನಮ್ಮ ಪಕ್ಷದ ಬಾವುಟವನ್ನು ಹಿಡಿದುಕೊಂಡು ಕಾರ್ಮಿಕರಿಗೆ ಗೊತ್ತಾಗದ ಹಾಗೆ ಆ ಪೊಲೀಸ್ ಪೇದೆಯನ್ನು ಆಸ್ಪತ್ರೆಗೆ ಸಾಗಿಸಿ ಅವನ ಪ್ರಾಣವನ್ನು ಕಾಪಾಡಿದ್ದೇವೆ. ಆದರೆ ಅದೇ ಇಬ್ಬರು ಕಾರ್ಮಿಕರಿಗೆ ತಲೆ ಒಡೆದು ರಕ್ತ ಬರುತ್ತಿದ್ದಾಗ ಅವರನ್ನು ಕಾಪಾಡಲು ಪೊಲೀಸಿನವರ ಸಹಾಯ ಕೇಳಿದಾಗ ಏನು ಮಾಡಿದರು ಗೊತ್ತಾ ಸ್ವಾಮಿ? ಆ ಕಾರ್ಮಿಕರನ್ನು ಮೊದಲು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಚೆನ್ನಾಗಿ ಹೊಡೆದು ಮಾರನೆ ದಿನ ಆಸ್ಪತ್ರೆಗೆ ಸೇರಿಸಿದರು. ಇದನ್ನು ನೋಡಿದರೆ ಒಂದು ವರ್ಕರ್ಸ್ ಕಲ್ಚರ್ ಮತ್ತೊಂದು ಪೊಲೀಸ್ ಕಲ್ಚರ್ ಈ ರೀತಿ ಕಲ್ಚರ್ ನಡುವೆ ವ್ಯತ್ಯಾಸ ಇದೆ.

ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಒಂದು 'ಬೈರೇಖಾನ್' ಎಸ್ಟೇಟ್ ಇದೆ. ಅದು ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರೇಗೌಡರಿಗೂ ಗೊತ್ತು. ಆ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಮೊನ್ನೆ ಒಂದು ಯೂನಿಯನ್‌ನ್ನು ಮಾಡಿದರು. ಆ ಯೂನಿಯನ್‌ನ್ನು ಒಡೆಯಲು ಎಸ್ಟೇಟಿನ ಮಾಲೀಕ ಮತ್ತು ಪೊಲೀಸರು ಶಾಮೀಲಾಗಿ ಆ ಕೆಲಸಗಾರರಿಗೆ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ಹೊಡೆತಕ್ಕೆ ತಾಳಲಾರದೆ ಹೆದರಿಕೊಂಡು ಹೆಂಗಸರು ಮಕ್ಕಳೆನ್ನದೆ ಎಲ್ಲರೂ ಕಾಡು ಸೇರಿ ಬಿಟ್ಟಿದ್ದಾರೆ. ಆ ಕಾಡಿನಲ್ಲಿ ಆನೆಗಳು ಮತ್ತು ಕಾಡು ಮೃಗಗಳು ಇವೆ. ಆದರೂ ಭಯದಿಂದ ಆ ವರ್ಕರ್ಸ್‌ಗಳು ಅದರೊಳಗೆ ಸೇರಿಬಿಟ್ಟಿದ್ದಾರೆ. ನಾನು ೧೫ನೇ ತಾರೀಖು ಅಲ್ಲಿಗೆ ಹೋಗಿದ್ದೆ. ನಾನು ಅಲ್ಲಿ ಕಂಡ ದೃಶ್ಯವನ್ನು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಪರಿಸ್ಥಿತಿ ಅಲ್ಲಿತ್ತು. ನಾವು ಅಲ್ಲಿಗೆ ಹೋದಾಗ ಆ ಮಾಲೀಕ ನಮ್ಮನ್ನೇ ಫಿನಿಷ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದ. ಪೊಲೀಸರು ಅಂತಹ ಪ್ರಕುಬ್ಧ ವಾತಾವರಣದಲ್ಲೂ ಕಾಣಲೇ ಇಲ್ಲ. ಪೊಲೀಸರು ಮಾಲೀಕನಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಇದು ಅವರ ಮನೋಭಾವ.

ಇನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಪೊಲೀಸ್‌ನವರ ಚಪಾತಿ ಟ್ರೀಟ್‌ಮೆಂಟ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಪೊಲೀಸ್ ಸ್ಟೇಷನ್ನಿನಲ್ಲಿ ಮೊನ್ನೆ 'ಮುನಿಪ್ಪ' ಸತ್ತಿದ್ದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ಅದರ ಬಗ್ಗೆಯೂ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ರೇಪ್‌ಗಳ ವಿಷಯ ಇದು ಒಬ್ಬನೇ ಮಾಡಿದರೂ ರೇಪ್ ಆಗುತ್ತದೆ. ಗ್ಯಾಂಗ್ ಸೇರಿಕೊಂಡು ರೇಪ್ ಮಾಡಿದರೂ ರೇಪ್ ಆಗುತ್ತದೆ. ಒಟ್ಟಿನಲ್ಲಿ ರೇಪ್ ಈಸ್ ಎ ರೇಪ್. ಮೊನ್ನೆ ಬಳ್ಳಾರಿಯಲ್ಲಿ ನಡೆದ ರೇಪ್ ಏನು ಇದೆ ಅದನ್ನು ಬ್ಯಾಡಗಿ ಕಮಿಷನ್ ವಿಚಾರಣೆ ನಡೆಸುತ್ತಿದೆ. ಅದು ಮಾನ್ಯ ಶ್ರೀ ಗುಂಡೂರಾಯರ ಕಾಲದಲ್ಲೇ ಆಗಿರಬಹುದು.

ಶ್ರೀ ಎಂ. ರಾಮಪ್ಪ.—ಬಳ್ಳಾರಿಯಲ್ಲಿ ರೇಪ್ ನಡೆದದ್ದು ರಾಮಕೃಷ್ಣ ಹೆಗಡೆಯವರ ಕಾಲದಲ್ಲೇ ಸ್ವಾಮಿ. ಏನು ನೀವು ಎಲ್ಲಾ ಮರೆತು ಬಿಟ್ಟಿದ್ದೀರಾ? ನೀವು ಜನತಾ ಸರ್ಕಾರಕ್ಕೆ ಬೆಂಬಲ ಕೊಡಿ ಅದನ್ನು ನಾವು ಬೇಡ ಅನ್ನುವುದಿಲ್ಲ ಆದರೆ ಇವರ ಕಾಲದಲ್ಲಿ ಆದ ರೇಪನ್ನು ಹಿಂದಿನ ಸರ್ಕಾರ ಇದ್ದ ಸಮಯದಲ್ಲಾಯಿತು ಎಂದು ಮಾತ್ರ ಹೇಳಬೇಡಿ. ನಾನು ಸಹಾ ಆಗ ವಿರೋಧ ಪಕ್ಷದಲ್ಲೇ ಇದ್ದೆ.

ಶ್ರೀ ಎಂ.ಎಸ್. ಕೃಷ್ಣನ್.—ರೇಪ್ ಯಾರ ಕಾಲದಲ್ಲಿ ಆದರೇನು ರೇಪ್ ಅಂದರೆ ರೇಪೇ, ಯಾಕೆ ನಿಮ್ಮ ಕಾಲದಲ್ಲಿ ಏನು ರೇಪ್ ಆಗಲಿಲ್ಲವಾ? ೧೩೦ ಜನ ರೈತರನ್ನು ಗುಂಡಿಕ್ಕಿ ಕೊಲ್ಲಲಿಲ್ಲವಾ?

ಇನ್ನು ನೀವು ನಿಮಗೆ ಇಷ್ಟ ಬಂದ ರೀತಿಯಲ್ಲಿ ಒಂದೊಂದು ಸಾರಿ ಒಂದೊಂದು ಪಕ್ಷದಲ್ಲಿ ಇರುತ್ತೀರಿ, ಅದು ನನಗೆ ಯಾಕೆ ಬೇಕು.

ಇನ್ನು ಬಳ್ಳಾರಿಯಲ್ಲಿ ಗೌಸಿಯಾ ಎಂಬುವಳ ಮೇಲೆ ನಡೆದ ರೇಪ್ ಬಹಳ ಮುಖ್ಯವಾದುದು. ಆ ಪ್ರಕರಣವನ್ನು ಬ್ಯಾಡಗಿ ಕಮಿಷನ್ ವಿಚಾರಣೆ ಮಾಡುತ್ತಿದೆ. ಈ ವಿಚಾರಣೆಯ ವಕೀಲರಾದ ಶ್ರೀ ಬಳೆಬೆನ್ನೂರುರವರು ಒಳ್ಳೆಯ ವಕೀಲರೆಂದು ಶಹಬಾಸ್‌ಗಿರಿಯನ್ನು ಕೊಟ್ಟಿದ್ದಾರೆ.

I quote from the acknowledgement from the Report of the Commission of Inquiry.

> "The credit should go to Shri A.S. Balebennur, advocate, who alone participated in the Inquiry right from its begining and tried his level best to get as much material as possible within his reach in the evidence. But for Shri Malebennur, the Commission would not have got so much material."

Now, I quote from the report from page 46, regarding observation on the Police :

> "Thus from the aforesaid material, it is clear that the police force should not disregard the personal liberty. They are not permitted to use force except where such an advocacy incite imminent lawlessness. A fear or apprehension of a disturbance is not enough to enable the police force to open fire or to use force with a view to overcome the right of a citizen for freedom of expression. To open fire is a last resort opened to the police force. Even in that case, they should use as little force as possible so as to cause a little injury to a person or property. They are bound to follow certain guidelines. They should act impartially and as human beings."

Sir, now I quote the thoughts on Indian Police, by Jawaharlal Nehru, referred to in this report of the Commission of Inquiry.

> "I have had a great deal to do in my life with crowds, and I know something of the psychology of crowds. A crowd has an individuality of its own and that individuality can be changed from friendliness to hostility with great rapidity, and conversely, a hostile crowd can also be made a friendly crowd if properly tackled. It is obvious that if you have to deal with a crowd, the best course, and in fact the only course is to make it a friendly crowd. If it trends to be hostile crowd because of something that has happened even then try to make it friendly. Try to divert its attention from something that has excited it, and seek its co-

operation in a friendly way. You may not always succeed. There are sometimes difficult circumstances, bus even the attempt at afriendly approach to a crowd or to a group always pays in the end. That is to say, the approach of an officar whatever he may be, civil, military or police or any othea, in any situation dealing with crowds or groups, or individuals, must always be a friendly approach. Thereby, you draw out the best in that group or that crowd and can deal with the recalcitrant elements more easily; othaawise, the antisocial elements get the sympathy of the crowd and then you have to deal with a much bigger problem."

ಇದಕ್ಕೊಸ್ಕರ ನಮ್ಮ ನಾಯಕರು ಏನು ಹೇಳಿದ್ದಾರೆ ಅದನ್ನು ನಾವು ಜಾರಿಗೆತರುತ್ತಿಲ್ಲ. ಸ್ವಾಮಿ ನಮ್ಮ ಮೇಲೆ ಹಲವಾರು ಕೇಸ್‌ಗಳನ್ನು ಹಾಕಿದ್ದೀರಿ ದಯವಿಟ್ಟು ಅದನ್ನೆಲ್ಲಾ ವಾಪಸ್ಸು ತೆಗೆದು ಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ Department of Science and Technology ಸ್ಥಾಪಿಸುವ ಬಗ್ಗೆ ಈ ಸರ್ಕಾರ ಒಳ್ಳೆಯ ಕೆಲಸ ಕೈಗೊಂಡಿದೆ. ನಮ್ಮ ರಾಜ್ಯದಲ್ಲಿ Scientific temper ನ್ನು ಹೆಚ್ಚು ಮಾಡಬೇಕು. ಅದನ್ನು ಅಪ್ರಿಷಿಯೇಟ್ ಮಾಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಈಗ ಶ್ರೀ ರಾಮಕೃಷ್ಣ ಹೆಗಡೆಯವರು ಸರ್ಕಾರ ಬಂದ ಮೇಲೆ ಇದಕ್ಕೆ ಹೆಚ್ಚು ಹಣವನ್ನು ತೆಗೆದಿಡಲು ಪ್ರಯತ್ನ ಮಾಡುತ್ತಿದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಸೈಂಟಿಫಿಕ್ ಟೆಕ್ನಾಲಜಿ ಎನ್ನುವುದು ನಮ್ಮ ದೇಶಕ್ಕೆ ಬಹಳ ಮುಖ್ಯವಾದುದು. ಎಲ್ಲಿಯತನಕ ಈ ಮೂಢ ನಂಬಿಕೆಗಳು ಇರುತ್ತವೆಯೋ, ಎಲ್ಲಿಯವರೆಗೆ ಅಗೋಚರ ಶಕ್ತಿ ಇದೆ ಎಂದು ನಂಬುತ್ತಾರೋ ಅಲ್ಲಿಯವರೆಗೂ ದೇಶ ಮುಂದುವರಿಯುವುದಿಲ್ಲ. ಆದ್ದರಿಂದ ಸೈಂಟಿಫಿಕ್ technology ಹೆಚ್ಚು ಹೆಚ್ಚು ಬರಬೇಕು. ಇದನ್ನು ಜವಹಾರಲಾಲ್ ನೆಹರೂರವರೇ ಹೇಳಿದ್ದಾರೆ. ಆದ್ದರಿಂದ ಇದಕ್ಕೆ ಎಷ್ಟು ಖರ್ಚಾದರೂ ಪರವಾಗಿಲ್ಲ ದಯವಿಟ್ಟು ಈ ಕೆಲಸವನ್ನು ಮಾಡಿ. ಯಾವುದೋ ಸಂಘ ಸಂಸ್ಥೆಗಳಿಗೆ ಹಣ ಕೊಟ್ಟರೆ ಮಾತ್ರ ಸಾಲದು. ನಮ್ಮಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಎಂಬುದು ಇದೆ. ಇದು ೧೯೮೦ರಲ್ಲಿ ರಿಜಿಸ್ಟರ್ಡ್ ಆಗಿದೆ. ಇದು ಸಂಪೂರ್ಣವಾಗಿ ಕೆಲಸ ಮಾಡುತ್ತಿದೆ. ಸೈಂಟಿಫಿಕ್ ಟೆಕ್ನಾಲಜಿ ಬೆಳೆಸುವುದಕ್ಕೆ ಕೇರಳದಲ್ಲಿ ಒಂದು ಶಾಸ್ತ್ರ ಸಾಹಿತ್ಯ ಪರಿಷತ್ತು ಇದೆ ಈ ಪರಿಷತ್ತು ಏನು ಮಾಡುತ್ತಿದೆಯೆಂದರೆ ರಾಜ್ಯಗಳಲ್ಲಿ ವಿಜ್ಞಾನಿಗಳು ಮತ್ತು ದೊಡ್ಡ ದೊಡ್ಡವರು ಸೇರಿಕೊಂಡು ವಿಜ್ಞಾನದ ಬಗ್ಗೆ ಜನರಿಗೆ ತಿಳುವಳಿಕೆ ಬರುವಂತೆ ಪಬ್ಲಿಕ್ ಮೀಟಿಂಗ್‌ಗಳನ್ನು ಮಾಡಿ ಜನರಿಗೆ ಅದರ ಬಗ್ಗೆ ಮನೋಭಾವ ಬೆಳೆಯಲು ಅನುಕೂಲವಾಗುವಂತೆ ಅವಕಾಶವನ್ನು ಕಲ್ಪಿಸುತ್ತಾರೆ. ಇದರಿಂದ ಮೂಢ ನಂಬಿಕೆಗಳು ಹೋಗುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಆದ್ದರಿಂದ ಸೈನ್ಸ್ ಅಂಡ್ ಟೆಕ್ನಾಲಜಿ ಡಿಪಾರ್ಟ್‌ಮೆಂಟ್ ಚೆನ್ನಾಗಿ ಕೆಲಸ ಮಾಡಬೇಕು. ಜಿಲ್ಲಾ ನೇಮಕಾತಿ ಸಮಿತಿಗಳನ್ನು ರದ್ದು ಮಾಡಿದ್ದೀರಿ ಸಂತೋಷ. ಸುಮಾರು ೭೬೦೦ ಜನಕ್ಕೆ ಲೋಕಲ್ ಕ್ಯಾಂಡಿಡೇಟುಗಳಾಗಿ ಕೂಡಲೇ ಕೆಲಸ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಸರ್ಕಾರೀ ನೌಕರರ ಬಗ್ಗೆ ಹೇಳುವುದಾದರೆ, ಅವರ ಕೋರಿಕೆಗಳು ಸಾಕಷ್ಟು ಇದೆ. ನನಗೆ ತಿಳಿದಮಟ್ಟಿಗೆ ಅವರ ಕೋರಿಕೆಗಳ ವಿಷಯದಲ್ಲಿ ಹೊಗೆ ಆಡುತ್ತಿದೆ, ಅವರ ನ್ಯಾಯವಾದ ಬೇಡಿಕೆ ಗಳನ್ನು ಮಾನ್ಯತೆ ಮಾಡಬೇಕು. ಅಲ್ಲದೆ, ಅವರಲ್ಲಿ ಭಿನ್ನಾಭಿಪ್ರಾಯ ಇರುವುದನ್ನು ಉಪಯೋಗಿಸಿ ಕೊಂಡು ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟುವಂಥ ಪ್ರಯತ್ನ ಮಾಡಬೇಡಿ ಎಂದು ಹೇಳಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣ ರಾವ್ (ವರ್ತೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳ ಮೇಲೆ, ಹಾಗೂ ಆರೋಗ್ಯ ಇಲಾಖೆಗಳ ಬೇಡಿಕೆಗಳ ಮೇಲೆ ಮಾತ ನಾಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಪೋಲೀಸ್ ಇಲಾಖೆಯ ದೃಷ್ಟಿಕೋನವನ್ನು ಬದಲಾವಣೆ

ಮಾಡಬೇಕಾಗಿದೆ. ಪೋಲೀಸಿನವರು ಮಾರ್ಜಿನಲ್ ಫೋರ್ಸ್ ಉಪಯೋಗಿಸುವಂಥ ಭಾವನೆ ಬಂದರೆ, ಜನಗಳನ್ನು ದನಗಳ ಹಾಗೆ ಬಡಿಯುತ್ತಾರೆ. ಜನರ ಸಹಕಾರ ಇಲ್ಲದೆ ಶಿಸ್ತನ್ನು ಮತ್ತು ಕಾನೂನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಇವತ್ತು ರೈತರ ಮತ್ತು ಜನತೆಯ ತೆರಿಗೆಯ ಹಣದಿಂದ ನಮಗೆ ಸಂಬಳ ಸಾರಿಗೆ ಸಿಗುತ್ತದೆನ್ನುವ ಭಾವನೆ ಅವರಲ್ಲಿ ಬರಬೇಕು. ಜನತೆಯೊಂದಿಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಪೋಲೀಸಿನವರಿಗೆ ಶಿಕ್ಷಣ ಕೊಡಬೇಕೆಂದು ಹೇಳುತ್ತೇನೆ. ಹೊಸದಾಗಿ ಸಬ್ ಇನ್ಸ್‌ಪೆಕ್ಟರ್ ಆಗಿ ಬಂದಿರುವವರು ಮನುಷ್ಯರನ್ನು ತಿಂದುಹಾಕುವಂಥ ರೀತಿಯಲ್ಲಿ ವರ್ತಿಸುತ್ತಾರೆ. ಬಡ ಜನರಿಗೆ ಪೋಲೀಸ್ ಠಾಣೆಯಲ್ಲಿ ರಕ್ಷಣೆ ಇಲ್ಲ, ಶ್ರೀಮಂತರು ಬಂದರೆ ಕುರ್ಚಿ ಕೊಡುತ್ತಾರೆ. ಬಡ ಜನರ ಬಗ್ಗೆಯೂ ಒಳ್ಳೆಯ ದೃಷ್ಟಿಕೋನವನ್ನು ಪೋಲೀಸಿನವರು ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ೧೯೪೨ರಲ್ಲಿ ನಾನು ಒಂದು ಪೋಲೀಸ್ ಠಾಣೆಯಲ್ಲಿ ಕುರ್ಚಿಯಲ್ಲಿ ಕೂತುಕೊಂಡಾಗ ಅಂದಿನ ಸಬ್ ಇನ್ಸ್‌ಪೆಕ್ಟರ್ ಏನೋ ಇದು ನಿಮ್ಮ ಮನೇನೋ, ಇದು ನಿಮ್ಮಪ್ಪನ ಕುರ್ಚೀನೆ ಎಂದು ಕೇಳಿದ್ದರು, ಅದು ಬ್ರಿಟೀಷರು ಇದ್ದಂಥ ಕಾಲ. ಇವತ್ತು ಕೂಡ ಅದೇ ಭಾವನೆ ಇರುವುದು ಸರಿಯಲ್ಲವೆಂದು ಹೇಳುತ್ತೇನೆ. ನಮಗೂ ಪೋಲೀಸಿನವರಿಗೂ ಬಹಳ ಸಂಬಂಧ ಉಂಟು. ನಾನು ಡಿ. ಜಿ. ಪಿ. ಅವರನ್ನು ಬಹಳ ವರ್ಷಗಳಿಂದ ನೋಡಿದ್ದೇನೆ, ನಮ್ಮ ಹತ್ತಿರ ಚೆನ್ನಾಗಿಯೇ ಮಾತನಾಡುತ್ತಾರೆ, ಅವರು ಮಾಡುವಂಥ ಕೆಲಸವನ್ನು ಮಾಡಿಯೇ ಇರುತ್ತಾರೆ. ಕಾರ್ಪೋರೇಷನ್ನಿನವರು ವಿಧಿಸಿದ್ದ ೧೨ ರೂಪಾಯಿ ಟ್ಯಾಕ್ಸನ್ನು ರದ್ದು ಮಾಡಬೇಕೆಂದು ಆಟೋರಿಕ್ಷಾದವರು ಧರಣಿ ಮಾಡುವ ಸಮಯದಲ್ಲಿ, ಪೋಲೀಸಿನವರು ಯಾರೋ ಪ್ಯಾಸೆಂಜರ್ ಕರೆದರೆ ಇವರು ಹೋಗುವುದಿಲ್ಲವೆಂದು ಹೇಳಿ ಅವರ ಮೇಲೆ ಕೇಸು ಹಾಕಿದ್ದಾರೆ. ಇದು ಅಕ್ಷಮ್ಯ ಅಪರಾಧ, ಪೋಲೀಸ್ ಕಮೀಷನರ್ ಹರ್ಲಂಕರ್‌ರವರಿಗೂ ಹೇಳಿದ್ದೇನೆ. ೫೦ ಜನರನ್ನು ಕರೆದುಕೊಂಡು ಹೋಗಿ ಚೆನ್ನಾಗಿ ಬಾರಿಸಿದ್ದಾರೆ. ಈ ರೀತಿ ಆದರೆ ಪೋಲೀಸಿನವರ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುವುದಕ್ಕೆ ಸಾಧ್ಯವಿಲ್ಲ. ಪೋಲೀಸ್ ಅಧಿಕಾರಿಗಳಾರು ತಪ್ಪು ತಿಳಿಯಬಾರದು, ಕಳ್ಳತನ, ರಾಬರಿ, ಡಕಾಯಿತಿ ಅಂದ ಕೆಲಸಗಳು ಏನಿವೆ, ಕೆಲವರು ಪೋಲೀಸ್ ಪೇದೆಗಳು, ಸಣ್ಣಪುಟ್ಟ ಅಧಿಕಾರಿಗಳು ಶಾಮೀಲಾಗಿದ್ದಾರೆ ಎನ್ನುವ ಭಾವನೆ ಇವತ್ತು ಜನತೆಯಲ್ಲಿ ಬಂದಿದೆ. ಶಾಮೀಲಾಗಿರುವುದನ್ನು ನಿಲ್ಲಿಸಿದರೆ ಸುಮಾರು ೫೦ ಭಾಗದ ಕೇಸುಗಳನ್ನು ಕಡಿಮೆ ಮಾಡಬಹುದು. ಉದಾಹರಣೆಗೆ ರಿಕ್ರಿಯೇಷನ್ ಕ್ಲಬ್‌ಗಳಿಂದ ಆಯಾಯಾ ಪೋಲೀಸ್ ಠಾಣೆಗೆ ಮಾಮೂಲು ಹೋಗುತ್ತಿದೆ. ಜನತಾ ಸರ್ಕಾರ ಬಂದಮೇಲೂ ಮಾಮೂಲು ತಪ್ಪಿಲ್ಲ.

ಉಪಾಧ್ಯಕ್ಷರು.—ಜನ ಬದಲಾವಣೆಯಾಗಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೌದು ಸ್ವಾಮಿ. ಪರಿಸ್ಥಿತಿ ಹೀಗಿರುವಾಗ ಪೋಲೀಸಿನವರ ಬಗ್ಗೆ ಜನಕ್ಕೆ ಒಳ್ಳೆಯ ಅಭಿಪ್ರಾಯ ಹೇಗೆ ಬರುತ್ತದೆ. ಕಳೆದ ಸದನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ, ೧೯೮೨ನೇ ಜನವರಿ ೧೯ನೇ ತಾರೀಖು ಜನರಲ್ ಸ್ಟ್ರೈಕ್ ಆದಾಗ ಸಾವಿರ ಗಟ್ಟಲೆ ಕಾರ್ಮಿಕರು ದಕ್ಷಿಣಕನ್ನಡ, ಸಕಲೇಶಪುರ ಹಾಗೂ ಬೆಂಗಳೂರು ನಗರದಲ್ಲಿ ಕೇಸುಗಳನ್ನು ಹಾಕಿದ್ದಿರಿ. ರೈತರ ಮೇಲೆ ಹಾಕಿದ್ದನ್ನು ತೆಗೆದುಹಾಕಿದ್ದಿರಿ, ಕಾರ್ಮಿಕರ ಸಂಖ್ಯೆ ಕಡಿಮೆ ಇದೆಯೆಂದು ಅವರ ಮೇಲಿನ ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿಲ್ಲ, ಇವತ್ತು ಕೂಡ ಸಾವಿರ ಗಟ್ಟಲೆ ಕಾರ್ಮಿಕರು ಕೋರ್ಟಿಗೆ ಹೋಗಬೇಕಾಗಿದೆ, ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಾರ್ಮಿಕರ ಮತ್ತು ಮಾಲೀಕರ ನಡುವೆ ಯಾವ ರೀತಿಯ ಸಂಬಂಧವು ಇರಬೇಕು, ಕಾರ್ಮಿಕರೊಂದಿಗೆ ಮಾಲೀಕರು ಯಾವರೀತಿ ನಡೆದುಕೊಳ್ಳಬೇಕು, ಎನ್ನುವ ಬಗ್ಗೆ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಸರ್ಕಾರ ಯಾವರೀತಿ ಕೋಡ್ ತಂದಿದೆಯೋ ಅದೇರೀತಿ ಕೋಡುಗಳನ್ನು ತರಬೇಕೆಂದು ಹೇಳುತ್ತೇನೆ. ಅಲ್ಲಿರುವುದು ಕಮ್ಯೂನಿಸ್ಟ್ ಸರ್ಕಾರವೆಂದು ತಿಳಿಯಬೇಡಿ, ಭಾರತದ ಘಟನೆಯೊಳಗೆ ಪೋಲೀಸ್ ಕೋಡನ್ನು ಪಶ್ಚಿಮ ಬಂಗಾಳ ಸರ್ಕಾರ ಮಾಡುವುದಕ್ಕೆ ಸಾಧ್ಯವಿದ್ದರೆ, ಜನತಾ ಸರ್ಕಾರದಲ್ಲಿ ಏತಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಮರು ವಿಚಾರ ಮಾಡಬೇಕೆದು ಹೇಳುತ್ತೇನೆ. ಇವತ್ತು ಪೋಲೀಸ್ ಪೇದೆಗಳಿಗೆ ೮ ಗಂಟೆ ಕೆಲಸ ಇದೆ ಅವರಿಗೆ ವಾಸಕ್ಕೆ ಮನೆಗಳು ಇಲ್ಲ, ಅವರಿಗೆ ಸಂಬಳ ಸಾರಿಗೆ ಕಡಿಮೆ ಇದೆ, ಎಷ್ಟೋ ಜನ ಪೋಲೀಸಿನವರ ಹೆಂಗಸರು ಮಕ್ಕಳು ಬೀಡಿ ಕಟ್ಟುತ್ತಿದ್ದಾರೆ. ಅವರಿಗೆ ಕಡಿಮೆ ಅವಧಿ ಕೆಲಸದ ಜೊತೆಗೆ ರಜ ಅನುಕೂಲವನ್ನು ಕೂಡ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಪೋಲೀಸ್ ಪೇದೆಗಳನ್ನು ದೊಡ್ಡ ಅಧಿಕಾರಿಗಳು ಅವಾಚ್ಯಶಬ್ದಗಳಿಂದ ಬೈಯ್ಯುವುದನ್ನು ನಿಲ್ಲಿಸಬೇಕು. ಅತ್ತೆ ಕೋಪ ತೊತ್ತಿನ ಮೇಲೆ ಎನ್ನುವಂತೆ ನಾವು ಇದರ ಮೇಲೆ ಕೋಪದ ಮಾತುಗಳನ್ನು ಆಡಿದರೆ

ಅವರು ವೇದಿಗಳ ಮೇಲೆ ತಮ್ಮ ಕೋಪವನ್ನು ತೋರಿಸುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಮೇಲ್ಪಟ್ಟು ಇರತಕ್ಕ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ನೋಡುತ್ತಾರೆ. ಆದರೆ, ವೇದಿಗಳ ಬಗ್ಗೆ ಬಳಸತಕ್ಕ ಸಂಸ್ಕೃತ ಪದಗಳನ್ನು ಯಾರೂ ಕೂಡ ಕೇಳುವುದಕ್ಕಾಗುವುದಿಲ್ಲ. ತಾವು ಪೋಲೀಸಿನವರು ಕೂಡ ಸಂಘ ಸಂಸ್ಥೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಅವರ ಸಂಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

೩-೩೦ ಪಿ.ಎಂ.

ರೈತರ ಮೇಲೆ, ಕಾರ್ಮಿಕರ ಮೇಲೆ ಪೋಲೀಸಿನವರು ಮೊಕದ್ದಮೆಗಳನ್ನು ಹಾಕಿದ್ದಾರೆ. ಅವರು ವೈಯೊಲಿನ್ಸ್ ಮಾಡದಿದ್ದರೆ, ಏನೂ ಅನಾಹುತ ಮಾಡಿರದಿದ್ದರೆ, ಸೆಕ್ಷನ್ ಬ್ರೇಕ್ ಮಾಡದಿದ್ದರೆ ಅಂಥವರ ಮೇಲೆ ಕೇಸನ್ನು ಹಾಕಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ವೈಯಲಿನ್ಸ್ ಮಾಡಿದ್ದರೆ ಅಂಥಾ ಕೇಸ್‌ಗಳ ಬಗ್ಗೆ ಬೇಕಾದರೆ ಪರಿಶೀಲನೆ ಮಾಡಿ. ಸುಮ್ಮನೇ ಸೆಕ್ಷನ್ ಬ್ರೇಕ್ ಮಾಡಿದ್ದಾರೆ ಎಂದು ಹೇಳಿ ಪಿಕೇಟಿಂಗ್ ಮಾಡಿದರು ಎಂದು ಸಾವಿರಾರು ಕಾರ್ಮಿಕರು ಮತ್ತು ರೈತರಮೇಲೆ ಪೋಲೀಸಿನವರು ಕೇಸ್‌ನ್ನು ಹಾಕಿದ್ದಾರೆ ಆದುದರಿಂದಅದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇವತ್ತು ಈಗಿನ ಸರ್ಕಾರದಲ್ಲಿ ಆಗಿರತಕ್ಕ ಗೋಲಿಬಾರಿಗೂ ಮತ್ತು ಹಿಂದಿನ ಸರ್ಕಾರದವರು ಮಾಡಿರತಕ್ಕ ಗೋಲೀಬಾರ್‌ಗೂ ವ್ಯತ್ಯಾಸವಿದೆ. ಈಗ ಆಗಿರತಕ್ಕ ಗೋಲಿಬಾರ್ ರೈತರ ಮೇಲೆ ಆಗಲೀ ಅಥವಾ ಕಾರ್ಮಿಕರ ಮೇಲೇ ಆಗಲೀ ಆಗಿರತಕ್ಕ ಗೋಲೀಬಾರ್ ಅಲ್ಲ. ಆದೇ ಹಿಂದಿನ ಸರ್ಕಾರದವರು ರೈತರು ನ್ಯಾಯವಾದ ಬೆಲೆಯನ್ನು ಕೇಳಿದಾಗ, ಬೆಳೆದಂಥ ಬೆಳೆಗೆ ಕಬ್ಬಿಗೆ ಸರಿಯಾದ ಬೆಲೆಯನ್ನು ಕೇಳಿದಾಗ ಅವರ ಮೇಲೆ ಗುಂಡು ಹಾರಿಸಿದೆ, ಕೂಲಿಗಾರರು ಕೂಲಿ ಕೇಳಿದಾಗ ಗುಂಡನ್ನು ಹಾರಿಸಿದೆ. ಇವತ್ತು ಈ ಸರ್ಕಾರ ಗುಂಡು ಹಾರಿಸತಕ್ಕದನ್ನು ತಪ್ಪಿಸುವುದಕ್ಕೆ ಸಾಧ್ಯವಿತ್ತು. ಬಹುಶ: ಮುನ್ನ ಕೇಸ್‌ನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡಿದ್ದರೆ ಬಹುಶ: ಈ ಘಟನೆ ನಡೆಯುವುದಕ್ಕೇ ಅವಕಾಶವಾಗುತ್ತಿರಲಿಲ್ಲ. ಮುನ್ನನ ಬಗ್ಗೆ ಪೋಲೀಸಿನವರು ಸರಿಯಾದ ರೀತಿಯಲ್ಲಿ ವರ್ತನೆ ಮಾಡಿದ್ದರೆ ಅವನ ಪ್ರಾಣ ಹರಣ ಮಾಡದಿದ್ದರೆ ಈ ಗಲಾಟೆ ಶುರುವಾಗುತ್ತಿರಲಿಲ್ಲ. ಆದರೆ ಈ ಗಲಾಟೆಯನ್ನು ಬೇರೆಯವರು ಮುನ್ನನ ಸಾವಿನ ಪ್ರಕರಣದಿಂದ ಶುರು ಮಾಡಿ ಗಲಾಟೆ ಎಬ್ಬಿಸಿ ರಾಜಕೀಯ ದುರ್ಲಾಭವನ್ನು ಪಡೆಯುತಕ್ಕ ಕೆಲಸವನ್ನು ಕೆಲವರು ಮಾಡಿದ್ದಾರೆ ಈಗ ನ್ಯಾಯಾಂಗ ತನಿಖೆ ಆಗತಕ್ಕದ್ದು ಇರುವುದರಿಂದ ಅದರಿಂದ ವಿಷಯವೆಲ್ಲಾ ಹೊರಗಡೆ ಬರುತ್ತದೆಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಈ ಗಲಾಟೆ ಬಗ್ಗೆ ಅನೇಕ ಸುದ್ದಿಗಳು ನಮಗೆ ಬಂದಿದೆ, ಅನೇಕ ಜನ ಬಂದು ಹೇಳಿದ್ದಾರೆ. ಹೀಗೆ ನಮ್ಮ ನಮ್ಮ ಮನೆಗಳಿಗೆ ಬಂದು ಹೇಳಿ ಗಲಾಟೆ ಮಾಡಬೇಕು ಎಂದುಹೇಳಿದ್ದಾರೆ ಎನ್ನುವುದು ಸಹ ನಮಗೆ ಗೊತ್ತಾಗಿದೆ, ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದುಇಷ್ಟೆ. ಪೋಲೀಸಿನವರು ಇಂಥಾದ್ದಕ್ಕೆಲ್ಲಾ ಅವಕಾಶ ಕೊಡದ ಹಾಗೆ ಥರ್ಡ್ ಡಿಗ್ರಿ ಮೆಥೆಡ್ ಏನಿದೆ ಅದನ್ನು ಬಿಟ್ಟು ಮೊಕದ್ದಮೆಗಳನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಹಳ್ಳಿ ಪ್ರದೇಶಗಳಲ್ಲಿ ಶೇಕಡ ೧೫ ರಷ್ಟು ಕೂಡ ಡಾಕ್ಟರ್‌ಗಳು ಇರುವುದಿಲ್ಲ. ಪಟ್ಟಣ ಪ್ರದೇಶಗಳಲ್ಲಿಯೇ ಜಾಸ್ತಿ ಡಾಕ್ಟರ್‌ಗಳು ಇರುತ್ತಾರೆ. ಇದು ಒಂದನೇ ಭಾಗ. ಎರಡನೆಯದು ಏನೆಂದರೆ ನಗರ ಪ್ರದೇಶಗಳಲ್ಲಿಯೇ ದೊಡ್ಡ ದೊಡ್ಡ ಅತ್ಯಾಧುನಿಕ ಉಪಕರಣಗಳನ್ನಿಟ್ಟು ಎಲ್ಲರೂ ಬೆಂಗಳೂರು, ಇನ್ನು ಮುಂತಾದ ದೊಡ್ಡದೊಡ್ಡ ಪಟ್ಟಣಗಳಿಗೆ ಬರುವ ರೀತಿಯಲ್ಲಿ ಮಾಡುತ್ತಿದ್ದೀರಿ. ಹಾಥಿ ಕಮಿಷನ್‌ರವರು ಏನು ಹೇಳಿದ್ದಾರೆ ಎಂದರೆ.........

"To ensure regular supply of essential drug, a list of 116 drugs have been prepared by experts on lines of putting due consideration to the Hathi Committee report and WHO drug technical committee report with which 90% of the diseases prevailing in our country could be cured. In addition to this enlisted drugs, mark can be prescribed bythe specialists and super-specialists".

೧,೫೦೦ ತರಹದ ಔಷಧಿಗಳನ್ನು ತಯಾರು ಮಾಡುತ್ತಿದ್ದಾರೆ. ಕೋಟಿ ಗಟ್ಟಲೆ ಹಣವನ್ನು ಇದರಿಂದ ಮಾಡಿಕೊಳ್ಳುತ್ತಿದ್ದಾರೆ. ಇವನ್ನು ಕಂಟ್ರೋಲ್ ಮಾಡುವುದಕ್ಕೆ ನಮ್ಮ ರಾಜ್ಯದವರಿಂದಾಗಲೀ, ಕೇಂದ್ರದವರಿಂದಾಗಲೀ ಆಗಿಲ್ಲ. ಹೊಸ ಹೊಸ ಔಷಧಿಯ ಕಾರ್ಖಾನೆಗಳು ಆಗುತ್ತಲೇ ಇವೆ. ಅವರು ಪರ್ಮಿಷನ್ ಕೊಟ್ಟೇ ಕೊಡುತ್ತಿದ್ದಾರೆ. ಇದರ ಬಗ್ಗೆ ಯಾರದೂ ಕಂಟ್ರೋಲ್ ಇಲ್ಲದ ಹಾಗಾಗಿದೆ. ಡ್ರಗ್ ಕಂಟ್ರೋಲರ್ ಎಂದು ಒಂದೊಂದು ತಾಲ್ಲೂಕಿನಲ್ಲೂ ಇಟ್ಟುಕೊಂಡಿದ್ದಾರೆ. ಅವರೇನು ಕೆಲಸ ಮಾಡುತ್ತಿದ್ದಾರೆ ? ೮೦೨೦ ಮೆಡಿಕಲ್ ಸ್ಟಾಫ್ ಇದೆ. ಒಂದು ವರ್ಷದಲ್ಲಿ ೪ ಬಾರಿ ಇನ್ಸ್‌ಪೆಕ್ಟ್ ಮಾಡಿದರೂ ಸಹ ೩೨೦೦೦ ಬಾರಿಯಾದರು ಇನ್ಸ್‌ಪೆಕ್ಟ್ ಮಾಡಬೇಕಾಗಿತ್ತು, ಆದರೆ ಇನ್ಸ್‌ಪೆಕ್ಟ್ ಮಾಡಿರತಕ್ಕದ್ದು ಕೇವಲ ೫ ಸಾವಿರದ ೪೦೦ ಮಾತ್ರ. ಇದರಿಂದ ಏನಾಗುತ್ತಿದೆ ಎಂದರೆ ಅನೇಕ ಅನಾಹುತಗಳ ಆಗುತ್ತಿದೆ. ಆರೋಗ್ಯ ಕೆಡುತ್ತಿದೆ. ಕೆಲವಾರು ಸಂದರ್ಭಗಳಲ್ಲಿ ಎಷ್ಟೋ ಜನ ಸತ್ತು ಹೋಗಿದ್ದಾರೆ. ಈ ಸ್ಪೂರಿಯಸ್ ಡ್ರಗ್‌ನ್ನು ಅಲ್ಲಲ್ಲಿ ಮಾರುತ್ತಿದ್ದಾರೆ. ಡ್ರಗ್ ಇನ್ಸ್‌ಪೆಕ್ಟರ್‌ರವರು ಕೇವಲ ೫ ಸಾವಿರದ ೪೦೦ ಬಾರಿ ಮಾತ್ರ ಇನ್ಸ್‌ಪೆಕ್ಟ್ ಮಾಡಿದರೆ ಆ ಔಷಧಿ ಮೇಕ್ ಯಾವುದು ? ಅದರ ಪ್ರೈಜ್ ಎಷ್ಟು ಎನ್ನುವುದನ್ನೆಲ್ಲಾ ನೋಡುವುದಕ್ಕೆ ಆಗುತ್ತದೆಯೋ ? ಆದುದರಿಂದ ನಾನು ಆರೋಗ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳತಕ್ಕದ್ದು ಏನೆಂದರೆ ಹಾಥಿ ಕಮಿಷನ್ ರಿಪೋರ್ಟ್‌ನವರು ಹೇಳಿರುವ ಹಾಗೆ ೧೧೬ ಡ್ರಗ್‌ಗಳನ್ನು ಏನಿದೆ ಅವುಗಳನ್ನು ಎಲ್ಲಾ ಕಡೆಗಳಲ್ಲಿಯೂ ಇಡಬೇಕು. ಎಂದು ಹೇಳಬಯಸುತ್ತೇನೆ. ಇದರಿಂದ ಬಡ ಜನರಿಗೆ ಅನುಕೂಲವಾಗುವ ಹಾಗೆ ಮಾಡಬೇಕು. ಆ ಮೇಲೆ ಡ್ರಗ್ಸ್ ಮೇಲೆ ಹಾಕಿರತಕ್ಕ ತೆರಿಗೆಗಳನ್ನು ಕಡಿಮೆ ಮಾಡಬೇಕು. ಪಶ್ಚಿಮ ಬಂಗಾಳದ ಸರ್ಕಾರದವರು ಏನು ಮಾಡಿದ್ದಾರೆಂದರೆ............

"The West Bengal Government has abolished sales tax on several essentiol and life saving drugs and has reduced sales tax from 7 to 4%............

ಅಲ್ಲೂ ಡೆಫಿಸಿಟ್ ಇದೆ, ಜನ ಸಂಖ್ಯೆ ಜಾಸ್ತಿ ಇದೆ. ಆದರೆ ಅವರ ದೃಷ್ಟಿಕೋನ ಏನಿದೆ ಎಂದರೆ ಬಡ ಜನರಿಗೆ ಅನುಕೂಲವಾಗಬೇಕು, ಅವನು ಜೀವನ ಮಾಡುವುದೇ ಕಷ್ಟವಾಗಿದೆ, ಇನ್ನು ಔಷಧಿ ಬೆಲೆ ಜೀರೆ ದುಬಾರಿಯಾದರೆ ಅವನು ಬದುಕುವುದಾದರೂ ಹೇಗೆ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಹೀಗಿರುವಾಗ ತಾವು ಇಲ್ಲಿ ಇಂಥಾ ಔಷಧಿಗಳ ಮೇಲೆ ಇನ್ನೂ ತೆರಿಗೆಯನ್ನು ಹಾಕತಕ್ಕದ್ದು ಸರಿಯಲ್ಲ. ಆದುದರಿಂದ ಇದನ್ನು ರದ್ದು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ, ಇವತ್ತಿನ ದಿವಸ ಕಾಫಿ, ಟೀ ಚಪ್ಪಲಿ ಮೇಲೆ ನೀವು ತೆರಿಗೆಯನ್ನು ಹಾಕಿದರೆ ಜನತಾ ಸರ್ಕಾರ ಬಂದ ಮೇಲೆ ಇಂಥ ಕೆಲಸವನ್ನು ಮಾಡಿದ್ದಾರೆಂದು ಜನ ನಿಮ್ಮನ್ನು ಬೈಯ್ದುಕೊಳ್ಳುತ್ತಾರೆ. ಆದುದರಿಂದ ನಿಮಗೆ ಟ್ಯಾಕ್ಸನ್ನು ಹಾಕಲು ಬೇರೆ ಯಾರೂ ಸಿಕ್ಕಲಿಲ್ಲವೇ ? ನಿಮಗೆ ಟಾಟಾ, ಬಿರ್ಲಾರವರಮೇಲೆ ಟ್ಯಾಕ್ಸನ್ನು ಹೆಚ್ಚಿಗೆ ಹಾಕುವುದಕ್ಕೆ ಆಗುತ್ತಿರಲಿಲ್ಲವೇ ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಇನ್ನು ಅರ್ರಾಕ್. ಸಾರಾಯಿಯನ್ನು ೨೦ ರೂ.ಗಳಿಂದ ೩೫ ರೂ.ಗಳಿಗೆ ಮಾಡಿದ್ದೀರಿ, ತಾವು ಇಷ್ಟು ಜಾಸ್ತಿ ಮಾಡಬಾರದಾಗಿತ್ತು, ಇದು ಜಾಸ್ತಿಯಾಯಿತು. ಆದುದರಿಂದ ಇದರ ಬಗ್ಗೆ ಸಹ ಹಾಕಿರತಕ್ಕ ಟ್ಯಾಕ್ಸನ್ನು ಕಡಿಮೆ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಸೊಳ್ಳೆ ಕಾಟದ ಬಗ್ಗೆ ತಾವು ಏನೋ ವರದಿಯಲ್ಲಿ ಹೇಳಿದ್ದೀರಿ. ಆದರೆ ಇಲ್ಲಿಯುವರೆಗೆ ಏನೂ ಸರಿಯಾದ ಕ್ರಮವನ್ನು ಕೈಗೊಂಡಿಲ್ಲ. ತಾವು ಕೊಟ್ಟಿರತಕ್ಕ ಹಣ ಏನೇನೂ ಸಾಕಾಗುವುದಿಲ್ಲ. ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವ ಹಾಗಾಗಿದೆ. ಆದುದರಿಂದ ಸೊಳ್ಳೆ ಕಾಟದಿಂದ ಆರೋಗ್ಯ ಕೆಟ್ಟ ಮೇಲೆ ಔಷಧಿ ಕೊಡುವುದಕ್ಕಿಂತ ತಾವು ಈ ಸೊಳ್ಳೆ ಕಾಟವನ್ನು ಮೊದಲು ತಪ್ಪಿಸಲು ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಏನು ಡೈಯೆಟ್ ಕೊಡುತ್ತಿದ್ದಾರೆ ಎಂದರೆ. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಒಬ್ಬ ರೋಗಿಗೆ ೩.೪೦ ಪೈಸೆ ಖರ್ಚು ಮಾಡುತ್ತಿದ್ದರೆ ಕೆ. ಆರ್ ಆಸ್ಪತ್ರೆಯಲ್ಲಿ ೫ ೩೦ ಪೈಸೆಯನ್ನು ಒಬ್ಬರಿಗೆ ಖರ್ಚು ಮಾಡುತ್ತಿದ್ದೀರಿ. ಇದು ಯಾವ ಆಧಾರದ ಮೇಲೆ ಮಾಡುತ್ತಿದ್ದೀರಿ ? ಒಂದೊಂದು ಆಸ್ಪತ್ರೆಯಲ್ಲಿ ಒಂದೊಂದು ತರಹ ಕೊಡುತ್ತಿದ್ದೀರಿ ಇಲ್ಲಿ ೬೮೬ ಬೆಡ್ ಇದೆ, ಇಲ್ಲಿ ಒಂದು ದಿನಕ್ಕೆ ೫–೪೦ ರೂಪಾಯಿ ಖರ್ಚು ಮಾಡುತ್ತಾರೆ, ಮೈಸೂರಿನಲ್ಲಿ ಒಂದು ದಿನಕ್ಕೆ ೩–೬೫ ರೂಪಾಯಿ ಒಬ್ಬರಿಗೆ ಖರ್ಚು ಮಾಡುತ್ತಾರೆ. ಇಂಡಿಯಾ ದೇಶದಲ್ಲಿ ಬೆಂಗಳೂರು ಕಾಸ್ಮೋಪಾಲಿಟನ್ ಸಿಟಿ ಇದೆ. ಏನೋ ಸರ್ಕಾರಿ ಆಸ್ಪತ್ರೆ ಇದೆ ಎಂದು ಬರುತ್ತಾರೆ. ಇಲ್ಲಿ ಒಣಕಲು

ರೊಟ್ಟಿ, ನೀರು ಹಾಲು ಕೊಡುತ್ತಾರೆ. ರೋಗಿಗಳು ಮೊದಲೇ ನಿಶ್ಶಕ್ತರಾಗಿರುತ್ತಾರೆ. ಅವರಿಗೆ ಪೌಷ್ಟಿಕ ಆಹಾರ ಕೊಡಬೇಕು. ಬ್ರಿಟಿಷರ ಕಾಲದಲ್ಲಿ, ಸ್ವಾತಂತ್ರ್ಯ ಪೂರ್ವದಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಟೊಮೊಟೊ ಹಣ್ಣನ್ನು ಕೊಡುತ್ತಿದ್ದರು, ಬಾಳೆ ಹಣ್ಣನ್ನು ಕೊಡುತ್ತಿದ್ದರು ಹೀಗೆ ಹಣ್ಣು ಹಂಪಲುಗಳನ್ನು ಬೇಗ ಗುಣವಾಗಲಿ ಎಂದು ಕೊಡುತ್ತಿದ್ದರು. ಈಗ ಏನೂ ಕೇಳಬೇಡಿ ನಾನು ಕೇಳಿಕೊಳ್ಳುವುದೇನೆಂದರೆ, ರೋಗಿಗಳ ಬಗ್ಗೆ ಕನಿಕರ ಇರಲಿ. ಬಡ ಜನರು ಇರುತ್ತಾರೆ. ನೀವು ದಯವಿಟ್ಟು ಬೌರಿಂಗ್ ಆಸ್ಪತ್ರೆಗೆ, ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಸರ್‌ಪ್ರೈಸ್ ಚೆಕ್ ಮಾಡಬೇಕು.

ಶ್ರೀ ಜಿ. ತಿ. ಸೋಮಪ್ಪ.—ಬ್ರಿಟಿಷರು ಟೊಮೊಟೊ ಹಣ್ಣನ್ನು ತಿನ್ನುತ್ತಿದ್ದರೋ ಅಥವಾ ರೋಗಿಗಳಿಗೆ ಕೊಡುತ್ತಿದ್ದರೋ.

ಶ್ರೀ ಎಸ್. ಸೂರ್ಯನಾರಾಯಣರಾವ್.—ರೋಗಿಗಳಿಗೆ ಕೊಡುತ್ತಿದ್ದರು. ಇವತ್ತು ೪೦ ಲಕ್ಷ ಮಕ್ಕಳಿದ್ದಾರೆ. ಪೋಲಿಯೊ ಟಾರ್ಗೆಟ್ ಇರುವುದು ೭ ಲಕ್ಷ, ಖರ್ಚು ಮಾಡಿರುವುದು ೬ ಲಕ್ಷ, ಏನು ಅನ್ಯಾಯವಿದು. ಆಕ್ಕ ಲೆಕ್ಕ ತೆಗೆದುಕೊಳ್ಳಿ. ಟಮ್ಕೂರ್ ೧೦ ವರ್ಷದೊಳಗಿನ ಮಕ್ಕಳು ಎರಡೂ ವರೆ ಲಕ್ಷ, [illegible]ರ್ಕಗತವಾಗಿರುವುದು ೪೭ ಸಾವಿರ. ಪೋಲಿಯೋನಲ್ಲಾಗಲಿ, ಯಾವುದರಲ್ಲೇ ಆಗಲಿ ನೀವು ಇಟ್ಟುಕೊಂಡಿರತಕ್ಕ ಟಾರ್ಗೆಟನ್ನು ಮುಟ್ಟಿಲ್ಲ. ಮಕ್ಕಳಿಗೆ ಏನೆಂದರೆ ಏನೂ ಆಗುವುದಿಲ್ಲ. ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ, ಯಾರೋ ಬಂದಿದ್ದರು, ಅವರು ಬಿದ್ದು ಹೋದರು, ಅವರ ಅಡ್ರೆಸ್ ಇತ್ತು [illegible] ಚಿಕಿತ್ಸೆ ಚೆನ್ನಾಗಿ ಸಿಕ್ಕಿತು, ಇನ್ನೊಬ್ಬರಿಗೆ ಅಡ್ರೆಸ್ ಸಿಗಲಿಲ್ಲ, ಏನೂ ಮಾಡಲಿಲ್ಲ ಎಂ. ಎಲ್. ಎ. ಎಂದು ನಮಗೆ ಸೌಲಭ್ಯ ಕೊಟ್ಟರೆ ಬಡ ಜನಗಳ ಗತಿ ಏನು ಎಂದು ಕೇಳುತ್ತೇನೆ.

ಇನ್ನು ಪ್ಲಾನಿಂಗ್ ಬಗ್ಗೆ ಹೇಳುವುದಾದರೆ, ಜಿಲ್ಲಾ ಪರಿಷತ್ ಬಿಲ್ ಬರುತ್ತದೆ. ಇವತ್ತು ಇರತಕ್ಕ ಪ್ಲಾನಿಂಗ್ ಸ್ವಲ್ಪ ಬದಲಾವಣೆಯಾಗಬೇಕು. ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಹೆಚ್ಚು ಗಮನಕೊಡಬೇಕು. ಹೆಚ್ಚು ಅಧಿಕಾರಿಗಳನ್ನು ನೇಮಕಮಾಡಿಕೊಳ್ಳಬೇಕು ಇವತ್ತು ಜಿಲ್ಲಾಪರಿಷತ್ ಬಿಲ್ ಬರುವುದರಿಂದ ಹೆಚ್ಚಿಗೆ ಪ್ಲಾನಿಂಗ್ ಮಾಡಬೇಕಾಗುತ್ತದೆ. ಆದುದರಿಂದ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ವಿಸ್ತರಣೆಯಾಗಬೇಕು, ಹೆಚ್ಚಿನ ಅಧಿಕಾರಿಗಳು ಬೇಕು ಇವತ್ತು ಡೆಪ್ಯುಟಿ ಕಮಿಷನರಿಗೆ ಎಷ್ಟು ಕೆಲಸ ಇದೆ ಸ್ವಾಮಿ. ಅವರಿಗೆ ಪುರುಸೊತ್ತೇ ಇರುವುದಿಲ್ಲ. ಅಪ್ಲಿಕೇಷನ್ ಆಫ್ ಮೈಂಡ್ ಇರುವುದಿಲ್ಲ. ಎಲ್ಲಾ ಡಿಪಾರ್ಟ್‌ಮೆಂಟ್‌ಗಳ ಕೆಲಸವನ್ನು ಅವರೇ ಮಾಡಬೇಕು. ಆದ್ದರಿಂದ ಅವರಿಗೆ ವರ್ಕ್‌ಲೋಡ್ ಕಡಿಮೆ ಮಾಡಬೇಕು. ಅವರಿಗೆ ಇರತಕ್ಕ ಅಧಿಕಾರವನ್ನು ಡಿಸೆಂಟ್ರಲೈಸ್ ಮಾಡಬೇಕು. ಇಲ್ಲದೇ ಹೋದರೆ ಎಫಿಷಿಯನ್ಸಿ ಆಫ್ ದಿ ಡಿಪಾರ್ಟ್‌ಮೆಂಟ್ ಬರುವುದಿಲ್ಲ. ಮತ್ತೆ ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೮ ವರ್ಷ ಮಾಡಬೇಕು ಎಂಬ ಬೇಡಿಕೆ ಇದೆ. ಅದರ ಬಗ್ಗೆ ಏನು ಮಾಡುತ್ತೀರಿ ಎನ್ನುವುದನ್ನು ವಿಚಾರ ಮಾಡಬೇಕು. ಕೆಲವು ಕಮಿಟಿಗಳನ್ನು ಮಾಡಬೇಕು ಎಂದು ಹೇಳಿದರು, ಏನು ಮಾಡುತ್ತಾರೋ ಗೊತ್ತಿಲ್ಲ. ಸರ್ಕಾರಿ ನೌಕರರಿಗೆ ಟ್ರೇಡ್ ಯೂನಿಯನ್ ತರಹ ಹಕ್ಕು ಕೊಡ ಬಾರದು. ಪಶ್ಚಿಮ ಬಂಗಾಳದಲ್ಲಿ ಕೊಟ್ಟಿರುವ ತರಹ ಇಲ್ಲಿ ಟ್ರೇಡ್ ಯೂನಿಯನ್ ಕೊಡುವುದಕ್ಕೆ ಏನಾಗುತ್ತದೆ. ಇವರು ಗುಲಾಮಗಿರಿ ಮಾಡುವುದೇ? ಫ್ಯಾಕ್ಟರಿಗಳಲ್ಲಿರತಕ್ಕ ಗುಮಾಸ್ತರಿಗೆ ಈ ಒಂದು ಅವಕಾಶ ಕೊಡುತ್ತೀರಿ. ಆದೇ ಸರ್ಕಾರಿ ನೌಕರರು, ಪೋಲೀಸರು ಸಂಘ ಮಾಡುವುದಕ್ಕೆ ಅವಕಾಶ ಕೊಟ್ಟರೆ ದೇಶದಲ್ಲಿ ಅನಾಹುತವಾಗುತ್ತದೆಯೋ ಸೋಷಿಯಲಿಸ್ಟ್ ಕಂಟ್ರೀಸ್‌ನಲ್ಲಿ ಮಿಲಿಟರಿಯವರೂ ಸಂಘ ಮಾಡಬಹುದು. ಆದುದರಿಂದ ಈ ದೇಶದ ಸಂಸ್ಕೃತಿಯ ಬಗ್ಗೆ ಅಭಿಪ್ರಾಯವನ್ನು ಬದಲಾವಣೆ ಮಾಡಬೇಕೇ ವಿನಃ ಸಂಘ ಮಾಡಿಕೊಂಡರೆ ಅನಾಹುತವಾಗುತ್ತದೆ ಎನ್ನುವುದು ಸರಿಯಲ್ಲ. ಸರ್ಕಾರಿ ನೌಕರರ ಬೇಡಿಕೆಗಳೇನಿವೆ, ಅದರ ಬಗ್ಗೆ ಅವರು ಮೊನ್ನೆ ಮೆರವಣಿಗೆ ಕೂಡ ಮಾಡಿದ್ದರು ಅವರು ಹಲವಾರು ಬೇಡಿಕೆಗಳನ್ನು ಇಟ್ಟಿದ್ದಾರೆ. ಅವರಲ್ಲಿ ಯಾವುಯಾವುದು ಒಪ್ಪುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿ ಮಾಡಿ. ಅವರಲ್ಲಿ ಎಫಿಷಿಯನ್ಸಿ ಇರುವ ಹಾಗೆ ಮಾಡಿಕೊಳ್ಳಬೇಕು. ಮತ್ತೆ ಅವರಲ್ಲಿ ಕನ್ಸಾಲಿಡೇಟೆಡ್ ವರ್ಕರ್ಸ್ ಏನು ಇದ್ದಾರೆ—ಅವರಿಗೆ ೧೦ ರೂಪಾಯಿ ಕಡಿಮೆ ಕೊಡುತ್ತಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಬಂದವರೂ ಕೂಡ ಇಷ್ಟು ಕೊಡುತ್ತಿದ್ದಾರೆ. ಅಂತಹವರು ೬ ಸಾವಿರ ಚಿಲ್ಲರೆ ಇದ್ದಾರೆ. ಅವರನ್ನು ತೆಗೆಯಬೇಕು ಎಂದು ಇತ್ತೀಚೆಗೆ ಬಂದಿದೆ. ಕನ್ನಡ ಎಲ್ಲಾ ಬರಬೇಕು, ಕನ್ನಡ ಬೆರಳಚ್ಚು ಬರಬೇಕು ಎಂದು ಹೇಳಿದ್ದಾರೆ ಅವರನ್ನು ಇಂಗ್ಲಿಷ್ ಟೈಪಿಸ್ಟ್ ಆಗಿ ಕೆಲಸಕ್ಕೆ ತೆಗೆದುಕೊಂಡರು, ಅವರು ೫ ವರ್ಷ ಕೆಲಸ ಮಾಡಿದ್ದಾರೆ. ಅವರಿಗೆ ಕನ್ನಡ

ಟ್ರೈನಿಂಗ್ ಇಲ್ಲ. ಹೀಗಾಗಿ ೨೫ ಜನರನ್ನು ಕಳಿಸಿಬಿಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಅವರಿಗೆ ಕನ್ನಡ ಕಲಿಯುವುದಕ್ಕೆ ಅವಕಾಶ ಮಾಡಿಕೊಡಬೇಕು, ಎರಡು ವರ್ಷ ಅವಕಾಶ ಕೊಟ್ಟರೆ ಅವರು ಕಲಿತುಕೊಳ್ಳುತ್ತಾರೆ. ೬ ತಿಂಗಳು ಬೇಡ ಎರಡು ವರ್ಷ ಕಾಲಾವಕಾಶ ಕೊಡಿ, ಕನ್ನಡ ಟೈಪ್‌ರೈಟಿಂಗ್ ಕಲಿತುಕೊಳ್ಳುತ್ತಾರೆ ಇಂತಹ ೩೦೦ ಚಿಲ್ಲರೆ ಜನ ಏನಿದ್ದಾರೆ ಅವರಿಗೆ ಕೆಲಸದ ಭದ್ರತೆ ಕೊಡಬೇಕು, ಅವರನ್ನು ತೆಗೆಯಬಾರದು ಎಂದು ಕೇಳಿಕೊಳ್ಳುತ್ತೇನೆ ಇನ್ನು ಕ್ಯಾಜುವಲ್ ಲೇಬರರ್ಸ್ ಇದ್ದಾರೆ, ೮-೯ ರೂಪಾಯಿ ಸಂಬಳಕ್ಕೆ ಸಾಮಾನ್ಯವಾಗಿ ಎಲ್ಲಾ ಡಿಪಾರ್ಟ್‌ಮೆಂಟ್‌ನಲ್ಲೂ ಇದ್ದಾರೆ. ಬೆಂಗಳೂರು ನಗರದಲ್ಲೂ ಇದ್ದಾರೆ. ಈ ಕ್ಯಾಜುವಲ್ ಲೇಬರರ್ಸ್ ಎನ್ನುವುದು ಹೋಗಬೇಕು. ಈ ಬಗ್ಗೆ ಮದ್ರಾಸ್ ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಯಾರು ೨೪೦ ದಿವಸ ಕೆಲಸ ಮಾಡುತ್ತಾರೋ ಅವರು ಪರ್ಮನೆಂಟ್ ವರ್ಕರ್ ಎಂದು ಇದೆ. ಕ್ಯಾಜುವಲ್ ಲೇಬರರ್ಸ್ ಪಿ. ಡಬ್ಲ್ಯು. ಡಿ., ಸಿರಿಕಲ್ಚರ್ ಮುಂತಾದ ಎಲ್ಲಾ ಇಲಾಖೆಗಳಲ್ಲೂ ಇದ್ದಾರೆ, ಕಾರ್ಪೊರೇಷನ್‌ನಲ್ಲೂ ಇದ್ದಾರೆ. ಅವರೆಲ್ಲರನ್ನೂ ರೆಗ್ಯುಲರೈಸ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕು ಎಂದು ಹೇಳುತ್ತೇನೆ. ಇದೇ ರೀತಿ ಸ್ಟೆನೋಗ್ರಾಫರ್ಸ್ ಕೂಡ ಇದ್ದಾರೆ. ಈ ಸ್ಟೆನೊಗ್ರಾಫರ್ಸ್‌ಗೆ ಅನೇಕ ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಪ್ರಮೋಷನಲ್ ಅಪರ್ಚುನಿಟೀಸ್ ಇಲ್ಲ. ಇಲ್ಲಿ ರಿಪೋರ್ಟರ್ಸ್ ಯಾವರೀತಿ ಇದ್ದಾರೋ ಅದೇ ರೀತಿ ಅನೇಕ ಕೋರ್ಟುಗಳಲ್ಲಿ ಸ್ಟೆನೊಗ್ರಾಫರ್ಸ್ ಇದ್ದಾರೆ, ಅವರಿಗೆ ಪ್ರಮೋಷನಲ್ ಅಪರ್ಚುನಿಟೀಸ್ ಇಲ್ಲ, ಇವರಿಗೆ ಪ್ರಮೋಷನಲ್ ಅಪರ್ಚುನಿಟೀಸ್ ಮಾಡಿ ಕೊಟ್ಟು ಈ ನೌಕರರ ಮನಸ್ಸಿನಲ್ಲಿ ಅತೃಪ್ತಿ ಬರದ ಹಾಗೆ ಮಾಡಿ. ಇನ್ನು ಅಧಿಕಾರಿಗಳೇನಿದ್ದಾರೆ ಈ ಅಧಿಕಾರಿಗಳಲ್ಲಿ ಅನೇಕ ಜನರಿಗೆ ವಾಹನ ಸೌಕರ್ಯ ಇಲ್ಲ. ಬರತಕ್ಕ ನ್ಯಾಯವಾದ ಸಂಬಳದಲ್ಲಿ ಜೀವನ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಎಲ್ಲಾ ಅನುಕೂಲ ಮಾಡಬೇಕು. ಅಧಿಕಾರಿಗಳಿಗೆ ವರ್ಕ್‌ಲೋಡ್ ಕಡಿಮೆ ಮಾಡಬೇಕು. ಅವರಿಗೆ ಹೆಚ್ಚು ಯೋಚನೆ ಮಾಡುವುದಕ್ಕೆ ಅವಕಾಶ ಮಾಡಬೇಕು ಯೋಚನೆ ಮಾಡುವುದಕ್ಕೆ ಅವಕಾಶವಿಲ್ಲದೇ ಇದ್ದರೆ ಇನ್‌ಎಫಿಷಿಯನ್ಸಿ ಬರುತ್ತದೆ, ಅವರು ಜನಗಳ ಮಧ್ಯದಲ್ಲಿ ಬೆರೆತು ಕೆಲಸಮಾಡುವಾಗ ಅವರಿಗೆ ಅನುಕೂಲ ಮಾಡಬೇಕಾಗುತ್ತದೆ, ಕೆಲಸ ನಿಧಾನವಾದರೂ ಆಗುತ್ತಾ ಇದೆ ಎನ್ನತಕ್ಕ ಹೊಸ ವಾತಾವರಣ ತರಬೇಕು, ಈ ರಾಜ್ಯದಲ್ಲಿ ಏನು ವಿಚ್ಛಿದ್ರಕಾರಕ ಶಕ್ತಿಗಳು ಕೆಲಸ ಮಾಡುತ್ತಿವೆ. ಜಾತಿವಾದಿಗಳು ಕೆಲಸಮಾಡುತ್ತಿವೆ ಅವನ್ನು ತಡೆಗಟ್ಟಬೇಕು ವ್ಯಾಪಕವಾದ ರೀತಿಯಲ್ಲಿ ದೇಶಪ್ರೇಮ, ಸಮತಾ ಭಾವನೆ, ಸಹೋದರ ಭಾವನೆ ಬರುವ ರೀತಿಯಲ್ಲಿ ಪ್ರಜಾತಂತ್ರದ ಕಾರ್ಯಗಳು ಇರಬೇಕು. ಮತ್ತು ಹರಿಜನ-ಗಿರಿಜನರ ಮೇಲೆ ಆಗತಕ್ಕ ಧಾಳಿಗಳನ್ನು ಕಡಿಮೆ ಮಾಡಿ, ಜನಗಳಲ್ಲಿ ಒಳ್ಳೆಯ ಭಾವನೆ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† SRI R. S. MANE (BELGAUM).—Sir, there are several demands before us. But for want of time I would select only a few of them. As regards demand No. 27, 28, Public services, family welfare and public health. I must say that this department and Ministries faring well but at the same time I must say that medicines, which should be made available, are not made available at approprite time, so far as Belgaum District Civil Hospital is concerned. It is my experience that wherever the patient goes, he needs a perticular type of medicine and the Doctor would say that there is no such medicine and this the patient is put to hardship.

Such things should be removed by the concerned Minister. I am glad that the visitors' Boards have been established recently. Therefore, directions should be given to the medicial officer in charge of the district hospitals to supply the list of purchaser made by him, to the Visitors' Board. This will check malpractices in the supply of medicines to the patients. There is another difficulty felt

by us, particularly in Belgaum area most of the medical officers are Kannada speaking people. They do not know Marathi. If a Marathi patient goes or a person who does not know Kannada goes to a doctor and says that he is suffering from Diarrhoea or dysentery, the doctor not understanding his language administers medicine that is required to be given for constipation. Then, what would happen to that patient? Therefore, I suggest that particularly in Belgaum district, which is a bilingual district, the doctors knowing both the languages should be posted. This is in the interest of general health.

Coming to the taxation I refer to the recent changes in the saler tax so far as jaggery is concerned. The tax that was 2% single point was changed and increased to 4% single point. This has disturbed the jaggery merchants in the locality, particularly in Belgaum district. They made representations to the concerned Minister from time to time. But, none of the representations has been heeded to. We ourselves about 40 MLAs have given a representation asking the Government to reduce 4% single point tax on jaggery to 2% singl-point sales tax, because this increase in the tax on jaggery is affecting the business in jaggery in the area, particularly merchants dealing in jaggery, they are shifting their business to other states. For ex: About 300 merchants have obtained licence in Turkevdai for establishing in Maharastra. So also merchants from Nippani have practically shifted to Sangle because of this increase in the tax. The suggestion made by the merchants is that the tax should be reduced to 2% single point tax. There is also another difficulty faced by these merchants, in regard to the turnover tax on jaggary. It is very strange that jaggery is supposed to be an agricultural product under the Agricultural Produce Marketting Act, whereas it is not defined as an agricultural product under the Sales Tax Act. and this has given rise to dispute. The 2% tax on turnover of jaggery should be lessened and brought down to 1½%. That is the demand of the merchants from our locality. This should be considered very sympathetically, because the jaggery merchants are facing very much hardship due to these two taxes. So also there is market cess levied on coconut. Coconut has not been brought under the notified list so far as Hubli APMC is concerned. I do not know why coconut has been notified as regulated commodity in respect of Belgaum APMC. There is a demand from the coconut merchants from Belgaum to denotify coconut and release it from the list of regulated articles. Recently this A P M C has passed a resolution asking the Government to denotify coconut and that resolution has been passed on 12-1-84 and sent to the Government as resolution

no. 5 of the APMC. But, it is rather painful that the Government is sitting tight towards these genuine demands. I have myself submitted several applications asking the Government to denotify coconut from the regulated commodities so far as APMC is concerned. But, that has not been done so far. I request the Government to consider this demand also very sympathetically and denotify the coconut from the regulated list of articles.

Regarding motor vehicles tax, it is common knowledge that Karnataka is the only state which is earning motor vehicles tax at a higher rate. No other state is levying motor vehicles tax at such an exorbitant rate. So, this tradition is also kept intact so far as harassment to the motoring public is concerned. Harassment that is received by the motoring public in Karnataka is also at the highest degree. That is my submission to the House. Especially the offences of several nature committed by the motoring public are dealt with severely be the police. Supposing a small accident is caused by a truck driver, for that petty offence the police will detain the truck, detain the goods and seize his licence permit, tax token and whatever documents they find in the truck. It is not done in other states. I may point out the example of Maharastra state particularly. In Maharastra for such an offence the trucks are not detained. buses are not detained. As early as possible the panchanama is performed and the truck is released then and there only whereas in Karnataka the vehicles are dragged to the police station. Harassment is made. Money is extracted and after about 3 or 4 days the vehicles are released. This should be checked by the concerned department, particularly the police should be warned not to detain trucks or drag them to the police station, and particularly they should not seize the documents such as tax token, permit, fitness certificate, because they belong to the vehicles and they must move along with the vehicles, If the documents are not in the vehicles. when subsequently checked they will be again put to difficulty. Because the drivers will only commit these offences the truck owners is not to be blamed for it. Therefore, the driver should be detained, if at all he is to be detained, but not the truck. That is my suggestion.

4-00 P.M.

Again, at this juncture, I would like to point out to one provision in Motor vehicles Act. Section 130 of the Motor Vehicles Act provides that in ceertain minor offences the offendor need not go to the court even. The court can issue the summons specifying the offences and also making him know that he can remit a sum of Rs. 25

through M. O. and if he wants to plead guilty, he can plead guilty by sending a ragistered letter to the court. The driver need not go to the court. This is the attitude adopted by the Central Government towards offences committed by the motor vehiele drivers. The same attitude should be adopted by the police in our State also. Then, again there is another tax which is being collected That is in regard to the cost of bridges constructed on highways. In Suntikatti there is one such bridge constructed by the Government. The cost of that bridge has been fully recovered. But inspite of that the tax is being collected even now. Last year also I referred to this illegal recovery of tax for the construction of the bridge n ar Suntikatti over Ghataprabha river ; but nothing has been done in that direction. The Government should apply its mind and say that the collection of tax on the construction of this bridge must be discontinued.

Coming to the police and police force in the State, I mav say that police wherever you go are of the same natue. They will rathe detain the complainant and release the accused if the complainant has gone to the police station for fillig a complaint. In our area also the same thing is going on. Especially, last month so many thefts took place in Khanapur taluk, particularly 24 she-buffaloes were stolen in Magewadi village of Khanpur taluk. Some pair of bullocks were also stolen in Volmaru, Bailur and Mandigere villages, Beside theft, in Chanawadi there was also a murder. These thefts have not been detected till now.

ಶ್ರೀ ಆರ್. ಎನ್. ನಾಯ್ಕ್.—ಇವರು ಮಾತನಾಡುವುದನ್ನು ಯಾರು ನೋಟ್ ಮಾಡಿಕೊಳ್ಳುತ್ತಿದ್ದಾರೆ ಮತ್ತು ಇದಕ್ಕೆ ಯಾರು ಉತ್ತರಿಸುತ್ತಾರೆ ?

ಶ್ರೀ ಸಿ. ಬೈರೇಗೌಡ.—ಇದೊಂದು ಅಭ್ಯಾಸವಾಗಿ ಬಿಟ್ಟಿದೆ. ಸದನದಲ್ಲಿ ಉತ್ತರಿಸುವವರೇನೋ ಮಂತ್ರಿಗಳು. ಆದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೇ ಇರುವುದಿಲ್ಲ. ಪ್ರತಿದಿನ ಇದೇ ರೀತಿ ಆಗುತ್ತಿದೆ ಜವಾಬ್ದಾರಿ ಹೊತ್ತ ಮಂತ್ರಿಗಳು ಈ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಉಪಾಧ್ಯಕ್ಷರು.—ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ, ಬಿಡಿ.

SRI R. S. MANE.—Further, about six months back there were thefts in Khanapur BDO's offiee. PSI's house and theft in the house of an Ex MLA and another peculiarity is, there was a theft in the Court room itself. Except the theft made in the court, all other thefts have escaped police investigation and the culprits have not been brought to book uptill now. Since agriculturists are the sufferers in cattle thefts, I request the Government to come forward to give them some help if they have filled any complaint in regard to the theft committed against them. Here, I wish to point out one serious offence that remains undetected upt.ll now. That is, the murder of one person by name Satyawathi Desai. She was murderd

three years back in the jungle of Khanapur-Magewadi village road' Her sister Sheelavathi Desai has filed complaints after complaints to this Government, to the Government of Maharashtra and also to the Government of India requesting to take interest in the case and bring the murderer to book. But nothing has been done so far. Though some belongings like bangles, piece of saree, skull, etc. of the deceased have been traced, the police have not been successful to find out the culprits and if they are unable to find out the culprits, I suggest that the help of some eff.cint police machinery from other States should be taken.

Regarding fire also I have to say that in Belgaum last month only a house caught fire and in the month of December last, a house of poojari also caught fire due to the defect in the LPG gas cylinder. This Poojary namely, Parasuram M. Poojary residing at No. 1518 is a small farmer and a small trader. He had stored about six bags of paddy and a bag of jowar in his house. Because of the fire everything was destroyed. He filed a petition to the Hon'ble Chief Minister on 13-12-1983 and requestod him to give financial assistant of a paltry sum of Rs. 2,000. But this application is still pending consideration. I reques that some help should be given to him because for no fault of his he had to suffer. Recently I came to know from the local newspapers that a person from Belagaum city who lost his wife and son was given a generous help of Rs. 5,000. I have nothing to say about that help. But this particular request of Rs. 2,000 should not go unattended to because there are no influential persons to push forward his application.

About pensions, I may say that political pension given to the freedom fighters are still pending consideration. Some machinery. some plan should be there to dispose of these pending applications at the earliest.

Lastly. Coming to the demands of the Industries Department. I wish to say a few words. In regard to sugar factories, it is mentioned on page 56 of the annual report of the Department of Industries and commerce that during the year under report, proposals for sanction of industrial licence in respect of seven Co-operative Sugar factories have been sent to Goverment of Indin, of which ono factory viz., Sahakara Sakkare Karkhane Ltd., Aland (Gulbarga District) has received Letter of Intent from Government of India. But I find that the application made by Bharathi Lakshmi Sahakara Sakkare Kharkane, Khanapur has not raceived the attention of the Government so far.

This factory has been started long back and the request for grant of letter of intent was made on 13-12-1982. This factory has come up in a very rich sugar cane producing area and it will not affect the present Malaprabha Sugar Factory which is over burdned with sugarcane. In fact, the Malaprabh Sugarcane grown Co-operative Factory is not able to crush sugarcane grown in this Kahanapur. Therefore, it was felt necessary that a sugrcane factory should be started on Sahakari basis in this taluka and for that purpose both Kannadigas and Marathi speaking people came together and floated this factory. So, the Bhaygalakshmi Sugar factory should receive due attention of the Government to its formation and necessary steps are taken to see that the Government of India gives necessary sanction to this factory early. With these words, I thank the Deputy Speaker for having given me a chance to speak.

† ಶ್ರೀ ಕೆ. ಜಿ. ಮಹೇಶ್ವರಪ್ಪ (ಮಾಯಕೊಂಡ).—ಮಾನ್ಯ ಅಧ್ಯಕ್ಷರೆ, ಸದನದ ಮುಂದೆ ಮಂಡಿಸಲಾಗಿರತಕ್ಕ ಎಲ್ಲ ಬೇಡಿಕೆಗಳನ್ನೂ ಬೆಂಬಲಿಸುತ್ತಾ ಕೇವಲ ಕೆಲವು ಮಾತುಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ರಾಜ್ಯ ಜನತಾ ಸರ್ಕಾರದ ಕೈಗಾರಿಕಾ ನೀತಿ ಮತ್ತು ಪ್ರಕಟಿಸಿರತಕ್ಕ ಕಾರ್ಯಕ್ರಮಗಳನ್ನು ವೀಕ್ಷಿಸಿದರೆ ಇದರಲ್ಲಿ ಹೊಸ ದಿಕ್ಸೂಚಿಯನ್ನು ಗುರುತಿಸಬಹುದು ಎಂದು ಅನ್ನಿಸುತ್ತದೆ. ನಾವು ಇಂದು ೬ನೇ ಪಂಚವಾರ್ಷಿಕ ಯೋಜನೆಯ ಕೊನೇ ವರ್ಷದಲ್ಲಿದ್ದೇವೆ. ಈ ಕೊನೇ ವರ್ಷದಲ್ಲಿ ಕಳೆದ ಅನೇಕ ಪಂಚವಾರ್ಷಿಕ ಯೋಜನೆಗಳ ಸಾಧನೆ, ವೈಫಲ್ಯತೆಗಳನ್ನು ವಿಶ್ಲೇಷಣೆ ಮಾಡಿದಾಗ ಬೃಹದಾಕಾರದ ಸಮಸ್ಯೆ ನಮ್ಮೆಲ್ಲರ ಮುಂದೆ ಕಾಣತಕ್ಕದ್ದು ನಿರುದ್ಯೋಗ ಸಮಸ್ಯೆ. ಈ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸುತ್ತೇವೆಂದು ಹೇಳತಕ್ಕ ಧೈರ್ಯವನ್ನು ಯಾವ ಸರ್ಕಾರವೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನನಗನ್ನಿಸುತ್ತದೆ. ಆದರೆ ಈ ಕೈಗಾರಿಕಾ ನೀತಿಯಿಂದ ಸ್ವಲ್ಪಮಟ್ಟಿಗಾದರೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸತಕ್ಕ ನೀತಿಯನ್ನು ನಮ್ಮ ರಾಜ್ಯ ಸರ್ಕಾರ ಅಳವಡಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಇಂಡಸ್ಟ್ರಿಯಲ್ ಪಾಲಿಸಿ ಎಂದು ಇದನ್ನು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ನೋಡಿದರೆ ನಮ್ಮ ಕೈಗಾರಿಕಾ ನೀತಿಯಲ್ಲಿ ಸ್ಪಷ್ಟವಾದ ಹೊಸ ತಿರುವನ್ನು ಕೊಟ್ಟಿರುವುದನ್ನು ನಾವು ಗಮನಿಸಬಹುದು. ಕೈಗಾರಿಕೆಗಳು ಬೆಂಗಳೂರಿನಂಥ ಮಹಾನಗರದಲ್ಲಿ ಕೇಂದ್ರೀಕೃತವಾಗದಂತೆ ವಿಕೇಂದ್ರೀಕರಣ ಮಾಡುವ ನೀತಿಯನ್ನು ಹಾಕಲಾಗಿದೆ. ಬೆಂಗಳೂರಿನ ಸುತ್ತಮುತ್ತಲ ವಲಯದಲ್ಲಿ ಒಂದು ಕೈಗಾರಿಕೆಯನ್ನೂ ಕೊಡುವುದಿಲ್ಲ ಎಂದು ನಾವೆಂದೂ ಹೇಳಿಲ್ಲ. ಮಾನ್ಯ ನಾಗರಾಜ್ ಅವರು ಕೆಲವು ಕೈಗಾರಿಕೆಗಳಿಗೆ ಅನುಮತಿ ಕೊಟ್ಟಿದ್ದೀರಿ ಎಂದು ಹೇಳಿದರು. ನಾವು ಕೊಡುವುದಿಲ್ಲವೆಂದು ಹೇಳಿರಲಿಲ್ಲ. ಆದರೆ ನಾವು ಡೀಸೆಂಟ್ರಲೈಸೇಷನ್ ಆಫ್ ಇಂಡಸ್ಟ್ರಿಯಲ್ ಪಾಲಿಸಿ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಸಣ್ಣ ಕೈಗಾರಿಕೆಗಳನ್ನು ಮತ್ತು ಕುಟೀರ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೈಗಾರಿಕಾ ನೀತಿಯಲ್ಲಿ ಈ ಕಾರ್ಯಕ್ರಮ ಇರುವುದನ್ನು ತಾವು ಗಮನಿಸಬಹುದು. ಈ ದಿಸೆಯಲ್ಲಿ ಬಹಳ ಮುಖ್ಯವಾದ ಕಾರ್ಯಕ್ರಮ ಎಂದರೆ ಪ್ರೊಮೋಷನ್ ವಿಂಗ್ ಅನ್ನು ಹೊಸದಾಗಿ ಪ್ರಾರಂಭಮಾಡಿರುವುದು. ಇನ್ನೊಂದು ಮುಖ್ಯವಾದುದೆಂದರೆ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆ ಮಾಡಿರುವುದು. ೨-೧೦-೧೯೮೩ರಿಂದ ಇದು ಜಾರಿಗೆ ಬಂದಿದ್ದು ೭,೪೪೦ ಜನರಿಗೆ ಹಣಕಾಸಿನ ನೆರವಿಗೆ ಬ್ಯಾಂಕಿಗೆ ಶಿಫಾರಸು ಮಾಡಲಾಗಿದೆ. ಕೇವಲ ನಾಲ್ಕೈದು ತಿಂಗಳಲ್ಲಿ ಇಷ್ಟೊಂದು ಫಲಾನುಭವಿಗಳನ್ನು ಗುರುತಿಸಿರುವುದು ಒಂದು ದೊಡ್ಡ ಹೆಜ್ಜೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ಸ್ ಈಗಾಗಲೇ ೧೯ ಜಿಲ್ಲೆಗಳಲ್ಲೂ ಸ್ಥಾಪಿತವಾಗಿದೆ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ಗಳನ್ನು ಮಾಡಬೇಕೆಂಬ ಯೋಜನೆ ಕೇಂದ್ರದಲ್ಲಿ ಜನತಾ ಸರ್ಕಾರ ಇದ್ದಾಗ ಪ್ರಾರಂಭವಾಗಿದ್ದು. ಇದರ ಉಪಯುಕ್ತತೆಯನ್ನು ಎಲ್ಲಾ ವಲಯಗಳಲ್ಲೂ ಸ್ವಾಗತಿಸಲಾಗಿತ್ತು. ಆದರೆ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ಸ್ ಚುರುಕಾಗಿ ಕೆಲಸ

ಮಾಡುವುದಕ್ಕೆ ಪ್ರಾರಂಭ ಮಾಡಿದ್ದು ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ. ಇದರಲ್ಲಿ ಕೆಲವು ಸ್ಪೆಷಲ್ ಕಾಂಪೊನೆಂಟ್ ಸ್ಕೀಮನ್ನು ಅಳವಡಿಸಲಾಗಿದೆ. 'Under District Industries Centres, the Special Comoponent Plan is also being implemented. Main features of these schemes are, training of Scheduled Caste artisans in Crafts and Industries, supply of Tool Kits to trained condidates, constuction of Living-come-Worksheds and Common Worksheds for these candidates. The budget allocation for the year 1983-84 is Rs. 152.215 lakhs.'

This is a very big step in the direction of giving employment to the downrtroden in the rural areas.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್ಸ್ ಎಂಪ್ಲಾಯ್‌ಮೆಂಟ್ ಓರಿಯಂಟ್‌ಡ್ ಆಗಿದೆಯೋ ಇಲ್ಲವೇ ಎಂದು ನೋಡಿದರೆ ದಿನಾಂಕ ೩೦-೯-೧೯೮೩ ರವರೆಗಿನ ಅಂಕಿಅಂಶಗಳನ್ನು ತೆಗೆದುಕೊಂಡರೆ ಎಂಪ್ಲಾಯ್‌ಮೆಂಟ್ ಜನರೇಟ್ ಮಾಡಿರತಕ್ಕದ್ದು ೨೪,೯೫೪. ಈ ಕಾರ್ಯಕ್ರಮಗಳನ್ನು ಕೈಗಾರಿಕಾ ನೀತಿಯಲ್ಲಿ ನೋಡಿದರೆ ಸ್ವಲ್ಪಮಟ್ಟಿಗಾದರೂ ಉದ್ಯೋಗ ಒದಗಿಸತಕ್ಕ ಕಾರ್ಯಕ್ರಮ ಆಗಿದೆ ಎಂಬುದು ಗೊತ್ತಾಗುತ್ತದೆ. ಇದು ಎಲ್ಲರೂ ಮೆಚ್ಚತಕ್ಕ ವಿಷಯ. ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ತೊಡೆದುಹಾಕುತ್ತೇವೆ, ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತೆಗೆದುಹಾಕುತ್ತೇವೆ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ ಯಾವ ಸರ್ಕಾರ ಬಂದರೂ ಈ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಆದರೆ ಈ ನೀತಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡತಕ್ಕ ಸ್ಪಷ್ಟವಾದ ಚಿತ್ರ ನಮಗೆ ಕಾಣುತ್ತಿದೆ. ನಾನು ಈ ಸಂದರ್ಭದಲ್ಲಿ ಒಂದೆರಡು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮುಖ್ಯವಾಗಿ ಲಿಡ್ಕರ್ ವಿಚಾರದಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಶಾಸಕರಾದ ಮುನಿಯಪ್ಪನವರು ಅದರ ಅಧ್ಯಕ್ಷರಾಗಿದ್ದಾರೆ. ಅಲ್ಲಿ ಪ್ರಸಕ್ತ ವರ್ಷದಲ್ಲಿ ೧೫೦ ಲಕ್ಷ ರೂಪಾಯಿ ಟರ್ನ್ ಓವರ್ ಮಾಡಿದ್ದಾರೆ. ಕಳೆದ ವರ್ಷ ೫೭ ಲಕ್ಷ ರೂಪಾಯಿ ಟರ್ನ್ ಓವರ್ ಆಗಿತ್ತು. ಕಲ್ಕತ್ತದಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ೭ ಲಕ್ಷ ರೂಪಾಯಿಗಳ ವ್ಯಾಪಾರ ಮಾಡಿದ್ದಾರೆ. ಕೆಳಗೆ ತುಳಿಯಲ್ಪಟ್ಟ ಜನಾಂಗದವರಿಗೆ ಕೈಗಾರಿಕೆಯಲ್ಲಿ ಉತ್ತೇಜನ ಕೊಡತಕ್ಕ ಇಂಥ ಕಾರ್ಯಕ್ರಮವನ್ನು ಯಾವಾಗಲೂ ಹಾಕಿರಲಿಲ್ಲ ಎಂದು ನನಗನ್ನಿಸುತ್ತದೆ. ಲಿಡ್ಕರ್‌ನಲ್ಲಿ ತಯಾರಾಗತಕ್ಕ ಷೂಗಳು, ಚಪ್ಪಲಿಗಳು, ಬ್ಯಾಗುಗಳು, ಯೂನಿಫಾರಂಗಳು ಇವುಗಳಿಗೆ ಮಾರ್ಕೆಟಿಂಗ್ ಸೌಲಭ್ಯಗಳು ಕೊಡುವುದಕ್ಕೆ ಸರ್ಕಾರವೇ ಇದೆಲ್ಲವನ್ನೂ ಕೊಂಡುಕೊಳ್ಳುವುದಕ್ಕೆ ಆಜ್ಞೆ ಮಾಡಬೇಕೆಂದು ಕೈಗಾರಿಕಾ ಸಚಿವರಿಗೆ ಕೇಳಿಕೊಳ್ಳುತ್ತೇನೆ. ದಾವಣಗೆರೆಯಲ್ಲಿ ಲಿಡ್ಕರ್ ಶಾಖೆಯನ್ನು ಪ್ರಾರಂಭ ಮಾಡಿದಾಗ ಕೇವಲ ೪೫ ರೂಪಾಯಿಗೆ ಒಂದು ಷೂ ತೆಗೆದುಕೊಂಡಿದ್ದೇನೆ. ಅದೇ ಷೂ ಬಾಟದಲ್ಲಿ ೧೨೫ ರೂಪಾಯಿ ಆಗುತ್ತದೆ. ಪೋಲೀಸ್ ಇಲಾಖೆಗೆ ಬೇಕಾದ ಷೂಗಳು ಮಂತ್ರಿಗಳ ಸಾಮಗ್ರಿಗಳನ್ನು ಲಿಡ್ಕರ್‌ನಿಂದಲೇ ಕಡ್ಡಾಯವಾಗಿ ಕೊಳ್ಳಬೇಕೆಂದು ಮಾಡಿದರೆ ಇದು ಇನ್ನೂ ಅಭಿವೃದ್ಧಿಯಾಗುತ್ತದೆ. ಸಣ್ಣ ಸಣ್ಣ ರಸ್ತೆ ಪಕ್ಕದ ಸ್ಟಾಲ್‌ಗಳನ್ನು ಮಾಡುವುದಕ್ಕೆ ವಸ್ತು ಪ್ರದರ್ಶನ ಮಾಡುವುದಕ್ಕೆ ಯೋಜನೆ ಹಾಕಿ ಕೊಂಡಿದ್ದಾರೆ. ಟ್ರೈನಿಂಗ್ ಕ್ಯಾಂಪ್‌ಗಳನ್ನು ಮಾಡುವುದಲ್ಲದೆ; ಲೆದರ್ ಇಂಡಸ್ಟ್ರಿಯಲ್ಲಿ ಮೂರುವರ್ಷದ ಡಿಪ್ಲೋಮಾ ಕೋರ್ಸ್ ಮಾಡತಕ್ಕ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದಾರೆ.

ಈಗಾಗಲೇ ಸುಮಾರು ೨೫ ರಿಂದ ೩೦ ಜನ ಹರಿಜನ ವಿದ್ಯಾರ್ಥಿಗಳು ಡಿಪ್ಲೋಮಾ ಮಾಡಿದ್ದಾರೆ. ಇವತ್ತಿನ ದಿವಸ ಈ ಲೆದರ್ ಇಂಡಸ್ಟ್ರೀ ಒಂದು ಚಿಕ್ಕ ಉದ್ಯಮ ಎಂದು ಯಾರೂ ತಿಳಿದುಕೊಳ್ಳಬಾರದು. ಈ ಒಂದು ಯೋಜನೆ ಕೆಳಗೆ ಇವರಿಗೆ ಉದ್ಯೋಗ ಕೊಟ್ಟು ಇವರನ್ನು ಬಡತನದ ರೇಖೆಯಿಂದ ಮೇಲೆ ಎತ್ತತಕ್ಕದ್ದು ಬಹಳ ಮುಖ್ಯ ಇದೆ. ಈ ದಿನ ಕಾರ್ಪೊರೇಷನ್ ಮಾಡಿದರೆ ಸಾಲದು, ಅದರ ಮೂಲಕ ಸಹಾಯ ಮಾಡಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ಈ ಲೆದರ್ ಇಂಡಸ್ಟ್ರೀನಲ್ಲಿ ಹರಿಜನರು ಟ್ರೈನಿಂಗ್ ಪಡೆದಿದ್ದಾರೆಂದು ಹೇಳುತ್ತಿದ್ದೀರಿ. ಈ ಒಂದು ಟ್ರೈನಿಂಗ್‌ನ್ನು ಮೇಲ್ವರ್ಗದವರು ಎಷ್ಟು ಜನ ಪಡೆದಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ.ಜಿ. ಮಹೇಶ್ವರಪ್ಪ.—ಇನ್ನು ನಾನು ಸಕ್ಕರೆ ನೀತಿ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರೂ ನಮ್ಮ ರಾಜ್ಯದ ಸಕ್ಕರೆ ಉದ್ಯಮವನ್ನು ಗಮನಿಸಿದ್ದಾರೆಂದು ಕಾಣುತ್ತದೆ. ಈ ಒಂದು ಉದ್ಯಮ ಈ ಅವಸ್ಥೆಗೆ ಬರಲು ಕೇಂದ್ರ ಸರ್ಕಾರದ ಸಕ್ಕರೆ ನೀತಿಯೇ ಕಾರಣ ಎಂದು ನಾನು ಹೇಳುತ್ತೇನೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಹಾಗೂ ಈ ಬಗ್ಗೆ ನಾನು ರಾಜಕೀಯ ತರುವುದಕ್ಕೆ ಹೋಗುವುದಿಲ್ಲ. ಇವತ್ತು ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ ಆಗಲೀ ಅಥವ ಜಾಯಿಂಟ್ ಸೆಕ್ಟರ್‌ನಲ್ಲಿ ಆಗಲೀ, ಈ ಸಕ್ಕರೆ ಉದ್ಯಮ ಲಾಭದಾಯಕವಾಗಿ ನಡೆಯಬೇಕಾದರೆ ಈ ಒಂದು ಸಕ್ಕರೆ ನೀತಿಯಲ್ಲಿ ಆಮೂಲಾಗ್ರವಾದ ಬದಲಾವಣೆ ಆಗಬೇಕಾಗಿದೆ, ಇದು ಆಗದಿದ್ದರೆ ಯಾವ ಸಕ್ಕರೆ ಕಾರ್ಖಾನೆಗಳು ಇವತ್ತು ಲಾಭ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಇವತ್ತು ಸಕ್ಕರೆ ಕಾರ್ಖಾನೆಗಳು ೫ ಕೋಟಿ, ೧೦ ಕೋಟಿ ರೂಪಾಯಿ ನಷ್ಟದಲ್ಲಿ ನಡೆಯುತ್ತಿವೆ. ಇವತ್ತು ಏನು ಸಕ್ಕರೆಯಲ್ಲಿ ಲೆವಿ ರೇಟ್ ಕೊಡಲಾಗುತ್ತಿದೆ ಅದು ಕರ್ನಾಟಕದಲ್ಲಿ ಬಹಳ ಕಡಿಮೆ ಇದೆ. ಇವತ್ತು ಕೇರಳದಲ್ಲಿ, ಬಿಹಾರದಲ್ಲಿ, ಉತ್ತರ ಪ್ರದೇಶದಲ್ಲಿ ಲೆವಿ ರೇಟ್ ಜಾಸ್ತಿ ಇದೆ. ಎಲ್ಲಿ ಉತ್ಪಾದನೆ ಜಾಸ್ತಿ ಇದೆ ಅಲ್ಲಿ ಹೆಚ್ಚು ಲೆವಿ ರೇಟ್ ಕೊಡಬೇಕಾಗುತ್ತದೆ. ಆದರೆ ಈ ಒಂದು ತಾರತಮ್ಯ ಏಕೆ ತೋರಿಸುತ್ತಿದ್ದಾರೋ ನನಗೆ ಗೊತ್ತಿಲ್ಲ. ನನ್ನ ವೈಯುಕ್ತಿಕ ಅಭಿಪ್ರಾಯ ಹೇಳಬೇಕೆಂದರೆ, ಈ ಸಕ್ಕರೆ ಕಾರ್ಖಾನೆಗಳು ಕೇವಲ ದಕ್ಷಿಣ ಇಂಡಿಯಾದಲ್ಲೇ ಇರಬೇಕು, ಹಾಗೂ ಉತ್ತರದಲ್ಲಿ ಇರುವ ಕಾರ್ಖಾನೆಗಳನ್ನು ಮುಚ್ಚಬೇಕು.

ಶ್ರೀ ಮಲ್ಲಾರಿಗೌಡ ಪಾಟೀಲ್.—ತಾವು ಏನು ವಿರುದ್ಧವಾಗಿ ಹೇಳುತ್ತಿದ್ದೀರಲ್ಲಾ ? ಉತ್ತರ ಭಾರತದಲ್ಲಿ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದಾರೆ ಎನ್ನುತ್ತೀರಿ, ಹಾಗೂ ಅಲ್ಲಿ ಕಾರ್ಖಾನೆಗಳನ್ನು ಮುಚ್ಚಬೇಕು ಎನ್ನುತ್ತೀರಿ. ತಮ್ಮ ಅಭಿಪ್ರಾಯ ಏನು ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಉತ್ತರ ಭಾರತದಲ್ಲಿ ಸಕ್ಕರೆ ಉದ್ಯಮ ನಿಲ್ಲಬೇಕು. ಉತ್ತರ ಭಾರತದಲ್ಲಿ ಸೆಣಬು ಕೈಗಾರಿಕೆ ಮಾಡಲಿ, ವೀಟ್ ಬೇಸ್ಡ್ ಕೈಗಾರಿಕೆಗಳನ್ನು ಮಾಡಲಿ. ದಕ್ಷಿಣ ಭಾರತದ ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕದಲ್ಲಿ ಸುಮಾರು ೧೩ ಪರ್ಸೆಂಟ್ ರಿಕವರಿ ಹೋಗುತ್ತದೆ. ಇವತ್ತು ಉತ್ತರ ಹಾಗೂ ದಕ್ಷಿಣ ಎಂದು ಅವರು ಬೇಧಭಾವ ಮಾಡದೇ ಅವರು ಇಡೀ ರಾಷ್ಟ್ರವನ್ನು ಸಮಗ್ರವಾಗಿ ನೋಡಿ ಅಭಿವೃದ್ಧಿ ಮಾಡಬೇಕಾಗುತ್ತದೆ. ಇವತ್ತು ಉತ್ತರ ಪ್ರದೇಶದಲ್ಲಿ ಶುಗರ್ ಲಾಬಿ ಎಷ್ಟು ಇದೆ ಎಂದರೆ, ಅಲ್ಲಿ ಎಷ್ಟೇ ನಷ್ಟ ಆದರೂ ಸಹ ಅಲ್ಲಿ ರೈತರಿಗೆ ಸರ್ಕಾರ ಸಹಾಯ ಮಾಡುತ್ತಿದೆ. ಒಂದು ಸಾರಿ ಅಲ್ಲಿ ೧೦೦ ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಸಬ್ಸಿಡೈಸ್ ಮಾಡಿ ಕೊಟ್ಟ ನಿದರ್ಶನ ಇದೆ. ಇವತ್ತು ಅಂತಹ ಹಣವನ್ನು ಬೇರೆ ಕೈಗಾರಿಕೆಗಳಿಗೆ ಇನ್ವೆಸ್ಟ್ ಮಾಡಲಿ. ಇವತ್ತು ದಕ್ಷಿಣದಲ್ಲಿ ನಿಜವಾಗಿಯೂ ನಷ್ಟ ಆಗುತ್ತಿರುವುದರಿಂದ ಕೇಂದ್ರ ಸರ್ಕಾರ ತನ್ನ ನೀತಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಇವತ್ತು ಇಲ್ಲಿ ರಿಕವರಿ ಕಡಿಮೆ ಮಾಡಿ ಅಲ್ಲಿ ಉತ್ತೇಜನ ಕೊಡುವುದು ಯಾವ ನ್ಯಾಯ ? ಇನ್ನು ಎಕ್ಸೈಸ್ ಡ್ಯೂಟಿಯನ್ನು ಸಹ ಕಡಿಮೆ ಮಾಡಬೇಕು. ಇಲ್ಲದಿದ್ದರೆ ಈ ಉದ್ಯಮ ಲಾಭದಾಯಕವಾಗಿ ನಡೆಯುವುದು ಕಷ್ಟವಾಗುತ್ತದೆ ಎಂದು ಹೇಳುತ್ತೇನೆ. ಇನ್ನು ಏನು ಸಕ್ಕರೆ ಮೇಲೆ ಪರ್ಚೇಸ್ ಟ್ಯಾಕ್ಸ್ ಕಲೆಕ್ಟ್ ಮಾಡಿದ್ದಾರೆ ಅದನ್ನು ಡೆವಲಪ್ಡ್ ಹಾಗೂ ನಾನ್ ಡೆವಲಪ್ಡ್ ಏರಿಯಾಗಳಿಗೆ ಸಮನಾಗಿ ಖರ್ಚು ಮಾಡುತ್ತಿರುವುದು ಹೋಗಬೇಕು. ಇವತ್ತು ಮಂಡ್ಯ ಮುಂತಾದ ಕಡೆ ಏನು ರಸ್ತೆಗಳು ಹಿಂದೆಯೇ ಡೆವಲಪ್ ಆಗಿವೆ ಅಂತಹ ಕಡೆ ಖರ್ಚು ಮಾಡದೇ ಎಲ್ಲಿ ರಸ್ತೆಗಳು ಇನ್ನೂ ಪೂರ್ತಿಗೊಳ್ಳದೇ ಕಬ್ಬನ್ನು ಹತ್ತಾರು ಮೈಲಿ ದೂರ ಹೊತ್ತು ಸಾಗಬೇಕಾಗಿದೆ ಅಂತಹ ಕಡೆ ಇದನ್ನು ಖರ್ಚು ಮಾಡಬೇಕು ಹಾಗೂ ಎಲ್ಲಿ ಇಂತಹ ರಸ್ತೆಗಳು ಕೆಟ್ಟು ಹೋಗಿವೆ ಅಂತಹವನ್ನು ರಿಪೇರಿ ಮಾಡುವುದಕ್ಕೆ ಖರ್ಚು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಇವತ್ತು ಏನು ಐ.ಎ.ಎಸ್. ಅಧಿಕಾರಿಗಳ ಹುದ್ದೆಯಲ್ಲಿ ರಾಜ್ಯ ಹಾಗೂ ಕೇಂದ್ರದ್ದು ಏನು ಕೋಟಾ ಇದೆ ಅದು ಮೂರನೇ ಒಂದು ಭಾಗ ಇದೆ. ಅದನ್ನು ಕನಿಷ್ಟ ದಾಮಾಷಾ ೫೦ : ೫೦ ಮಾಡಬೇಕು ಎಂದು ನಾನು ಹೇಳುತ್ತೇನೆ. ಏನು ಇವತ್ತು ನಮ್ಮ ರಾಜ್ಯದ ಅಧಿಕಾರಿಗಳು ಐ.ಎ.ಎಸ್. ಅಧಿಕಾರ ಪಡೆಯುವುದಕ್ಕೆ ಶಕ್ತರಿಲ್ಲವೇ ? ನಮ್ಮ ರಾಜ್ಯದವರು ೧೦–೧೫ ವರ್ಷಗಳ ಕಾಲ ಡೆಪ್ಯುಟಿ ಕಮೀಷನರ್ ಆಗಿರುತ್ತಾರೆ. ನಮ್ಮ ರಾಜ್ಯದ ಅಧಿಕಾರಿಗಳಿಗೇನೂ ಯೋಗ್ಯತೆಯಲ್ಲಿ ಕಡಿಮೆ ಇಲ್ಲ ಎಂದು ನಾನು ಹೇಳುತ್ತೇನೆ. ಈ ವಿಷಯದ ಬಗ್ಗೆ ಮಾನ್ಯ ದೇವೇಗೌಡರು ವಿರೋಧ ಪಕ್ಷದಲ್ಲಿ ಇದ್ದಾಗ ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯ ಮಾನ್ಯ ವೀರಪ್ಪ ಮೊಯ್ಲಿಯವರಿಗೆ ಜ್ಞಾಪಕ ಇರಬಹುದು. ಇವತ್ತು ಕನಿಷ್ಟ

ಪಕ್ಷ ಶೇಕಡ ೫೦ರಷ್ಟು ಜನ ಐ.ಎ ಎಸ್ ಅಧಿಕಾರಿಗಳು ಈ ರಾಜ್ಯದವರೇ ಆಗಿರಬೇಕು ಎಂದು ನಾನು ಹೇಳುತ್ತೇನೆ. ಇನ್ನು ಐ.ಎ ಎಸ್. ಅಧಿಕಾರಿಗಳನ್ನು ಸೆಲೆಕ್ಷನ್ ಮಾಡುವ ವಿಚಾರದಲ್ಲಿ ನಾನು ಕೆಲವು ಆಪಾದನೆಗಳನ್ನು ಮಾಡಬೇಕಾಗುತ್ತದೆ. ಏಕೆಂದರೆ ಕರ್ನಾಟಕದಿಂದ ಹೋಗತಕ್ಕ ಎಲ್ಲ ಅಭ್ಯರ್ಥಿಗಳೂ ದಡ್ಡರೇ ? ಇವತ್ತು ಕರ್ನಾಟಕದಿಂದ ಯಾರು ಪರೀಕ್ಷೆಗೆ ಕೂರುತ್ತಾರೆ ಅವರೆಲ್ಲರೂ ಹೆಚ್ಚು ಅಂಕ ಗಳನ್ನು ಪಡೆದು ಪಾಸ್ ಆಗುತ್ತಾರೆ. ಆದರೆ ಇಂಟರ್‌ವ್ಯೂ ಟೈಮ್‌ನಲ್ಲಿ ಏನಾಗುತ್ತದೆ ಎಂದರೆ ಬೇರೆ ರಾಜ್ಯದವರಿಗೆ ೧೫೦ ಅಂಕಗಳನ್ನು ಕೊಟ್ಟರೆ ನಮ್ಮವರಿಗೆ ೨೦-೩೦ ಅಂಕಗಳನ್ನು ಕೊಡುತ್ತಾರೆ, ಆದು ದರಿಂದ ಇದು ಒಂದು ಸೀರಿಯಸ್ ಮ್ಯಾಟರ್ ಇದೆ. ಕರ್ನಾಟಕ ರಾಜ್ಯದಿಂದ...

SRI M. VEERAPPA MOILY.—This will be a reflection on the UPSC. I don't think such an allegation could be made here. I think that should be expunged from the records because that is a body. ಮಾರ್ಕ್ಸ್ ಕೊಡುವ ಬಗ್ಗೆ ಅವರು ಮಾತನಾಡಿದರು. Union Public Service Commission is an autonomous body. When that body or persons are not available here, it may not be fair. I think that should be avoided and it is a reflection on that body.

SRI K. G. MAHESWARAPPA.—The facts are showering on our fece,

ಶ್ರೀ ಎಂ. ವೀರಪ್ಪ ಮೊಯ್ಲಿ.—ಹೇಗಿದ್ದರೂ ಮುಂದೆ ಲೋಕಸಭಾ ಚುನಾವಣೆ ಬರುತ್ತದೆ. ಅವರು ಚುನಾವಣೆಗೆ ನಿಂತು ಲೋಕಸಭೆಗೆ ಹೋಗಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲಿ. Outside the House or in Parliament, he can make such remarks, but not here.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನನ್ನ ಪಟ್ಟಿಗೆ ಹೇಳುವುದಾದರೆ ಮಾನ್ಯ ಮಹೇಶ್ವರಪ್ಪನವರು ಬಹಳ ಯೋಗ್ಯರಿದ್ದಾರೆ. ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡುಬಿಡಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಹೇಗಿದ್ದರೂ ಅವರನ್ನು ಪಾರ್ಲಿಮೆಂಟ್‌ಗೆ ರೆಕಮೆಂಡ್ ಮಾಡಿದ್ದೀರಿ. ಅಲ್ಲಿ ಅವರನ್ನು ನೋಡೋಣ.

ಶ್ರೀ ಜೆ. ಡಿ. ಸೋಮಪ್ಪ.—ಅವರು ಪಾರ್ಲಿಮೆಂಟಿಗೆ ಹೋಗಿ ಅಲ್ಲಿ ಮಂತ್ರಿಗಳಾಗಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಜೆ. ಎಚ್. ಪಟೇಲ್ ಅವರು ಇರುವವರೆವಿಗೂ ನಿಮಗೆ ಛಾನ್ಸ್ ಇಲ್ಲ ಬಿಡಿ.

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕಳೆದ ೩೦ ವರ್ಷಗಳಿಂದ ನಾನು ಸಫರ್ ಮಾಡಿದ್ದೇನೆ. ಇನ್ನೇನು ಇದೆ ಬಿಡಿ ಸ್ವಾಮಿ ?

ಶ್ರೀ ಎಂ. ಎಸ್. ಕೃಷ್ಣನ್.—೩೦ ವರ್ಷಗಳಿಂದ ಸಫರ್ ಆಗಿದ್ದೇನೆ ಎಂದರೆ, ಮಂತ್ರಿ ಆಗದೇ ಸಫರ್ ಮಾಡಿದ್ದೇನೆ ಎಂದು ಅರ್ಥವೇ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಕಳೆದ ೧೫-೨೦ ವರ್ಷಗಳಿಂದ ನಾವೂ ನೀವೂ ಹೋರಾಟ ಮಾಡಿ ಕೊಂಡು ಬಂದುದು ತಮಗೇ ಗೊತ್ತಿದೆ ಅಲ್ಲವೇ ?

ಶ್ರೀ ಎನ್. ಜಿ. ನಾಯಕ್.—ದಾವಣಗೆರೆ ಕ್ಷೇತ್ರವನ್ನು ನಿಮಗೆ ಬಿಟ್ಟುಕೊಡುತ್ತೇವೆ, ತಾವು ನಮ್ಮ ಕಡೆ ಬನ್ನಿ ಸ್ವಾಮಿ,

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇನ್ನು ಬೋರ್ಡ್ಸ್ ಮತ್ತು ಕಾರ್ಪೋರೇಷನ್‌ಗಳಿಗೆ ಐ.ಎ.ಎಸ್. ಅಧಿಕಾರಿಗಳನ್ನು ನೇಮಕ ಮಾಡುತ್ತಿರುವುದನ್ನು ನೋಡಿದರೆ ಎಲ್ಲಿ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ಸ್ ಹುದ್ದೆಗೂ ಐ.ಎ.ಎಸ್. ಅಧಿಕಾರಿಗಳನ್ನೇ ಹಾಕುತ್ತಾರೋ ಎನ್ನುವ ಅನುಮಾನ ಇದೆ, ಎಲ್ಲೆಲ್ಲಿಯ ಹುದ್ದೆಗಳಿಗೆ ಟೆಕ್ನೋಕ್ರಾಟ್ಸ್‌ಗಳನ್ನು ಹಾಕಬೇಕು ಅಲ್ಲಿಗೆ ಅವರನ್ನು ಹಾಕಬೇಕಾಗುತ್ತದೆ. ಇನ್ನು ವೈದ್ಯಕೀಯ ಇಲಾಖೆ ಬಗ್ಗೆ ಹೇಳುವುದಾದರೆ, ಈ ಖಾತೆಯ ಕೆಲಸಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಮತ್ತು ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ.

The style and functioning of the Janatha Government is different from the style and functioning of the previous Government. ಹಿಂದೆ ಮಾನ್ಯ ಬಂಗಾರಪ್ಪನವರು ಗುಂಡೂರಾವ್ ಅವರ ಸರ್ಕಾರದ ವಿರುದ್ಧ ಭಾಷಣ ಮಾಡುವಾಗ ಏನೇನು ಹೇಳಿದ್ದಾರೆ ಎಂಬ ಬಗ್ಗೆ ನಾನು ಓದುತ್ತಾ ಇದ್ದೆ. ಅವರು ಮಾತನಾಡುತ್ತಾ, ಇವತ್ತಿನ ದಿವಸ ಪೇಟೆಯಲ್ಲಿ ಕತ್ತಿ, ಗುರಾಣಿಗಳೇ ಸಿಗುತ್ತಾ ಇಲ್ಲ. ನಾಟಕ ಆಡುವವರಿಗೂ ಇವು ಸಿಗುತ್ತಾ ಇಲ್ಲ. ಅಂತಹ ಒಂದು ಪರಿಸ್ಥಿತಿ ಬಂದಿದೆ ಹಾಗೇ, ಹೀಗೆ ಎಂದು ಆಗ ಮಾತನಾಡಿದ ಅವರು ಈಗ ಈ ಸರ್ಕಾರದ ವಿರುದ್ಧ ಬಹಳ ವೈಲೆಂಟ್ ಆಗಿ ಭಾಷಣ ಮಾಡಿ ಹೊರಗೆ ಹೋದರು.

ಶ್ರೀ ಜೆ. ಡಿ. ಸೋಮಪ್ಪ.—ಈಗ ಮತ್ತೆ ಅವು ಅಂಗಡಿಗಳಲ್ಲಿ ಸಿಗುತ್ತಿವೆಯೋ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಇಷ್ಟು ಹೇಳಿ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI G. S. BASAVARAJ (Arasikere).—Mr. Speaker, Sir. I would like to speak on the demands in English only as I have been supplied with English version of the annual reports. and other documents, I would like to submit the following views and suggestions in relation to the demands of the Department under the charge of the Hon'ble Chief Minister.

At distant Patna, the Janatha Party has patted the back of Sri Ramakrishna Hegde on the performance of his government which is run with the clutches of BJP, CPM, CPI and other friendly groups. But what is the reality neares at home ?

The Chief Minister has number of important major departments under his control which he cannot and has not been running well. Sri Hegde has bitten of more than what he could chew. This conclusion is inescapable from the way in which the departments are being managed, rather mismanaged. Like the shadow under the lamp, the departments under the very nose of Sri Hegde have become a byeword for corruption, inefficiency and mismanagement.

Take for instance, the Planning Department and its organisations. The Bureau of Economics which should serve as "Eyes and Ears" of administration has become a defundt and totally useless organisation The Bureau s main output-publications/study reportshas been dwindling from year to year. It his declined by about 50% (as can be seen from its Administration reports) over a period of about these years ending 1982-83. This dubious credit goes to its present Directoa Shri R. G. Bhat who became Director about 3 years ago. He is running the Bureauas if it is his personal estate. He has turned it into a heaven of corruption, communal factions, inefficiency, a torturs centre of the employees.

A number of signed petitions have been sent sirce September 1982 by Bureau's officers and public leaders against Shri R. G. Bhat to Government including the Hon'ble Chief Minister himself. To cite a few : from (i) Mayappa, Secretary, Officers, Association of the

Bureau (in September 1982) (ii) Vijayaraghavachar, Dy. Director, (1983) (iii) Chandrappa, Dy, Director. (1983) (iv) Manjunath, Asst. Director (1983) (v) K. Nagaraj, Typist (1983–a number of petitions), (vi) N. S. Pandit. freedom fighter, (1984), (vii) Rajagopal, Janatha leader from Malleswaram, (1984) etc..

Inspite of these numerous petitions making grave allegations against Shri Bhat. no action has been taken against this erring officer. The Addl. Chief Secretary is shielding him solely on denominal consideration. Why the Chief Minister has not taken action so far ? Possibly Mr. Bhat is related to him as he also hails from Uttar Kannada District.

The least that is called for now is to place Mr. Bhat under suspension immediately. transfer the Addl. Chief Secretary and order for an impartial enquiry against Mr, Bhat. I do hope the Chief Minister will turn his attention and set right the Bureau.

The Economic and Planning Council has become another white elephant, if not only an irrelevant institution. It is staffed with outsiders who are aliens to the local problems, prospects, needs and aspirations of the people of Karnataka. Mr. Hegde has utilised it as tool for carrying on a cold war against the Central Government. The annual report mentions that the Council sponsored a National Seminor on "Centre-State Relations" in August 1983. Why this supposed economic and technical Council should tinker with political issues ? Has Mr. Hegde any sense of proportion or purpose or balance ?

This apart, there is previous little indication in the 1983–84 report of the Planning Department as to what the Council did, the only laconic statement in the report is that the Council discussed a number of subjects, i.e., it indulged in academic exercises. One of the subjects touched by the Council is "Power ; prospects and policies" but with what result ? The wheels of industry have ground to a halt ; the lights und hearts in homes are extinguished. This is the gift of the Council to the State of Karnataka !

Take also the working of the CADA Wing (P 22 of the report), Utilisation of irrigation potential under decade old Tungabhadra Project during 1983–84 is only 30.000 hectares as against 3,47,000 hectares of potential created ; a meagrely 8·7% What a sad commentary on the efficiency of the Department directly run by the Chief Minister.

The Health Department a major service Depatment with huge financial outlays has become notorious for rampant corruption, inefficiency and public dissatisfaction. Working of the Hospitals

is very unsatisfactory. The family welfare programme is in doldrums. Achivement under sterlisation programme is only 41 5% of the annual target, as at the end of December 1983, though 75% of the current year is over (P56 af the Annnal report of H. F, W. Department), It is declared as a National Programme ; it is also an important programme under the 20 point programme. But progress as a whole under the Family Walfare Programme is dismal. Budgetted outiay for the current year (1983-84) is Rs. 2479.00 lakhs. Whereas expenditure till the end of December 1983 is only Rs. 928.24 lakhs, or just 37.4% of the annual outlay which is very poor indeed P.55 of the AR of HFWD). If this is the fate of a nationai programme like the Family Welfare Programme, the picture must be much more dismal in the Case of the other programmes.

The Poliee Department is run like that of a private detective and protective agency of and for Sri Hegde. Police atrocities have become the order of the day. Rape of women by the police has become a daily affair. Men whisked away in the morning by the police sre turned into corpses in the Stations by the evening. There ia police raj everywhere. The Chief Minister has utterly failed to maintain law and order which are so essential for economic development/progress and social well--being.

The Administration of the State in general has deteriorated ; has become more and more bureaucratic. tardy. sluggish irresponsive. The Progress of the State has slowed down on all fronts. I would suggest that the following measures be taken immediately to tone it up ;

(i) The Chief Minister must handover seme of the Departments under his charge to other Ministers.

(ii) The Stecretariat is an archaic relic, It has become a milestone round the neck of the Government. It is the home of all delays and indecisions. The system has outlived its utility, with the exception of FD, GAD. Finance, Planning and Law and Parliamentary Affairs. all the Secretariat Departments may be abolished in a phased manner.

There is no point in getting the technical proposals from Director of Agriculture. Chief Engineers etc., examined by a host of non-technical officials right from the FDC at the Secretariat. The Heads of the Departments could be designated as Addl. or Special Secretaries to Government. An IAS Secretary may if necessary supervise a group of such functionaries of related departments. This is bound to speed up the process of decision-making.

(iii) More importance must be given to technocrats. The IAS has become only a pan pushing agency without willing to take any responsibility but eager to grab all powers and credits to itself.

(iv) Increase the promotion quota in ths IAS cadre from technical departments/services.

(V) .Officers from the KAS-promoted to IAS cadre-with atleast 10 years field experience must only be appointed as Dy. Commissioners of the Districts. The present practice of posting young, immature and inexperiencod IAS recruits who are unable to understand the problems of the common man who are unabled to respond to the needs and aspirations of the common man must be discontinued.

The Planning Department has been turned into a moribund organisation under the inept and Lacklust leadership of the present Additional Chief Secretary who is also the Planning Secretary, He has the dubious credit for being responsible for abolishing the post of Planning secretary in 1971—when he was the Planning Secretary—following the recommendations of the Tukol Pay Commission.

It is stated in the Annual report of the Department of Cabinet Affairs that the process of recruitment has been speeded up during 1982–83. The details of recruitment refer to only 2 Departments namely PWD and Sericulture. What about the remaining departments which are too numerous to mention here. What sort of speeding up is this ? The recruitment to posts in other Departments must be hastened.

The Annual reports of the Deparment presented to the Legislature for 1983-84 cover by and large progress for the current year only, This does not give a proper and comparative picture of the activities of the Departments and it is not possible to make an accurate assesment of the achievements of the Departments; whether they are improving or not.

It is also necessary to have an idea of the perspectives/goals set for the Departments for the coming year for which purpose the demands are submitted for approval, of this August House. I would therefore suggest that the Government bring out Annual reports for Departments giving details of financial and physical programmes and accomplishments covering 3 consecutive years namely previous year, current year an coming year. With these few words, I thank the Chair and conclude my speech.

† ಶ್ರೀ ಹೆಚ್. ಗಂಗಾಧರನ್ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಬಹಳ ಪ್ರಮುಖವಾದ ವಿಷಯಗಳ ಬೇಡಿಕೆಯ ಮೇಲೆ ಚರ್ಚೆಯನ್ನು ನಿರೀಕ್ಷಣೆ ಮಾಡುವಾಗ ಬಹುತೇಕ ತತ್ವನಿಷ್ಠೆಯ ವಿಚಾರಧಾರೆಗಳು ಬಂದಿದ್ದರೆ ಬಹುಶಃ ಈ ಮಾನ್ಯ ಸಭೆಗೂ ಹಾಗೂ ತನ್ಮೂಲಕ ರಾಜ್ಯದ ಅಭಿವೃದ್ಧಿಗೂ ಅನುಕೂಲವಾಗುತ್ತಿತ್ತು ಎಂದು ಹೇಳುವವರಲ್ಲಿ ನಾನೂ ಒಬ್ಬ, ಈ ದಿವಸ ಸದನದ ಮುಂದಿರತಕ್ಕ ಡಿಮ್ಯಾಂಡ್‌ಗಳ ಬಗ್ಗೆ ಹೇಳುವುದಾದರೆ, the Government demands are 20, our demands are plenty and let not the results be 420. ಪ್ರಮುಖವಾದ ಇಲಾಖೆಗಳ ಬಗ್ಗೆ ಮಾತನಾಡುವಾಗ ಅನೇಕ ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯ ಮೇಲೆ ತೀವ್ರವಾಗಿ ಚರ್ಚೆಮಾಡಿ ಕಟುವಾದ ಟೀಕೆಯನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಅವರು ಒಂದು ವಿಚಾರವನ್ನು ಯೋಚನೆ ಮಾಡಬೇಕಾಗಿತ್ತು. ಪೋಲೀಸ್ ಇಲಾಖೆಯ ಬಗ್ಗೆ ಇಂಥ ವಿಚಾರಧಾರೆ ಕೇವಲ ಇವತ್ತಿನಿಂದ ಏನೂ ಬರುತ್ತಿಲ್ಲ. ಇದು ೧೯೪೭ನೇ ಇಸವಿಯಿಂದಲೂ ಇದೇ ರೀತಿ ನಡೆದು ಕೊಂಡು ಬರುತ್ತಿದೆ. ಒಂದು ಸುದೈವದ ಸಂಗತಿ ಎಂದರೆ ಈ ಪೋಲೀಸ್ ಇಲಾಖೆಯ ಬಗ್ಗೆ ನಾವು ಇಷ್ಟಾದರೂ ಮಾತನಾಡುವುದಕ್ಕೆ ಅವಕಾಶ ಇದೆ. ನಾವು ಜವಾಬ್ದಾರಿ ಶಾಸಕರಾಗಿ, ಸಮಾಜ ಸುಧಾರಕರಾಗಿ ನಮ್ಮ ನಮ್ಮ ಜವಾಬ್ದಾರಿಗಳನ್ನು ಅರಿತು ಮಾತನಾಡಿ ಸೂಕ್ತ ಸಲಹೆಗಳನ್ನು ಕೊಡಬೇಕು. ಪೋಲೀಸ್ ಇಲಾಖೆಯ ದಕ್ಷತೆ, ಅದಕ್ಷತೆ. ಅವರ ಕಾರ್ಯ ನಿರ್ವಹಣೆ, ಕಾರ್ಯ ವೈಫಲ್ಯ ಇವುಗಳಿಗೆ ಕಾರಣ ಏನು ಎಂಬುದನ್ನು ಕಂಡುಹಿಡಿಯುವುದು ಮುಖ್ಯ. ಆದರೆ ಕಳೆದ ವರ್ಷ ಎಷ್ಟು ಅಪರಾಧ ನಡೆದುವು, ಈ ವರ್ಷ ಎಷ್ಟು ಅಪರಾಧಗಳು ನಡೆದುವು ಎಂದು ಕೇವಲ ಚರ್ಚೆಮಾಡುವುದರಿಂದ ಏನೂ ಪ್ರಯೋಜನ ಇಲ್ಲ. ಪೋಲೀಸ್ ಇಲಾಖೆಯಲ್ಲಿ ದಕ್ಷತೆ, ಅದಕ್ಷತೆಗಳಿಗೆ ಏನು ಕಾರಣ ಎಂಬುದನ್ನು ಪರಿಶೀಲಿಸುವಾಗ ಪ್ರಮುಖವಾಗಿ ಅದರಲ್ಲಿರತಕ್ಕ ದೋಷ ಎಂದರೆ. ಮೊದಲನೆಯದಾಗಿ ದೇಶದಲ್ಲಿರತಕ್ಕ ದಾರಿದ್ರ್ಯ, ಎರಡನೆಯದಾಗಿ ನಿರುದ್ಯೋಗ, ಮೂರನೆಯದಾಗಿ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಮತ್ತು ನಾಲ್ಕನೆಯದಾಗಿ ರಾಜಕೀಯ ಸ್ಥಾನಮಾನಗಳಿಗೆ ಇರತಕ್ಕ ಆಕರ್ಷಣೆ ಏನಿದೆ ಈ ನಾಲ್ಕೂ ಕಾರಣಗಳ ಆಧಾರದ ಮೇಲೆ ನಾವು ಯೋಚನೆ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ದಾರಿದ್ರ್ಯ, ನಿರುದ್ಯೋಗ, ಆರ್ಥಿಕ, ಸಾಮಾಜಿಕ ಅಸಮಾನತೆ, ಅಧಿಕಾರ ದಾಹ, ಅಥವಾ ಮೋಹ ಇವು ಹೋಗುವುದಿಲ್ಲ ಅಲ್ಲಿಯವರೆಗೂ ಪೋಲಿಸ್ ಇಲಾಖೆಯಲ್ಲಿ ಮಾತ್ರವಲ್ಲ ಯಾವುದೇ ಇಲಾಖೆಯಲ್ಲೂ ಕೂಡ ದಕ್ಷತೆ ಎಂಬುದು ಕಂಡುಬರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ನಮ್ಮ ಮನೆಯ ಕಳ್ಳತನವಾದಾಗ ಕಳ್ಳನನ್ನು ಹಿಡಿಯಲಿಲ್ಲ ಎಂದು ಪೋಲೀಸ್ ಇಲಾಖೆಯ ಮೇಲೆ ಆಪಾದನೆ ಮಾಡುತ್ತೇವೆ ಕಳ್ಳ ಸಿಕ್ಕಿದಾಗ ಅವನನ್ನು ಮನೆಗೆ ಕರೆದುಕೊಂಡು ಬಂದು ಹಾರ ಹಾಕಿ ನಮ್ಮ ಸಾಮಾನನ್ನು ಕೊಡುತ್ತೀಯಾ ಎಂದರೆ ಅವನು ಕೊಡುತ್ತಾನೆಯೆ ? ಅಂಥ ಸಂದರ್ಭದಲ್ಲಿ ಫೋರ್ಸ್ ಉಪಯೋಗಿಸಬೇಕಾಗುತ್ತದೆ. ಒಂದು ವೇಳೆ ಫೋರ್ಸ್ ಉಪಯೋಗಿಸಿದರೆ ಅದಕ್ಕೂ ಒಂದು ಆಪಾದನೆ ಮಾಡುತ್ತೇವೆ. ಇದು ಸರಿಯಲ್ಲ. ಸರ್ಕಾರದ ಅಥವಾ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಹಾಳುಮಾಡುವಂಥವರ ಸಂಖ್ಯೆಯೇ ಜಾಸ್ತಿ ಇದ್ದು ಪೋಲೀಸರ ಸಂಖ್ಯೆ ಕಡಿಮೆ ಇದ್ದಾಗ ಇವರು ಯಾವ ರೀತಿ ಅಷ್ಟೊಂದು ಜನರನ್ನು ಹಿಡಿತದಲ್ಲಿಟ್ಟುಕೊಂಡು ದಕ್ಷತೆಯಿಂದ ಕೆಲಸವನ್ನು ನಿರ್ವಹಿಸಬೇಕು ? ಈ ಪೋಲೀಸರಿಗೆ ಇತ್ತೀಚಿನ ದಿನಗಳಲ್ಲಿ ಅನುಕೂಲವಾಗುವಂಥ ನೀತಿ ನಿರೂಪಣೆಗಳನ್ನು ನಾವು ಏನಾದರೂ ರೂಪಿಸಿದ್ದೇವೆಯೋ ಎಂಬುದನ್ನೂ ಯೋಚನೆ ಮಾಡಬೇಕು, ಪೋಲೀಸ್ ಕಮಿಷನ್ ರಿಪೋರ್ಟ್‌ಗಳು ಬಹಳಷ್ಟು ಬಂದಿವೆ, ವಿಜಲೆನ್ಸ್ ಕಮಿಷನ್ ರಿಪೋರ್ಟ್‌ಗಳು ಬಂದಿವೆ. ಇಷ್ಟು ಬಂದರೂ ಕೂಡ ಇದರಲ್ಲಿ ಉತ್ತಮವಾದ ಪದ್ಧತಿಗಳನ್ನು ನಾವು ಇದುವರೆಗೂ ಜಾರಿಗೆ ತಂದಿಲ್ಲ. ಹಿಂದೆ ಇವರಿಗೆ ಯಾವ ರೀತಿಯ ಶಿಕ್ಷಣ ಸೌಲಭ್ಯ, ತರಬೇತಿ, ಅಥವಾ ಮಾರ್ಗದರ್ಶನ ನೀಡಲಾಗುತ್ತಿತ್ತೋ ಇವತ್ತೂ ಅದೇ ರೀತಿ ನೀಡಲಾಗುತ್ತಿದೆ. ಕಳೆದ ಸಾರಿ ೫೨.೯೨ ಕೋಟಿ ರೂ ಒದಗಿಸಿದ್ದರೆ ಈ ವರ್ಷ ೬೬.೪೫ ಕೋಟಿ ರೂಪಾಯಿ ಒದಗಿಸಲಾಗಿದೆ. ಈ ಹಣದಿಂದ ಏನು ಸಾಧನೆ ಮಾಡಬಹುದು ಎಂದರೆ ಇನ್ನಷ್ಟು ಜನ ಸಬ್ ಇನ್‌ಸ್ಪೆಕ್ಟರ್ ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಎಸ್.ಪಿ., ಇವರ ಹುದ್ದೆಗಳನ್ನು ಜಾಸ್ತಿ ಮಾಡಬಹುದು. ಇದರಿಂದಾಗಿ ವ್ಯಕ್ತಿಗಳಲ್ಲಿರತಕ್ಕ ಬುದ್ಧಿಶಕ್ತಿಯನ್ನು ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬೇರೆ ದೇಶಗಳಲ್ಲಿ ಪೋಲೀಸರಿಗೆ ಯಾವ ರೀತಿ ಶಿಕ್ಷಣ ಕೊಡುತ್ತಿದ್ದಾರೆ, ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ. ಎಷ್ಟು ಜನ ಇದ್ದಾರೆ ಇನ್ನೂ ಮುಂತಾದುವನ್ನು ಹೋಲಿಕೆ ಮಾಡಿ ನೋಡಿದರೆ ನಾವು ಕೊಡುತ್ತಿರುವ ಮಾರ್ಗದರ್ಶನದ ವ್ಯವಸ್ಥೆ ಏನೇನೂ ಸಾಲದು. ತುಂಬಾ ವ್ಯತ್ಯಾಸ ಇದೆ. ಹೊಸದಾಗಿ ಅವರಿಗೆ ಕಾರ್ಯವ್ಯಾಪ್ತಿಯನ್ನು ಒದಗಿಸಿಕೊಡುವುದಕ್ಕೆ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ

ಕೇಳಿಕೊಳ್ಳುತ್ತೇನೆ. ಮತ್ತು ಇದರ ಬಗ್ಗೆ ತಜ್ಞರ ಒಂದು ಸಮಿತಿಯನ್ನು ರಚಿಸಿ ಪೋಲೀಸರು ಇಂಥ ದ್ವಂದ್ವ ಸನ್ನಿವೇಶದಲ್ಲಿ ಯಾವ ರೀತಿ ಕೆಲಸಮಾಡಬೇಕು ಎನ್ನುವ ಬಗ್ಗೆ ತರಬೇತಿಯನ್ನು ಕೊಡುವ ಸಲುವಾಗಿ ಒಂದು ವರದಿಯನ್ನು ತರಿಸಿಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ಹೇಳ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ; ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಪೋಲೀಸ್ ಇಲಾಖೆಯನ್ನು ನಾವು ವೃಥಾ ದೂರುವುದು ಸರಿಯಲ್ಲ. ಅವರ ಕಾರ್ಯದಕ್ಷತೆಯ ಸಲುವಾಗಿ ನಾವು ಏನು ಸುಧಾರಣೆಗಳನ್ನು ಮಾಡಿದ್ದೇವೆ ಎಂಬುದನ್ನು ನೋಡಬೇಕು ಹಿಂದೆ ತಜ್ಞರು ಮಾಡಿರುವ ಶಿಫಾರಸುಗಳನ್ನು ನಾವು ಕಾರ್ಯಗತ ಮಾಡುವುದರಲ್ಲಿ ಸಫಲರಾಗಿದ್ದೇವೆಯೆ ಎಂಬುದನ್ನು ನೋಡಬೇಕು ಇದುವರೆಗೂ ಆಡಳಿತವನ್ನು ನಡೆಸಿರುವವರು ಏನು ಮಾಡಿದ್ದಾರೆಂಬುದನ್ನೂ ನಾವು ನೋಡಿದ್ದೇವೆ. ಆದರೆ ಇನ್ನು ಮುಂದಾದರೂ ನಾವು ಸ್ವಲ್ಪ ಸುಧಾರಣಾ ಕಾರ್ಯವನ್ನು ಮಾಡಬೇಕು. ನಮ್ಮಲ್ಲಿರತಕ್ಕ ದಾರಿದ್ರ್ಯ, ನಿರುದ್ಯೋಗ, ಅಸಮಾನತೆ, ಅಧಿಕಾರ ದಾಹ ಹೋಗದ ಹೊರತು ಪೋಲೀಸರಿಂದ ಹೆಚ್ಚಿನ ದಕ್ಷತೆಯನ್ನು ನಿರೀಕ್ಷಣೆ ಮಾಡುವುದು ಸರಿಯಲ್ಲ. ಇದು ದುಸ್ಸಾಧ್ಯ ಏನೂ ಅಲ್ಲ. ಪ್ರಕೃತಿ ದತ್ತವಾದ ಸಂಪನ್ಮೂಲಗಳು ಬಹಳಷ್ಟು ಇದ್ದರೂ ಕೂಡ ನಾವು ಅವುಗಳನ್ನು ಉಪಯೋಗಿಸಿ ಕೊಳ್ಳುವುದರಲ್ಲಿ ವಿಫಲರಾಗಿದ್ದೇವೆ. ಕೈಗಾರಿಕೆಗಳಲ್ಲಿ ನಾವು ತೊಡಗಿಸುವುದು ೩೮೬೨.೬೫ ಲಕ್ಷ ರೂ. ಆದರೆ ಖರ್ಚು ಮಾಡಿರುವುದು ೨೨೭೮.೦೦ ಲಕ್ಷ ರೂ. ಅಂದರೆ ಇನ್ನೂ ೧೫೦೦ ಚಿಲ್ಲರೆ ಲಕ್ಷ ಖರ್ಚುಮಾಡ ಬೇಕಾಗಿದೆ. ನಮ್ಮಲ್ಲಿರತಕ್ಕ ಸೌಲಭ್ಯಗಳನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪ್ರಯತ್ನವನ್ನು ಮಾಡಿರಲಿಲ್ಲ. ಆದರೆ ಈ ಹೊಸ ಸರ್ಕಾರ ಬಂದ ಮೇಲೆ ಉತ್ತಮ ಯೋಜನೆಗಳನ್ನು ಹಾಕಿಕೊಂಡು ಸುಧಾರಣೆ ಮಾಡುವ ಪ್ರಯತ್ನ ಮಾಡುತ್ತಿದೆ. ಜಿಲ್ಲಾ ಕೇಂದ್ರಗಳ ಸಂಖ್ಯೆ ೧೯ ಇದ್ದು ಇದರಲ್ಲಿ ೯೦೦೭ ಘಟಕಗಳು ಇನಿತ್ತು ಅದನ್ನು ೯೦೨೪ಕ್ಕೆ ಏರಿಸಿದ್ದಾರೆ. ಆದರೆ ಉದ್ಯೋಗಾವಕಾಶ ೪೩೯೩೩ ಇದ್ದುದನ್ನು ಈ ಸಾರಿ ೨೯೫೬೭ಕ್ಕೆ ಇಳಿಸಿದ್ದಾರೆ. ಏತಕ್ಕೆ ಈ ರೀತಿ ಮಾಡಿದ್ದಾರೆಂದು ಕೇಳಬಯಸುತ್ತೇನೆ. ಘಟಕಗಳ ಸಂಖ್ಯೆ ಜಾಸ್ತಿಯಾದ ಮೇಲೆ ಉದ್ಯೋಗಾವಕಾಶಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣವಾದರೂ ಏನು ? Man power utility has been reduced.

ಈ ಉದ್ಯಮಗಳು ಉತ್ತಮವಾಗಿ ನಡೆಯತಕ್ಕಂಥ ಉದ್ಯಮಗಳಾಗಲಾರದು. ಈ ದೃಷ್ಟಿಯಿಂದ ಬದಲಾವಣೆಯನ್ನು ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಆದರೆ ಉದ್ಯಮ ಮಂತ್ರಿಗಳಾದ ಮಾನ್ಯ ಬೊಮ್ಮಾಯಿಯವರು ರ್‍ಯಾಡಿಕಲ್ ಹ್ಯೂಮಾನಿಸ್ಟ್, ಅವರು ಬಂದ ಮೇಲೆ ಕೈಗಾರಿಕೆಯಲ್ಲಿ ಒಂದು ರ್‍ಯಾಡಿಕಲ್ ಚೇಂಜ್ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೆ ಆದರೆ ಅಂಥದ್ದು ಏನೂ ಆಗಲಿಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಹದಿಮೂರು ಕಂಪನಿಗಳಿಂದ ಗಳಿಸುತ್ತಿರತಕ್ಕಂಥ ಲಾಭ ೭-೮ ಕಂಪನಿಗಳಿಂದ ಹೊಂದುತ್ತಿರುವ ನಷ್ಟಕ್ಕೆ ಸರಿಹೋಗುತ್ತಿದೆ. ಮುಂಡ್ಯದಲ್ಲಿರತಕ್ಕಂಥ ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ ಕಂಪನಿಯಲ್ಲಿ ದಿನ ಒಂದಕ್ಕೆ ಒಂದು ಲಕ್ಷ ರೂಪಾಯಿ ನಷ್ಟವನ್ನು ಹೊಂದುತ್ತಿದೆ. ಇದನ್ನು ಏನು ಮಾಡಬೇಕೆಂಬುದರ ಬಗ್ಗೆ ಪರಿಶೀಲನೆ ಮಾಡಬೇಕಾಗಿರುತ್ತದೆ. ಐದೂವರೆ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿ ಮೈಸೂರು ಜಿಲ್ಲೆಯಲ್ಲಿ ಐದು ಸಿಲ್ಕ್ ಫಿಲೇಚರ್‌ಗಳನ್ನು ಸ್ಥಾಪನೆ ಮಾಡಿರುತ್ತಾರೆ. ಇದರಿಂದ ಆರೂವರೆ ಕೋಟಿ ರೂಪಾಯಿಗಳ ನಷ್ಟವನ್ನು ಹೊಂದುತ್ತಿರುತ್ತೇವೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಲೇ ಇಲ್ಲ ಇಡೀ ಜಗತ್ತಿನಲ್ಲಿ ಪ್ರಖ್ಯಾತವಾದ ಗಂಧದ ಎಣ್ಣೆಯನ್ನು ತಯಾರು ಮಾಡತಕ್ಕಂಥ ಕರ್ನಾಟಕದಲ್ಲಿ ಮಾತ್ರ ಅಂದರೆ ಶಿವಮೊಗ್ಗ ಮತ್ತು ಮೈಸೂರಿನಲ್ಲಿ. ಇದು ಅತ್ಯಧಿಕವಾಗಿ ಲಾಭದಾಯಕವಾಗಿ ಮಾರಾಟವಾಗುತ್ತಿದ್ದರೂ ನಷ್ಟವನ್ನು ಅನುಭವಿಸತಕ್ಕಂಥ ಸ್ಥಿತಿಯಲ್ಲೇ ಇದ್ದೇವೆ. ಇದರ ಬಗ್ಗೆ ಗಮನ ಹರಿಸಲಿಲ್ಲ. ಮುಖ್ಯವಾಗಿ ಹಲವಾರು ಉದ್ಯಮಗಳಲ್ಲಿ ಮಾಡತಕ್ಕಂಥ ಕೆಲಸದಿಂದ ಲಾಭವನ್ನು ಸಂಪಾದನೆ ಮಾಡುವುದಕ್ಕೆ ಸಾಧ್ಯತೆ ಇದ್ದರೂ ಕೂಡ ಲಾಭ ವನ್ನು ಸಂಪಾದನೆ ಮಾಡಲು ಏತಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವ ಬಗ್ಗೆ ಸರ್ಕಾರ ಗಮನ ಹರಿಸುತ್ತಿಲ್ಲ. ಮೈಸೂರಿನಲ್ಲಿ ಇರತಕ್ಕಂಥ ಲ್ಯಾಕ್ ಅಂಡ್ ಪೈಂಟ್ಸ್ ಲಿಮಿಟೆಡ್ ಇದರಲ್ಲಿ ೧೯೭೭-೭೮ಕ್ಕೆ ೧,೨೬,೪೨೫ ರೂಪಾಯಿಗಳನ್ನು ಲಾಭಗಳಿಸಿತ್ತು. ಮತ್ತೆ ಮುಂದಿನ ವರ್ಷದಲ್ಲಿ ೬೪,೨೫,೦೦೦ ರೂಪಾಯಿಗಳ ಲಾಭವನ್ನು ಗಳಿಸಿತ್ತು. ಮತ್ತೆ ೧೯೮೦-೮೧ನೇ ವರ್ಷದಲ್ಲಿ ತೆಗೆದು ನೋಡಿದರೆ ೬.೪೭ ಲಕ್ಷ ಲಾಸ್

ಆಗಿರುತ್ತದೆ. ಏತಕ್ಕೆ ಈ ರೀತಿಯಾಗಿ ಲಾಸ್ ಆಯಿತು ಎಂದು ವಿಚಾರ ಮಾಡಿದರೆ ಹಿಂದಿನ ಸಾಲು ಗಳಲ್ಲಿ ಖಾಸಗಿಯವರು ಈ ಕಂಪೆನಿಯನ್ನು ನಡೆಸುತ್ತಿದ್ದಾಗ ಲಾಭವನ್ನು ಸಂಪಾದನೆ ಮಾಡಿರಬೇಕಾದರೆ ನಮ್ಮ ಸರ್ಕಾರ ಐ.ಎ.ಎಸ್. ಅಧಿಕಾರಿಗಳನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ನೇಮಿಸಿದಾಗ ೬ ೪೭ ಲಕ್ಷ ನಷ್ಟವನ್ನು ಅನುಭವಿಸಬೇಕಾಯಿತು. ವರದಿಯಲ್ಲಿ ಏತಕ್ಕಾಗಿ ಈ ರೀತಿಯ ಲಾಸ್ ಆಯಿತು ಎಂಬುದನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ವಿದ್ಯುಚ್ಛಕ್ತಿಯ ಕೊರತೆ ಯೆಂಬುದಾಗಿ ಹೇಳಿರುತ್ತಾರೆ. ಆದರೆ ವಿದ್ಯುಚ್ಛಕ್ತಿಯ ಕೊರತೆಯಲ್ಲೂ ಹೇಗೆ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡಿಕೊಂಡಿದ್ದಾರೆ ಎಂಬುದರ ಬಗ್ಗೆ ಸರ್ಕಾರ ಗಮನಹರಿಸಬೇಕಾದ್ದು ಬಹಳ ಅವಶ್ಯಕತೆ ಇದೆ ಎಂದು ಭಾವಿಸುತ್ತೇನೆ. ವಿದ್ಯುಚ್ಛಕ್ತಿಯ ಕೊರತೆ ಇರತಕ್ಕಂಥದ್ದು ನಿಜ, ಆದರೆ ಕೈಗಾರಿಕಾ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿಯ ಸರಬರಾಜು ಮಾಡಿರತಕ್ಕಂಥದ್ದು ಸಾಕಷ್ಟು ಇದ್ದರೂ ಅದನ್ನು ಬಳಕೆ ಮಾಡಿರತಕ್ಕಂಥದ್ದು ಹೇಗೆ ಎಂದರೆ I quote from a Magazine. "From April to November 1983, such as all electric home comsumers – 34,000 – whose connected load comes to about 100 mw; 26,700 pumpsets, with a connected load of 75 mw; ೭೫ ಮೆಗಾವ್ಯಾಟ್ಸ್ ಅಗ್ರಿಕಲ್ಚರ್‌ಗೆ ಕೊಡಬೇಕಾಗಿದ್ದರೂ ಇಂಡಸ್ಟ್ರಿಯಲ್‌ಗೆ ತಾವು ಕೊಡುತ್ತಿರತಕ್ಕಂಥದ್ದು ೪೦ ಮೆಗಾವ್ಯಾಟ್ಸ್ ಹೀಗೆ ನಮ್ಮ ಯೋಜನೆಗಳು ಮುಂದುವರಿದರೆ ಹೇಗೆ ದೇಶದ ಸಂಪತ್ತು ಹೆಚ್ಚುತ್ತದೆ, ಮತ್ತು ನಿರುದ್ಯೋಗವನ್ನು ಹೇಗೆ ಬಗೆಹರಿಸಲು ಸಾಧ್ಯವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಜೊತೆಗೆ ಪ್ರಮುಖವಾದ ಒಂದು ಅಂಶವೇನೆಂದರೆ ದೈವ ಸೃಷ್ಟಿ ಮಾಡಿದ್ದು, ನಮ್ಮ ಭಾರತದಲ್ಲಿ ದೈವದತ್ತವಾದ, ಪ್ರಕೃತಿದತ್ತವಾದ ಖನಿಜ ಸಂಪತ್ತು ಇದೆ. ಇದರಲ್ಲಿ ಸಂಶೋಧನೆ ಮಾಡುವುದಕ್ಕೋಸ್ಕರವಾಗಿ ಈ ಯೋಜನೆಯಲ್ಲಿ ತೊಡಗಿಸಿರತಕ್ಕಂಥ ಹಣ ೨೨೭.೫೯ ಲಕ್ಷ. ಆದರೆ ಖರ್ಚು ಮಾಡಿರುವುದು ೩೨.೯೭ ಲಕ್ಷ ರೂಪಾಯಿಗಳು. ಸಂಶೋಧನೆ ಮಾಡಿ ದೇಶದ ಆರ್ಥಿಕ ಭದ್ರತೆಯನ್ನು ಮಾಡಲಿಕ್ಕೆ ಹಣವನ್ನು ಕೊಟ್ಟಿರುವುದೇ ಕಡಿಮೆ. ಅದರಲ್ಲಿ ಖರ್ಚು ಮಾಡಿರುವುದು ೩೭.೯೭ ಲಕ್ಷ, ನಾನ್ ಪ್ಲಾನ್ ಪ್ರಾವಿಷನ್ ಮಾಡಿರುವುದು ೧೪೭.೫೯ ಲಕ್ಷ ರೂಪಾಯಿಗಳಾದರೆ ಇದರಲ್ಲಿ ಖರ್ಚುಮಾಡಿರುವುದು ೧೦೧.೧೭ ಲಕ್ಷ. ಹೀಗೆ ನಮ್ಮಲ್ಲಿ ಸಂಪತ್ತು ಇಟ್ಟಿದ್ದರೂ ಕೂಡ ಈವೊತ್ತಿನ ದಿವಸ ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ. ಮೂರು ಲಕ್ಷ, ನಾಲ್ಕು ಲಕ್ಷ ಟನ್, ರಾಯಲ್ಟಿಗೆ ಹೋಗುತ್ತಿದೆ. ಒಂದು ಚದರಮೀಟರ್ ಗ್ರಾನೈಟ್ ಸ್ಟೋನ್‌ಗೆ ಈವತ್ತಿನ ದಿವಸ ಮೂರುವರೆ ಸಾವಿರ ರೂಪಾಯಿಗಳಿರುತ್ತದೆ. ಇಷ್ಟು ಬೆಲೆ ಬಾಳತಕ್ಕಂಥ ಗ್ರಾನೈಟ್ ಸ್ಟೋನ್‌ಗಳು ಮಂಗಳೂರು ಹಾರ್ಬರ್‌ಗೆ ಬಂದು ಬೀಳುತ್ತಿದೆ. ಇಂಥ ಒಂದು ಖನಿಜಸಂಪತ್ತು ಇದ್ದರೂ ಕೂಡ ಅದನ್ನು ಬಳಸಿಕೊಂಡು ನಿಜವಾಗಿಯೂ ಅದರ ಉಪಯುಕ್ತತೆಯನ್ನು ಪಡೆಯುವತ್ತ ಸರ್ಕಾರ ಗಮನ ಹರಿಸಿದಂತೆ ಕಾಣುತ್ತಿಲ್ಲ.

ಇನ್ನು ಗ್ರಾಮ ಉದ್ಯೋಗವನ್ನು ತೆಗೆದುಕೊಂಡು ಖಾದಿ ಮತ್ತು ವಿಲೇಜ್ ಇಂಡಸ್ಟ್ರೀಸ್ ಇಲ್ಲಿ ಉದ್ಯೋಗಾವಕಾಶವನ್ನು ಕಲ್ಪನೆ ಮಾಡಿರತಕ್ಕಂಥದ್ದರಲ್ಲಿ ಅವತ್ತು ಅಲ್ಲಿ ಸಿಕ್ಕತಕ್ಕಂಥದ್ದು ಸಂಬಳ ಬಹಳ ಹೆಚ್ಚು ಎಂದರೆ ೩೦೦ ರೂಪಾಯಿಗಳು ಮಾತ್ರ. ಹೀಗಿದ್ದರೆ ಅಲ್ಲಿಯ ನೌಕರರು ಹೇಗೆ ಕೆಲಸ ಮಾಡುತ್ತಾರೆ ಅದರ ಬಗ್ಗೆ ಸರ್ಕಾರ ತೀವ್ರ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಮಾತನ್ನು ಹೇಳಬೇಕಾಗಿದೆ. ವರದಿಯಲ್ಲಿ ಇರತಕ್ಕಂಥದ್ದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯೆಂದು. ದುರ್ದೈವದ ಸಂಗತಿ ಎಂದರೆ ವಾಣಿಜ್ಯ ಮತ್ತು ಕೈಗಾರಿಕೆ ಎಂದು ಇದ್ದರೂ ಕೂಡ ಬರೀ ಕೈಗಾರಿಕಾ ವಿಷಯ ಇದೆಯೇ ಹೊರತು ವಾಣಿಜ್ಯದ ಬಗ್ಗೆ ಏನೇನೂ ಹೇಳಿಲ್ಲ. ನಮ್ಮ ದೇಶದಿಂದ ಸೌದಿ ಅರೇಬಿಯಾಕ್ಕೆ ಹೋಗಿ ಅಲ್ಲಿ ಎಕ್ಸಿಬಿಷನ್ ಮಾಡಿದ್ದಾರೆ. ಇದರಿಂದ ವಾಣಿಜ್ಯ ಉತ್ಪಾದನೆ ಆಗತಕ್ಕಂಥದ್ದು ಎಷ್ಟು, ವಿದೇಶಿ ವಿನಿಮಯದಿಂದ ಹಣ ಎಷ್ಟು ಬಂದಿತ್ತು? ಎಷ್ಟು ವಸ್ತುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲಾಯಿತು ? ಅದಕ್ಕೆ ನಾವು ಮಾಡಿದಂಥ ಹಣ ವಿನಿಯೋಗ ಎಷ್ಟು ? ಎಷ್ಟು ವಸ್ತುಗಳನ್ನು ಉತ್ಪಾದನೆ ಮಾಡಲಾಯಿತು ? ಟೆಕ್ಸ್‌ಟೈಲ್‌ನಲ್ಲಿ ಎಷ್ಟು ? ಕಬ್ಬಿಣದಲ್ಲಿ, ಸಿಮೆಂಟ್‌ನಲ್ಲಿ ಖರೀದಿ ಮಾಡಿರತಕ್ಕಂಥದ್ದೆಲ್ಲ ಡೆಡ್ ಕ್ಯಾಪಿಟಲ್ ಆಗಿದೆ. ಇದರ ಬಗ್ಗೆ ವರದಿಯಲ್ಲಿ ವಿವರಣೆ ಇಲ್ಲ. ವಾಣಿಜ್ಯದ ಬಗ್ಗೆ ಒಂದು ಚಕಾರ ಎತ್ತದೆ ಇರತಕ್ಕಂಥದ್ದು ತುಂಬಾ ಶೋಚನೀಯವಾಗಿದೆ. ಅವತ್ತು ತಮ್ಮ ಇಲಾಖೆಯಲ್ಲಿ ಪ್ರಾರಂಭ ಮಾಡದೆ ಇರತಕ್ಕಂಥ ಕೈಗಾರಿಕೆಗಳು ಮತ್ತು ಲಾಭದಾಯಕವಾಗಿ ಇರತಕ್ಕಂಥ ಉದ್ಯಮಗಳಲ್ಲಿ ತಯಾರಾದಂಥ ವಸ್ತುಗಳಿಗೆ

ಸರಿಯಾದ ರೀತಿಯಲ್ಲಿ ದೇಶ ವಿದೇಶಗಳಿಗೆ ಕಳುಹಿಸಿಕೊಡತಕ್ಕಂಥ ಪ್ರಯತ್ನ ಮಾಡಿದ್ದೀರಾ ಎನ್ನುವ ವಿಚಾರದ ಬಗ್ಗೆಯೂ ಕೂಡ ಏನೂ ಹೇಳಿಲ್ಲ. ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಸಂಸ್ಥೆಯ ಮುಖಾಂತರ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ವಸ್ತುಗಳನ್ನು, ವಿದೇಶಗಳಲ್ಲಿ ಮಾರಾಟ ಮಾಡತಕ್ಕಂಥ ವ್ಯವಸ್ಥೆ ಎಷ್ಟರಮಟ್ಟಿಗೆ ಸಾಧ್ಯತೆಯಾಗಿದೆ, ಮತ್ತು ಎಷ್ಟರಮಟ್ಟಿಗೆ ಲಾಭಗಳಿಸುತ್ತಿದೆ ಎನ್ನುವ ಬಗ್ಗೆ ವಿಚಾರ ಮಾಡಿದಾಗ ವರದಿಯಲ್ಲಿ ಏನೇನೂ ಕಾಣುತ್ತಿಲ್ಲ. ಆದ್ದರಿಂದ ಇನ್ನು ಮುಂದೆ ಬರತಕ್ಕಂಥ ವರದಿಯಲ್ಲಾದರೂ ಕೂಡ ಪ್ರಾಮುಖ್ಯತೆಯನ್ನು ಕೊಟ್ಟು ನಮ್ಮಲ್ಲಿ ಉತ್ಪಾದನೆಯಾಗ ತಕ್ಕಂಥ ವಸ್ತುಗಳು ಪರದೇಶಗಳಲ್ಲಿ ಮಾರಾಟವಾಗುವಂತಾದರೆ ನಮ್ಮ ದೇಶದಲ್ಲಿ ದುಡಿಮೆಗಾರರಿಗೆ ಹೆಚ್ಚಿನ ಉದ್ಯೋಗ ದೊರಕಿ, ಹೆಚ್ಚಿನ ಕೂಲಿಯೂ ಕೂಡ ಸಿಗುವುದಕ್ಕೆ ಸಾಧ್ಯವಾಗುವುದಲ್ಲದೆ, ನಮ್ಮ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಈ ರೀತಿ ಮಾಡ ತಕ್ಕಂಥ ಒಂದು ಕಾರ್ಯಕ್ರಮ ನಿಮ್ಮ ಕೈಗಾರಿಕಾ ವರದಿಯಲ್ಲಿ ಕಾಣುತ್ತಿಲ್ಲ. ಆದ್ದರಿಂದ ಮಾನ್ಯ ಕೈಗಾರಿಕಾ ಸಚಿವರು ವಾಣಿಜ್ಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇನ್ನು ಮನುಷ್ಯ ಸಂಪತ್ತನ್ನು ಅಧಿಕಗೊಳಿಸಬೇಕಾಗಿದೆ. ಅಧಿಕ ಗೊಳಿಸಬೇಕೆಂದರೆ ಅವರುಗಳು ಸಾಕಷ್ಟು ಆರೋಗ್ಯವಾಗಿರಬೇಕು. ಆರೋಗ್ಯವಾಗಿ ಇದ್ದರೆ ಉತ್ಪಾದನೆ ಯನ್ನು ಹೆಚ್ಚು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಆರೋಗ್ಯವಂತನಾಗಿರಲು ಏನು ಮಾಡುತ್ತಾ ಇದ್ದೀರಿ. ಹಿಲನೇ ಪೇಜ್‌ನಲ್ಲಿ ಸ್ಯಾಲರಿ ಎಂದು ನೀವು ಕೊಡತಕ್ಕಂಥದ್ದು ೧೧೯೯.೫೬ ಲಕ್ಷ ರೂಪಾಯಿ ಗಳು. ಆದರೆ ಇದರಲ್ಲಿ ಡ್ರಗ್ಸ್ ಅಂಡ್ ಕೆಮಿಕಲ್ಸ್ ಕೊಳ್ಳಲು ಖರ್ಚ ಮಾಡುತ್ತಿರುವುದು ೫೫೨.೫೨ ಲಕ್ಷ ರೂಪಾಯಿಗಳು. ಅಂದರೆ ''ಕೊಡುವುದು ಕಾಸು, ದುಡಿಯುವುದು ತವಸು'' ಹೀಗಾಗಿದೆ ಪರಿಸ್ಥಿತಿ. ಜನರಿಗೆ ಹೀಗೆ ವ್ಯವಸ್ಥೆ ಮಾಡಿದರೆ ಆರೋಗ್ಯವಂತರಾಗಿ ಇರಲು ಸಾಧ್ಯವೇ ಇಲ್ಲ. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಹೇಳುವುದಾದರೆ ಹೊರದೇಶಗಳಿಂದ ಔಷಧಿಗಳನ್ನು ಕೊಳ್ಳುವುದಕ್ಕೆ ೪ ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಅದರೆ ವಿದೇಶಿ ವಿನಿಮಯ ಗಳಿಸಲು ಇವತ್ತು ನಮ್ಮ ದೇಶದಲ್ಲಿಯೇ ಉತ್ಪಾದನೆ ಮಾಡತಕ್ಕಂತ ಔಷಧಿಗಳಿಗೆ ಹೆಚ್ಚಿನ ಪ್ರೋತ್ಸಹವನ್ನು ಕೊಡುತ್ತಿಲ್ಲ. ನಮ್ಮ ದೇಶದಲ್ಲಿ ಔಷಧಿಗಳನ್ನು ತಯಾರು ಮಾಡುವುದಕ್ಕೋಸ್ಕರವಾಗಿ ಫಾರ್ಮಸ್ಯುಟಿಕಲ್ ಕಾರ್ಪೊರೇಷನ್ ಮಾಡಬೇಕೆಂದು ಯೋಜನೆ ಇದೆ ಎಂದು ಹೇಳುತ್ತಿದ್ದೀರಿ. ಅದು ಮಾಡಿದಿರೋ ಇಲ್ಲವೋ ಗೊತ್ತಿಲ್ಲ. ಏತಕ್ಕೆ ಮಾಡಲಿಲ್ಲ ? ಆಯುರ್‌ವೇದಿಕ್‌ಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಔಷಧಿಗಳು ಸಿಗತಕ್ಕಂಥದ್ದಕ್ಕೆ ಒಂದು ಅನುಕೂಲವಾಗುತ್ತದೆ. ಇದನ್ನು ಪ್ರಾರಂಭ ಮಾಡಿ ಎಂದರೆ ೧೦-೧೫ ವರ್ಷಗಳಿಂದ ಈ ಇಲಾಖೆ ಯನ್ನು ಖಾಯಂ ಮಾಡಲಿಲ್ಲ. ಖಾಯಂ ಡೈರೆಕ್ಟರ್ ಇಲ್ಲ. ೧೦-೧೫ ವರ್ಷಗಳಿಂದ ದುಡಿಯು ತಕ್ಕಂಥ ಪ್ರಾಧ್ಯಾಪಕರನ್ನು ನೌಕರರನ್ನು ಖಾಯಂ ಮಾಡಲಿಲ್ಲ, ಇದಕ್ಕೆಲ್ಲಾ ತಾವು ಪ್ರಾಶಸ್ತ್ಯವನ್ನು ಕೊಡದೆ ಇದ್ದರೆ ಅವರಿಂದ ಹೆಚ್ಚಿನ ದುಡಿಮೆಯನ್ನು ತೆಗೆದುಕೊಂಡು ವಿದೇಶಿವಿನಿಮಯ ಮಾಡ ತಕ್ಕಂಥದ್ದು ಅನುಮಾನಾಸ್ಪದವಾಗಿದೆ. ಆದ್ದರಿಂದ ಈಗಲಾದರೂ ಮಾನ್ಯ ಸಚಿವರು ಇದನ್ನು ಗಮನಿಸಿ ಔಷಧಿಗಳ ತಯಾರಿಕೆಯಲ್ಲಿ ಅವರ ಸ್ವತಃಶಕ್ತಿಯನ್ನು ಉಪಯೋಗ ಮಾಡಿಕೊಳ್ಳುವಲ್ಲಿ ಹೆಚ್ಚಿನ ಗಮನ ವನ್ನು ಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

೫-೦೦ ಪಿ. ಎಂ.

ಕೊನೆಯದಾಗಿ ಒಂದು ಮಾತನ್ನು ಮಾರ್ಕೆಟ್ ಸೆಸ್ ಬಗ್ಗೆ ಹೇಳಬೇಕಾಗಿದೆ. ಈ ಮಾರ್ಕೆಟ್ ಸೆಸ್ ಬಗ್ಗೆ ನವೆಂಬರ್-೧೯೮೩ರಲ್ಲಿ ಒಂದು ತಿದ್ದುಪಡಿಯನ್ನು ಮಾಡಲಾಯಿತು. ಮಾರಾಟ ಮಾಡು ವವರು ಮತ್ತು ಕೊಳ್ಳುವವರು ಈ ತೆರಿಗೆ ಕೊಡಬೇಕಾಗುತ್ತದೆ. ಆಹಾರವನ್ನು ಉತ್ಪನ್ನ ಮಾಡು ವಂತಹ ರೈತರಿಂದ ತೆರಿಗೆ ವಸೂಲಿ ಮಾಡಬಾರದೆಂಬ ಬಗ್ಗೆ ಒಂದು ಪದ್ಧತಿ ಇದ್ದರೂ ಸಹ ಇವೊತ್ತು ಮೈಸೂರಿನ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಕೆಲವು ಮಧ್ಯವರ್ತಿ ಜನರು ಮಾರುವವರಿಂದ ಮತ್ತು ಕೊಳ್ಳುವವರಿಂದ ಎರಡು ಪರ್ಸೆಂಟ್‌ವರೆಗೆ ಕಮಿಷನ್ ಎಂದು ವಸೂಲಿ ಮಾಡುತ್ತಿದ್ದಾರೆ. ಈ ದಳ್ಳಾಳಿ ಜನರು ಮಾಲನ್ನು ಮಾರುವುದೂ ಇಲ್ಲ ಮತ್ತು ಕೊಳ್ಳುವುದೂ ಇಲ್ಲ, ಇವರ ಕೆಲಸವೇನೆಂದರೆ, ಮಾರಾಟ ಮಾಡುವವರನ್ನು ಮತ್ತು ಕೊಳ್ಳುವವರನ್ನು ಒಂದು ಕಡೆ ತಂದು ಸೇರಿಸುವುದು. ಈ ಕೆಲಸ ಕ್ಕಾಗಿ ಕಮಿಷನ್ ವಸೂಲಿ ಮಾಡುತ್ತಾರೆ. ಈ ಕಮಿಷನ್ ಏಜೆಂಟ್‌ಗಳು ಏತಕ್ಕೆ ಬೇಕು ? ಈ ಮಾರ್ಕೆಟ್ ಸೆಸ್‌ನ್ನು ವಸೂಲಿ ಮಾಡಲು ಇರುವಂತಹ ಅಧಿಕಾರಿಗಳಿಗೆ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ

ಮಾಲನ್ನು ತಂದು ಮಾರುವವರು ಯಾರು ಮಂತ್ರಿ ಕೊಳ್ಳುವವರು ಯಾರು ಎಂಬುದು ಗೊತ್ತಿರುತ್ತದೆ ಈ ಬಗ್ಗೆ ಲೆಕ್ಕವನ್ನು ಸಹ ಇಟ್ಟಿರುತ್ತಾರೆ. ಆದ್ದರಿಂದ ಇವರ ಒಂದು ಆಧಾರದ ಮೇಲೆ ತೆರಿಗೆ ವಸೂಲಿ ಮಾಡಬಹುದಾದರೂ ಸಹ ದಳ್ಳಾಳಿಗಳಿಗೂ ಸಹ ಎರಡು ಪರ್ಸೆಂಟ್ ಕಮಿಷನ್ ಕೊಡಬೇಕೆಂಬುದು ಯಾವ ನ್ಯಾಯ ? ಈ ಬಗ್ಗೆ ಸರ್ಕಾರಕ್ಕೂ ಕೂಡ ಮನವಿಗಳು ಬಂದಿವೆ. ಆದ್ದರಿಂದ ಸರ್ಕಾರದವರು ಇದರ ಕಡೆಗೆ ತೀವ್ರ ಗಮನ ಕೊಡಬೇಕು ಮತ್ತು ಈ ತೆರಿಗೆ ವಿಚಾರದಲ್ಲಿ ಸಾಕಷ್ಟು ಸಂಧಾರಣೆಯಾಗ ಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ರಾಜು (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಮಂತ್ರಿಗಳು ಮಂಡಿಸಿರುವ ೨೭ ಮತ್ತು ೨೮ನೇ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನನ್ನ ಸ್ನೇಹಿತರಾದಂಥ ಸನ್ಮಾನ್ಯ ಸದಸ್ಯರುಗಳು ಆರೋಗ್ಯ ಇಲಾಖೆ ವಿಷಯದಲ್ಲಿ ಸಾಕಷ್ಟು ಮಾತನಾಡಿದ್ದಾರೆ. ಹೋದವರ್ಷ ಈ ಇಲಾಖೆಯ ಬೇಡಿಕೆ ೬೯.೮೧ ಕೋಟಿ ಇದ್ದರೆ ೧೯೮೪-೮೫ರಲ್ಲಿ ೮೨.೫೫ ಕೋಟಿಗೆ ಹೆಚ್ಚಿದೆ. ಅಂದರೆ ಈ ಸಲ ಇದು ೧೨.೭೩ ಕೋಟಿಯಷ್ಟು ಹೆಚ್ಚಿದೆ. ಆದರೆ ಈ ಹೆಚ್ಚುವರಿ ಹಣ ಔಷಧಗಳನ್ನು ಕೊಳ್ಳಲು ಅನುಕೂಲವಾಗುವುದಿಲ್ಲ ಏಕೆಂದರೆ, ಹೋದವರ್ಷ ಆರೋಗ್ಯ ಇಲಾಖೆಯವರು ೬೦೦ ಜನ ಡಾಕ್ಟರ್‌ಗಳನ್ನು ಅಬ್‌ಸಾರ್ಬ್ ಮಾಡಿದ್ದಾರೆ. ಆದ್ದರಿಂದ ಇವರ ಒಂದು ಸಂಬಳಸಾರಿಗೆಗೆ ಏಳು-ಏಳೂವರೆ ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಇದಕ್ಕೆ ಖರ್ಚಾಗಿ ಉಳಿದ ಹಣವನ್ನು ಔಷಧ ಕೊಳ್ಳಲು ಇಲ್ಲವೇ ಕಟ್ಟಡ ವಗೈರೆಗೆ ಖರ್ಚು ಮಾಡಬಹುದಾಗಿದೆ. ಕಳೆದವರ್ಷ ೬ ಕೋಟಿ ೭೪ ಲಕ್ಷದ ೫೮ ಸಾವಿರ ರೂಪಾಯಿಗಳನ್ನು ಔಷಧೋಪಚಾರಕ್ಕಾಗಿ ಇಟ್ಟಿದ್ದರೆ ಈ ಸಲ ೮ ಕೋಟಿ ೫೨ ಲಕ್ಷದ ೪೪ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಇದನ್ನು ನಮ್ಮ ಜನಸಂಖ್ಯೆಯ ಆಧಾರದ ಮೇಲೆ ಸರಾಸರಿ ಲೆಕ್ಕ ಹಾಕಿದರೆ ಒಬ್ಬ ಪ್ರಜೆಗೆ ಒಂದು ವರ್ಷಕ್ಕೆ ಎರಡು ರೂಪಾಯಿ ಐವತ್ತು ಪೈಸೆಯಾಗುತ್ತದೆ. ಈ ಸಲ ಫ್ಯಾಮಿಲಿ ವೆಲ್ ಫೇರ್‌ಗಾಗಿ ೩೭ ಕೋಟಿ ೩೦ ಲಕ್ಷದ ೬೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ.

ಇನ್ನು ಈ ಆರೋಗ್ಯ ಇಲಾಖೆಯಲ್ಲಿರುವ ಕೆಲವು ಸಮಸ್ಯೆಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರತ್ತೇನೆ ಮತ್ತು ಈ ಬಗ್ಗೆ ಅವರಿಂದ ಉತ್ತರವನ್ನು ಬಯಸುತ್ತೇನೆ. ಮೊದಲನೆಯದಾಗಿ ಈ ಹಿಂದೆ ತಾಲ್ಲೂಕ್ ಬೋರ್ಡ್ ಡಿಸ್‌ಪೆನ್ಸರಿಗಳಿದ್ದವು. ಆ ಸಮಯದಲ್ಲಿ ಅಲ್ಲಿ ಕೆಲಸ ಮಾಡುತ್ತಿದ್ದ ಡಾಕ್ಟರ್ ಗಳು ಮತ್ತು ಇತರೇ ಸಿಬ್ಬಂದಿ ವರ್ಗದವರು ಸುಖವಾಗಿ ಜೀವನ ಮಾಡುತ್ತಿದ್ದರು. ಆದರೆ ಇಂತಹ ೫೧೪ ಆಸ್ಪತ್ರೆಗಳನ್ನು ಸರ್ಕಾರದವರು ೧೯೭೬ ರಿಂದ ಹಿಡಿದು ೧೯೮೧ರವರೆಗೆ ತಮ್ಮ ವಶಕ್ಕೆ ತೆಗೆದು ಕೊಂಡರು. ಈ ರೀತಿ ವಹಿಸಿಕೊಂಡಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದವರ ಸಮಸ್ಯೆಗಳನ್ನು ನಿವಾರಣೆ ಮಾಡಲಿಲ್ಲ ಮತ್ತು ಅವರ ಸರ್ವಿಸ್‌ನ್ನು ರೆಗ್ಯುಲರೈಜ್ ಮಾಡಲಿಲ್ಲ. ಇವರಿಗೆ ಬರಬೇಕಾದ ಇಂಕ್ರಿ ಮೆಂಟ್‌ಗಳನ್ನು ಸಹ ಇದುವರೆಗೆ ಕೊಟ್ಟಿಲ್ಲ ಅಷ್ಟೇ ಅಲ್ಲ, ಬೇರೆ ಡಾಕ್ಟರ್‌ಗಳಿಗೆ ಏನು ರಿವೈಸ್ಡ್ ಪೇ-ಸ್ಕೇಲು ಬರುತ್ತಿದೆ, ಅದೂ ಸಹ ಇವರಿಗೆ ಬರುತ್ತಿಲ್ಲ. ಈಗಾಗಲೇ ಕೆಲವು ಡಾಕ್ಟರ್ಸ್ ಸತ್ತು ಹೋಗಿದ್ದಾರೆ. ಇಂತಹ ಕೇಸ್‌ಗಳಲ್ಲಿ ಕೂಡ ಫ್ಯಾಮಿಲಿ ಪೆನ್‌ಷನ್ ಇನ್ನೂ ಸಿಕ್ಕಿಲ್ಲ. ಆದ್ದರಿಂದ ಮಾನ್ಯ ಆರೋಗ್ಯ ಸಚಿವರು ಇದರ ಬಗ್ಗೆ ಏನು ಕಾರ್ಯಕ್ರಮ ರೂಪಿಸಿಕೊಂಡಿದ್ದಾರೆಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು.

ಇನ್ನು ಬೆಂಗಳೂರಿನ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿರುವಂತಹ ಕೆಲವು ಅನುಕೂಲಗಳು ಜಿಲ್ಲಾ ಕೇಂದ್ರದ ಆಸ್ಪತ್ರೆಗಳಲ್ಲಿ ಮತ್ತು ತಾಲ್ಲೂಕ್ ಕೇಂದ್ರದ ಆಸ್ಪತ್ರೆಗಳಲ್ಲಿ ಇಲ್ಲ. ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಸರ್ಜರಿ ಮಾಡುವಾಗ ಕರೆಂಟ್ ಏನಾದರು ಹೋದರೆ ಬೇರೆ ವ್ಯವಸ್ಥೆ ಇರುವುದಿಲ್ಲ. ಅದಕ್ಕಾಗಿ ಕೊನೆಯಪಕ್ಷ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿಯೂ ಒಂದೊಂದು ಜನರೇಟರ್‌ಗಳನ್ನು ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಧರ್ಮಶಾಲೆಗಳನ್ನು ಕಟ್ಟಿಸುವ ವಿಚಾರದಲ್ಲಿ ಕನ್ಸಲ್ಟೆಟಿವ್ ಕಮಿಟಿಯಲ್ಲಿ ಭಿನ್ನಾಭಿಪ್ರಾಯಗಳು ಬಂದರೂ ಸಹ ನಾನು ಮಾತ್ರ ಇದನ್ನು ಸ್ವಾಗತ ಮಾಡುತ್ತೇನೆ, ಏಕೆಂದರೆ, ಬಹಳ ದೂರದಿಂದ ರೋಗಿಗಳ ಜೊತೆಗೆ ಬರುವವರು ಹೋಟೇಲ್‌ಗಳಲ್ಲಿ ಉಳಿದುಕೊಳ್ಳುವುದಕ್ಕೆ ಖರ್ಚು ಜಾಸ್ತಿ ಬರುತ್ತದೆ. ಆದ್ದರಿಂದ ಇಂತಹವರ ಅನುಕೂಲಕ್ಕಾಗಿ ಧರ್ಮಶಾಲೆಗಳನ್ನು ಕಟ್ಟಿಸುವ ಬಗ್ಗೆ ಸರ್ಕಾರ ಏನು ಒಂದು ಕಾರ್ಯಕ್ರಮ ಇಟ್ಟುಕೊಂಡಿದೆ. ಅದನ್ನು ಜಾರಿಗೆ ತಂದರೆ ರೋಗಿಗಳ ಜೊತೆಗೆ ಬರುವವರಿಗೆ ಬಹಳ ಅನುಕೂಲವಾಗುತ್ತದೆಂದು ನನ್ನ ಅಭಿಪ್ರಾಯ.

ಇನ್ನು ಎಕ್ಸ್‌ರೇ ಪ್ಲಾಂಟ್ ಇರುವ ಕಡೆಗಳಿಗೆ ಒಳ್ಳೆಯ ತಜ್ಞರಾದಂಥ ಡಾಕ್ಟರ್‌ಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಡಾಕ್ಟರ್‌ಗಳನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ವರ್ಗ ಮಾಡಿದರೆ ಖಾಲಿ ಬಿದ್ದ ಜಾಗಕ್ಕೆ ಪರ್ಯಾಯ ನುಗಟ್ಟಲೆಯಾದರೂ ಹೊಸಬರನ್ನು ನೇಮಕ ಮಾಡುತ್ತಿಲ್ಲ. ಬೇರೆ ಇಲಾಖೆಗಳಲ್ಲಿ ವರ್ಗವಾದರೆ ಖಾಲಿಬಿದ್ದ ಜಾಗಕ್ಕೆ ಕೂಡಲೇ ಬೇರೆಯವರನ್ನು ನೇಮಕ ಮಾಡಲಾಗುತ್ತದೆ. ಆದರೆ ಇಲ್ಲಿ ಆ ರೀತಿ ಆಗುತ್ತಿಲ್ಲ. ಇದರಿಂದ ಹಳಬರೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಹೇಳುವ ಸ್ಥಿತಿ ಬರುತ್ತದೆ. ಇದಕ್ಕೆ ಅವಕಾಶ ಕೊಡದೆ ಖಾಲಿ ಬಿದ್ದ ಜಾಗಗಳನ್ನು ಕೂಡಲೇ ಭರ್ತಿ ಮಾಡಬೇಕೆಂದೇ ಹೇಳುತ್ತೇನೆ.

ಇನ್ನು ಡಾಕ್ಟರ್‌ಗಳಿಗೆ ವಾಸ ಮಾಡಲು ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡದೆ, ಅವರು ಹಳ್ಳಿಗಳಿಗೆ ಹೋಗುವುದಿಲ್ಲವೆಂದು ಬೈದರೆ ಏನು ಪ್ರಯೋಜನ ? ಇವೊತ್ತು ವಿಲೇಜ್-ಅಕೌಂಟೆಂಟ್‌ಗಳು ಸಹ ಹಳ್ಳಿಗಳಲ್ಲಿ ವಾಸ ಮಾಡುವುದಿಲ್ಲ. ಅಂಥಾದ್ದರಲ್ಲಿ ೨೦೦-೩೦೦ ಮನೆಗಳು ಇರುವಂತಹ ಹಳ್ಳಿಗಳಲ್ಲಿ ಕ್ಲಾಸ್-೧ ಜೂನಿಯರ್ ಡಾಕ್ಟರ್ ಆದವರು ಇರಬೇಕೆಂದರೆ, ಒಳ್ಳೆಯ ಮನೆ ಇಲ್ಲದಿದ್ದರೆ ಹೇಗೆ ? ಆದ್ದರಿಂದ ಇವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಬಡ್ಜೆಟ್‌ನಲ್ಲಿ ಹೆಚ್ಚು ಹಣ ಇರಬೇಕೆಂದು ಹೇಳುತ್ತೇನೆ ಮನೆಗಳಿದ್ದರೆ ಡಾಕ್ಟರ್‌ಗಳು ಖಂಡಿತವಾಗಿಯೂ ಹಳ್ಳಿಗಳಿಗೆ ಹೋಗುತ್ತಾರೆ . ಇದರ ಒಂದು ಅನುಭವ ನನಗೂ ಸಹ ಆಗಿದೆ. ಆದರಿಂದ ಮಾನ್ಯ ಮಂತ್ರಿಗಳು ಇದರ ಕಡೆಗೆ ಹೆಚ್ಚಿನ ಗಮನ ಕೊಡಬೇಕು.

ಇನ್ನು ಬೇಸಿಕ್ ಹೆಲ್ತ್ ವರ್ಕರ್ಸ್ ಏನಿದ್ದಾರೆ, ಇವರು ಈ ಇಲಾಖೆಗೆ ಆಧಾರಸ್ತಂಭಗಳಿದ್ದಂತೆ. ಇವರು ತಮಗಿರುವ ಸಮಸ್ಯೆಗಳ ಬಗ್ಗೆ ಮನವಿಗಳನ್ನು ಕೊಟ್ಟಿದ್ದಾರೆ, ಮಾನ್ಯ ಮಂತ್ರಿಗಳು ಅವರ ಸಮಸ್ಯೆಗಳನ್ನು ಗಮನಕ್ಕೆ ತೆಗೆದುಕೊಂಡು ಕೂಡಲೆ ಬಗೆಹರಿಸಬೇಕೆಂದು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಒಂದು ಚಿಲ್ಡ್ರನ್ಸ್ ಇನ್‌ಸ್ಟಿಟ್ಯೂಟ್ ಮಾಡಬೇಕೆಂದು ನಾನು ಹೇಳುತ್ತೇನೆ. ಏತಕ್ಕೆಂದರೆ ನಮ್ಮಲ್ಲಿ ೧೯೭೭ರನೇ ಇಸವಿಯಿಂದಲೇ ಪೋಸ್ಟ್ ಗ್ರ್ಯಾಜುಯೇಷನ್ ಕೋರ್ಸ್ ಪ್ರಾರಂಭವಾಗಿದೆ. ಆದರೆ ಇಂಥ ಒಂದು ಇನ್‌ಸ್ಟಿಟ್ಯೂಟ್ ಇಲ್ಲ. ಈ ರೀತಿಯ ಒಂದು ಇನ್‌ಸ್ಟಿಟ್ಯೂಟ್ ಮದ್ರಾಸ್‌ನಲ್ಲಿ ಇದೆ ಮತ್ತೆ ಹೈದ್ರಾಬಾದ್‌ನಲ್ಲಿ ಇದೆ. ಆದ್ದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಕೂಡ ಒಂದು ಇನ್‌ಸ್ಟಿಟ್ಯೂಟ್ ಮಾಡಬೇಕೆಂದು ನಾನು ಮಾನ್ಯ ಆರೋಗ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುವುದೇನೆಂದರೆ ನಮ್ಮ ಕ್ಷೇತ್ರದ ಸಿದ್ದಾಪುರ ಎಂಬ ಒಂದು ಗ್ರಾಮದಲ್ಲಿ ಸುಮಾರು ೩೧-೧-೧೯೮೪ರಂದು ಒಬ್ಬ ಮಹಿಳೆಯನ್ನು ಅಲ್ಲಿನ ಫ್ಯಾಮಿಲಿ ಪ್ಲಾನಿಂಗ್ ಡಾಕ್ಟರ್ ಕರೆದು ಕೊಂಡು ಹೋಗಿ ಆಪರೇಷನ್ ಮಾಡಿದ್ದಾರೆ. ಆದರೆ ಆಕೆ ಶ್ರೀಮಾನ್ ಬಿ. ಸಿ. ನಾರಾಯಣಪ್ಪ ಎನ್ನ ತಕ್ಕಂಥವರ ಧರ್ಮಪತ್ನಿ. ಆಕೆ ಆಪರೇಷನ್ ಮಾಡಿಸಿಕೊಂಡು ಮನೆಗೆ ಬಂದ ಎರಡು ಮೂರು ದಿವಸ ಗಳಲ್ಲಿ ಮೃತಪಟ್ಟಳು. ಆದ್ದರಿಂದ ಆತನ ಸಂಸಾರಕ್ಕೆ ಸರ್ಕಾರದವರು ಮಾನ್ಯ ಮುಖ್ಯಮಂತ್ರಿಗಳ ನಿಧಿಯಿಂದ ಆಗಲಿ ಅಥವಾ ಇನ್ಯಾವುದೇ ರೀತಿಯಲ್ಲಿ ಆಗಲಿ ಆತನಿಗೆ ಪರಿಹಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಮಾನ್ಯ ಸದಸ್ಯರು ಕಠೋರವಾದಂಥ ವಿಷಯವನ್ನು ಬಹಳ ಮೃದುವಾಗಿ ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಹೆಚ್. ಆರ್. ರಾಜು.—ಮಾನ್ಯ ಅಧ್ಯಕ್ಷರೇ, ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ಡಾಕ್ಟರ್‌ಗಳು ಒಳ್ಳೆಯವರು ಎಂದು ನಾನು ಹೇಳುತ್ತಿಲ್ಲ. ಅದರಲ್ಲಿ ಕೆಲವರು ಒಳ್ಳೆಯವರು ಮತ್ತೆ ಕೆಲವರು ಕೆಟ್ಟವರು ಇರಬಹುದು. ಆದರೆ ಮಾನವೀಯತೆ ದೃಷ್ಟಿಯಿಂದ ನೋಡುವುದಾದರೆ ಡಾಕ್ಟರ್‌ಗಳಲ್ಲಿ ಯಾರೂ ಕೆಟ್ಟವರು ಇಲ್ಲ. ಯಾವುದೋ ಒಂದು ಪರಿಸ್ಥಿತಿಗೆ ಸಿಕ್ಕಿ ಇಂಥ ವ್ಯತ್ಯಾಸಗಳು ನಡೆಯುತ್ತವೆ. ಇನ್ನು ತಮಗೆ ವರ್ಗಾವಣೆ ವಿಷಯದಲ್ಲಿ ನಾನಾ ರೀತಿಯ ತೊಂದರೆಗಳು ಇದ್ದರೂ ಸಹ ತಾವು ಯಾವುದಕ್ಕೂ ಕೂಡ ಮಣಿಯದೆ ಒಳ್ಳೆಯ ಕೆಲಸವನ್ನು ಮಾಡಿ ಕೊಂಡು ಬಂದಿದ್ದೀರಿ. ಅದಕ್ಕೆ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಪಿ. ರಾಮದೇವ್, ಮಾನ್ಯ ಸದಸ್ಯರು ಗೈರು ಹಾಜರಾಗಿದ್ದಾರೆ. ಮತ್ತೆ ಶ್ರೀ ಬಿ. ಬೈರಪ್ಪಾಜಿಯವರು ಸಹ ಗೈರು ಹಾಜರಾಗಿದ್ದಾರೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳ ಮೇಲೆ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ನಮ್ಮ ಮಾನ್ಯ ಆರೋಗ್ಯ ಸಚಿವರು ಒಳ್ಳೆಯ ಯುವಕರು ಇದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಅಂದರೆ ಮಾನ್ಯ ಮಂತ್ರಿಗಳು ಒಳ್ಳೆಯ ಗಟ್ಟಿಮುಟ್ಟಾಗಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ, ಇವತ್ತು ನಮ್ಮ ಆರೋಗ್ಯ ಇಲಾಖೆ ಹಳ್ಳಿಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳ ಕಡೆ ಹೆಚ್ಚು ಗಮನವನ್ನು ಕೊಟ್ಟಿಲ್ಲ. ಹಳ್ಳಿಗಳಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಸರಿಯಾದ ರೀತಿಯಲ್ಲಿ ಔಷಧಿಗಳನ್ನು ಒದಗಿಸಿಕೊಡುವುದಿಲ್ಲ, ಮತ್ತೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಆಸ್ಪತ್ರೆಗಳಲ್ಲಿ ಸರಿಯಾದ ಸಿಬ್ಬಂದಿಯನ್ನು ಒದಗಿಸಿಕೊಡುವುದಿಲ್ಲ. ಸ್ವಾಮಿ ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ರೋಗಿಗಳಿಗೆ ಸರಿಯಾದ ಕಾಲಕ್ಕೆ ಸರಿಯಾದ ಚಿಕಿತ್ಸೆಯನ್ನು ಕೊಡದೆ ಅವರು ಅಸು ನೀಗಿರತಕ್ಕಂಥ ಪ್ರಸಂಗಗಳು ಕೂಡ ನಮ್ಮಲ್ಲಿ ಬೇಕಾದಷ್ಟು ಇವೆ. ಒಂದು ವೇಳೆ ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಘಟಕದ ಡಾಕ್ಟರ್ ತಮ್ಮ ಸ್ವಂತ ಹಣದಿಂದ ಔಷಧಿಗಳನ್ನು ತಂದಿಟ್ಟುಕೊಂಡು ಕೊಟ್ಟರೆ ಆಗ ರೋಗಿಗಳು ಆತನ ಮೇಲೆ ಸರ್ಕಾರಕ್ಕೆ ದೂರು ಕೊಡತಕ್ಕಂಥ ಪ್ರಸಂಗಗಳು ಕೂಡ ಇವೆ. ಒಂದು ವೇಳೆ ಅವರು ತಮ್ಮ ಸ್ವಂತ ಹಣದಿಂದ ಚುಚ್ಚು ಮದ್ದು ತಂದು ಕೊಟ್ಟು ಹಣ ಕೇಳಿದರೆ ನೀವು ಸರ್ಕಾರಿ ಡಾಕ್ಟರ್ ಈ ರೀತಿ ನಮ್ಮಂಥ ಬಡವರಿಂದ ಹಣವನ್ನು ಪಡೆದುಕೊಳ್ಳುವುದು ಸರಿಯಲ್ಲ ಎಂದು ಹೇಳುತ್ತಾರೆ. ಪಾಪ ಹಳ್ಳಿಯಲ್ಲಿರತಕ್ಕಂಥ ಬಡಜನರಿಗೆ ಗೊತ್ತಾಗುವುದಿಲ್ಲ. ಅವರು ತಿಳಿದುಕೊಂಡಿರುವುದು ಏನೆಂದರೆ ಸರ್ಕಾರಿ ಆಸ್ಪತ್ರೆ. ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ಔಷಧಿ ನಮಗೆ ಪುಕ್ಕಟೆಯಾಗಿ ಸಿಗಬೇಕೆಂದು. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿನ ಔಷಧಿಯನ್ನು ಒದಗಿಸಿಕೊಡಬೇಕು. ಇನ್ನು ಇದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತರಬಯಸುವುದಾದರೂ ಏನೆಂದರೆ ಒಂದು ಹಳ್ಳಿಯಲ್ಲಿ ಒಬ್ಬ ಮನುಷ್ಯನಿಗೆ ರೋಗ ಬಂದರೆ ಆತ ತನ್ನ ಹತ್ತಿರದಲ್ಲಿರತಕ್ಕಂಥ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಬಂದು ಚಿಕಿತ್ಸೆಯನ್ನು ಪಡೆದುಕೊಂಡು ಹೋಗುವುದಕ್ಕೂ ಕೂಡ ಶಕ್ತಿ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಒಂದು ಸಂಚಾರಿ ಚಿಕಿತ್ಸಾಲಯವನ್ನು ಮಾಡಿ ಆ ಮೂಲಕ ಹಳ್ಳಿಗಾಡಿನಲ್ಲಿರತಕ್ಕ ಜನರಿಗೆ ಉಚಿತ ವೈದ್ಯಕೀಯ ಸೇವೆಯನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆ ಸಂಚಾರಿ ಚಿಕಿತ್ಸಾಲಯದಲ್ಲಿ ಒಬ್ಬ ಡಾಕ್ಟರು ಮತ್ತು ಒಬ್ಬ ನರ್ಸ್ ಮತ್ತು ಎಲ್ಲಾ ಔಷಧಿಗಳನ್ನು ಒದಗಿಸಿಕೊಡತಕ್ಕದ್ದು. ಮತ್ತೆ ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರದವರು ಈ ವರ್ಷ ಬಹಳ ಕಡಿಮೆ ಹಣವನ್ನು ಇಟ್ಟಂತೆ ಕಾಣುತ್ತದೆ. ಆದ್ದರಿಂದ ತಾವು ಪ್ರೈವೇಟ್ ಮೆಡಿಕಲ್ ಕಾಲೇಜುಗಳಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದ ಕೈಗಾರಿಕೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಗಳು ಹೊಸ ಕೈಗಾರಿಕಾ ನೀತಿಯನ್ನು ಘೋಷಣೆ ಮಾಡಿದ್ದಾರೆ. ಆದರೆ ಈ ಹೊಸ ಕೈಗಾರಿಕಾ ನೀತಿಯಲ್ಲಿ ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದಿರತಕ್ಕ ವರ್ಗಗಳಿಗೆ ಯಾವುದೇ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿಲ್ಲ. ಮತ್ತೆ ಹರಿಜನ ಮತ್ತು ಗಿರಿಜನರಿಗೆ ಸಾಲದ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅವರು ಯಾವುದೇ ರೀತಿಯ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂತೆ ಇಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಇವತ್ತು ಈ ಹೊಸ ಕೈಗಾರಿಕಾ ನೀತಿಯಿಂದ ಯಾರಾದರೂ ಹರಿಜನ ಮತ್ತು ಗಿರಿಜನರು ಹೋಗಿ ನಾವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಸಾಲವನ್ನು ಕೇಳಿದರೆ ಅವರಿಗೆ ಕಾಲಕ್ಕೆ ಸರಿಯಾಗಿ ಸಾಲವನ್ನು ಮಂಜೂರು ಮಾಡುತ್ತಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಇದುವರೆಗೂ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ.

ಇವತ್ತು ಸಿಕ್ ಇಂಡಸ್ಟ್ರಿಗಳು ಬೇಕಾದಷ್ಟು ಬೆಳೆಯುತ್ತಿವೆ. ಸರ್ಕಾರಿ ಉದ್ಯಮಗಳಲ್ಲಿ ನಾವು ಇನ್‌ಎಫಿಶಿಯೆನ್ಸಿಯನ್ನು ಕಾಣುತ್ತಿದ್ದೇವೆ, ಖಾಸಗಿ ಉದ್ಯಮಗಳಲ್ಲಿ ಎಫಿಶಿಯೆನ್ಸಿಯನ್ನು ಕಾಣುತ್ತಿದ್ದೇವೆ. ಈ ಎರಡೂ ವಾದಗಳು ನಮ್ಮ ಮುಂದಿವೆ. ಲೇಬರ್ ಸೈಡ್‌ನಿಂದ ಅವರು ನಮ್ಮ ಪಾಲು

ನಮಗೆ ಸಿಗಬೇಕೆಂದು ಹೇಳುತ್ತಿದ್ದಾರೆ. ಮ್ಯಾನೇಜ್‌ಮೆಂಟ್ ಸೈಡ್‌ನಿಂದ ಏನು ಹೇಳುತ್ತಾರೆಂದರೆ ಕಾರ್ಮಿಕರಲ್ಲಿ ಇನ್‌ಎಫಿಶಿಯೆನ್ಸಿ, ಇನ್‌ಡಿಸಿಪ್ಲಿನ್ ಇದೆಯೆಂದು ಹೇಳುತ್ತಾರೆ. ಈ ರೀತಿಯ ತದ್ವಿರುದ್ಧವಾದ ವಾದಗಳನ್ನು ನಾವು ಕಾಣುತ್ತಿದ್ದೇವೆ. ಸರ್ಕಾರಿ ಉದ್ಯಮಗಳು ಕೆಟ್ಟು ಹೋಗಿವೆ, ಯಾವ ರೀತಿಯ ಸ್ವಾಗತ ಸಿಗಬೇಕೋ ಅದು ಸಿಗುತ್ತಿಲ್ಲ. ಇವತ್ತು ನಾವು ಶ್ರಮಮಾಡತಕ್ಕ ಜನರ ಬಗ್ಗೆ ಕೂಡ ಗಮನಹರಿಸಬೇಕಾಗಿದೆ. ಇವತ್ತು ಹರಿಜನ–ಗಿರಿಜನರಿಗೆ ಇಂಡಸ್ಟ್ರಿ ಬಗ್ಗೆ ಮಾಹಿತಿ ಇಲ್ಲ. ಬಲಿಷ್ಠ ಜನಾಂಗಗಳು ಇಂಡಸ್ಟ್ರಿಗಳನ್ನು ಇಟ್ಟು ಕೊಂಡಿದ್ದಾರೆ. ಹರಿಜನ ಗಿರಿಜನರಿಗೆ ಅದರ ಬಗ್ಗೆ ಅರಿವು ಮತ್ತು ಸಾಮರ್ಥ್ಯ ಇಲ್ಲದೇ ಇರುವುದರಿಂದ ಇಂಡಸ್ಟ್ರಿಗೆ ಯಾರು ಕೂಡ ಕೈ ಹಾಕುವುದಿಲ್ಲ. ಹರಿಜನ ಗಿರಿಜನರ ಮಕ್ಕಳು ಪದವೀಧರರಾಗಿದ್ದರೆ ಅವರಿಗೆ ಇಂಡಸ್ಟ್ರಿ ನಡೆಸಲು ಸಾಲ ಕೊಡುತ್ತೇವೆಂದು ನೀವು ಹೇಳುತೀರಿ ಅವರಿಗೆ ಯಾವುದೇ ರೀತಿಯ ಟೆಕ್ನಿಕಲ್ ತರಬೇತಿ ಇಲ್ಲದಿದ್ದರೆ, ಇಂಡಸ್ಟ್ರಿ ಬಗ್ಗೆ ಮಾಹಿತಿ ಇಲ್ಲದಿದ್ದರೆಅವರು ಯಾವ ರೀತಿ ಇಂಡಸ್ಟ್ರಿಗಳನ್ನು ಮಾಡುತ್ತಾರೆ ? ಲಕ್ಷಾಂತರ ಕೋಟ್ಯಾಂತರ ರೂಪಾಯಿ ಹಣ ಯಾರಿಗೆ ಹೋಗುತ್ತಿದೆ ? ಇವರಿಗೆ ಟೆಕ್ನಿಕಲ್ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕು. ಶೇಕಡ ೧೮ರಷ್ಟು ಹಣ ಇವರಿಗಾಗಿ ಸದ್ವಿನಿಯೋಗವಾಗಬೇಕು. ನೀವು ಎಲ್ಲಿಯವರೆಗೆ ತರಬೇತಿಯನ್ನು ಕೊಡುವುದಿಲ್ಲವೋ, ಎಲ್ಲಿಯವರೆಗೆ ಅವರಿಗೆ ಇಂಡಸ್ಟ್ರಿ ಮಾಡತಕ್ಕ ಪರಿಜ್ಞಾನ ಸಾಮರ್ಥ್ಯ ಬರುವುದಿಲ್ಲವೋ ಅಲ್ಲಿಯವರೆಗೆ ನೀವು ಕೊಡತಕ್ಕ ಸಾಲವನ್ನು ಸದ್ವಿನಿಯೋಗ ಮಾಡಿಕೊಳ್ಳುವುದಕ್ಕೆ ಯಾರೂ ಕೂಡ ಮುಂದೆ ಬರುವುದಿಲ್ಲ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಬಗ್ಗೆ ಹೇಳುವುದಾದರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಪ್ರಜಾಪ್ರಭುತ್ವ, ಜನತೆಯ ಮೌಲ್ಯಗಳು ಅವರ ವಿಚಾರಧಾರೆಯಲ್ಲಿ ಕೆಲವು ಮಾತುಗಳನ್ನು ಹೇಳುತ್ತಾರೆ. ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಾರೆ. ಒಬ್ಬ ಜವಾನಿ ನೌಕರನನ್ನು ವರ್ಗ ಮಾಡಲಿಕ್ಕೆ ಸಾಮಾನ್ಯ ದರ್ಜೆಯ ನೌಕರನನ್ನು ವರ್ಗ ಮಾಡುವ ಅಧಿಕಾರವನ್ನು ಇವರು ಇಟ್ಟು ಕೊಂಡಿದ್ದಾರೆ ಪ್ರಜಾಪ್ರಭುತ್ವ ಮೌಲ್ಯಗಳನ್ನು ಹೇಳತಕ್ಕ ಇವರು ಸಣ್ಣ ನೌಕರನನ್ನು ವರ್ಗ ಮಾಡುವ ಅಧಿಕಾರವನ್ನು ಇಟ್ಟು ಕೊಂಡರೆ, ಹಾಗಾದರೆ ಸಂಬಂಧಪಟ್ಟ ಮಂತ್ರಿಗಳುಏತಕ್ಕೆ ಇರಬೇಕು ?

ಶ್ರೀ ಬಿ. ರಾಚಯ್ಯ.—ಮೂರು ಮೂರು ತಿಂಗಳಿಗೆ ವರ್ಗ ಮಾಡುತ್ತಿದ್ದರು ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿ, ಪ್ರತಿ ತಿಂಗಳು ವರ್ಗಾವರ್ಗಿ ಕೆಲಸ ಆಗುತ್ತದೆ. ಪ್ರಿಮೆಚ್ಯೂರ್ ಟ್ರಾನ್ಸ್‌ಫರ್‌ಗಳನ್ನು ಮಾಡತಕ್ಕ ಅಧಿಕಾರವನ್ನು ಮೊದಲು ಮುಖ್ಯ ಮಂತ್ರಿಗಳು ನಮಗೆ ಕೊಟ್ಟಿದ್ದರು ಆ ಒಂದು ಅಧಿಕಾರವನ್ನು ನಾವು ಈಗ ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದೇವೆ.

ಶ್ರೀ ಕೆ. ಶಿವಮೂರ್ತಿ.—ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಮಾಡಬಾರದು ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಿ.

ಶ್ರೀ ಬಿ. ರಾಚಯ್ಯ.—೩ವರ್ಷ ೩ವರ್ಷ ಒಂದು ಸ್ಥಳದಲ್ಲಿ ಸೇವೆ ಸಲ್ಲಿಸ ಬೇಕೆನ್ನುವ ನಿಯಮ ಏನಿದೆ ಅದನ್ನು ಮುಂದುವರಿಸಿಕೊಂಡು ಬಂದಿದ್ದೇವೆ. ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಮಾಡುವ ಅಧಿಕಾರವಿದ್ದರೆ ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಾರೆಂದು ಅದನ್ನು ವಿತ್ ಡ್ರಾ ಮಾಡಿದ್ದೇವೆ.

ಶ್ರೀ ಎನ್. ಜಿ. ನಾಯಕ್.—ಮೂರು ತಿಂಗಳ ಅವಧಿಯಲ್ಲಿ ಟ್ರಾನ್ಸ್‌ಫರ್ ಮಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಮಾಡಬಾರದೆನ್ನುವ ಅಧಿಕಾರವನ್ನು ಸಂಬಂಧಪಟ್ಟ ಮಂತ್ರಿಗಳು ಏತಕ್ಕೆ ಇಟ್ಟು ಕೊಳ್ಳಬಾರದು ? ತಮ್ಮ ಇಲಾಖೆಯನ್ನು ನೋಡಿಕೊಳ್ಳತಕ್ಕ ಶಕ್ತಿ ಇಲ್ಲದ ಮೇಲೆ ಮಂತ್ರಿಗಳು ಏತಕ್ಕೆ ಆಗಿರಬೇಕು ? ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಬೇಕು, ಜನತಾ ಪಾರ್ಟಿಯ ರಾಜಕೀಯ ಮಾಡಬೇಕು, ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು, ರಾಜಕುಮಾರ್ ಅಸೋಸಿಯೇಷನ್ ಸುಧಾರಿಸಬೇಕು. ಸಾಮಾನ್ಯ ದರ್ಜೆ ನೌಕರರ ಮತ್ತು ನಾಲ್ಕನೇ ದರ್ಜೆ ನೌಕರರ ವರ್ಗಾವರ್ಗಿ ಫೈಲುಗಳು ಮುಖ್ಯ ಮಂತ್ರಿಗಳಿಗೆ ಏತಕ್ಕೆ ಹೋಗಬೇಕು ? ನಿಮ್ಮ ಹತ್ತಿರ ಅಧಿಕಾರವಿದ್ದರೆ ನಿಮಗೆ ಯಾರು ಬೇಕೋ ಅವರನ್ನು ಇಟ್ಟು ಕೊಳ್ಳಬಹುದು. ಮುಖ್ಯ ಮಂತ್ರಿಗಳ ಹತ್ತಿರ ಪ್ರಿಮೆಚ್ಯೂರ್ ಟ್ರಾನ್ಸ್‌ಫರ್ ಅಧಿಕಾರವಿದ್ದರೂ ಒಬ್ಬ ಅಧಿಕಾರಿಗಳನ್ನು ೧೦ ಸಲ ವರ್ಗ ಮಾಡಿದ್ದಾರೆ. ಶಾಸಕರು ಹೇಳಿದರು, ಮಂತ್ರಿಗಳು ಹೇಳಿದರೆಂದು ಇನ್ಯಾರೋ ಹೇಳಿದರೆಂದು ವರ್ಗ ಮಾಡಿರತಕ್ಕದ್ದು ತಮಗೆ ಗೊತ್ತಿದೆ. ಇಷ್ಟೆಲ್ಲಾ ಗೊತ್ತಿದ್ದರೂ ತಾವು ಏತಕ್ಕೆ ಅಧಿಕಾರದಲ್ಲಿದ್ದೀರಿ ?

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಕನ್‌ಕ್ಲೂಡ್ ಮಾಡಿ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬೆಂಗಳೂರು ನಗರದಲ್ಲಿ ಎಷ್ಟು ಜನ ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರುಗಳು ಇದ್ದಾರೆ, ಅವರಲ್ಲಿ ಹರಿಜನ ಗಿರಿಜನರು ಎಷ್ಟು ಜನರು ಇದ್ದಾರೆ ? ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳತಕ್ಕ ನೀವು ಆ ಜನರಿಗೆ ಯಾವ ಅಧಿಕಾರ ಕೊಟ್ಟಿದ್ದೀರಿ ? ನಮ್ಮ ಜಿಲ್ಲೆಯಲ್ಲಿ ಮತ್ತು ತಾಲ್ಲೂಕಿನಲ್ಲಿ ಇವತ್ತಿನ ದಿವಸ ಯಾವ ಜನಾಂಗದ ಅಧಿಕಾರಿಗಳಿದ್ದಾರೆಂದರೆ, ಕ್ಷೇತ್ರಾಭಿವೃದ್ಧಿ ಅಧಿಕಾರಿ, ತಹಶಿಲ್ದಾರ್, ಇಂಜಿನಿಯರ್ ಯಾರಿದ್ದಾರೆ ? ಅವರಿಗೆ ಯಾರ್ಯಾರು ಬೇಕೋ ಅವರನ್ನು ಹಾಕಿಕೊಂಡಿದ್ದಾರೆ. ಹಿಂದುಳಿದವರ ಬಗ್ಗೆ ಕಾಳಜಿ ಇರತಕ್ಕ ಜನ ನೀವು ಈ ರೀತಿ ಮಾಡುತ್ತಿದ್ದೀರಿ. ಗೃಹ ಇಲಾಖೆಯಲ್ಲಿ ಪೋಲೀಸ್‌ನವರು ಸಹ ಮನುಷ್ಯರೆ, ಅವರು ಏನಾದರೂ ತಪ್ಪು ಮಾಡಿದರೆ ಎಲ್ಲರೂ ತೆಗಳುತ್ತಾರೆ. ಅವರು ಒಳ್ಳೆಯ ಕೆಲಸ ಮಾಡಿದರೆ ಯಾರೂ ಕೂಡ ಹೊಗಳುವುದಿಲ್ಲ. ಪೋಲೀಸ್‌ನವರು ಕೂಡ ಕಷ್ಟ ಪಡತಕ್ಕ ಜನ. ಅವರು ತಮ್ಮ ಪ್ರಾಣವನ್ನು ಕೊಟ್ಟು ರಕ್ಷಣೆ ಮಾಡಬೇಕು. ಶಾಂತಿ ಸ್ಥಾಪನೆ ಮಾಡಬೇಕು. ಅವರಿಗೆ ಕೊಡತಕ್ಕ ವೇತನವನ್ನು ಜಾಸ್ತಿ ಮಾಡಬೇಕಾಗಿದೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸ ಹೆಚ್ಚಿನ ರೀತಿಯಲ್ಲಿ ಸಿಗುವಂತೆ ಮಾಡಬೇಕು. ಅವರಿಗೆ ಕ್ವಾಟ್ರಸ್ ಒದಗಿಸುವ ವ್ಯವಸ್ಥೆ ಮಾಡಬೇಕು. ಪೋಲೀಸ್ ಇಲಾಖೆಯಲ್ಲಿ ದೊಡ್ಡ ಅಧಿಕಾರಿಗಳಿಂದ ಸಣ್ಣ ಅಧಿಕಾರಿಗಳಿಗೆ ಕಿರುಕುಳ ಜಾಸ್ತಿಯಾಗುತ್ತಿರುತ್ತದೆ. ಅವರಿಗೆ ಜನಗಳಿಂದಲೂ ಕೂಡ ಕಿರುಕುಳ ಇರುತ್ತದೆ. ಇದರ ಬಗ್ಗೆ ರಾಜಕಾರಣಿಗಳು ಕೂಡ ಪದೇ ಪದೇ ಹೇಳುತ್ತಿರುತ್ತಾರೆ, ಪೋಲೀಸ್ ಇಲಾಖೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನ ಹರಿಸಬೇಕು. ಪೋಲೀಸ್‌ನವರಿಗೆ ಕೊಟ್ಟಿರತಕ್ಕ ಡ್ರೆಸ್‌ನ ಬಗ್ಗೆ ಹೇಳುವುದಾದರೆ ಅವರಿಗೆ ನೀವು ಕೊಟ್ಟಿರತಕ್ಕ ಡ್ರೆಸ್ ಯಾವ ರೀತಿ ಇದೆ ? ಅವರು ಹಾಕಿಕೊಂಡಿರುವ ಡ್ರೆಸ್‌ನ್ನು ನೋಡಿದರೆ ಯಾರೂ ಕೂಡ ಹೆದರುವುದಿಲ್ಲ. ಮೊದಲು ಇದ್ದಂತಹ ಡ್ರೆಸ್ ಸರಿಯಾಗಿತ್ತು. ಇವರಿಗೆ ಇಂತಹ ಬಟ್ಟೆ ಕೊಡಲಿಕ್ಕೆ ಯಾರಿಗೆ ಟೆಂಡರ್ ಕೊಟ್ಟಿದ್ದಾರೆ ! ಅಲ್ಲಿ ಲಂಚದ ವ್ಯವಹಾರ ನಡೆದಿದೆ. ಪೋಲೀಸ್‌ನವರಿಗೆ ಕೊಡತಕ್ಕ ವಾಷಿಂಗ್ ಅಲೋಯೆನ್ಸ್ ೧೦ ರೂಪಾಯಿ ಏತಕ್ಕೆ ಸಾಲುತ್ತದೆ ? ಅವರು ಬಟ್ಟೆ ಒಗೆಯಲಿಕ್ಕೆ ಸೋಪು ಇಸ್ತ್ರಿ ಮಾಡಿಸಿಕೊಳ್ಳಲಿಕ್ಕೆ ಕಾಸು ಸಾಕಾಗುತ್ತದೆಯೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು ವಾಷಿಂಗ್ ಅಲೋಯೆನ್ಸ್ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕಾರ್ಪೊರೇಷನ್ ಮತ್ತು ಬೋರ್ಡ್‌ಗಳಿಗೆ ಛೇರ್ಮನ್‌ಗಳನ್ನು ಮಾಡಿದ್ದಾರೆ. ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದೀರಾ ? ಅವರಿಗೆ ಯಾವ ಅಧಿಕಾರವನ್ನು ಕೊಟ್ಟಿದ್ದೀರಿ ? ಮಾನ್ಯ ದೆ ವರಾಜ ಅರಸ್‌ರವರ ತತ್ವಗಳನ್ನು ಆಚರಣೆ ಮಾಡುತ್ತೇವೆಂದು ಹೇಳುತ್ತೀರಿ. ನೀವು ಮುಖ್ಯ ಮಂತ್ರಿಗಳು ಹೇಗೋ ಆದಿರಿ ಅದು ಈಗ ಬೇಡ. ದಿವಂಗತ ದೇವರಾಜ ಅರಸ್‌ರವರ ತತ್ವಗಳನ್ನು ಚಾಚೂತಪ್ಪದೆ ಆಚರಣೆಗೆ ತರುತ್ತೇವೆಂದು ಹೇಳತಕ್ಕ ನೀವು ದೀನದಲಿತರಿಗೆ ಮತ್ತು ಹಿಂದುಳಿದವರಿಗೆ ಸರಿಯಾದ ಪ್ರಾತಿನಿಧ್ಯವನ್ನು ಕೊಟ್ಟಿದ್ದೀರಾ ? ದೇವರಾಜ ಅರಸ್‌ರವರ ಫೋಟೋ ಇಟ್ಟುಕೊಂಡು ಗೆದ್ದಂತಹ ನೀವು, ನಿಮ್ಮ ಜನತಾ ಪಾರ್ಟಿ ಆಫೀಸಿನಲ್ಲಿ ದೇವರಾಜ ಅರಸ್‌ರವರ ವಿರುದ್ಧವಾಗಿ ಮಾತನಾಡುತ್ತಾರೆ. ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನಲ್ಲಿ ಡಾ. ಹಲಗಿ ಎಂಬುವರು ಮೀಸಲಾತಿ ಪ್ರಕಾರ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಏಕಾ ಏಕಿ ಅವರನ್ನು ನೀವು ತೆಗೆದು ಶಾಂತಗುಂಡಿ ಎಂಬುವರನ್ನು ನೀವು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈಗ ಅಧ್ಯಕ್ಷರಾಗಿರತಕ್ಕವರು ಸಚಿವರಾದ ಬಿ ಎಲ್. ಗೌಡರ ಹೆಂಡತಿಯೆಂದು ಪತ್ರಿಕೆಗಳಲ್ಲಿ ಬರೆದಿದ್ದನ್ನು ನಾನು ನೋಡಿದ್ದೇನೆ. ಹೆಣ್ಣುಮಕ್ಕಳ ಕಲ್ಯಾಣ ಮಂಡಳಿಯಲ್ಲಿ ಇವರು ಯಾವ ರೀತಿ ಕೆಲಸ ಮಾಡುತ್ತಾರೆ ? ಅವರು ಸಾಹುಕಾರರು, ಫೈವ್‌ಸ್ಟಾರ್ ಕಲ್ಚರ್‌ನಿಂದ ಬಂದಿರತಕ್ಕ ಜನ ಸಮಾಜ ಕಲ್ಯಾಣ ಮಂಡಳಿಯಲ್ಲಿ ಬಡ ಜನರ ಮತ್ತು ಹಿಂದುಳಿದ ಹೆಣ್ಣು ಮಕ್ಕಳ ಯೋಗ ಕ್ಷೇಮದ ಬಗ್ಗೆ ಏನು ಮಾಡುತ್ತಾರೆ ? ಅವರಿಗೆ ಬಡತನ ಎಂಬುದೇ ಗೊತ್ತಿಲ್ಲ. ಒಬ್ಬ ಷೆಡ್ಯೂಲ್ಡ್ ಕಾಸ್ಟ್ ಮಹಿಳೆ ಪದವೀಧರರಾಗಿದ್ದವರು ವಿದ್ಯಾವಂತರು ಆಗಿದ್ದವರನ್ನು ನೀವು ಏಕಾ ಏಕಿ ತೆಗೆದು ಇಂತಹವರನ್ನು ನೇಮಕ ಮಾಡಿದ್ದೀರಿ. ನೇಮಕ ಮಾಡತಕ್ಕದ್ದು ತಮ್ಮ ಇಚ್ಛೆಯಾದರೂ, ತೆಗೆದು ಹಾಕತಕ್ಕದ್ದು ತಮ್ಮ ಇಚ್ಛೆಯಾಗಬಾರದು.

ಅಧ್ಯಕ್ಷರು.—ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ತಾವು ಮಾತನಾಡಲಿಕ್ಕೆಂದು ತಮಗೆ ಸಮಯವನ್ನು ಕೊಟ್ಟಿದ್ದೇನೆ. ತಾವು ಶಿಸ್ತಿಗೆ ಒಪ್ಪದಿದ್ದರೆ ಇನ್ನು ಮುಂದೆ ತಮ್ಮ ಹೆಸರನ್ನು ಕರೆಯುವುದಿಲ್ಲ.

ಶ್ರೀ ಕೆ. ಶಿವಮೂರ್ತಿ.—ಒಂದೆರಡು ನಿಮಿಷಗಳಲ್ಲಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಕಮಿಟಿಗಳಲ್ಲಿ ಕರಪ್ಷನ್ ಇದೆಯೆಂದು ಪ್ರತಿಯೊಬ್ಬ ವ್ಯಕ್ತಿಗಳೂ ಸಹ ಹೇಳುತ್ತಿದ್ದರು ಮುಖ್ಯ ಮಂತ್ರಿಗಳು ಭ್ರಷ್ಟಾಚಾರ ಇದು ಪಕ್ಷಾತೀತವಾಗಿ ಆಗ ತಕ್ಕ ಕೆಲಸವೆಂದು ತಿಳಿದು ಕೊಂಡಿದ್ದಾರೆ. ಆದರೂ ಸಹ ಒಂದು ದಿಟ್ಟ ಹೆಜ್ಜೆಯನ್ನಿಟ್ಟು ನೇಮಕಾತಿ ಸಮಿತಿಗಳನ್ನು ರದ್ದು ಮಾಡಿದ್ದಾರೆ. ಆದರೆ ರೈಸ್ ಸ್ಮಗಲ್ ಆಗುತ್ತಿದೆ ಅದನ್ನು ತಡೆಹಿಡಿಯ ಬೇಕು. ಬ್ಲೂ ಫಿಲಂಗಳು ನಡೆಯುತ್ತಿವೆ ಅದನ್ನು ತಡೆಗಟ್ಟಬೇಕು.

೫-೩೦ ಪಿ.ಎಂ.

ಕ್ಲಬ್ ರೈಡ್ ಮಾಡಿದರು. ಮಾನ್ಯ ಸಚಿವರೊಬ್ಬರು ಅದರಲ್ಲಿ ಶಾಮೀಲಾಗಿದ್ದಾರೆ ಎಂದು ಕೂಡ ಪತ್ರಿಕೆಯಲ್ಲಿ ಬಂತು. ಇದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಸರ್ಕಾರದಿಂದ ಉತ್ತರ ಬರಲಿಲ್ಲ.

ಅಧ್ಯಕ್ಷರು.—ಸಾಕು ನಿಲ್ಲಿಸಿ ಎಂದು ಎಷ್ಟು ಹೇಳಿದರೂ ನೀವು ಕೇಳುತ್ತಿಲ್ಲ ಐದು ಗಂಟೆಗೆ ಮುಗಿಯಬೇಕಾಗಿದ್ದುದು ಈಗ ಐದೂವರೆ ಗಂಟೆಯಾಗಿದೆ ಇನ್ನು ನಾಲ್ಕು ಜನ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ನೀವು ಸಹಕರಿಸದಿದ್ದರೆ ಹೇಗೆ?

ಶ್ರೀ ಕೆ. ಶಿವಮೂರ್ತಿ.—ದೌರ್ಜನ್ಯ ನಡೆಸುವ ರೀತಿಯಲ್ಲಿ ಈ ಸರ್ಕಾರ ಹೋಗುತ್ತಿದೆಯೆಂದು ನಾನು ಹೇಳುತ್ತಿದ್ದೇನೆ. ಇನ್ನು ದಾವಣಗೆರೆಯಲ್ಲಿ ಮಹಿಳಾ ಸಮಾಜ ಒಂದು ಇದೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವಂಥಾದ್ದು. ನಿಜ, ಮಹಿಳಾ ಕಲ್ಯಾಣ ಆಗಬೇಕು. ಅಲ್ಲಿ ಈ ಮಹಿಳಾ ಸಮಾಜ ಇದ್ದಂತಹ ಜಾಗವನ್ನು ಲೀಸ್‌ನಲ್ಲಿ ಕಟ್ಟಡ ಕಟ್ಟಲಿಕ್ಕೆ ಬೇರೆಯವರಿಗೆ ಕೊಟ್ಟಿದ್ದಾರೆ. ಇದರಿಂದ ಅಲ್ಲಿ ಮಹಿಳೆಯರಿಗೆ ಅನುಕೂಲವಾಗುವುದಿಲ್ಲ. ಇದರ ಬಗ್ಗೆ ಸರ್ಕಾರದವರು, ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಚಿವರು ತತ್‌ಕ್ಷಣ ಗಮನಹರಿಸಿ ದಾವಣಗೆರೆಯಲ್ಲಿ ಮಹಿಳಾ ಸಮಾಜ ಇದ್ದ ಜಾಗವನ್ನು ಏನು ವ್ಯಾಪಾರ ಮಳಿಗೆ ಕಟ್ಟಲಿಕ್ಕೆ ಲೀಸ್‌ನಲ್ಲಿ ಕೊಟ್ಟಿದ್ದಾರೆ ಅದನ್ನು ತಪ್ಪಿಸಬೇಕು. ಇನ್ನು ಕೊನೆಯದಾಗಿ ರೈತರ ವಿಚಾರದಲ್ಲಿ............

ಅಧ್ಯಕ್ಷರು.—ಸಾಕು ನಿಲ್ಲಿಸಿ. ಪ್ರತಾಪಚಂದ್ರ ಶೆಟ್ಟಿ ನೀವು ಮಾತನಾಡಿ.

ಶ್ರೀ ಕೆ. ಶಿವಮೂರ್ತಿ.—ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರ ತಾನು ಹೇಳಿದ್ದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ............

ಶ್ರೀ ಬಿ. ಭೈರಪ್ಪಾಜಿ. —ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಶಿವಮೂರ್ತಿಯವರೇ ಯಾವುದಕ್ಕೂ ಒಂದು ಮಿತಿ ಇರಬೇಕು. ಇಷ್ಟು ಹೇಳಿದರೂ ಕೂಡ ನೀವು ನಿಲ್ಲಿಸುತ್ತಿಲ್ಲ.

ಶ್ರೀ ಕೆ. ಶಿವಮೂರ್ತಿ. —ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್:—ಅಧ್ಯಕ್ಷರೇ, ಮುಂಜಾನೆಯಿಂದಲೂ ಇಲ್ಲಿ ನಾವು ನಮ್ಮ ಸರದಿ ಬರುತ್ತದೆ ಎಂದು ಕೂತಿರುತ್ತೇವೆ. ಅವಕಾಶ ಸಿಗದೆ ಹೋದರೆ ಬೇಜಾರಾಗುತ್ತದೆ.

ಅಧ್ಯಕ್ಷರು.—ಪಟ್ಟಿಯ ಪ್ರಕಾರ ನಾನು ಕರೆಯುತ್ತಿದ್ದೇನೆ. ಹಾಗೆ ಕರೆದಾಗ ಮಾನ್ಯ ಸದಸ್ಯರು ಇಲ್ಲಿ ಹಾಜರಿರಬೇಕು. ರಾಮದೇವ್ ಅವರನ್ನು ಕರೆದಾಗ ಅವರೂ ಕೂಡ ಇರಲಿಲ್ಲ

ಶ್ರೀ ಎಂ. ಎಸ್, ಪಾಟೀಲ್.—ಮುಂಜಾನೆಯಿಂದಲೂ ಇಲ್ಲಿ ಕೂತಿದ್ದೇವೆ. ಮಧ್ಯದಲ್ಲಿ ಟೀ ಕುಡಿಯಲಿಕ್ಕೆ ಹೊರಗೆ ಹೋಗಿರುತ್ತೇವೆ. ಅಷ್ಟೂ ಅವಕಾಶ ಇಲ್ಲದಿದ್ದರೆ ಹೇಗೆ?

ಶ್ರೀ ಬಿ. ಭೈರಪ್ಪಾಜಿ.—ಅಧ್ಯಕ್ಷರೇ, ನನಗೆ ಎರಡು ನಿಮಿಷ ಆದರೂ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಆಯಿತು, ನೋಡೋಣ, ಈಗ ಪ್ರತಾಪಚಂದ್ರಶೆಟ್ಟಿಯವರು ಮಾತನಾಡಲಿ.

ಶ್ರೀ ಪ್ರತಾಪಚಂದ್ರಶೆಟ್ಟಿ (ಕುಂದಾಪುರ)

ಮಾನ್ಯ ಅಧ್ಯಕ್ಷರೇ, ಜೀವದ ಹಂಗು ತೊರೆದು ಸಾಹಸಮಯ ಜೀವನ ನಡೆಸತಕ್ಕಂಥ ಮೀನುಗಾರರಿಗೆ ಹೆಚ್ಚಿನ ಸಹಾಯ ಕೊಡಬೇಕೆಂದು ಮೀನುಗಾರಿಕೆ ಇಲಾಖೆಯ ವರದಿಯಲ್ಲಿ ತಿಳಿಸಿದ್ದಾರೆ. ನಿಜವಾಗಿಯೂ ಅವರಿಗೆ ಎಷ್ಟೊಂದು ಸೌಲಭ್ಯ ಕೊಟ್ಟರೂ ಸಾಲದು. ಆದರೆ ಕೊಟ್ಟಿರುವಂಥ ಸೌಲಭ್ಯ ಸಹ ಅತಿ ಕಡಿಮೆಯೆಂದು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಹೇಳಬೇಕಾಗಿದೆ. ಮೀನುಗಾರರಿಗೆ ಅದರಲ್ಲೂ ಬಡ ಮೀನುಗಾರರಿಗೆ ಯಾವ ರಕ್ಷಣೆ ಇದೆ ಎಂದು ಚಿಂತಿಸಬೇಕಾದ ಜವಾಬ್ದಾರಿ ಕರಾವಳಿ ಪ್ರದೇಶದಿಂದ ಬಂದಂತಹ ಶಾಸಕರು ಹಾಗೂ ಸಂಬಂಧಪಟ್ಟ ಮಂತ್ರಿಗಳ ಮೇಲೆ ಇದೆ. ನಮ್ಮ ಕರಾವಳಿಯಲ್ಲಿ ಪರ್ಸಿಯೀನ್, ಗಿಲ್‌ನೆಟ್, ದಂಪಣಿ ನಾಡದೋಣಿಗಳು ಹಾಗೂ ಹಲವಾರು ಮೀನುಗಾರಿಕೆಯ ದೋಣಿಗಳು ಇದ್ದು ಅವುಗಳೆಲ್ಲಾ ನಿರ್ದಿಷ್ಟವಾದ ಸಮಯದಲ್ಲಿ ಅಥವಾ ಒಂದು ನಿಗದಿಪಡಿಸಿದಂಥ ವಲಯದಲ್ಲಿ ಬಿಡದೇ ಇರುವುದರಿಂದ ಬಡ ಮೀನುಗಾರರಿಗೆ ಅದರಲ್ಲೂ ನಾಡದೋಣಿಗಳನ್ನು ನಡೆಸತಕ್ಕಂಥವರಿಗೆ ರಕ್ಷಣೆಯೇ ಇಲ್ಲದಂಥಾಗಿದೆ. ಈ ಬಗ್ಗೆ ತಕ್ಕ ಜವಾಬ್ದಾರಿ ಅರಿತು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದೂ ಅಲ್ಲದೆ, ಬಡ ಮೀನುಗಾರರಿಗೆ ಸರ್ಕಾರದಿಂದ ಕೆಲವೊಂದು ಕಾರ್ಯಕ್ರಮಗಳು ಇವೆ. ಆದರೆ ಈ ಕಾರ್ಯಕ್ರಮಗಳು ಬಡ ಮೀನುಗಾರರಿಗೆ ತಲುಪುತ್ತವೆಯೋ ಅಥವಾ ಇಲ್ಲವೋ ಎಂದು ಚಿಂತಿಸಬೇಕಾದಂಥ ಜವಾಬ್ದಾರಿ ಮಾನ್ಯ ಮಂತ್ರಿಗಳ ಮೇಲೆ ಹಾಗೂ ಸರ್ಕಾರದ ಮೇಲಿದೆ. ಮೀನುಗಾರರಿಗೆ ಮನೆ ನಿವೇಶನಗಳನ್ನು ಕೊಡುತ್ತೇವೆ ಮತ್ತು ಮನೆಗಳನ್ನು ಕಟ್ಟಿಸಿಕೊಡುತ್ತೇವೆ ಎಂದು ತಮ್ಮ ವರದಿಯಲ್ಲಿ ಸಹ ತಿಳಿಸಿದ್ದಾರೆ. ಸರ್ಕಾರದಿಂದ ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ? ಮತ್ತು ಮನೆ ನಿವೇಶನಗಳನ್ನು ಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ. ಮನೆ ನಿವೇಶನವಾಗಲೀ ಮನೆಗಳಾಗಲೀ ಅವರಿಗೆ ಬಹಳ ಅಗತ್ಯ ಇರುವುದರಿಂದ ಸಮುದ್ರ ತೀರದಲ್ಲಿ ಅಥವಾ ಹೊಳೆ ಬದಿಯಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಮಾತ್ರ ಪ್ರಯೋಜನ ಅವರಿಗೆ ಸಿಗುತ್ತದೆ. ಅವರಿಗೆ ಮಾತ್ರ ಮೀನುಗಾರರು. ಆದರೆ ಅವರು ಇರುವುದು ಹೊಳೆಯ ಬದಿಯಲ್ಲಿ ಸೇವಕರಾಗಿ. ಅವರ ಮನೆಗಳು ಬಿದ್ದುಹೋಗುವ ಪರಿಸ್ಥಿತಿಯಲ್ಲಿ ಇವೆ. ಕೆಲವೊಂದು ತಾಂತ್ರಿಕ ದೋಷಗಳಿಂದ ಅವರ ಮನೆಗಳು ಬಿದ್ದುಹೋಗುವ ಪರಿಸ್ಥಿತಿ ಇದ್ದರೂ ಕೂಡ ಅವುಗಳನ್ನು ರಿಪೇರಿ ಮಾಡುವ ಪರಿಸ್ಥಿತಿಯಲ್ಲಿ ಕೂಡ ಅವರು ಇಲ್ಲ. ಈ ಬಗ್ಗೆ ಸರ್ಕಾರ ಕೂಡಲೇ ಗಮನಹರಿಸಿ ಅವರಿಗೆ ಈಗಲಿಕ್ಕೆ ಮನೆಗಳನ್ನು ಕಟ್ಟಿಸಿಕೊಡಬೇಕು. ಈ ಜವಾಬ್ದಾರಿ ಸರ್ಕಾರದ ಮೇಲೆ ಇದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಬಡ ಮೀನುಗಾರರಿಗೆ ಕುಡಿಯುವ ನೀರು ಸಹ ಇಲ್ಲದೇ ಇರುವಂಥ ಪರಿಸ್ಥಿತಿ ಇದೆ. ತಾವು ಕೇಳಬಹುದು, ಅವರಿಗೆ ಸಮುದ್ರ, ಹೊಳೆ ಹತ್ತಿರದಲ್ಲಿ ಇದೆ, ಬೇಕಾದಷ್ಟು ನೀರು ಅವರಿಗೆ ಸಿಗುತ್ತದೆ ಎಂದು. ಆದರೆ ಸಮುದ್ರದ ನೀರಾಗಲೀ, ಹೊಳೆಯ ನೀರಾಗಲಿ ಕುಡಿಯುವುದಕ್ಕೆ ಆಗುವುದಿಲ್ಲ. ಎಷ್ಟೋ ಕಡೆಗಳಲ್ಲಿ ನಾನು ನೋಡಿದ್ದೇನೆ, ಎಲ್ಲಿ ಸ್ನಾನ ಮಾಡುತ್ತಾರೋ, ಎಲ್ಲಿ ಕೈಕಾಲು ತೊಳೆದುಕೊಳ್ಳುತ್ತಾರೋ, ಅದೇ ಕೆರೆಯಿಂದ ನೀರು ತೆಗೆದುಕೊಂಡು ಬಂದು ಕುಡಿಯುತಕ್ಕ ಪರಿಸ್ಥಿತಿ ಇದೆ. ಸಮುದ್ರ ತೀರದಲ್ಲಿ ಬಾವಿಗಳನ್ನು ತೋಡಿದರೆ ಆ ಬಾವಿಯಲ್ಲಿ ಉಪ್ಪು ನೀರೇ ಬರುತ್ತದೆ. ಅಲ್ಲಿ ಕೊಳವೆ ಬಾವಿಗಳನ್ನು ತೋಡಬಹುದಾದಂಥ ಪ್ರಸಂಗ ಇಲ್ಲ. ತೆರೆದ ಬಾವಿಗಳನ್ನು ತೋಡತಕ್ಕದ್ದು ಅವಶ್ಯಕತೆ ಇದೆ. ಈ ಸಮುದ್ರ ಪ್ರದೇಶದಲ್ಲಿ, ಹೊಳೆ ಬದಿಯಲ್ಲಿ ವಾಸ ಮಾಡತಕ್ಕಂಥ ರೈತರಿಗೆ ಮೀನುಗಾರರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಅಗತ್ಯವಾಗಿ ಕೂಡಲೇ ಒದಗಿಸಬೇಕಾಗಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಮೀನುಗಾರರಿಗೆ ಬರಗಾಲ ಬಂದಿಲ್ಲವೆಂದು ಹೇಳಲಾಗುತ್ತದೆ. ಒಂದು ರೀತಿಯಲ್ಲಿ ಸರ್ಕಾರ ನೀಡಿದಂಥ ಅಂಕಿಅಂಶಗಳನ್ನು ಒಪ್ಪಬೇಕಾಗುತ್ತದೆ. ಆದರೆ ಇನ್ನೊಂದು ರೀತಿಯಲ್ಲಿ ಸೂಕ್ಷ್ಮವಾಗಿ ಈ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಸುಮಾರು ಕರ್ನಾಟಕದಲ್ಲಿ ಮೂರು ನೂರು ಕಿಲೋ ಮೀಟರ್ ಉದ್ದದ ಕರಾವಳಿ ಪ್ರದೇಶ ಇದೆ. ಬೇಕಾದಷ್ಟು ಜನ ಮೀನುಗಾರರು ಇದ್ದಾರೆ. ಅಂಕಿಅಂಶಗಳ ಪ್ರಕಾರ ಮೀನು ಉತ್ಪಾದನೆ ಇಳಿಮುಖವಾಗಿದೆಯೆಂದು ಸರ್ಕಾರ ಒಪ್ಪುತ್ತದೆ. ಹಾಗೂ ಅಧಿಕಾರಿಗಳೂ ಸಹ ಒಪ್ಪುತ್ತಾರೆ. ಆದರೆ ನಿರ್ದಿಷ್ಟವಾದ ಅಂಕಿಅಂಶ ಕೊಡದೆ ಕೇವಲ ಎರಡು ಜಿಲ್ಲೆಯ ಕರಾವಳಿಯ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಮೀನಿನ ಉತ್ಪಾದನೆ ಕಡಿಮೆಯಾಗಲಿಲ್ಲವೆಂದು ಹೇಳುತ್ತಾರೆ ಹೊರತು ಸೂಕ್ಷ್ಮವಾಗಿ ಅವಲೋಕಿಸಿ ಯಾವ ಜಾಗದಲ್ಲಿ ಈ ಮೀನಿನ ಕ್ಷಾಮ ಉಂಟಾಗಿದೆಯೆಂದು ತಿಳಿದುಕೊಳ್ಳುವಂಥ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಮೀನುಗಾರಿಕೆ ಕುಟುಂಬದವರು ತಮ್ಮ ಜೀವದ ಹಂಗು ತೊರೆದು ಕ್ಷಣಕ್ಷಣಕ್ಕೂ ಮೃತ್ಯುವಿನೊಡನೆ

ಹೋರಾಟ ನಡೆಸುತ್ತಾರೆ. ಸರ್ಕಾರ ಅವರಿಗೆ ದಿನಂ ಸವಲತ್ತನ್ನು ಕೊಟ್ಟಿದೆ? ಪ್ರತಿವರ್ಷ ಅವರಿಗೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಮುಖ್ಯವಾಗಿ ವೃತ್ತಿ ಪ್ರಧಾನ ಶಿಕ್ಷಣದಲ್ಲಿ ಅವರಿಗೆ ನಿರ್ದಿಷ್ಟವಾದ ಸೀಟು ಗಳನ್ನು ಕಾದಿರಿಸಬೇಕು. ಅದೂ ಅಲ್ಲದೆ ಅವರಿಗೆ ಉದ್ಯೋಗ ಸಿಗಲು ಕೆಲವೊಂದು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಈಗಾಗಲೇ ನಮ್ಮ ಜಿಲ್ಲೆಗೆ ೧೯೮೨–೮೩ರಲ್ಲಿ ಮಂಜೂರಾಗಿರುವ ಮೀನುಗಾರಿಕೆ ರಸ್ತೆಗಳಿಗೆ ೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ. ಈ ಬಗ್ಗೆ ರಸ್ತೆಗಳ ಪಟ್ಟಿ ಈಗಾಗಲೇ ಸಿದ್ಧವಾಗಿದೆ. ಆದರೆ ಈ ಬಗ್ಗೆ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಇದಕ್ಕೆ ಕಾರಣ ವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಈ ರಸ್ತೆಗಳಿಗೆ ಟಾರು ಹಾಕಿಸುವ ಬಗ್ಗೆಯಾಗಲೀ, ರಿಪೇರಿ ಮಾಡುವ ಬಗ್ಗೆಯಾಗಲೀ, ಸಂಬಂಧಪಟ್ಟ ರಸ್ತೆಗಳನ್ನು ಮಾಡುವ ಬಗ್ಗೆ ಸರ್ಕಾರದವರು ಗಮನಹರಿಸು ತ್ತಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ.

ಇನ್ನೊಂದು ಕಾರ್ಯಕ್ರಮ ನೋಡಿದೆ, ಅದರಲ್ಲಿ ದೋಣಿಗಳಿಗೆ ತಂಗುದಾಣ ಕಟ್ಟಿಸುವಂತಹದ್ದು ಇದೆ. ದೋಣಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಂತಹ ದೋಣಿಗಳನ್ನು ನಿಲ್ಲಿಸುವಲ್ಲಿ ಮತ್ತು ರಿಪೇರಿ ಮಾಡಿಸುವ ಬಗ್ಗೆ ಉದ್ದಕ್ಕೂ ಹಾಗೂ ಅಗತ್ಯವಾಗಿ ಇರುವ ಹೊಳೆಯ ಬದಿಗಳಲ್ಲಿ ತಂಗುದಾಣಗಳನ್ನು ನಿರ್ಮಿಸುವುದು ಅತ್ಯಂತ ಅಗತ್ಯವಿದೆ. ೧೯೮೪–೮೫ ರಲ್ಲಿ ಒಳನಾಡಿನ ಮೀನುಗಾರಿಕೆಗೆ ೭೫ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಅದೇ ರೀತಿ ಸಮುದ್ರ ಮೀನುಗಾರಿಕೆಗೆ ೨೮ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. ಈ ವ್ಯತ್ಯಾಸ ಸುಮಾರು ೩ ಪಾಲು ಹೆಚ್ಚಿನದಾಗಿದೆ ಕಾರಣ ಕೊಟ್ಟಿದ್ದು ನನಗೆ ಸರಿಯಾಗಿ ಅರ್ಥವಾಗಲಿಲ್ಲ. ಈ ಬಗ್ಗೆ ಏನಾದರೂ ತಾರತಮ್ಯ ಮಾಡಿದರೆ ಸರಿಯಾಗಿ ಕಾಣಲಿಕ್ಕಿಲ್ಲ. ಮತ್ತು ಇದನ್ನು ಕರಾವಳಿಯ ಜನರು ಕೂಡ ಸಹಿಸುವುದಕ್ಕಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನು ನಮ್ಮ ಜಿಲ್ಲೆಯಲ್ಲಿ ಮೀನುಗಾರಿಕಾ ಕೇಂದ್ರವಾದ ಗಂಗೊಳ್ಳಿಯನ್ನು ಸರ್ವಋತು ಮೀನುಗಾರಿಕಾ ಬಂದರಾಗಿ ಬದಲಾವಣೆ ಮಾಡಬೇಕು ಮತ್ತು ಅಭಿವೃದ್ಧಿಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. / ಕೊನೆಯದಾಗಿ ಪೋಲೀಸ್ ಇಲಾಖೆಯ ಬಗೆ ಕೇವಲ ಎರಡು ಮಾತುಗಳನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ನಡೆದಂತ ಘಟನೆಯಲ್ಲಿ ನ್ಯಾಯ ದೊರಕದ ಕಾರಣ ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಎರಡು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಮಗೂ ಸಹ ಗೊತ್ತಿರಬಹುದು. ಕೇಳಿ ಕೇಳಿ ಬೇಸರವಾಗಿರಬಹುದು, ಅನಿವಾರ್ಯವಾಗಿ ಹೇಳಬೇಕಾದಂಥ ಪರಿಸ್ಥಿತಿಯಿದೆ. ಕುಂದಾಪುರದಲ್ಲಿ 'ಅಣ್ಣುಕಾರ್ವಿಯ' ನಿಧನ ಆಯಿತು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಜವಾಬ್ದಾರಿಯನ್ನು ನಿರ್ವಹಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರಿಂದ ತನಿಖೆ ಮಾಡಿಸಿದರು. ತನಿಖೆ ವರದಿ ಬಂದಿದೆ. ಇದರಲ್ಲಿ ಏನಾಗಿದೆ ಎಂದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿ ಬೇರೆ ಕಡೆ ಹಾಕಿ ಅವರಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ಸತ್ತವರ ಕುಟುಂಬಕ್ಕೆ ೭೫೦೦ ರೂಪಾಯಿ ಕಾಂಪೆನ್‌ಸೇಷನ್ ಕೊಟ್ಟು ಅಲ್ಲಿಗೆ ಮುಗಿಸುವ ಯೋಜನೆಯಲ್ಲಿದ್ದಾರೆಂದು ಕಾಣುತ್ತದೆ. ಪೋಲೀಸ್ ಅಧಿಕಾರಿಗಳಿಗೆ ರಕ್ಷಣೆ ಕೊಟ್ಟರೆ ಅವರ ನೈತಿಕ ಮಟ್ಟ ಯಾವ ರೀತಿಯಲ್ಲಿ ಹೋಗುತ್ತದೆ ಎನ್ನುವ ಪ್ರಶ್ನೆ ಬರುತ್ತದೆ. ಪೋಲೀಸರ ನಡವಳಿಕೆ ಒಂದೊಂದು ಕ್ಷೇತ್ರಕ್ಕೂ ಭಿನ್ನವಾಗಿರುತ್ತದೆ. ಕಾಂಗ್ರೆಸ್ (ಐ)ನವರು ಗೆದ್ದು ಬಂದ ಕ್ಷೇತ್ರದಲ್ಲಿ ಒಂದು ರೀತಿ ಇರುತ್ತದೆ. ಜನತಾ ಪಕ್ಷದವರು ಗೆದ್ದು ಬಂದ ಕ್ಷೇತ್ರದಲ್ಲಿ ಒಂದು ರೀತಿ ಇರುತ್ತದೆ. ನಮ್ಮ ಕ್ಷೇತ್ರದಲ್ಲಿ ಈಗಾಗಲೇ ಒಂದು ಪ್ರಕರಣ ನಡೆದಿದೆ. ಪುರಸಭಾ ಸದಸ್ಯರೊಬ್ಬರಿಗೆ ಈ ದರೋಡೆ ಕೇಸನ್ನು ಹಾಕಿ ರಾತ್ರಿ ೨ ಗಂಟೆಯಲ್ಲಿ ಪೋಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿದ್ದಾರೆ. ಒಂದು ವೇಳೆ ಪುರಸಭಾ ಸದಸ್ಯ ಡ್ರೈವರ್ ಶ್ರೀನಿವಾಸ ದರೋಡೆ ಮಾಡಿದ್ದ ಪಕ್ಷದಲ್ಲಿ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಈ ವಿಚಾರದಲ್ಲಿ ಪೋಲೀಸರನ್ನು ಅಮಾನತ್ತಿನಲ್ಲಿ ಇಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕು. ಸುಳ್ಳು ಕಂಪ್ಲೇಂಟ್ ಮೇಲೆ ಪುರಸಭಾ ಸದಸ್ಯರನ್ನು ರಾತ್ರಿ ಎರಡು ಗಂಟೆಯಲ್ಲಿ ಕರೆದು ಕೊಂಡು ಹೋಗಿದ್ದಾರೆ. ಪೋಲೀಸ್ ಕೇಸ್ ಹಾಕುವುದಾಗಲಿ, ಅಥವಾ ಸಂಬಂಧಪಟ್ಟವರಿಗೆ ಕಿರುಕುಳ ಕೊಡುವುದಾಗಲೀ ಇದೇ ರೀತಿ ಮುಂದುವರಿದರೆ ಜನರು ಪ್ರತಿಭಟನೆ ಮಾಡಬೇಕಾಗುತ್ತದೆ. ಪ್ರತಿಭಟನೆ ಮಾಡುವಂತ ಸಂದರ್ಭದಲ್ಲಿ ಜವಾಬ್ದಾರಿಯುತವಾದ ಈ ಅಭಿಪ್ರಾಯವನ್ನು ಮಂಡಿಸಲೇ ಬೇಕಾಗುತ ದೆ. ಇದರ ಅರ್ಥ ಪೋಲೀಸರ ವಿರುದ್ಧ ಅಲ್ಲ, ಪೋಲೀಸರ ಬಗ್ಗೆ ಅನುಕಂಪ ಇದ್ದವನಾಗಿದ್ದೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಲ್ಲಿಕಾರ್ಜುನ ವಿ ಬನ್ನಿ (ಗುಳೇದಗುಡ್ಡ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಅರ್ಥಸಚಿವರು, ಗೃಹಸಚಿವರು ಹಾಗೂ ತಮ್ಮ ಹಿಡಿತದಲ್ಲಿ ಇಟ್ಟುಕೊಂಡ ವಿಮಾನುಗಾರಿಕೆ, ಆರೋಗ್ಯ ಖಾತೆಗಳು ಸುಮಾರು ೧೭ ಡಿಪಾರ್ಟ್‌ಮೆಂಟ್‌ಗಳಿಗೆ ಇವತ್ತು ಈ ಸದನದಲ್ಲಿ ಒಪ್ಪಿಗೆಯನ್ನು ಕೇಳುತ್ತಿದ್ದಾರೆ. ಅದರಲ್ಲಿಯೂ ಈ ಕರಗಳ ಬಗ್ಗೆ ಒಂದು ಮಾತನು ಹೇಳಬೇಕಾಗಿದೆ. ಸೇಲ್ಸ್ ಟ್ಯಾಕ್ಸ್ ಹಿಂದೆ ಇತ್ತು. ಈಗಲೂ ಇದೆ. ಆದರೆ ಈ ಸೇಲ್ಸ್ ಟ್ಯಾಕ್ಸ್ ಹಿಂದೆ ಕೂಡ ಶೇರ್ ಟ್ಯಾಕ್ಸ್ ಆಗಿತ್ತು. ಇವತ್ತು ಶೇರ್ ಟ್ಯಾಕ್ಸ್ ಆಗುತ್ತಿದೆ. ಸೇಲ್ಸ್ ಟ್ಯಾಕ್ಸ್ ಶೇರ್ ಟ್ಯಾಕ್ಸ್ ಆಗುತ್ತಿದೆ ಅದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಮಗ್ರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಬಜೆಟ್‌ನಲ್ಲಿ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಹೇಳುವಾಗ ೫೦ ರೂಪಾಯಿ ನೋಂದಣಿ ಫೀ ಏನಿದೆ, ಇದು ದ್ವಿಮುಖದಲ್ಲಿ ಬೆಲೆಗಳು ಏರಿದ ಹಾಗೆ ೫೦ ರೂಪಾಯಿನಿಂದ ೨೦೦ ರೂಪಾಯಿಗೆ ಹೆಚ್ಚು ಮಾಡಿದ್ದಾರೆ, ೭೫ ರೂಪಾಯಿ ಮಾಡಿದರೆ ಜನತೆಗೆ ಬೆಂಬಲ ಸಿಕ್ಕುತ್ತದೆ. ಇನ್ನು ಬೆಲ್ಲ ಇದು ಬಡವರು ಉಪಯೋಗ ಮಾಡುವಂತಹ ವಸ್ತು ಬಡವರು ಸಕ್ಕರೆ ತಿನ್ನುವುದಕ್ಕೆ ಆಗುವುದಿಲ್ಲ. ಇದು ದ್ವಿಮುಖ ಬೆಲೆಯ ನೀತಿಯಾಗಿದೆ. ಬೆಲ್ಲಕ್ಕೆ ಶೇಕಡ ೪ ಪರ್ಸೆಂಟ್ ಮಾಡಿ ಅದಕ್ಕೆ ಸಿಂಗಲ್ ಪಾಯಿಂಟ್ ಮಾಡಿದ್ದಾರೆ. ಅಲ್ಲದೇ ಸರ್ಕಾರ ಹಿಂದೆ ಚುನಾವಣಾ ಪ್ರಣಾಳಿಕೆಯಲ್ಲಿ ಹಾಕಿದ್ದ ವೃತ್ತಿ ತೆರಿಗೆಯನ್ನು ರದ್ದುಪಡಿಸಿಲ್ಲ. ವೃತ್ತಿ ತೆರಿಗೆ ಎಷ್ಟು ಎಂದು ಗೊತ್ತಿಲ್ಲ. ಅವರಿಗೆ ಬರತಕ್ಕ ಆದಾಯ ಕಡಿಮೆ ಇರಬಹುದು. ಈ ಕರದ ಬಗ್ಗೆ ದಿನಾಂಕ ೬-೬-೮೦ ರಂದು ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಇದಕ್ಕಿಂತ ಅತ್ಯಂತ ಕ್ರೂರವಾದ ಕಾಯಿದೆ ಇನ್ನೊಂದು ಇಲ್ಲ ಎನ್ನತಕ್ಕಂಥ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಜನತೆಗೆ ಕೊಟ್ಟಂತೆ ಆಶ್ವಾಸನೆಯಂತೆ ಈ ಸರ್ಕಾರ ಕೂಡಲೇ ಇದನ್ನು ರದ್ದುಪಡಿಸಬೇಕೆಂದು ಆಗ್ರಹಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಹೋಂಗಾರ್ಡ್ಸ್ ಬಗ್ಗೆ ಹೇಳುವುದಾದರೆ ೩೦-೩೫ ವರ್ಷಗಳ ಕಾಲದಿಂದ ನಮ್ಮ ರಾಜ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರ ದಿನಭತ್ಯ ಕೇವಲ ೬ ರೂಪಾಯಿ ಕೊಡುತ್ತಿದ್ದಾರೆ ಇದನ್ನು ಹೆಚ್ಚು ಮಾಡಬೇಕು ಅವರು ಪೋಲೀಸರ ಕೆಳಗೆ ಕೆಲಸ ಮಾಡಬೇಕಾಗಿದೆ. ಸಮಾಜದಲ್ಲಿ ಇರತಕ್ಕ ಅನ್ಯಾಯಗಳನ್ನು ಹೋಗಲಾಡಿಸತಕ್ಕ ಗೃಹರಕ್ಷಣ ದಳದವರಿಗೆ ಯಾವುದೇ ರೀತಿಯ ವಿಶ್ರಾಂತಿ ವೇತನ ಇಲ್ಲ, ಮಾಸಿಕ ಗೌರವ ಧನ ಇಲ್ಲ. ಅವರು ಸತತವಾಗಿ ಹೋಂಗಾರ್ಡ್ಸ್ ಮಾಡತಕ್ಕಂಥ ಒಂದೇ ಗೌರವ ಕಾರಣಕ್ಕಾಗಿ ಸರ್ಕಾರ ಒಂದು ಗೌರವಾನ್ವಿತ ನಿವೃತ್ತಿ ವೇತನವನ್ನು ಕೊಡಬೇಕು. ಇನ್ನು ಕಾರಾಗೃಹದ ಬಗ್ಗೆ ಹೇಳುವುದಾದರೆ ಬಿಜಾಪುರ ಜಿಲ್ಲೆಯಲ್ಲಿ ಮಲ್ಲಪ್ಪ ಗೋವಿಂದಪ್ಪ ಅವಿಲಾರ್ ಎಂಬ ಒಬ್ಬ ವ್ಯಕ್ತಿ ಇದ್ದಾರೆ ಒಂದು ವರ್ಷದಿಂದ ಇವತ್ತಿನವರೆಗೂ ಕಾಯಿದೆ ಪ್ರಕಾರ ಅವರನ್ನು ಬಿಡುಗಡೆ ಮಾಡುವುದಕ್ಕೆ ಪ್ರಯತ್ನಪಟ್ಟರೂ ಕೂಡ ಅವರ ಬಿಡುಗಡೆಯಾಗಲಿಲ್ಲ. ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆರೋಗ್ಯದ ಬಗ್ಗೆ ಹೇಳುತ್ತೇನೆ. ಸುಮಾರು ೨೦೦೦ ವರ್ಷದವರೆಗೆ ಆರೋಗ್ಯ ಸುಧಾರಣೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ, ಇದು ತೀವ್ರಗತಿಯಲ್ಲಿ ಸಾಗುವುದಕ್ಕೆ ಗಮನಕೊಡಬೇಕು. ಏಕೆಂದರೆ ಆರೋಗ್ಯವನ್ನು ಕಳೆದುಕೊಂಡು ದುರ್ಬಲರಾಗಿದ್ದೇವೆ. ಈ ಆರೋಗ್ಯ ಪುನಃ ದೊರಕಬೇಕು.

ಹಳ್ಳಿಗಳಲ್ಲಿ ಆಸ್ಪತ್ರೆಗಳನ್ನು ಮಾಡಿದರೆ ಅಲ್ಲಿ ಸರಿಯಾದ ರೀತಿಯಲ್ಲಿ ಔಷಧಗಳನ್ನು ಒದಗಿಸುವ ವ್ಯವಸ್ಥೆ ಮಾಡಬೇಕು. ಆರೋಗ್ಯಭಾಗ್ಯ ಯಾವ ರೀತಿಯಲ್ಲಿ ಎಲ್ಲರಿಗೂ ಸಿಗಬೇಕೋ ಆ ರೀತಿಯಲ್ಲಿ ಸರ್ಕಾರದವರು ಸರಿಯಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಗುಳೇದಗುಡ್ಡದಲ್ಲಿರುವ ಆಸ್ಪತ್ರೆಗೆ ಎಕ್ಸ್-ರೇ ಮೆಷಿನ್ ಕೊಡತಕ್ಕಂಥ ಮಾತನ್ನು ಕೂಡಾ ನಾನು ಹೇಳಿದ್ದೇನೆ. ಮತ್ತೆ ಬಜೆಟ್ ಬಗ್ಗೆ ಮಾತನಾಡಿದಾಗಲೂ ಕೂಡಾ ಈ ಮಾತನ್ನು ಹೇಳಿದ್ದಾರೆ ಇದೇ ಮನೆಯಲ್ಲಿ ಮಾನ್ಯ ಸಚಿವರು ಕೂಡಾ ಅದೇ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆ ಆಶ್ವಾಸನೆಯನ್ನು ನೆರವೇರಿಸತಕ್ಕ ಪ್ರಯತ್ನವನ್ನು ಮಾನ್ಯ ಮಂತ್ರಿಗಳು ಮಾಡಲಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳದೇ ವಿಧಿ ಇಲ್ಲ.

ಅದೇ ರೀತಿ ಗುಳೇದ ಗುಡ್ಡದಲ್ಲಿ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಔಟ್ ಪೋಸ್ಟನ್ನು ಮಾಡಿಕೊಡುವ ಬಗ್ಗೆ ಕಳೆದ ವರ್ಷ ನಾನು ಪ್ರಸ್ತಾಪ ಮಾಡಲಾಗಿದ್ದು ಇದುವರೆಗೂ ಅದು ಕಾರ್ಯಗತವಾಗಿಲ್ಲ. ನಮ್ಮ ಭಾಗದಲ್ಲಿ ಅನೇಕ ರೀತಿಯ ಗಲಭೆಗಳು ತಲೆದೋರುತ್ತಿರುವುದರಿಂದ ಅಲ್ಲಿ ಒಂದು ಪೋಲೀಸ್ ಸ್ಟೇಷನ್ನನ್ನು ಕೂಡಲೇ ಮಾಡಿಕೊಡತಕ್ಕದ್ದು ಅಗತ್ಯವೆಂದು ನಾನು ಒತ್ತಾಯ ಮಾಡಿ ಕೇಳಿಕೊಳ್ಳುತ್ತೇನೆ.

ನಮ್ಮ ರಾಷ್ಟ್ರದಲ್ಲಿ ಮುಖ್ಯವಾಗಿ ನಮ್ಮ ರಾಜ್ಯ ಕೃಷಿಗೆ ಪ್ರಧಾನವಾದುದು. ಮಹತ್ತರ ಉದ್ಯೋಗವನ್ನು ಕೊಡತಕ್ಕಂಥ ಒಂದು ಪ್ರಮುಖವಾದ ಕ್ಷೇತ್ರವಾಗಿದೆ. ಈ ಪ್ರಮುಖ ವೃತ್ತಿಯನ್ನು ರಾಜ್ಯದಲ್ಲಿ ಸುಮಾರು ೮೦ ಪರ್ಸೆಂಟ್ ಜನ ಪ್ರಾರಂಭಿಸುತ್ತಾರೆ. ಆದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬಹುತೇಕ ಜನರು ನೇಯ್ಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಜನ ಒಂದು ಕೈಮಗ್ಗವನ್ನಿಟ್ಟುಕೊಂಡು ತಮ್ಮ ಉಪ ಜೀವನವನ್ನು ನಡೆಸುತ್ತಿದ್ದಾರೆ. ಅವರಿಗೆ ಸರ್ಕಾರದವರು ವಿವಿಧ ರೀತಿಯ ಸೌಲಭ್ಯಗಳನ್ನು ಬ್ಯಾಂಕಿನ ಮೂಲಕ ಕೊಡುತ್ತಾರೆಂದು ವ್ಯವಸ್ಥೆ ಮಾಡಿದರೂ ಸಹ ಯಾವುದೇ ರೀತಿಯ ಸಹಾಯ ಆ ಬ್ಯಾಂಕಿನ ಅಧಿಕಾರಿಗಳಿಂದ ದೊರೆಯುತ್ತಿಲ್ಲ. ಈ ದೃಷ್ಟಿಯಿಂದ ಈ ಬಡ ನೇಕಾರರ ಅಭಿವೃದ್ಧಿ ಬಹಳ ಕುಂಠಿತವಾಗಿದೆ. ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳು ಸಿಗಬೇಕಾಗಿದೆ. ಅಲ್ಲದೆ ಇದು ನಮ್ಮ ಭಾಗದಲ್ಲಿ ಅತ್ಯಂತ ಪ್ರಮುಖವಾದ ಕೈಗಾರಿಕೆಯಾಗಿದೆ ಸರ್ಕಾರದವರು ಈ ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಒಂದು ನೇಯ್ಗಾರಿಕೆಯನ್ನು, ಸಂಬಂಧಪಟ್ಟ ಹಾಗೆ ಒಂದು ಟ್ರೈನಿಂಗ್ ಶಿಕ್ಷಣವನ್ನು ತೆಗೆಯಬೇಕೆನ್ನುವ ವಿಚಾರವನ್ನು ಪುನ: ತಮಗೆ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಈ ಬಡ ನೇಕಾರರ ಸಲುವಾಗಿ ಇಂಥ ಒಂದು ತರಬೇತಿಯನ್ನು ಕೊಟ್ಟು ಅವರು ಹತ್ತಿ, ಉಣ್ಣೆ ಮುಂತಾದ ಬಟ್ಟೆಗಳನ್ನು ನೇಯುವ ಸಲುವಾಗಿ ಸಹಾಯಂಥನ ಏನು ಬೇಕಾಗಿದೆಯೋ ಅದನ್ನು ಕೂಡಲೇ ಕೊಡತಕ್ಕಂಥ ಏರ್ಪಾಡನ್ನು ಮಾಡಬೇಕು. ನಮ್ಮ ಭಾಗದಲ್ಲಿ ಈ ರೀತಿ ವ್ಯಾಪಕವಾಗಿರತಕ್ಕಂಥ ಕಸುಬಿಗೆ ಸೂಕ್ತ ರಕ್ಷಣೆ ಕೊಟ್ಟು ಧನ ಸಹಾಯ ಮಾಡಬೇಕಾಗುತ್ತದೆ. ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಕಸುಬಾಗಿದ್ದು ಇದನ್ನು ಅವಲಂಬಿಸಿರುವ ಜನ ಬಹಳ ಕ್ಷೀಣವಾದ ಪರಿಸ್ಥಿತಿಯಲ್ಲಿದ್ದಾರೆ. ಇದಲ್ಲದೆ ನಮ್ಮ ಭಾಗ ಬರಗಾಲ ಪೀಡಿತ ಕ್ಷೇತ್ರ. ಸರ್ಕಾರದವರು ನಮ್ಮ ಭಾಗವನ್ನು ಸರಿಯಾದ ರೀತಿಯಲ್ಲಿ ಕಣ್ಣು ತೆರೆದು ನೋಡಿ ಆ ಜಿಲ್ಲೆಗೆ ಸರಿಯಾದ ಸಹಾಯವನ್ನು ಮಾಡಿ ಇವರ ಆಗುಹೋಗುಗಳನ್ನು ನೋಡಿಕೊಂಡು ಸಹಾಯ ಮಾಡಬೇಕಾಗಿದೆ. ನಮ್ಮ ಜಿಲ್ಲೆಗೆ ಯಾವುವೇ ಒಂದು ಇರಿಗೇಷನ್ ಆಗಲೀ ಮತ್ತೊಂದು ಸೌಲಭ್ಯವಾಗಲೀ, ಹೆಚ್ಚಿನ ರೀತಿಯಲ್ಲಿ ಇಲ್ಲ. ಆದುದರಿಂದ ನಮ್ಮ ಜಿಲ್ಲೆಗೆ ಅತ್ಯಂತ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಡಿ. ಸೋಮಪ್ಪ (ಸಕಲೇಶಪುರ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಸುಮಾರು ೨೦ ಬೇಡಿಕೆಗಳ ವರದಿಯನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನಾನು ಕೆಲವು ಇಲಾಖೆಗಳ ಬಗ್ಗೆ ಮಾತ್ರ ಒಂದೆರಡು ಸಲಹೆಗಳನ್ನು ಕೊಡುವುದಕ್ಕಿಷ್ಟಪಡುತ್ತೇನೆ. ನಾನು ಎಲ್ಲಾ ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಜೈಲು, ಜನರಲ್ ಅಡ್ಮಿನಿಸ್ಟ್ರೇಷನ್ ಈ ಎರಡೂ ಇಲಾಖೆಗಳ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಕಳೆದ ೧೪ ತಿಂಗಳುಗಳಿಂದ ಈ ಸರ್ಕಾರದಿಂದ ಏನು ನಿರೀಕ್ಷಣೆ ಮಾಡಿದ್ದೆವು, ಅಂಥ ಯಾವುದೇ ಒಂದು ಕ್ರಾಂತಿಕಾರಕವಾದ ಬದಲಾವಣೆಗಳನ್ನು ಇವರು ಮಾಡಿಲ್ಲ. ಇವರು ಅಧಿಕಾರಕ್ಕೆ ಬಂದ ಮೇಲೆ ಅನೇಕ ಬದಲಾವಣೆಗಳಾಗಿವೆ. ಇದಕ್ಕೆ ನಾನು ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಜೈಲಿನ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಜೈಲು ಇತ್ತೀಚೆಗೆ ಇದರ ಬಗ್ಗೆ ಸ್ವಲ್ಪ ಮಾಹಿತಿ ಗೊತ್ತಾಗಿದೆ. ಬಹಳ ಕಷ್ಟಪಟ್ಟು ನಾನು ಕೆಲವು ವಿಚಾರಗಳನ್ನು ತಿಳಿದುಕೊಂಡು ಬಂದಿದ್ದೇನೆ ಮಾನ್ಯ ಮುಖ್ಯಮಂತ್ರಿಗಳು ವರ್ಷ ತುಂಬುವುದರೊಳಗಾಗಿ ಸುಮಾರು ೩೦ ಸಾವಿರ ಜನರನ್ನು ಜೈಲಿಗೆ ಕಳುಹಿಸಿಬಿಟ್ಟರು. ಅನೇಕ ಕಡೆಗಳಲ್ಲಿ ಬಯಲು ಪ್ರದೇಶವನ್ನೇ ಜೈಲನ್ನಾಗಿ ಮಾಡಿದರು. ಆದುದರಿಂದ ಸರ್ಕಾರದವರು ಮುಂದಿನ ವರ್ಷದಲ್ಲಿ ಸುಮಾರು ಒಂದು ಲಕ್ಷ ಜನ ಹಿಡಿಯತಕ್ಕಂಥ ಜೈಲನ್ನು ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಇಡೀ ಜೈಲು ಇಲಾಖೆಯ ಇತಿಹಾಸವನ್ನೇ ತೆಗೆದು ನೋಡಿದರೆ ಇಷ್ಟು ಬೃಹತ್ ಸಂಖ್ಯೆಯಲ್ಲಿ ೩೦ ಸಾವಿರ ಜನರನ್ನು ಇಡೀ ಭಾರತದಲ್ಲಿ ಬಂಧಿಸಿರತಕ್ಕಂಥಾದ್ದು ಪ್ರಪ್ರಥಮ ಕಾರ್ಯವನ್ನು ಮಾಡಿರುವ ಯಶಸ್ಸು ಮಾನ್ಯ ರಾಮಕೃಷ್ಣ ಹೆಗ್ಗಡೆಯವರಿಗೆ ಸಲ್ಲಿಸುತ್ತದೆ. ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಆದರ್ಶವಾಗಿದೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಮಾನ್ಯ ಸದಸ್ಯರು ಬೇಜಾರು ಕಳೆಯುವುದಕ್ಕೆ ಮಾತನಾಡುತ್ತಿದ್ದಾರೋ ಏನೋ ?

ಶ್ರೀ ಜೆ. ಡಿ. ಸೋಮಪ್ಪ.—ಕಳೆದ ಎರಡು ತಿಂಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸುಮಾರು ೩೦ ಸಾವಿರ ಜನರನ್ನು ಜೈಲಿಗೆ ಹಾಕಬೇಕಾದರೆ, ನಾಳೆ ಏನು ಆಗಬಹುದೋ ಎನ್ನುವ ಒಂದು ಶಂಕೆ ನಮ್ಮಲ್ಲಿ ಮೂಡುತ್ತದೆ, ಇವರು ಅಧಿಕಾರಕ್ಕೆ ಬಂದ ತಕ್ಷಣ ರೈತರ ಮೇಲಿದ್ದಂಥ ಕೇಸುಗಳನ್ನು ವಾಪಸ್ಸು ತೆಗೆದು ಕೊಳ್ಳುತ್ತೇವೆ. ಅವರನ್ನು ಬಿಡುಗಡೆ ಮಾಡುತ್ತೇವೆಂದು ಬಹಳ ದೊಡ್ಡದಾಗಿ ಹೇಳಿ ಕೊಂಡರು ಇವರು ಹೇಳಿದುದನ್ನು ಕೇಳಿ ನಾನು ತಿಳಿದೆ ಇನ್ನು ನಮ್ಮ ರಾಜ್ಯ ಮುಂದೆ ರಾಮರಾಜ್ಯ ವಾಗುತ್ತದೆ, ಇನ್ನು ಮುಂದೆ ರೈತರನ್ನು ಜೈಲಿಗೆ ಇವರು ಕಳುಹಿಸುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೆ. ಆದರೆ ನಾನು ಇವರ ಆಡಳಿತವನ್ನು ನೋಡಿದಾಗ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಜೈಲಿಗೆ ಹಾಕಬೇಕಾದ ಪ್ರಸಂಗ ಬಂದಿದೆ. ಇವರ ಆಡಳಿತ ದಿಕ್ಕು ಕೆಟ್ಟು ಹೋಗುತ್ತಿದೆ. ಈ ವಿಷಯದಲ್ಲಿ ಅವರಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕು. ಇವರ ಪಕ್ಷದ ಕಛೇರಿಯಲ್ಲಿ ಮೊನ್ನೆ ನಡೆದಂಥ ಘಟನೆಯನ್ನು ನೋಡಿದರೆ ಇವರ ಆಡಳಿತ ಯಾವರೀತಿ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದು ಇವರ ಪಕ್ಷದ ಸಂಬಂಧ ಪಟ್ಟಂಥ ವಿಚಾರ ನಾನು ಇದರಲ್ಲಿ ಇಂಟರ್‌ಫಿಯರ್ ಆಗುವುದಿಲ್ಲ. ಇವರು ಅಧಿಕಾರಕ್ಕೆ ಬಂದ ಒಂದು ವರ್ಷದಲ್ಲಿ ಪೋಲೀಸ್ ಇಲಾಖೆಯಲ್ಲಿ ಮನಸ್ಸಿಗೆ ಬಂದ ಹಾಗೆ ಕೈ ಹಾಕಿ ಅವರಿಗೆ ತೊಂದರೆ ಆಗುವ ಹಾಗೆ ಮಾಡುತ್ತಿದ್ದಾರೆ. ಅಧಿಕಾರಿಗಳ ಮೇಲೆ ಯಾವರೀತಿಯ ದೂರು ಕೂಡ ಸಾರ್ವಜನಿಕರಿಂದ ಬರದಿದ್ದರೂ, ಅವರ ಪಕ್ಷದ ಶಾಸಕರಿಂದ ಬಂದಂಥ ದೂರನ್ನೇ ಗಮನಕ್ಕೆ ತೆಗೆದುಕೊಂಡು ಪೋಲೀಸ್ ಇಲಾಖೆಯಲ್ಲಿ ಅನೇಕ ವಿಧದಲ್ಲಿ ಇವರು ಹಸ್ತಕ್ಷೇಪ ಮಾಡಿದ್ದಾರೆ. ಮೊನ್ನೆ ದಿವಸ ಇಬ್ಬರು ಎಸ್. ಐ.ಗಳನ್ನು ಒಬ್ಬರು ಮೈನರ್ ಕಮ್ಯೂನಿಟಿ ಇನ್ನೊಬ್ಬರು ಮೇಜರ್ ಕಮ್ಯೂನಿಟಿ ಸೇರಿದವರಿಗೆ ಟ್ರಾನ್ಸ್‌ಫರ್ ಮಾಡಿ, ಇನ್ನೂ ಸಹ ಇವರಿಗೆ ಸ್ಥಳವನ್ನು ತೋರಿಸಿಲ್ಲ. ಅಧಿಕಾರಿಗಳು ಅವರ ಹೆಂಡತಿ ಮಕ್ಕಳನ್ನು ಬಿಟ್ಟು ಊರಿನಿಂದ ಊರಿಗೆ ಹೋಗಬೇಕಾಗಿದೆ. ಯಾವ ಸರ್ಕಾರ ಬಂದರೂ ಸಹ ಪೋಲೀಸರನ್ನು ಮಾತ್ರ ಮನಸ್ಸಿಗೆ ಬಂದ ಹಾಗೆ ನಡೆಯುವುದನ್ನು ಬಿಡಬೇಕು. ಪೋಲೀಸ್ ಮಹಾನಿರ್ದೇಶಕರು ಬಹಳ ನಿಷ್ಠೆಯುಳ್ಳ ಅಧಿಕಾರಿಗಳು. ಇವರ ಬಗ್ಗೆ ನಮಗೆ ತುಂಬಾ ಗೌರವ ಇದೆ.

೬-೦೦ ಪಿ.ಎಂ.

ಆದರೆ ಯಾವುದೇ ಸರ್ಕಾರ ಬಂದರೂ ಇವರು ಮಹಾನಿರ್ದೇಶಕರಾಗಿದ್ದಾರೆ. ಜನತಾ ಸರ್ಕಾರ ದಲ್ಲಿ ಇವರು ಮಹಾನಿರ್ದೇಶಕರಾಗಬಾರದು. ಇವರು ಆಗುವುದಿಲ್ಲ ಎನ್ನುವ ನಂಬಿಕೆ ಇದೆ. ಆದರೆ ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ? ಫೋನ್ ಮೇಲೆ ಫೋನ್ ಮಾಡಿ ಅಧಿಕಾರಿಗಳನ್ನು ವರ್ಗ ಮಾಡುತ್ತಾರೆ. ತೊಂದರೆ ಕೊಡುತ್ತಾರೆ. ಇದರಿಂದ ಸಾರ್ವಜನಿಕರಿಗೂ ತೊಂದರೆಯಾಗುತ್ತದೆ. ಇವರು ಇಲಿ ಹಿಡಿಯುವುದಕ್ಕಾಗುವುದಿಲ್ಲ, ಎಂ.ಎಲ್.ಎ.ಗಳನ್ನು ಹಿಡಿಯುವುದಕ್ಕೆ ಹೋಗುತ್ತಾರೆ.

ಅಧ್ಯಕ್ಷರು.—ನೀವು ಯಾವ ಡಿಮ್ಯಾಂಡ್ ಮೇಲೆ ಮಾತನಾಡುತ್ತಿದ್ದೀರಿ?

ಜೆ. ಡಿ. ಸೋಮಪ್ಪ.—ಅವರು ಫೋನ್ ಮಾಡಿ ಹೇಳುತ್ತಾರೆ, ಇವರು ೪ ಸಾವಿರ ಸಂಬಳ ತೆಗೆದುಕೊಂಡು ಕುಳಿತಿದಿದ್ದಾರೆ. ಇವರಿಂದ ಯಾವ ಕೆಲಸವೂ ಆಗುವುದಿಲ್ಲ. ಸ್ವಾಮಿ ನಾನಾದರೂ ಹೇಳುತ್ತೇನೆ, ನಾನು ಕೇಳುವಂಥ ೨೫ ವರ್ಷದ ಹಿಂದಿನ ಯಾವುದಾದರೊಂದು ಫೈಲನ್ನು ಹುಡುಕಿ ಕೊಡಲಿ ಆಗ ನಾನು ಈ ಸ್ಥಳಕ್ಕೆ ರಾಜಿನಾಮೆ ಕೊಡುತ್ತೇನೆ. ಸ್ವಾಮಿ ಉಪಯೋಗವಿಲ್ಲದ ಇಂಥ ಅಡ್ಮಿನಿಸ್ಟ್ರೇಷನ್ ಏತಕ್ಕೆ?

ಅಧ್ಯಕ್ಷರು.—ದಯವಿಟ್ಟು ಡಿಮ್ಯಾಂಡ್ ಮೇಲೆ ಮಾತನಾಡಿ, ಆದಷ್ಟು ಬೇಗ ಮುಗಿಸಿ.

ಜೆ. ಡಿ. ಸೋಮಪ್ಪ.—ಇವತ್ತು ಇಂತಹ ಅಡ್ಮಿನಿಸ್ಟ್ರೇಷನ್ ಇದ್ದರೆ ಯಾರು ತಾನೆ ಕೆಲಸ ಮಾಡುವುದಕ್ಕಾಗುತ್ತದೆ? ಪೋಲೀಸಿನವರು ಹಾಗೆ ಮಾಡಿದರು, ಹೀಗೆ ಮಾಡಿದರು ಎಂದು ಹೇಳುತ್ತಾರೆ. ಈ ರೀತಿ ಆದರೆ ಕೆಲವು ಸಾರಿ ಪೋಲೀಸಿನವರು ಕೂಡ ಇಲ್ಲೀಗಲ್ ಆಗಿ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ವಿಧಾನಪರಿಷತ್ತಿನಲ್ಲಿ ಮಾತನಾಡುವಾಗ "ನಿಮಗೆ ಪೋಲೀಸಿನವರ ರುಚಿ ತೋರಿಸುತ್ತೇನೆ" ಎಂದು ಹೇಳಿದ್ದರು. ಅದರ ಪ್ರಕಾರ, ತೋರಿಸಿದರು. ಗುಲ್ಬರ್ಗಾದಲ್ಲಿ ಪತ್ರಿಕಾಕರ್ತರಾದ ಶ್ರೀ ಸಿದ್ಧರಾಮೇಶ್ ಅವರನ್ನೇ ಉದಾಹರಣೆಗೆ ತೆಗೆದುಕೊಳ್ಳಿ, ಅವರನ್ನು ಹೊಡೆದು ಸಾಯಿಸಿದರು ಜನತಾ ಪಾರ್ಟಿಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟರೆ

ಪತ್ರಿಕೆಯಲ್ಲಿ ಅದು ದಪ್ಪದಪ್ಪ ಅಕ್ಷರದಲ್ಲಿ ಬರುತ್ತದೆ. ಆದರೆ ವಿರೋಧಪಕ್ಷದ ನಾಯಕರು ಕೊಟ್ಟರೆ ಸಣ್ಣ ಅಕ್ಷರದಲ್ಲಿ ಯಾವುದೋ ಮೂಲೆಯಲ್ಲಿ ಹಾಕುತ್ತಾರೆ. ನಮಗೆ ಅಂದರೆ ಪ್ರೆಸ್ಸಿನಲ್ಲಿ ದಪ್ಪ ಅಕ್ಷರಗಳು ಹುಡುಕಿದರೂ ಸಿಗುವುದಿಲ್ಲವೆಂದು ಕಾಣುತ್ತದೆ. ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಶ್ರೀನಿವಾಸ್ ಎನ್ನುವ ಪತ್ರಿಕಾಕರ್ತರು ಸತ್ತು ಹೋದರು. ಅವರ ಶವವನ್ನು ಅವರ ಮನೆಯವರು ಕೇಳಿದಾಗ ಆಸ್ಪತ್ರೆಯಲ್ಲಿ ೨೦೦ ರೂಪಾಯಿ ಕೇಳಿದರು. ಈ ಕರ್ಮಕಾಂಡ, ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆಂದು ಹೇಳುತ್ತೀರಿ. ನಿರ್ಮೂಲನೆ ಮಾಡುವ ಬದಲು ಇದಕ್ಕೆ ನೀರು ಹಾಕಿ ವ್ಯಾಪಕವಾಗಿ ಬೆಳೆಸುತ್ತಿದ್ದೀರಿ. ಯಾವುದೇ ಅರ್ಜಿ ಕೊಟ್ಟರೂ, ದುಡ್ಡು ಇಲ್ಲದೆ, ಅದು ಮುಂದಕ್ಕೆ ಹೋಗುವುದಿಲ್ಲ. ಅಂದಮೇಲೆ ಭೃಷ್ಟಾಚಾರ ಎಲ್ಲಿ ನಿಂತಿದೆ?

ಅಧ್ಯಕ್ಷರು.—ದಯವಿಟ್ಟು ಮುಗಿಸಿ.

ಶ್ರೀ ಜೆ. ಡಿ. ಸೋಮಪ್ಪ.—ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ಆರೋಗ್ಯವೇ ಭಾಗ್ಯ ಎಂದು ಹೇಳುವಂತೆ ನಮಗೆಲ್ಲರಿಗೂ ಆ ಒಂದು ಭಾಗ್ಯ ಇದೆ. ನಮಗೆ ಅಂತಹ ಆರೋಗ್ಯ ಭಾಗ್ಯ ಇಲ್ಲದೇ ಹೋದರೆ ಈ ಸದನಕ್ಕೂ ಬರುವುದಕ್ಕಾಗುವುದಿಲ್ಲ. ಈ ವರ್ಷ ಈ ಇಲಾಖೆಯಲ್ಲಿ ಅನೇಕ ಲೋಪದೋಷಗಳನ್ನು ಎತ್ತಿ ಹೇಳಿದ್ದೇವೆ. ಇದಕ್ಕೆಲ್ಲಾ ನೀವೇ ಕಾರಣ. ಏಕೆಂದರೆ, ಒಬ್ಬ ಡಾಕ್ಟರ್ ಸರಿಯಾಗಿ ಕೆಲಸ ಮಾಡಲಿಲ್ಲವೆಂದು ಟ್ರಾನ್ಸ್‌ಫರ್ ಮಾಡುತ್ತೀರಿ. ಅವನ ಜಾಗಕ್ಕೆ ಬೇರೊಬ್ಬರನ್ನು ಟ್ರಾನ್ಸ್‌ಫರ್ ಮಾಡುತ್ತೀರಿ. ಆದರೆ ಅವನೂ ಕೂಡ ಮಾನವೀಯತೆ ದೃಷ್ಟಿಯಿಂದ ಸರಿಯಾಗಿ ಕೆಲಸ ಮಾಡುವುದಿಲ್ಲ. ಯಾವುದೇ ಸರ್ಕಾರ ಬಂದರೂ ಕೂಡ ತಕ್ಷಣ ಈ ಡಿಪಾರ್ಟ್‌ಮೆಂಟನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಗಮನಹರಿಸಬೇಕು. ಉಕ್ಕಿನ ಕಡಲೆ ರೀತಿಯಲ್ಲಿ ಮಂತ್ರಿಯವರು, ಒಂದು ಬಿಗಿ ಮನಸ್ಸಿನಿಂದ ಯಾರನ್ನೇ ಆಗಲೀ ಟ್ರಾನ್ಸ್‌ಫರ್ ಮಾಡಿದರೆ. ಅವರನ್ನು ಯಾವ ಜಾಗಕ್ಕೆ ಹಾಕುತ್ತಾರೋ, ಅವರು ಅಲ್ಲಿಗೆ ಹೋಗಲೇಬೇಕೆಂದು ಹೇಳಬೇಕು. ಹೀಗೆ ಮಾಡಿದರೆ ಇಲಾಖೆಯಲ್ಲಿ ದಕ್ಷತೆ ಹೆಚ್ಚಿ ತಮಗೂ ಕೂಡ ಒಳ್ಳೆಯ ಹೆಸರು ಬರುತ್ತದೆ. ಇಷ್ಟು ಹೇಳಿ, ಇನ್ನೂ ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡುವುದು ಇದ್ದರೂ ಕೂಡ ತಾವು ಪದೇ ಪದೇ ಗಂಟೆ ಹೊಡೆಯುತ್ತಿರುವುದರಿಂದ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್ ಪಿ. ಗಂಗಾಧರಪ್ಪ (ತಿಪಟೂರು) —ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಹಲವಾರು ಬೇಡಿಕೆಯ ಮೇಲೆ ಮಾತನಾಡುತ್ತಾ, ಮೊದಲು ಆರೋಗ್ಯ ಖಾತೆಯ ಮೇಲೆ ಮಾತನಾಡುತ್ತೇನೆ. ನಮ್ಮ ಆರೋಗ್ಯ ಮಂತ್ರಿಗಳು ಒಳ್ಳೆಯ ಆರೋಗ್ಯದಿಂದ ಬಹಳ ಚೆನ್ನಾಗಿ ಕಾಣುತ್ತಾರೆ. ಆದರೆ ಅವರ ಇಲಾಖೆ ಬಹಳ ಅನಾರೋಗ್ಯವಾಗಿದೆ. ಒಂದಕ್ಕೊಂದು ಸಂಬಂಧವಿಲ್ಲದ ರೀತಿಯಲ್ಲಿ ಆಡಳಿತ ನಡೆಯುತ್ತಿರುವುದರಿಂದ, ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿದೆ. ಈ ಇಲಾಖೆಯ ಸಿಬ್ಬಂದಿವರ್ಗಕ್ಕೆ ವಾಹನಗಳನ್ನು ಕೊಟ್ಟಿದ್ದಾರೆ. ಆದರೆ ವಾಹನ ಇದ್ದರೆ, ಚಾಲಕ ಇಲ್ಲ, ಚಾಲಕ ಇದ್ದರೆ ವಾಹನ ಇಲ್ಲ ಎನ್ನುವಂತಾಗಿದೆ. ೩-೪ ವರ್ಷಗಳಿಂದ ಜೀಪುಗಳಿಗೆ ಟೈರು ಇಲ್ಲದೆ ಹಾಗೆಯೇ ಬಿದ್ದಿವೆ. ಒಂದು ವೇಳೆ ಜೀಪು ಕೊಟ್ಟಿದ್ದರೂ, ಡ್ರೈವರುಗಳನ್ನು ಕೊಟ್ಟಿಲ್ಲ.

ಇನ್ನು ವಿಲೇಜ್ ಹೆಲ್ತ್ ವರ್ಕರ್‌ಗಳು ಹಳ್ಳಿಗಳಿಗೆ ಹೋಗಿ ನೋಡಿಕೊಂಡು ವರದಿ ಕೊಡುತ್ತಾರೆ, ಈ ವರದಿಗಳನ್ನು ಡಾಕ್ಟರುಗಳು ಪರಿಶೀಲನೆ ಮಾಡಬೇಕು. ಆದರೆ ಈ ವೈದ್ಯರು ಹಳ್ಳಿಗಳ ಕಡೆ ಹೋಗುವುದಿಲ್ಲ. ಈ ವಿಚಾರದಲ್ಲಿ ನಾವೇನಾದರೂ ಡಾಕ್ಟರನ್ನು ಕೇಳಿದರೆ, ನಮ್ಮಲ್ಲಿ ವಾಹನ ಇಲ್ಲವೆಂದು ಹೇಳುತ್ತಾರೆ. ಗ್ರಾಮದ ಜನತೆ ನನಗೆ ಕೇಳುತ್ತಾರೆ. ಯಾರೋ ಬರ್ತಾರೆ, ಔಷಧಿ ಕೊಡುತ್ತಾರೆ ಎಂದು ತಿಳಿಸ್ತಾರೆ. ಈ ಹೆಲ್ತ್ ವರ್ಕರ್ಸ್‌ಗಳು ಇಂಜೆಕ್ಷನ್ ಕೊಡುವಂತಿಲ್ಲ.

ನಾನು ಈ ವಿಚಾರದಲ್ಲಿ ಡಿ.ಹೆಚ್.ಓ.ಗೆ ಒಂದು ಪತ್ರ ಬರೆದೆ. ಆಗ ಟೈರು ಬಂತು. ಈ ರೀತಿ ಇವುಗಳನ್ನು ಸರಿ ಮಾಡಿಕೊಳ್ಳುವ ಬಗ್ಗೆ ಚಿಂತನೆ ಮಾಡುವುದಕ್ಕೆ ಅವರು ಹೋಗುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಇಷ್ಟು ವರ್ಷ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಜೀಪುಗಳನ್ನು ಕೊಟ್ಟು ಡ್ರೈವರ್ ಇಲ್ಲವೆಂದರೆ ಹೇಗೆ? ಟೈರ್ ಇಲ್ಲವೆಂದರೆ ಹೇಗೆ? "ತಲೆ ಕೆಟ್ಟು, ಶರೀರ ಚೆನ್ನಾಗಿಲ್ಲದಿದ್ದರೆ ಅದು ಬುದ್ಧಿ ಕೆಟ್ಟ ಶರೀರ ಎಂದು ಹೇಳುತ್ತಾರೆ. ಅದೇ ರೀತಿ ತಲೆ ಚೆನ್ನಾಗಿದ್ದು, ಶರೀರ ಕೆಟ್ಟಿದ್ದರೆ, ಅದು ಅನಾರೋಗ್ಯ ಶರೀರ" ಎಂದು ಹೇಳುವಂತೆ, ಈಗಿನ

ಸರ್ಕಾರ ತಲೆಕೆಟ್ಟ ಸರ್ಕಾರವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ, ನಾಗರೀಕ ಸೌಲಭ್ಯ ಹೆಚ್ಚು ಹೆಚ್ಚು ಸಿಕ್ಕುತ್ತಿಲ್ಲ. ಈ ಸೌಲಭ್ಯಗಳು ಪಟ್ಟಣ ಪ್ರದೇಶಗಳಿಗೆ ಹೆಚ್ಚು ಸೀಮಿತವಾಗಿವೆ. ಇದರಿಂದ ಗ್ರಾಮೀಣ ಜನತೆಗೆ ಬಹಳ ಕಷ್ಟವಾಗಿದೆ. ಇವತ್ತು ರೈತ ಒಳ್ಳೆಯ ಗಾಳಿ ಕುಡಿಯುತ್ತಾನೆ, ಒಳ್ಳೆಯ ಆಹಾರ ತೆಗೆದುಕೊಳ್ಳುತ್ತಾನೆ, ಒಳ್ಳೆಯ ವಾತಾವರಣದಲ್ಲಿ ಜೀವನ ಮಾಡುತ್ತಿರುವುದರಿಂದ ಅವನ ಆರೋಗ್ಯ ಚನ್ನಾಗಿದೆ. ಸರ್ಕಾರವನ್ನು ನಂಬಿಕೊಂಡರೆ ಅಥವಾ ಡಾಕ್ಟರನ್ನು ನಂಬಿಕೊಂಡು ಕುಳಿತುಕೊಂಡರೆ ಅವನ ಆರೋಗ್ಯ ಕೆಟ್ಟು ಹೋಗತಕ್ಕಂಥ ಪ್ರಸಂಗ ಬರುತ್ತದೆ.

ಇನ್ನು ರಾಜ್ಯದ ಅನೇಕ ಆಸ್ಪತ್ರೆಗಳಲ್ಲಿ ಐಸೋಲೇಷನ್ ವಾರ್ಡ್‌ಗಳ ಸೌಲಭ್ಯವಿಲ್ಲ. ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಲ್ಲಂತೂ ಇವು ಇಲ್ಲವೇ ಇಲ್ಲ. ಇದರಿಂದ ಸಾಂಕ್ರಾಮಿಕ ರೋಗಗಳು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಸಾಧ್ಯತೆ ಇದೆ. ಆದುದರಿಂದ ಇಂತಹ ವಾರ್ಡುಗಳನ್ನು ಎಲ್ಲಾ ಆರೋಗ್ಯ ಕೇಂದ್ರಗಳಲ್ಲೂ ಒದಗಿಸಿಕೊಡುವ ವಿಚಾರದಲ್ಲಿ ಯೋಚನೆ ಮಾಡಬೇಕು. ಗ್ರಾಮಾಂತರ ಜನತೆ ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗದ ರೀತಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ನಾನು ಈ ವಿಚಾರದಲ್ಲಿ ೨-೩ ಸಾಲ ಇದೇ ಸದನದಲ್ಲಿ ಹೇಳಿದ್ದೇನೆ. ಮತ್ತು ಮಾನ್ಯ ಆರೋಗ್ಯ ಮಂತ್ರಿಗಳನ್ನೂ ಕಂಡಿದ್ದೇವೆ. ಆದರೆ ಇದರಿಂದ ಏನೂ ಪ್ರಯೋಜನ ಆಗಿಲ್ಲ.

ಇನ್ನು ಈಗಾಗಲೇ ನೀವು ಗ್ರಾಮಾಂತರ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿದ್ದೀರಿ. ಈ ಬೋರ್‌ವೆಲ್‌ಗಳ ಕೈ ಪಂಪುಗಳು ಮುರಿದು ಒಂದು, ಒಂದೂವರೆ ವರ್ಷಗಳಾಗಿವೆ. ಆದರೂ ಇವುಗಳ ರಿಪೇರಿ ಕಾರ್ಯ ಇದುವರೆಗೂ ಆಗಿಲ್ಲ. ಕೇಳಿದರೆ ಸಂಬಂಧಪಟ್ಟವರಿಗೆ ತಿಳಿಸಲಾಗಿದೆ ಎಂದು ಹೇಳುತ್ತೀರಿ ಈ ಬಗ್ಗೆ ಸರ್ಕಾರ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೂ ಪ್ರಯೋಜನವಾಗುತ್ತಿಲ್ಲ. ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ, "ಅಪ್ಪ ಮಾಡಿದ ಸಾಲ, ಅದು.........ಸಮಾನ" ಎನ್ನುವಂತೆ ಆಗದೆ ಜನತೆ ಈ ಬೋರ್‌ವೆಲ್‌ಗಳ ಅನುಕೂಲವನ್ನು ಪಡೆಯುವಂತೆ ಆಗಬೇಕು.

ಇವೆಲ್ಲವನ್ನೂ ರಿಪೇರಿ ಮಾಡುವುದಕ್ಕೆ ಸ್ಪೆಷಲ್ ಡಿಪಾರ್ಟ್‌ಮೆಂಟ್ ಇದೆ, ಆದಕ್ಕೆ ಆದನ್ನು ವಹಿಸಿಕೊಡಿ ಎಂದರೆ ಅದನ್ನೂ ಮಾಡುತ್ತಿಲ್ಲ. ಅದನ್ನು ಬಹಳ ನಿಧಾನವಾಗಿ ಮಾಡಿರತಕ್ಕುದು ಮನಸ್ಸಿಗೆ ಬಹಳ ನೋವನ್ನು ಉಂಟು ಮಾಡತಕ್ಕದಾಗಿದೆ. ಎಷ್ಟೋ ಸಲ ಈ ರೀತಿಯಾಗಿ ೬ ಸಾವಿರ, ೮ ಸಾವಿರ ಗ್ಯಾಲನ್ ನೀರು ಬರತಕ್ಕ ಬೋರ್‌ವೆಲ್‌ಗಳು ಹಾಳಾಗಿ ಹೋಗುತ್ತಿದೆ.

ಇನ್ನು ಮುಖ್ಯ ಮಂತ್ರಿಗಳ ಇಲಾಖೆ ಬಗ್ಗೆ ಹೇಳಬೇಕಾದರೆ. ಪೋಲೀಸ್ ಇಲಾಖೆ, ಸಜ್ಜನ ಪೋಷಿತ. ದುರ್ಜನ ಪೀಡಿತ ಆಗುವ ರೀತಿಯಲ್ಲಿ ಇದನ್ನು ಮಾಡಬೇಕು. ಒಳ್ಳೆಯ ಜನರಿಗೆ ಪ್ರೋತ್ಸಾಹ ಮಾಡಿ, ದುರ್ಜನರಿಗೆ ಶಿಕ್ಷೆ ಮಾಡಬೇಕಾದಂಥ ಪರಿಸ್ಥಿತಿ ಆಗಬೇಕು. ಆದರೆ ಇದು ಸಜ್ಜನ ಪೀಡಿತ, ದುರ್ಜನ ಪೋಷಿತ ಎನ್ನತಕ್ಕ ರೀತಿಯಲ್ಲಿ ನಡೆದಿದೆ ಎಂಬುದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬೇಕಾಗಿದೆ ಸಜ್ಜನರಿಗೆ ಪೋಷಣೆ ಆಗಬೇಕು. ಅವರಿಗೆ ಯಾವ ರೀತಿಯಲ್ಲೂ ತೊಂದರೆ ಆಗಬಾರದು. ದುರ್ಜನರನ್ನು ಹತ್ತಿಕ್ಕಿ. ಈ ದೇಶದಲ್ಲಿರತಕ್ಕ ಜನ ಸುಭಿಕ್ಷತೆಯಿಂದ ಬಾಳುವುದಕ್ಕೆ ಅವಕಾಶ ಮಾಡುತ್ತೀರಿ ಎಂದು ಹೇಳಿ, ಇನ್ನು ಮಾತನಾಡಬೇಕೆಂದು ಮನಸಿತ್ತು, ಆದರೆ ಕಾಲಾವಕಾಶ ಇಲ್ಲದಿರುವುದರಿಂದ ಇಲ್ಲಿಗೆ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ರಾಮಚಂದ್ರರಾವ್ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ. ನಮ್ಮ ಮುಂದಿರತಕ್ಕಂಥ ೨೦ ಡಿಪಾರ್ಟ್‌ಮೆಂಟ್‌ಗಳಲ್ಲಿ ಎರಡು ಮೂರು ಡಿಮ್ಯಾಂಡ್‌ಗಳ ಮೇಲೆ ಮಾತನಾಡುತ್ತೇನೆ. ಕೈಗಾರಿಕಾ ವರದಿಯಲ್ಲಿ ಫಸ್ಟ್ ಸೆಂಟೆನ್ಸ್ ಏನು ಹೇಳುತ್ತದೆ ಎಂದರೆ "Government of Karnataka is committed to the policy of rapid industrialisation"

ನಮ್ಮ ರಾಜ್ಯದಲ್ಲಿ ತೀವ್ರವಾಗಿ ಕೈಗಾರಿಕೀಕರಣ ಮಾಡಬೇಕೆಂದು ಎಂದು ಇದರಲ್ಲಿ ತೋರಿಸಿದ್ದೀರಿ. ಕೈಗಾರಿಕೀರಣ ರ್‍ಯಾಪಿಡಾಗಿ ಆಗುತ್ತಾ ಇದೆಯೋ ಎಂದು ನೋಡಿದರೆ, ರ್‍ಯಾಪಿಡ್ ಬಿಟ್ಟು ಎಷ್ಟು ಹಿಂದೆ ನಾವು ಇದ್ದೇವೆ ಎಂದು ಹೇಳತಕ್ಕದ್ದು ಇಲ್ಲಿ Industrial Policy Energy Utilisation ಆದರಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. Share of the manufacturing sector in the total project has increased very little In 1970-71 it is 11·4% and 1981-82 it ss 12.9%.

ಇದು ಬಹಳ ಕಠಿಣವೆಂ. ಇದನ್ನು ನೋಡಿದರೆ ಯಾವ ಸೀರಿಯಸ್‌ನೆಸ್ ಇದೆ ಎಂದು ಗೊತ್ತಾಗುತ್ತದೆ. ಕೈಗಾರಿಕೆಗಳ ಬಗ್ಗೆ ಕೇಳಿದರೆ, ಆಂಧ್ರದಲ್ಲಿ ಎಷ್ಟಿದೆ, ಮಹಾರಾಷ್ಟ್ರದಲ್ಲಿ ಎಷ್ಟಿದೆ, ತಮಿಳುನಾಡಿನಲ್ಲಿ ಎಷ್ಟಿದೆ, ಕೇರಳದಲ್ಲಿ ಎಷ್ಟಿದೆ ಎಂದು ಸರಕಾರ ಹೇಳುತ್ತದೆ: ಏಕೆಂದರೆ ಸರಿಯಾದ ರಿಯಾಲಿಸ್ಟಿಕ್ ಅಸೆಸ್‌ಮೆಂಟ್ ಇಲ್ಲದಿದ್ದರೆ, ರ್‍ಯಾಪಿಡ್ ಇಂಡಸ್ಟ್ರಿಯಲೈಸೇಷನ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಈ ದೃಷ್ಟಿಯಲ್ಲಿ ದೇಶದ ಕೈಗಾರಿಕೆಗಳ ಸಂಖ್ಯೆಯನ್ನು ನೋಡಿದರೆ.

ಕರ್ನಾಟಕ	೫.೯	೫೧೮೪
ತಮಿಳುನಾಡು	೧೦.೫	೯೨೫೭
ಆಂಧ್ರ ಪ್ರದೇಶ	೧೧.೩	೯೯೪೮
ಮಹಾರಾಷ್ಟ್ರ	೧೬.೨	೧೪.೭೬೨

ಅಂದರೆ ಕೈಗಾರಿಕೆಗಳಲ್ಲಿ ನಾಲ್ಕನೇ ಸ್ಥಾನದಲ್ಲಿದ್ದ ನಮ್ಮ ಕರ್ನಾಟಕ ರಾಜ್ಯ, ಇಂದು ಹತ್ತನೇ ಸ್ಥಾನಕ್ಕೆ ಬಂದಿದೆ ಅಂದರೆ ಬಹಳ ಹಿಂದೆ ಬಿದ್ದಿದ್ದೇವೆ. ಒಂದು ರಿಯಾಲಿಸ್ಟಿಕ್ ಅಸೆಸ್‌ಮೆಂಟ್ ಇದ್ದರೆ ಇದಕ್ಕೆ ಕಾರಣ ಏನು ಎಂಬುದನ್ನು ಹುಡುಕಬಹುದು. ಬ್ಯಾಂಕಿಂಗ್ ಮಟ್ಟಿಗೆ ಕರ್ನಾಟಕ ಮುಂದುವರಿದಂಥ ರಾಜ್ಯ. ಆದರೆ ಸೈಂಟಿಫಿಕ್ ಕ್ಷೇತ್ರದಲ್ಲಿ ಬಹಳ ಹಿಂದೆ ಇದ್ದೇವೆ. ಕರ್ನಾಟಕ ಕೈಗಾರಿಕೆಯಲ್ಲಿ ಏತಕ್ಕೆ ಹಿಂದೆ ಬೀಳುತ್ತಿದೆ ಎಂದರೆ, ನಾವು ಇದನ್ನು ಪರಿಶೀಲನೆ ಮಾಡಬೇಕು. ಪರಿಶೀಲನೆ ಮಾಡಿದಾಗ ಈ ವರದಿಯಲ್ಲಿ ಇನ್ನೊಂದು ಏನು ಕಾಣುತ್ತದೆ ಎಂದರೆ :

I would like to refer to the Audit Report on the Karnataka State Financial Corporation.

"The particulars of amounts which fell due for repayment and maximum amounts in default at any time during the 3 years upto 1982-83 are given below :

Year	Percentage of default	
	Prinicipal	Interest
1980-81	58.60	57.58
1981-82	61.19	67.56
1982-83	54.55	50.58

ಇದರ ಅರ್ಥ ಏನು ಎಂದರೆ, ನಾವು ನಡೆಸುವಂಥ ಕೈಗಾರಿಕೆಗಳು ಏತಕ್ಕೆ ನಷ್ಟವಾಗುತ್ತವೆ ಎಂಬುದನ್ನು ನಾವು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಬೇಕು, ಇಲ್ಲಿ ನನಗೆ ಬಹಳ ಸಂತೋಷ ಎಂದರೆ, ಒಂದು ಕಡೆ ರಿಪೋರ್ಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಇದೆ. ಇಂಡಸ್ಟ್ರೀಸ್ ರಿಪೋರ್ಟ್ ಪೇಜ್ ೨೦ ರಲ್ಲಿ.

"(b) Problemes of the Banks and other financial institutions of Government of India in providing working capital assistants well in time,

(d) Delay in execution of the projects due to non-availability of working capital loan and power cut and consequent escalation"

ಇದನ್ನು ಇನ್ನಷ್ಟು ಸಂಕ್ಷೇಪವಾಗಿ, ಬಹಳ ನಿರ್ಧಿಷ್ಟವಾಗಿ ಗೌರ್ನಮೆಂಟ್ ಇಂಡಸ್ಟ್ರಿಯಲೈಸೇಷನ್ ಬಗ್ಗೆ ಕ್ಲಿಯರ್ ಆಗಿ ಹೇಳಿದ್ದಾರೆ. I am referring to Indnstrial Policy of West Beagal. West Bengal Govarnment have stated that like this.

'Unfortunately, the current state of the public enterprises in West Bengal is most disappointing. The accumulated

losses till now approximate to Rs. 150 crores. Of the more than 40 public undertakings and Corporations in the State. several exist odly in name and have nominal functions. In most instances, their over heads are disproportionate to their contribution to out put and employment generation. The avowed purpose with which these undertakings were set up was to attract finance from Banks and similar institutions."

ಯಾವ ಸ್ಟೇಟ್‌ಗೆ ರಿಸೋರ್ಸಸ್ ತರಲಿಕ್ಕೆ ಫೈನಾನ್ಸ್ ಕೊಟ್ಟರೆ. ಆ ಸ್ಟೇಟ್ ಇಂಡಸ್ಟ್ರಿಯಮ ತ್ರೈಸೇಷನ್‌ಗೆ ಕೈಹಾಕಿದೆಯೋ, ಅಲ್ಲಿ ಈಗ ಸ್ಟೇಟ್ ಫೈನಾನ್ಸ್‌ನಿಂದಲೂ, ಟ್ಯಾಕ್ಸ್‌ನಿಂದಲೂ, ಅದಕ್ಕೆ ಫೆನಾನ್ಸ್ ಕೊಟ್ಟು ಒಂದು ಸ್ಥಿತಿಗೆ ಬಂದಿದೆ ಎಂದು ಹೇಳಿದರೆ.

"But they continue to depend over whelmingly on the State's finances. Even a cursory examination reveals that these undertakings are mostly government department, masquerading as companies and corporations. Given their present structure, they would be unable to fulfil any role, whether doctrinaire or pragmatic. The Left Government must critically review the performance of these undertakings, rationalise and re-structure them where necessary and put them under professional management. Their accountabitity must be established not by bureaucratic controls bnt by setting clear financial goals and physical targets and continuons monitoring of performance againat such standards"

ಸಭಾಧ್ಯಕ್ಷರು.—ಕಂಪಾರಿಟೀವ್ ಸ್ಟೇಟ್‌ಮೆಂಟ್‌ನ್ನು ನೀವು ಫ್ಯಾಗ್ ಎಂಡ್ ಆಫ್ ದಿ ಹವರ್‌ನ ಓದಿ ಹೇಳಿದರೆ ಹೇಗೆ ?

ಶ್ರೀ ಪಿ. ರಾಮಚಂದ್ರರಾವ್.—ಇವತ್ತು ಬ್ಯಾಂಕುಗಳು ನಮ್ಮ ಕೈಯಲ್ಲಿ ಇಲ್ಲ. ರಾಷ್ಟ್ರೀಕರಣ ಆಗಬೇಕೆಂದು ನಾವೆಲ್ಲಾ ಹೋರಾಟ ಮಾಡಿವೆವು. ಬ್ಯಾಂಕುಗಳು ರಾಷ್ಟ್ರೀಕರಣ ಆದನಂತರ ಅವು ರಾಜ್ಯಗಳ ಹಿಡಿತದಲ್ಲಿ ಇಲ್ಲ. ಹಿಂದೆ ಆದರೆ, ಕರ್ನಾಟಕದಲ್ಲಿ ಹಲವಾರು ಬ್ಯಾಂಕುಗಳು ಇಲ್ಲಿ ವ್ಯವಹಾರ ಮಾಡುತ್ತಿದ್ದವು. ಅವುಗಳ ಕಂಟ್ರೋಲ್ ಎಲ್ಲಾ ಇಲ್ಲೇ ಇತ್ತು. ಬ್ಯಾಂಕುಗಳು ರಾಷ್ಟ್ರೀಕರಣ ಆಗಬೇಕೆಂದು ಹೋರಾಟ ಮಾಡಿದವರಲ್ಲಿ ನಾನೂ ಒಬ್ಬ, ಬ್ಯಾಂಕುಗಳು ರಾಷ್ಟ್ರೀಕರಣ ಆದ ಮೇಲೆ ರಾಜ್ಯ ಸರಕಾರಗಳು, ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವಂಥ, ಫೈನಾನ್ಸ್ ತೆಗೆದುಕೊಳ್ಳುವಂಥ ಒಂದು ವ್ಯವಸ್ಥೆ ಇಲ್ಲ. ಅದಕ್ಕೋಸ್ಕರ ಈ ಸರಕಾರ, ಇತರ ಸರಕಾರಗಳ ಜೊತೆಗಾಡಿ. ಕೇಂದ್ರ ಸರಕಾರದ ಒಂದು ಧೋರಣೆ ಏನಿದೆ ಅದು ಬದಲಾವಣೆಯಾಗುವ ದೃಷ್ಟಿಯಲ್ಲಿ ಹೋರಾಟ ಮಾಡಿದರೆ ಬಹಳ ಒಳ್ಳೆಯದು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ. ಎಂದರೆ, ನಮ್ಮ ಅಪೋಜಿಷನ್ ಲೀಡರ್‌ರವರು ಮಾತನಾಡುವಾಗ, ಕೇಂದ್ರ ಸರಕಾರದ ಜೊತೆ ಕನ್‌ಫ್ರಾಂಟೇಷನ್ ಮಾಡುತ್ತಿದ್ದಾರೆ ಎಂದು ಹೇಳಿದರು. ಆದರೆ ಕೇಂದ್ರ ಸರಕಾರದ ಜೊತೆ ಕನ್‌ಫ್ರಾಂಟೇಷನ್ ಮಾಡುವುದಿಲ್ಲ, ನಮ್ಮ ರಾಜ್ಯ ಸರಕಾರದ ಹಣ, ಅದರ ಆರ್ಥಿಕಾಭಿವೃದ್ಧಿಗೆ ಖರ್ಚಾಗಬೇಕು, ಮಾರ್ಗಕ್ಕೆ ಖರ್ಚಾಗಬೇಕು, ಶಾಲೆಗೆ ಖರ್ಚಾಗಬೇಕು ಎಂದು ಹೇಳುತ್ತಾರೆ. ಇವತ್ತಿನ ಕಾಲದಲ್ಲಿ ಕೇವಲ ಟ್ಯಾಕ್ಸ್‌ನಿಂದಲೇ ಇವೆಲ್ಲಾ ಕೆಲಸ ಮಾಡಬೇಕೆಂದು ಹೇಳಿದರೆ ಆಗುವುದಿಲ್ಲ. ಅದಕ್ಕೆ ರಿಸೋರ್ಸಸ್ ಮೊಬಿಲೈಸ್ ಮಾಡಬೇಕು. ನಮ್ಮಲ್ಲಿ ಸ್ವಲ್ಪ ಕಂಪೆನಿಗಳಲ್ಲಿ ಲಾಭ ಉಂಟು ಎಂದು ಹೇಳಿ, ಉಳಿದ 2 ಕಂಪೆನಿಗಳಲ್ಲಿ ಲಾಭ ಸಂಪೂರ್ಣವಾಗಿ ಒಡೆದು ಹೋಗುತ್ತವೆಂದು ಹೇಳುತ್ತಾರೆ. ನಮ್ಮ ಪಿ. ಒ. ಎಸ್ ಎಲ್. ನಲ್ಲಿ

ಏತಕ್ಕೆ ನಷ್ಟ ಆಯಿತು ಎಂದು ಕೇಳಿದಾಗ, ಗವರ್ನಮೆಂಟ್ ಆಫ್ ಇಂಡಿಯಾ ಪಾಲಿಸಿ ಆಧಾರದ ಮೇಲೆ ಆಯಿತು ಎಂದು ತಿಳಿಯಿತು. ಇಲ್ಲಿ ಯಾವ ವೆರೈಟಿ ಸ್ಟೀಲ್ ಪ್ರೊಡಕ್ಷನ್ ಮಾಡುತ್ತಾರೋ. ಅದೇ ವೆರೈಟಿ ಸ್ಟೀಲನ್ನು ಹೊರದೇಶದಿಂದ ತಂದರೆ, ಇಲ್ಲಿರತಕ್ಕ ಸ್ಟಾಕ್ ಮಾರಾಟವಾಗದೆ ಹಾಗೇ ಉಳಿಯಿತು. ಆದುದರಿಂದ ಈ ದೃಷ್ಟಿಯಲ್ಲಿ ಕೇಂದ್ರ ಸರಕಾರದ ಇನ್ನಷ್ಟು ಸರಿಯಾದ ರೀತಿಯಲ್ಲಿ ಮುಂದುವರಿಯಬೇಕೆಂದು ಹೇಳುತ್ತೇವೆ.

ಸ್ಮಾಲ್ ಸ್ಕೇಲ್ ಇಂಡಿಸ್ಟ್ರೀಸ್‌ನ ವಿಚಾರದಲ್ಲಿ ಸರ್ಕಾರದ ಪಾಲಿಸಿ ಒಳ್ಳೆಯದು ಇದೆ. ವಿವಿಧ ದರದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂಥ ಹಣಕ್ಕೆ ಬಡ್ಡಿ ಇದೆ. ಹಣಕಾಸಿನ ಸಂಸ್ಥೆಯಿಂದ ಹಣ ಪಡೆದು ವಿವಿಧ ರೀತಿಯ ಸಣ್ಣ ಕೈಗಾರಿಕೆಗಳನ್ನು ಇವತ್ತು ರಾಜ್ಯದಲ್ಲಿ ಸ್ಥಾಪನೆ ಮಾಡಿದ್ದಾರೆ, ಮಾಡುತ್ತಿದ್ದಾರೆ. ಅದಕ್ಕೆ ಪರ್ಯಾಯವಾಗಿ ಅಷ್ಟೇ ಕಾರ್ಖಾನೆಗಳು ಮುಚ್ಚಿಹೋಗುವಂಥ ಪರಿಸ್ಥಿತಿ ಕೂಡ ಇದೆ, ಇವತ್ತು ಜನತಾ ಸರ್ಕಾರ ಹೊಸ ಕೈಗಾರಿಕಾ ನೀತಿಯ ಮೇರೆಗೆ ಒಂದು ಸಾವಿರ ಷೆಡ್ಡುಗಳನ್ನು ಕಟ್ಟುವ ಯೋಜನೆ ಹಾಕಿಕೊಂಡಿದೆ. ಕೈಗಾರಿಕಾ ವಾತಾವರಣ ಬರಬೇಕಾದರೆ ಕೈಗಾರಿಕೆಗಳ ಮೇಲೆ ಹಾಕಿದ್ದಂಥ ಹಣ ಸಕ್ಸೆಸ್ ಆಗಬೇಕು. ಸಣ್ಣ ಕೈಗಾರಿಕೆಗಳು ಚೆನ್ನಾಗಿ ನಡೆಯಬೇಕಾದರೆ ಸರ್ಕಾರದವರು ಗ್ಯಾರಂಟಿ ನಿಲ್ಲಬೇಕು. ನಮ್ಮ ಹಣಕಾಸಿನ ಸಂಸ್ಥೆಗಳು ಕೂಡ ಸಣ್ಣ ಕೈಗಾರಿಕೆಗಳ ವಿಚಾರದಲ್ಲಿ ಮಲತಾಯಿ ಧೋರಣೆಯನ್ನು ತೋರಿಸುತ್ತಿವೆ. ಇದರ ಕಡೆ ಸರ್ಕಾರದವರು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಸರ್ಕಾರದ ಕಾರ್ಯಾಲಯಗಳಲ್ಲಿ ಖಾಲಿ ಇರತಕ್ಕ ಅಧಿಕಾರಿಗಳ ಹುದ್ದೆಯ ಲೆಕ್ಕವನ್ನು ಕೊಟ್ಟಿದ್ದಾರೆ. ಆದರೆ, ಎಷ್ಟು ಟೈಪಿಸ್ಟ್‌ಗಳು ಬೇಕಾಗಿದೆ, ಎಷ್ಟು ಸ್ಟೆನೋಗ್ರಾಫರುಗಳು ಬೇಕಾಗಿದೆ, ಎಷ್ಟು ಹುದ್ದೆಗಳು ಖಾಲಿ ಇವೆ ಎಂಬುದನ್ನು ಇಲ್ಲಿ ಕೊಟ್ಟಿಲ್ಲ. ಅಧಿಕಾರಿಗಳ ಹುದ್ದೆಗಳನ್ನು ತುಂಬಬಾರದೆಂದು ನಾನು ಹೇಳುವುದಿಲ್ಲ. ನಿರುದ್ಯೋಗ ತಾಂಡವವಾಡುತ್ತಿರುವ ಈ ಸಮಯದಲ್ಲಿ ಟೈಪಿಸ್ಟ್ ಮತ್ತು ಸ್ಟೆನೋ ಗ್ರಾಫರುಗಳ ಹುದ್ದೆಗಳನ್ನು ತುಂಬಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ, On page 9, they have mentioned about Rural Landless labourers appointment scheme and a further stated that district and sectorwise plans have been finalised. ಈ ಒಂದು ಯೋಜನೆಯಲ್ಲಿ ಆಯಾಯಾ ಭಾಗದ ಶಾಸಕರುಗಳನು ಸೇರಿಸಿದರೆ, ಅದು ಫಲಪ್ರದವಾಗುತ್ತದೆಂದು ಹೇಳುತ್ತೇನೆ. Further you have stated that a Comprehelensive project to set up 1,500 agricultural estates for the rehabilitation of rural bonded labourers was in the drafting Stage and it would be circulated in due course. ಅದು ಸ್ಪಷ್ಟ ಇದೆ, ಅದು ನಿಜವಾಗಿ ಮಾಡಿದರೆ, ಜನರಲ್ಲಿ ಜಾಗ್ರತೆ ಬೆಳಸಿ, ಜನರ ಸಹಕಾರ ತೆಗೆದುಕೊಂಡು ಈ ಯೋಜನೆಯನ್ನು ಯಶಸ್ವಿಗೊಳಿಸುವುದಕ್ಕೆ ನಮ್ಮ ಸರ್ಕಾರ ಮುಂದೆ ಬರಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ (ಷಹಬಾದ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಯವರು ಆರೋಗ್ಯ ಮಂತ್ರಿಯವರು ಹಾಗೂ ಕೈಗಾರಿಕಾ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳ ಪೈಕಿ ಒಂದೆರಡು ಬೇಡಿಕೆಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಆರೋಗ್ಯ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಅನೇಕ ಕಡೆಗಳಲ್ಲಿ ಜಿಲ್ಲಾ ಆಸ್ಪತ್ರೆಗಳು ಇವೆ. ಸರ್ಜನ್‌ಗಳು ಇದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೯೦ ಪರ್ಸೆಂಟ್ ಜನ ಹಳ್ಳಿಗಳಲ್ಲಿ ಇದ್ದಾರೆ, ಸುಮಾರು ಪ್ರಾಥಮಿಕ ಕೇಂದ್ರಗಳನ್ನು ಸರ್ಕಾರದವರು ತೆರೆದಿದ್ದಾರೆ. ನಾವು ವಾಸ್ತವಿಕವಾಗಿ ನೋಡಿದಾಗ, ದಾಖಲೆಯಲ್ಲಿ ಮಾತ್ರ ಇದೆ. So and so lady doctor has been posted to so and so village. it is only on record. ವಾಸ್ತವಿಕವಾಗಿ ಒಳಗಡೆ ನೋಡಿದಾಗ ಅಲ್ಲಿ ವೈದ್ಯರುಗಳು ಇಲ್ಲ. ಒಂದೊಂದು ಪಿ.ಎಚ್.ಇ. ಗಳಲ್ಲಿ ಸುಮಾರು ೧೫–೨೦ ಹಳ್ಳಿಗಳನ್ನು ನೋಡಬೇಕಾದ ಪರಿಸ್ಥಿತಿ ಇದೆ. ಪರಿಸ್ಥಿತಿ ಹೀಗಿರುವಾಗ ಜನರ ಆರೋಗ್ಯ ಯಾವ ರೀತಿ ಸುಧಾರಿಸುತ್ತೀರಿ ? ಮಹಿಳಾ ವೈದ್ಯರು ಯಾವ ಕಡೆಯೂ ಇಲ್ಲ. ಮಹಿಳಾ ವೈದ್ಯರು ಪೋಸ್ಟಿಂಗ್ಸ್ ತೆಗೆದುಕೊಂಡ ಕೂಡಲೇ ಪೋಸ್ಟ್‌ಗ್ರಾಜುಯೇಟ್ಸ್ ಕೋರ್ಸ್‌ಗಳಿಗೆ ಬರುತ್ತಾರೆ. ನನ್ನ ಕ್ಷೇತ್ರದಲ್ಲಿರುವ ಕೋಳೂರಿನಲ್ಲಿ ಮುಂಚಾನೆ ಪೋಸ್ಟಿಂಗ್ಸ್ ತೆಗೆದು

ಕೊಂಡು ಬಂದು, ಮಧ್ಯಾಹ್ನ ಪೋಸ್ಟ್‌ಗ್ರಾಜುಯೇಟ್‌ಗೆ ಹೋಗಿರತಕ್ಕದ್ದು ಇದೆ. ಶಹಾಬಾದ್‌ನಲ್ಲಿ ಸುಮಾರು ೫೦,೦೦೦ ಪಾಪ್ಯುಲೇಷನ್ ಇದೆ. ೭೦೦೦ ವಾರ್ಷಿಕ ಗ್ರಾಂಟ್ ಇದೆ. I want to know how are you going to protect the health of 50,000 people? ಒಂದು ರೀತಿಯಲ್ಲಿ ಜನರ ಸೌಕರ್ಯ ಆರೋಗ್ಯ ಕಾಪಾಡುವಂಥ ಆಸೆ ಇದ್ದರೂ, ಒಂದು ರೀತಿಯಲ್ಲಿ ಬದಲಾವಣೆಯಾಗಿದ್ದರೂ, ಆ ಗತಿಯಲ್ಲಿ ಇವತ್ತು ಹೋಗುತ್ತಿಲ್ಲ. ಪೇಪರ್ ಮೂವ್‌ಮೆಂಟ್ ಬಗ್ಗೆ ಅನೇಕ ಸಲ ಹೇಳಿದ್ದೇನೆ. What has happened? What changes have taken place after the arrival of new Government? ಪ್ರೊಸೀಜರ್ ಏನಾಗಿದೆ. ೧೯೮೩–೮೪ರಲ್ಲಿ ಪಾಸಾದಂಥ ಬಡ್ಜೆಟ್ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. How people have to feel that this Government has done something? ಮೂರು ಸಲ ಟೆಂಡರ್ ಹಾಕಬೇಕು, ಟೆಕ್ನಿಕಲ್ ಸ್ಯಾಂಕ್ಷನ್ ಆಗಬೇಕು. ಅಷ್ಟು ಹೊತ್ತಿಗೆ ೧೯೮೪–೮೫ರ ಬಡ್ಜೆಟ್ ಬಂತು. Directly without any hurdles the work has to be done. That is my point here. ಇದನ್ನು ಬದಲಾವಣೆ ಮಾಡಬೇಕು. ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಡೈರೆಕ್ಟರ್‌ನಲ್ಲಿ the decisions have to be taken at the divisional level. ಅಂಥ ಪರಿಸ್ಥಿತಿ ಸರ್ಕಾರ ಮಾಡಬೇಕು. ಹಳೇ ಸರ್ಕಾರ ಮಾಡಿದಂಥ ಹೊಲಸುಗಳನ್ನು ತೆಗೆದುಹಾಕಿ, ವಿಭಾಗ ಮಟ್ಟದಲ್ಲಿ ತೀರ್ಮಾನ ಮಾಡುವಂಥ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಆರಿಸಿ ಬಂದಂಥ ಕ್ಷೇತ್ರದಲ್ಲಿ ನಿಮ್ಮ ಕ್ಷೇತ್ರದ ಆಶೋತ್ತರಗಳೇನು? ಅವುಗಳನ್ನು ಸಾಧ್ಯವಾದಷ್ಟು ಬೇಗ ಈಡೇರಿಸುತ್ತೇವೆಂದು ಭರವಸೆ ಕೊಟ್ಟರು. ಸಂತೋಷ. ಕೆಲವು ವಿಷಯಗಳಲ್ಲಿ ಮಂತ್ರಿಗಳಿಗೆ ನಮ್ಮ ಕ್ಷೇತ್ರದಲ್ಲಾಗುವ ವಿಷಯಗಳ ಬಗ್ಗೆ ತಿಳಿಸಿದಾಗ ಪರಿಗಣಿಸಲಾಗುವುದೆಂದು ಉತ್ತರ ಬರೆದರು. ರೊಕ್ಕ ಬೇಕೆಂದರೆ ಉತ್ತರವೇ ಬರುವುದಿಲ್ಲ. ಶಾಸಕರು ಆಯಾ ಕ್ಷೇತ್ರದ ಜನರಿಗೆ ಜವಾಬ್ದಾರರಾಗಿರುವುದರಿಂದ ನಮ್ಮ ಸಮಸ್ಯೆಗಳನ್ನು ದಯಮಾಡಿ ಪರಿಶೀಲಿಸಬೇಕು. You have to consider our problems at appropriate times. ಯಾರೇ ಶಾಸಕರು ಬಂದರೂ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಮಾನ್ಯ ಸದಸ್ಯರಾದ ಕೃಷ್ಣನ್‌ರವರು ರಾಜಾಜಿನಗರದಲ್ಲಿ ಹಾಗೂ ಇನ್ನಿತರ ಕಡೆಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ. ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ. ಇದರ ಕಡೆ ಸರ್ಕಾರದವರು ಹೆಚ್ಚು ಗಮನ ಹರಿಸಬೇಕೆಂದು ಹೇಳುತ್ತೇನೆ. ಹಳ್ಳಿಗಳನ್ನು ಪೋಲೀಸರಿಂದ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಪೋಲೀಸ್‌ರ ಸಂಖ್ಯೆ ಕಡಿಮೆ ಮಾಡಿ, ಆದಷ್ಟು ಪೋಲೀಸರು ಇಲ್ಲದೇ ಇರತಕ್ಕ ರಾಜ್ಯ ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. You must discuss with all the police officers. Reduction in the police force is the indication of normalacy in the State. ಆದರೆ, ಇವತ್ತಿನ ಪರಿಸ್ಥಿತಿ ಹಾಗೆ ಇಲ್ಲ. ಸರ್ಕಾರಕ್ಕೆ ಅನೇಕ ಅಡಚಣೆಗಳು ಇವೆ.

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ೪೦–೫೦ ಹಳ್ಳಿಗಳ ಮಧ್ಯೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಇರುತ್ತಾನೆ. ನಾನಾದರೂ ಹೇಳುವುದೇನೆಂದರೆ, ೧೦–೧೫ ಹಳ್ಳಿಗಳಿಗೆ ಒಂದೊಂದು ಪೋಲೀಸ್ ಸ್ಟೇಷನ್ ಅಥವಾ ಔಟ್ ಪೋಲೀಸ್ ಸ್ಟೇಷನ್ ಮಾಡಬೇಕು. ಈ ಒಂದು ಉದ್ದೇಶಕ್ಕಾಗಿ ನಮ್ಮ ಷಹಬಾದ್‌ನಲ್ಲಿ ೧೩ ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಆದರೆ ಇದಕ್ಕೆ ಹಣವನ್ನು ಮಂಜೂರಾತಿ ಮಾಡಿಲ್ಲ. ೧೯೮೩–೮೪ ರಲ್ಲೂ ಕೊಟ್ಟಿಲ್ಲ. ಈಗ ಎಂದರೆ ೧೯೮೪–೮೫ನೇ ಸಾಲಿನಲ್ಲೂ ಕೂಡ ಇದಕ್ಕೆ ಹಣವನ್ನು ಕೊಡುವ ಸೂಚನೆ ಕಂಡು ಬರುತ್ತಿಲ್ಲ. ನಾನು ಮೀಸಲು ಕ್ಷೇತ್ರದಿಂದ ಚುನಾಯಿತನಾಗಿ ಬರುವುದರಿಂದ ಅನೇಕ ಹರಿಜನ ಅಧಿಕಾರಿಗಳು ಬಂದು ನನ್ನನ್ನು ಕಾಣುತ್ತಾರೆ. ಇದು ತಪ್ಪಲ್ಲ. ನಮ್ಮ ಸಮಾಜ ಜಾತಿಯ ಆಧಾರದ ಮೇಲೆ ನಿರ್ಮಿತವಾಗಿರತಕ್ಕದ್ದು. ನಾನು ಏನನ್ನೂ ಮುಚ್ಚಿಟ್ಟು ಮಾತನಾಡುತ್ತಿಲ್ಲ. ಇರುವುದನ್ನು ಇದ್ದ ಹಾಗೇ ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಯಾವ ಯಾವ ಜಾತಿಯವರು ಯಾವ ಯಾವ ಇಲಾಖೆಯಲ್ಲಿ ಮೇಲ್ಮಟ್ಟದಲ್ಲಿ ಅಧಿಕಾರಿಗಳಾಗಿದ್ದಾರೆ ಅವರ ಜಾತಿಯವರೇ ಅಲ್ಲಿ ಹೆಚ್ಚು ಜನ ಕೆಲಸಕ್ಕೆ ಸೇರಿರುತ್ತಾರೆ. ಈ ಮಾತನ್ನು ನಾನು ಹೇಳುವಾಗ ಯಾವುದನ್ನೂ ಮುಚ್ಚಿಡದೆ ನೇರವಾಗಿ ಹೇಳುತ್ತಿದ್ದೇನೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನಲ್ಲಿ ಕೆಲವರನ್ನು ಎಕ್ಸಿಕ್ಯೂಟೀವ್ ಪೋಸ್ಟ್‌ನಿಂದ ತೆಗೆದು ಹಾಕಿದರು. ನಾನಾದರೂ ಹೇಳುತ್ತೇನೆ, ಜಾತಿವಾದವನ್ನು ಬಿಟ್ಟು ಯಾವುದೇ ಇಲಾಖೆಗಾಗಲೀ, ಯಾವುದೇ

ತಾಲೂಕು ಅಥವಾ ಜಿಲ್ಲೆಗಾಗಲಿ ಎಲ್ಲ ಜಾತಿಯವರನ್ನೂ ಪೋಸ್ಟ್ ಮಾಡಬೇಕು ಯಾವುದೇ ಸರ್ಕಾರೀ ಇಲಾಖೆಯಲ್ಲಾಗಲಿ ಅಧಿಕಾರಿಗಳು ತಪ್ಪನ್ನು ಮಾಡಿಯೇ ಮಾಡುತ್ತಾರೆ. ಹಣ ದುರು ಪಯೋಗ ಅಥವಾ ಬೇರೆ ರೀತಿಯ ತಪ್ಪುಗಳನ್ನು ಮಾಡಿದರೆ ಅಂಥವರನ್ನು ಸಸ್ಪೆಂಡ್ ಮಾಡಿ ವರ್ಷಗಟ್ಟಲೆ ಹಾಗೆಯೇ ಕೂಡಿಸಬಾರದು. ಇದರಿಂದ ಅವರಿಗೆ ಹ್ಯುಮಿಲಿಯೇಷನ್ ಆಗುತ್ತದೆ. ಇದು ತಪ್ಪಬೇಕು. ಹಿಂದಿನ ಸರ್ಕಾರಕ್ಕಿಂತ ಈಗಿನ ಸರ್ಕಾರ ಭಿನ್ನವಾಗಿದೆ, ಅದಕ್ಕಿಂತಲೂ ಉತ್ತಮ ವಾಗಿದೆ ಎಂದು ಜನರು ಭಾವಿಸಿದ್ದಾರೆ. ಅದನ್ನು ಇವತ್ತು ತಾವು ಸಾಬೀತು ಮಾಡಿ ತೋರಿಸ ಬೇಕು. ಸಸ್ಪೆಂಡ್ ಮಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ೬ ತಿಂಗಳೊಳಗೆ ಆ ವ್ಯಕ್ತಿಯನ್ನು ಎನ್‌ಕ್ವೈರಿ ಮಾಡಿ ಏನಾದರೂ ಒಂದು ಇತ್ಯರ್ಥ ಮಾಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನನ್ನ ಹತ್ತಿರ ಒಬ್ಬರು ಆ ಪೋಲೀಸ್ ಅಧಿಕಾರಿ ಬಂದರು ಅವರ ಹೆಸರನ್ನು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ಸರ್ಕಲ್ ಇನ್‌ಸ್ಪೆಕ್ಟರ್ ಆಗಿ ಎಕ್ಸಿಕ್ಯುಟೀವ್ ಪೋಸ್ಟ್‌ನಲ್ಲಿದ್ದರು. ಅವರನ್ನು ಅಲ್ಲಿಂದ ತೆಗೆದು ಸಿ.ಓ.ಡಿ.ಯ ಕಂಟ್ರೋಲ್ ರೂಮಿಗೆ ಹಾಕಿದ್ದಾರೆ. ಈಗ ಅವರನ್ನು ಒಂದು ಷೋ ಕೇಸ್‌ನಲ್ಲಿ ಬೊಂಬೆಗಳನ್ನು ಇಡುವಂತೆ ಇಟ್ಟಿದ್ದೀರಿ. ಈ ರೀತಿ ಏತಕ್ಕೆ ಮಾಡಿದಿರಿ ? ಹರಿಜನ ಗಿರಿಜನ ಅಧಿಕಾರಿಗಳಿಗೆ ಆಡಳಿತವನ್ನು ನಡೆಸಲು ಅಸಮರ್ಥರೇ ? ಇವರನ್ನು ಏತಕ್ಕೆ ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದರು ? ಎಂಬುದನ್ನು ಪರಿಶೀಲಿಸಿ ಅವರಿಗೆ ಎಲ್ಲಾದರೂ ಒಂದು ಕಡೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗುರುಪಾದಯ್ಯ ಚಂದ್ರಶೇಖರ್ ಗಚ್ಚಿನಮಠ್ (ಬಿಜಾಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಬೆಳಿಗ್ಗೆ ೯ ಗಂಟೆಯಿಂದ ಸಭೆಯ ಮುಂದಿರತಕ್ಕ ೨೦ ಇಲಾಖೆಗಳ ಬೇಡಿಕೆಗಳ ಬಗ್ಗೆ ಮಾನ್ಯ ಆದ ಸದಸ್ಯರನೇಕರು ಬಹಳ ಸವಿಸ್ತಾರವಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ ಆದರೆ ನಾನು ೨೪ನೇ ಬೇಡಿಕೆಯಾದಂಥ ಜೈಲು ಇಲಾಖೆಯ ಮೇಲೆ ಕೇವಲ ಕೆಲವೇ ಅಭಿಪ್ರಾಯ ಗಳನ್ನು ತಿಳಿಸಬಯಸುತ್ತೇನೆ. ಇಲ್ಲಿ ನನ್ನದೇ ಆದಂಥ ಒಂದೆರಡು ಸಲಹೆಗಳನ್ನು ಸಭೆಯ ಮುಂದಿಡುವುದಾದರೆ, ಜೈಲು, ಎಂದತಕ್ಷಣ ಪತ್ರಿಯೊಬ್ಬರ ಕಲ್ಪನೆಯಲ್ಲೂ ಕೂಡ ಇದು ಮಾನವೀಯ ದೃಷ್ಟಿಯಿಂದ ಹೊರತುಪಡಿಸಿರತಕ್ಕದ್ದು ಎನ್ನುವ ಅಭಿಪ್ರಾಯ ಬರುತ್ತದೆ. ಯಾವ ಮನುಷ್ಯ ತಪ್ಪು ಮಾಡಿರುತ್ತಾನೆ ಅವನು ಜೈಲಿಗೆ ಹೋಗುತ್ತಾನೆ. ಅಲ್ಲಿ ಏನು ಶಿಕ್ಷೆಯನ್ನು ಅನುಭವಿಸಬೇಕೋ ಅದನ್ನು ಅನುಭವಿಸಿಕೊಂಡು ಹೊರಗೆ ಬರುತ್ತಾನೆ. ಆದರೆ ಜೈಲಿನಿಂದ ಹೊರಗೆ ಬರುವ ಹೊತ್ತಿಗೆ ಒಬ್ಬ ಉತ್ತಮ ವ್ಯಕ್ತಿಯಾಗಿ ಹೊರಗೆ ಬರಬೇಕು ಸರ್ವೇಸಾಧಾರಣವಾಗಿ ಜೈಲನ್ನು ನಾವು ನೋಡುವುದಕ್ಕೆ ಹೋದರೆ ಇದು ನಿಜವಾಗಿಯೂ ಜೈಲೇ ಎನ್ನುವ ಕಲ್ಪನೆ ಬರುತ್ತದೆ.

ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಾದರೆ, ನಮ್ಮ ಬಿಜಾಪುರದಲ್ಲಿ ಕೇಂದ್ರ ಕಾರಗೃಹ ಇದೆ. ಇದು ಬ್ರಿಟಿಷರ ಕಾಲದಲ್ಲಿ ಕಟ್ಟಿರತಕ್ಕ ಜೈಲು ಇದನ್ನು ಸಾಕಷ್ಟು ಜನರು ನೋಡಿರ ಬಹುದು. ಈ ಕಡೆಯಲ್ಲಿರುವವರು ನೋಡಿರಬಹುದು. ಆದರೆ ಆ ಕಡೆಯಲ್ಲಿರುವವರು ನೋಡಿಲ್ಲ ವೆಂದು ಅನಿಸುತ್ತದೆ. ಆ ಜೈಲು ಯಾವರೀತಿ ಇದೆ ಎಂಬುದನ್ನು ಹೇಳಬಯಸುತ್ತೇನೆ. ಆ ಜೈಲಿನಲ್ಲಿ ಒಬ್ಬ ಜೈಲುವಾಸಿಗೆ ಒಂದು ಹೊತ್ತಿಗೆ ೩.೫೦ ರೂ, ೩.೩೩ ರೂ, ಮತ್ತು ೩.೮೩ ರೂ.ವರೆಗೆ ಊಟಕ್ಕಾಗಿ ಸರ್ಕಾರದಿಂದ ಹಣವನ್ನು ಕೊಡುತ್ತಾರೆ ಇದು ತಮ್ಮ ವರದಿಯಲ್ಲಿ ಇದೆ. ಆದರೆ ನಾವಾದರೂ ಹೇಳುತ್ತೇನೆ, ಹೊರಗಡೆ ಹೋಟಲ್‌ಗಳಲ್ಲಿ ೩.೫೦ ರೂ.ಗೆ ಕೊಡತಕ್ಕ ಊಟ ಎಷ್ಟು ಚೆನ್ನಾಗಿರುತ್ತದೆಯೋ ಅಷ್ಟು ಚೆನ್ನಾಗಿರತಕ್ಕ ಊಟ ಇಲ್ಲಿ ಸಿಗುವುದಿಲ್ಲ. ಅಂಥ ಕೆಳಮಟ್ಟದ ಊಟವನ್ನು ಅವರಿಗೆ ಕೊಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕು. ಬಿಜಾಪುರ ಜೈಲಿನಲ್ಲಿ ಒಬ್ಬ ಜೈಲುವಾಸಿ ಒಂದು ದಿವಸ ಸ್ನಾನ ಮಾಡಿದರೆ ಮತ್ತೆ ೮ ದಿವಸದ ನಂತರವೇ ಆತ ಸ್ನಾನಮಾಡುವುದು. ಕಾರಣ ಅಲ್ಲಿ ನೀರೇ ಇರುವುದಿಲ್ಲ. ಸಂಬಂಧ ಪಟ್ಟ ಮಂತ್ರಿಯವರು ಈ ಜೈಲುಗಳಿಗೆ ಹೋಗಿ ನೋಡಿಕೊಂಡು ಬಂದು ಆ ಜೈಲುವಾಸಿಗಳಿಗೆ ಹೋಗಿ ನೋಡಿಕೊಂಡು ಬಂದು ಆ ಜೈಲುವಾಸಿಗಳಿಗೆ ತಮ್ಮದೇ ಆದಂಥ ರೀತಿಯಲ್ಲಿ ಮಾನಸಿಕ ಪರಿವರ್ತನೆಯಾಗಿ ಹೊರಗೆ ಬರುವಂಥ ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಪ್ರತಿಯೊಂದು ಜೈಲಿನಲ್ಲೂ ಕೂಡ ವಿವಿಧ ರೀತಿಯ ಕೈಗಾರಿಕೆ ಹಾಗೂ ಕೈಗಾರಿಕಾ ತರಬೇತಿ ವ್ಯವಸ್ಥೆಯನ್ನು ಮಾಡಬೇಕು. ಯಾರೇ ಒಬ್ಬ ವ್ಯಕ್ತಿ ಯಾವುದೇ ಕಾರಣಕ್ಕಾಗಿ ಜೈಲಿಗೆ ಹೋದಮೇಲೆ ಅವನು ವಾಪಸ್ಸು ಬರುವ ಹೊತ್ತಿಗೆ ಅವನ ಮನಸ್ಸು ಉತ್ತಮ ರೀತಿಯಲ್ಲಿ ಪರಿವರ್ತನೆಯಾಗಿ ತನಗೆ ಅಭಿರುಚಿ ಇರತಕ್ಕ ಕೈಗಾರಿಕೆಯಲ್ಲಿ ತರಬೇತಿ ಹೊಂದಿ ಅಲ್ಲಿಂದ ಬಂದ ಕೂಡಲೇ ಅವನು ಒಬ್ಬ ಉತ್ತಮ ಪ್ರಜೆಯಾಗಿ ಬಾಳುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಅಷ್ಟೇ ಅಲ್ಲ, ಆರೋಗ್ಯ ದೃಷ್ಟಿಯಿಂದಲೂ ಒಂದು ಮಾತನ್ನು ಹೇಳುವುದಾದರೆ, ನಾನು ತುರ್ತು ಪರಿಸ್ಥಿತಿ ಸಮಯದಲ್ಲಿ ಜೈಲಿನಲ್ಲಿದ್ದಾಗ ಏನೇ ಕಾಯಿಲೆ ಬಂದರೂ ಕೂಡ ಒಂದೇ ರೀತಿಯ ಗುಳಿಗೆಗಳನ್ನು ಕೊಡುತ್ತಿದ್ದರು. ಅದನ್ನು ಬಿಟ್ಟರೆ ಬೇರೆ ರೀತಿಯ ಗುಳಿಗೆಗಳನ್ನು ಯಾವತ್ತೂ ಕೊಡುತ್ತಿರಲಿಲ್ಲ. ಬಹುಶಃ ಈಗಲೂ ಅದೇ ರೀತಿ ಇರಬಹುದೆಂದು ಭಾವಿಸಿದ್ದೇನೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಜೈಲಿನಲ್ಲಿರುವ ಅಪರಾಧಿಗಳಿಗೆ ಆರೋಗ್ಯ ದೃಷ್ಟಿಯಿಂದ ಏನು ವೈದ್ಯಕೀಯ ಸೌಲಭ್ಯವನ್ನು ಕೊಡಬೇಕೋ ಅದನ್ನು ಕೊಡಿಸಲು ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ ಇಂಥ ಒಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ಸಾರ್ವಜನಿಕರಲ್ಲಿ ಅಥವಾ ಜೈಲುವಾಸಿಗಳ ಮನಸ್ಸಿನಲ್ಲಿ ತಪ್ಪು ಕಲ್ಪನೆ ಬಾರದಿರುವಂತೆ ನೋಡಿಕೊಳ್ಳಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ನಡಾಫ್ (ಶಿಗ್ಗಾವ).— ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೂಡ ಬಯಸುತ್ತೇನೆ.

ನಮ್ಮ ಆರೋಗ್ಯ ಮಂತ್ರಿಗಳು ಹುಬ್ಬಳ್ಳಿಗೆ ಎಷ್ಟು ಸಾರಿ ಹೋಗಿ ಬಂದಿದ್ದಾರೋ ಗೊತ್ತಿಲ್ಲ. ಹುಬ್ಬಳ್ಳಿಯಲ್ಲಿ ಒಂದು ದೊಡ್ಡ ಆಸ್ಪತ್ರೆ ಇದೆ, ಮತ್ತು ಒಂದು ಮೆಡಿಕಲ್ ಕಾಲೇಜೂ ಇದೆ. ಅಲ್ಲಿನ ಸ್ಟಾಫ್ ಪೊಸಿಷನ್ ಯಾವರೀತಿ ಇದೆ ಎನ್ನುವ ವಿಚಾರವನ್ನು ಮಾನ್ಯ ಆರೋಗ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ ಅವರು ಇದನ್ನು ಸುಳ್ಳು ಎಂದು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವಿಸಿದ್ದೇನೆ. ಆ ಕಾಲೇಜುಗಳಲ್ಲಿ ೨೨೫ ಲೆಕ್ಚರರ್ ಪೋಸ್ಟ್‌ಗಳಲ್ಲಿ ೮೯ ಲೆಕ್ಚರರ್ ಪೋಸ್ಟ್‌ಗಳು ಖಾಲಿ ಬಿದ್ದಿವೆ. ಆದರೂ ಆ ಕಾಲೇಜು ನಡೆಯುತ್ತಿದೆ. ಅದು ಯಾವರೀತಿ ನಡೆಯುತ್ತಿರಬಹುದೆಂಬುದನ್ನು ಮಾನ್ಯ ಮಂತ್ರಿಗಳೇ ಯೋಚನೆ ಮಾಡಿನೋಡಬೇಕು. ಒಳ್ಳೆಯ ಪ್ರತಿಭಾವಂತ ವಿದ್ಯಾರ್ಥಿಗಳು, ನೂರಕ್ಕೆ ನೂರು ಅಂಕಗಳನ್ನು ತೆಗೆದುಕೊಂಡು ಬಂದಿರತಕ್ಕ ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ಅಂಥ ಕಾಲೇಜಿನಲ್ಲಿ ಉತ್ತಮವಾದ ಹಾಗೂ ಸಾಕಷ್ಟು ಉಪಾಧ್ಯಾಯರಿಲ್ಲ ಎಂದರೆ ನಿಜಕ್ಕೂ ನಾಚಿಕೆಯಾಗುತ್ತದೆ. ಅಷ್ಟೇ ಅಲ್ಲ ಇದು ೬೫೦ ಬೆಡ್ ಇದ್ದಂಥ ಆಸ್ಪತ್ರೆ ಇದೆ, ಅಲ್ಲಿ ನವೆಂಬರ್ ತಿಂಗಳಲ್ಲಿ ಡೆವೆಲಪ್‌ಮೆಂಟ್ ಕೆಲಸ ತೆಗೆದುಕೊಳ್ಳಬಾರದು ಎಂದು ಹೇಳಿದ್ದೀರಿ. ಕೇವಲ ೨೫,೦೦೦ ರೂಪಾಯಿ, ಬ್ಯಾಂಡೇಜ್ ಕ್ಲಾತ್, ಟ್ಯಾಬ್ಲೆಟ್ ಮುಂತಾದುವುಗಳನ್ನು ಖರೀದಿ ಮಾಡಲಿಕ್ಕೆ, ಸಣ್ಣ ಪುಟ್ಟ ಬಿಲ್‌ಗಳನ್ನು ತೆಗೆದುಕೊಳ್ಳಲಿಕ್ಕೆ ಮಾತ್ರ ಬಡ್ಜೆಟ್ ಇತ್ತು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನವರೆಗೆ ಅವರಿಗೆ ಹೆಚ್ಚು ರೊಕ್ಕ ಇಲ್ಲ, ಅನಾಟಮಿ, ಸರ್ಜರಿ—ಇತಂಹ ಗುರುತರವಾದಂಥ ಡಿಪಾರ್ಟ್‌ಮೆಂಟ್‌ಗಳಲ್ಲಿ ಪ್ರೊಫೆಸರ್ಸ್ ಇಲ್ಲ. ವಿದ್ಯಾರ್ಥಿಗಳನ್ನು ರೋಗಿಗಳನ್ನು ನೋಡುವಂಥ ಪ್ರಮೇಯ ಅಲ್ಲಿ ಬರುತ್ತಾ ಇಲ್ಲ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಒಂದು ಆಸ್ಪತ್ರೆಗೆ ಹಿಂದೆ ಸರ್ಕಾರದವರು ಅಡ್ವೈಸರಿ ಕಮಿಟಿ ವಿಸಿಟರ್ಸ್ ಬೋರ್ಡ್ ಎಂದು ಮಾಡುತ್ತಿದ್ದರು. ಅದನ್ನು ಈಗ ತಾವು ಮರೆತುಬಿಟ್ಟಿದ್ದೀರಿ. ಮಾನ್ಯ ಬೊಮ್ಮಾಯಿಯವರು ಸಮ್ಮನೆ ಕುಳಿತಿದ್ದಾರೆ. ಈ ಆಸ್ಪತ್ರೆ ಉತ್ತರ ಕರ್ನಾಟಕಕ್ಕೆ ಒಂದು ವರದಾನ. ಬಡಜನರಿಗೆ ರಿಲೀಫ್ ಸಿಗುತ್ತದೆ ಎಂದು ಆಸ್ಪತ್ರೆ ಕಟ್ಟಿದಿರಿ, ಈ ಆಸ್ಪತ್ರೆ ಇವತ್ತಿನದಿವಸ ಶಾಪವಾಗಿ ಪರಿಣಮಿಸಿದೆ. ಹುಬ್ಬಳ್ಳಿಯ ಆಸ್ಪತ್ರೆಯನ್ನು ಮರೆತುಬಿಟ್ಟಿದ್ದೀರೇನೋ. ಅದಕ್ಕೆ ನಾನು ಸಲಹೆ ಕೊಡುತ್ತೇನೆ. ಇವತ್ತು ಮಾನ್ಯ ಬೊಮ್ಮಾಯಿಯವರು ಹುಬ್ಬಳ್ಳಿಯನ್ನು ಮರೆತುಬಿಟ್ಟಿದ್ದಾರೆ ತಾವಾದರೂ ನೆನಪಿಟ್ಟುಕೊಳ್ಳಿ. ಕೆ.ಎಂ.ಸಿ.ಯಲ್ಲಿ ಅನ್‌ಕ್ಲೈಮ್ಡ್ ಬಾಡೀಸ್ ಎಲುಬುಗಳನ್ನು ಸಂಗ್ರಹಿಸುತ್ತಾ ಇದ್ದಾರೆ ದಯವಿಟ್ಟು ಹಾಸ್ಟೆಲ್ ಗೋಡೌನಿಗೆ ಎಲುಬುಗಳನ್ನು ಕೊಡುವಂತೆ ಮಾಡಿ. ಆಗ ಪರಿಸ್ಥಿತಿ ಸುಧಾರಿಸುತ್ತದೆಂದು ನಮ್ಮ ಗಮನಕ್ಕೆ ತರುತ್ತಿದ್ದೇನೆ. ಆಮೇಲೆ ಮೆಡಿಸನ್ಸ್‌ಗೆ, ಪಿ.ಹೆಚ್.ಇ., ಪಿ.ಹೆಚ್.ಯು.ಗೆ ಇಂಡೆಂಟ್ ಕಳಿಸಿ

೯–೧೦ ತಿಂಗಳಾದರೂ ಇವತ್ತಿನವರೆಗೂ ಮೆಡಿಸನ್ಸ್ ಸಿಕ್ಕುತ್ತಾ ಇಲ್ಲ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ತಾವು ತೀವ್ರವಾಗಿ ವಿಚಾರ ಮಾಡಬೇಕು ಎಂದು ಕೇಳಿ ಕೊಳ್ಳುತ್ತಾ ಇದ್ದೇನೆ.

ಇನ್ನು ಮೆಡಿಕಲ್ ಕಾಲೇಜುಗಳ ವಿಷಯವಾಗಿ ಹೇಳುವುದಾದರೆ, ಸ್ವಾಮಿ, ಎಲ್ಲಾ ಜನಾಂಗ ದವರಿಗೆ ಒಂದೊಂದು ಮೆಡಿಕಲ್ ಕಾಲೇಜು ಕೊಟ್ಟಿದ್ದೀರಿ. ಒಕ್ಕಲಿಗರಿಗೆ ಕೊಟ್ಟಿದ್ದೀರಿ, ಹರಜನರಿಗೆ ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕಡೆ ಲಕ್ಷ್ಯ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ. ಮೆಡಿಕಲ್ ಕಾಲೇಜುಗಳನ್ನು ಪ್ರತಿಯೊಂದು ಜನಾಂಗದವರಿಗೂ ಕೊಟ್ಟಿದ್ದೀರಿ. ಆದರೆ ತಾವು ತಮ್ಮ ಉತ್ತರದಲ್ಲಿ ಹೇಳಿಬಿಟ್ಟರೆ ಬಹಳ ಸಂತೋಷ. ಅಲ್ಪಸಂಖ್ಯಾತರ ಒಂದು ಸಮಾರಂಭದಲ್ಲಿ ಅವರು ವಚನವನ್ನು ಕೊಟ್ಟಿದ್ದಾರೆ, ಆದುದರಿಂದ ತಮ್ಮ ಉತ್ತರದಲ್ಲಿ ಹೇಳಬೇಕು. ಅಲ್ಪಸಂಖ್ಯಾತರಿಗೂ ಮುಸಲ್ಮಾನ್ ಬಂಧುಗಳಿಗೂ ಒಂದು ಮೆಡಿಕಲ್ ಕಾಲೇಜು ಕೊಡಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತಾ ಇದ್ದೇನೆ. ಆಮೇಲೆ ಮೈನಾರಿಟಿ ಕಮಿಷನ್ ನೇಮಿಸಿದ್ದೀರಿ. ಅವರು ಅಲ್ಪಸಂಖ್ಯಾತರ ಸಮಸ್ಯೆಯನ್ನು ಬಗೆಹಸಿಸುತ್ತಾರೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಮೈನಾರಿಟಿ ಕಮಿಷನ್ನಿನವರು ಇಂಟರಿಂ ರಿಪೋರ್ಟ್ ಏನು ಕೊಟ್ಟಿದ್ದಾರೋ ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತಗೆದುಕೊಂಡಿದೆಯೋ ಎನ್ನುವುದನ್ನು ಸ್ಪಷ್ಟ ವಾಗಿ ಉತ್ತರದಲ್ಲಿ ಹೇಳಬೇಕು. ಬ್ಯಾಕ್‌ವಡ್ ಕ್ಲಾಸಸ್ ಅಂಡ್ ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದೀರಿ. ಮೈನಾರಿಟಿ ಜನರಿಗೆ ಎಷ್ಟು ಹಣ ಇಯರ್ ಮಾರ್ಕ್ ಇಟ್ಟಿದ್ದೀರಿ, ಅಷ್ಟು ಹಣವನ್ನು ಖರ್ಚು ಮಾಡಿದ್ದೀರಾ, ಇಲ್ಲದೇಹೋದರೆ ಸುಮ್ಮನೆ ಕಣ್ಣೀರು ಒರೆಸುವಂಥ ಭ್ರಮೆ ಬಿಡಬೇಕು. ಮೈನಾರಿಟಿ ಜನರಿಗೆ ಹೆಚ್ಚಿಗೆ ಹಣ ಕೊಡಬೇಕು. ಮಾನ್ಯ ಶಾಣಪ್ಪನವರು ಹೇಳಿದಹಾಗೆ ಮೈನಾರಿಟಿ ಆಫೀಸರ್ಸ್‌ನ್ನು ವ್ಯವಸ್ಥಿತವಾಗಿ ಎಲ್ಲಿ ಬೇಕಾಗಿಲ್ಲವೋ ಅಲ್ಲಿ ಮೂಲೆಯಲ್ಲಿ ಕಿತ್ತೊಗೆಯುತ್ತಾ ಇದ್ದಾರೆ. ಅಷ್ಟೆ ಅಲ್ಲ ಬಿಜಾಪುರ, ಬಳ್ಳಾರಿ, ಬೆಂಗಳೂರಿನ ಶಿವಾಜಿನಗರದಲ್ಲಿ ನಡೆದಂಥ ಘಟನೆಗಳನ್ನು ನೋಡಿದರೆ ನನಗನ್ನಿಸುತ್ತದೆ ಅಲ್ಪಸಂಖ್ಯಾತರ ಆರ್ಥಿಕ ಅಭದ್ರತೆಯನ್ನು ಮಾಡಬೇಕು ಎಂದು ವ್ಯವಸ್ಥಿತ ವಾಗಿ ಪ್ಲಾನ್ ಮಾಡುತ್ತಾ ಇದೆ. ಈ ದೃಷ್ಟಿಯಿಂದ ಇವತ್ತು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡ ಬೇಕು. ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಲ ಭಾಷಣ ಮಾಡಿದ್ದಾರೆ ಅವರು ಸಹಾನುಭೂತಿ ಯುಳ್ಳವರಾಗಿದ್ದಾರೆ. ಈಗಾಗಲೇ ಅಲ್ಪಸಂಖ್ಯಾತರ ಕಮಿಷನ್ ನೇಮಿಸಿದ್ದಾರೆ. ಸರ್ಕಾರಿ ನೌಕರರಲ್ಲಿ ಅಲ್ಪಸಂಖ್ಯಾತರಿಗೆ ಇದ್ದಂಥ ಅಡಚಣೆಯನ್ನು ದೂರ ಮಾಡಿದ್ದಾರೆ. ಆದರೆ ಅಲ್ಪಸಂಖ್ಯಾತರ ಹಿತಾಸಕ್ತಿಯನ್ನು ರಕ್ಷಣೆ ಮಾಡುವುದರಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್ ಫೇಲಾಗಿದೆ ಮತ್ತು ಪರಿಸ್ಥಿತಿ ಚಿಂತಾಜನಕವಾಗಿದೆ. ಎನ್ನುವ ಮಾತನ್ನು ಹೇಳುತ್ತಾ ಮಾನ್ಯ ರಘುಪತಿಯವರು ಈ ಕಡೆಗೆ ಹೆಚ್ಚಿನ ಗಮನ ಕೊಡಬೇಕು ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಹೋದಸಾರಿ ಮಂಡಲ್ ಕಮಿಷನ್ ರಿಪೋರ್ಟ್‌ನ್ನು ಕೇಂದ್ರಸರ್ಕಾರಕ್ಕೆ ಶಿಫಾರಸು ಮಾಡಿದ್ದೀರಿ, ತಾವೇ ಅದನ್ನು ಅಳವಡಿಸಿ ಕೊಂಡು ಇಲ್ಲಿ ಏತಕ್ಕೆ ತರಲಿಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಎಂ ರಘುಪತಿ.—ಮಂಡಲ್ ಕಮಿಷನ್‌ಗಿಂತ ಜಾಸ್ತಿ ಮಾಡಿದ್ದೇವೆ.

ಶ್ರೀ ಎಂ. ಎಂ. ನಾಡಾಫ್.—ಮಂಡಲ್ ಕಮಿಷನ್ ಶಿಫಾರಸ್‌ನನ್ನು ಜಾರಿಗೆ ತಂದಿಲ್ಲ. ಎಜುಕೇಷನ್ ಆಫ್ ದಿ ಮೈನಾರಿಟೀಸ್ ಕಡೆ ಗಮನ ಕೊಡಬೇಕು. ಈಗ ನಾಲ್ಕು ದಿವಸಗಳಿಂದ ನೋಡುತ್ತಾ ಇದ್ದೀರಿ. ಬೆಂಗಳೂರಿನಲ್ಲಿ ಬೇರೆ ಕಡೆ ಏನಾಗುತ್ತಿದೆ ಎಂದು ನಾನು ಆಫೀಸರ್ಸ್ ಟ್ರಾನ್ಸ್– ಫರ್ಸ್ ಬಗ್ಗೆ ಹೇಳಿದೆ. ಕೆಲವು ತಪ್ಪು ತಿಳುವಳಿಕೆಯಿಂದ ಆಗುವಂಥಾದ್ದನ್ನು ಹೋಗಲಾಡಿಸಲಿಕ್ಕೆ ಸಹಾಯ ಮಾಡಿದಂತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಆಶೀರ್ವಾದ ಮಾಡಿದರು, ಆದರೆ ಸಂಬಂಧಪಟ್ಟ ಮಂತ್ರಿಗಳು ಮಾತ್ರ ಮಾಡಲಿಲ್ಲ, ಅವರು ನೆಗೆಟೀವ್ ಮಾಡಿದ್ದಾರೆ. ಇವತ್ತು ಅಲ್ಪ ಸಂಖ್ಯಾತರ ಕೋಮಿಗೆ ಸೇರಿದಂಥ ಆಫೀಸರ್ಸನ್ನು ಎಲ್ಲೆಲ್ಲೋ ಮೂಲೆಯಲ್ಲಿ ಹಾಕಿದ್ದಾರೆ, ಆವರಿಗೆ ಕೇಪಬಿಲಿಟಿ ಇಲ್ಲವೆ ? ಅವರಲ್ಲಿ ಅಷ್ಟು ಶಕ್ತಿ ನಡೆಸಲಿಕ್ಕೆ ಇಲ್ಲವೇ. ಎಕ್ಸಿಕುಟೀವ್ ಪೋಸ್ಟ್‌ಗಳಲ್ಲಿ ಇಂಪಾರ್ಟೆಂಟ್ ಪೋಸ್ಟ್‌ಗಳಲ್ಲಿ ಅಲ್ಪಸಂಖ್ಯಾತ ಕೋಮಿಗೆ ಸೇರಿದವರಿಲ್ಲ, ಪಿ.ಡಬ್ಲ್ಯು.ಡಿ. ತೆಗೆದು ಕೊಳ್ಳಿ, ಪೋಲೀಸ್ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ರೆವಿನ್ಯು ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಿ, ಎಲ್ಲಾದರೂ ತೆಗೆದುಕೊಳ್ಳಿ, ಅಲ್ಲಿ ಅವರನ್ನು ಹಾಕುತ್ತಾ ಇಲ್ಲ. ಕೊನೆಯದಾಗಿ, ಕಮಿಟಿಗಳಲ್ಲಿ

ಇವರನ್ನೆಲ್ಲಾ ನೇಮಿಸಿದರು ಮಾನ್ಯ ಕಂದಾಯ ಖಾತೆಯ ಮಂತ್ರಿಗಳು ನಮ್ಮನ್ನು ಕೇಳಲಿಲ್ಲ. ನಮ್ಮನ್ನು ಕೇಳತಕ್ಕ ಸೌಜನ್ಯ ಕೂಡ ತೋರಿಸಲಿಲ್ಲ. ಇಂತಹ ಒಂದು ತಾರತಮ್ಯವನ್ನು ಮಾಡಬೇಡಿ. ಆದಷ್ಟು ಅಲ್ಪಸಂಖ್ಯಾತರ ಓಟಿನಿಂದ ಆರಿಸಿಬಂದಿದ್ದೀರಿ. ಅವರ ಅನುರಾಗವನ್ನು ಪಡೆದುಕೊಳ್ಳಿ ಎಂದು ಹೇಳಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೆ, ಸುಮಾರು 20 ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿರುವುದರಿಂದ ಅದರ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸರಿಯಾದಂಥ ಅವಕಾಶ ದೊರಕುತ್ತಾ ಇಲ್ಲ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ತಾವೂ ಕೂಡ ಅನೇಕ ವರ್ಷಗಳಿಂದ ನೋಡಿದ್ದೀರಿ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಇದಕ್ಕೆ ಏಕೆ ಒಪ್ಪಿಕೊಂಡರೋ ನನಗಂತೂ ಗೊತ್ತಾಗುತ್ತಿಲ್ಲ. ಸರ್ಕಾರಕ್ಕೆ ಬೇಡಿದ್ದರೆ ಇನ್ನೂ ಮುಂಚಿತವಾಗಿ ಅಸೆಂಬ್ಲಿಯನ್ನು ಕರೆಯಬೇಕಾಗಿತ್ತು. ಈಗ ನಮ್ಮ ಹಕ್ಕನ್ನು ಮೊಟಕುಮಾಡುವುದರಿಂದ, ನಾವು ಸರ್ಕಾರಕ್ಕೆ ಏನು ಹೇಳಬೇಕು ಎಂದು ಇದ್ದೆವೋ ಅಂತಹ ಉಪಯುಕ್ತ ವಿಚಾರಗಳನ್ನು ಹೇಳತಕ್ಕಂಥ ಅವಕಾಶವನ್ನು ಕಳೆದುಕೊಂಡಿದ್ದೇವೆ.

ಮಾನ್ಯ ಅಧ್ಯಕ್ಷರೆ ಪ್ರಥಮವಾಗಿ, ಆರೋಗ್ಯ ಖಾತೆಯ ಬಗ್ಗೆ ಹೇಳುವುದಾದರೆ, ಆರೋಗ್ಯ ಖಾತೆ ಇನ್ನೂ ಚೆನ್ನಾಗಿ ಕೆಲಸಮಾಡಬೇಕು. ನಾನು ಎಲ್ಲಾ ಡಾಕ್ಟರ್ಸ್‌ನ್ನು ಕೆಟ್ಟವರು ಎಂದು ಹೇಳುವುದಿಲ್ಲ, ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ ಆದರೆ ಅದನ್ನು ಸರಿಪಡಿಸುವುದು ಮಂತ್ರಿಗಳ ಮತ್ತು ಸರ್ಕಾರದ ಜವಾಬ್ದಾರಿ, ನಮ್ಮ ಸ್ನೇಹಿತರು ಹೇಳಿದಹಾಗೆ, ಕೇವಲ ಶಾಸಕರನ್ನು ಸರಿಯಾಗಿ ನೋಡಿಕೊಂಡರೆ ಸಾಲದು. ಹಳ್ಳಿಯಿಂದ ಬಂದಂಥ ಬಡವರನ್ನೂ ಕೂಡ ಸೌಜನ್ಯತೆಯಿಂದ ನೋಡಿ, ಔಷದೋಪಚಾರ, ಶುಶ್ರೂಷೆ ಕೂಡ ಮಾಡಬೇಕು. ಆ ರೀತಿ ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ವ್ಯವಸ್ಥೆ ಆಗಬೇಕು ಎಂದು ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ತಾಲ್ಲೂಕಿಗೊಂದೊಂದು ಮೊಬೈಲ್ ಆಸ್ಪತ್ರೆಯನ್ನು ಕೊಡುವುದು ಅತೀ ಅವಶ್ಯಕ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇದುವರೆವಿಗೂ ಮಾನ್ಯ ಸದಸ್ಯರು ಮಾತನಾಡಿದಂತಹವರು ಒಂದು ವಿಷಯವನ್ನು ಮರೆತು ಹೋದರು ಅಂತ ಕಾಣುತ್ತದೆ. ಅದು ಯಾವುದೆಂದರೆ ಪಾರ್ಥೇನಿಯಂನಿಂದ ರೋಗ ಬರುತ್ತದೆಂದು ಅನೇಕರು ಹೇಳಿದ್ದನ್ನು ನಾವು ಕೇಳಿದ್ದೇವೆ. ಪಾರ್ಥೇನಿಯಂನಿಂದ ಅಲರ್ಜಿ ಮತ್ತೊಂದು ಪ್ರಾರಂಭವಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇದನ್ನು ಕಡಿಮೆ ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನೂ ಕೂಡ ಪ್ರಾರ್ಥಿಸುತ್ತೇನೆ,

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೆ ಬೇರೆ ಹೆಸರು ಇದೆ.

ಶ್ರೀ ಬಿ. ಬೈರಪ್ಪಾಜಿ.—ಅದು ಗೊತ್ತು, ಕಾಂಗ್ರೆಸ್ ಗಿಡ ಅಂತ ಹೇಳುತ್ತಾರೆ, ಅಂತ ನೀವು ಹೇಳುವುದು. ಕಮ್ಯುನಿಸ್ಟ್ ಹುಲ್ಲು ಇನ್ನೂ ಜಾಸ್ತಿಯಾಗುತ್ತಿದೆ ಅಂತ ನಾವು ಹೇಳಿದರೆ ಹೇಗೆ ಇರುತ್ತದೆ. ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವಿಷಯವನ್ನು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಜನರಲ್ ಆಸ್ಪತ್ರೆಯನ್ನು ಎರಡು ಕಡೆ ಮಾಡಿಸಿ ಕೊಡಬೇಕು. ಇನ್ನೂ ಚೆನ್ನಾಗಿ ಕೆಲಸ ಮಾಡಬೇಕು. ಯುವಕರು ಇದ್ದಾರೆ. ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಇನ್ನೂ ಕೂಡ ಪ್ರಯತ್ನ ಮಾಡಿ ಒಳ್ಳೆಯ ಹೆಸರು ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಪೋಲೀಸ್ ಖಾತೆಯನ್ನು ಇಟ್ಟುಕೊಂಡಿದ್ದಾರೆ. ಪೋಲೀಸ್ ಇಲಾಖೆಯಲ್ಲೂ ಕೂಡ ದಕ್ಷತೆಯ ಅಧಿಕಾರಿಗಳು ಇದ್ದಾರೆ. ಎಲ್ಲರೂ ಅಪ್ರಮಾಣಿಕರು ಅಂತ ಹೇಳುವುದು ತಪ್ಪು. ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಆದರೆ ಇತ್ತೀಚೆಗೆ ಬರುಬರುತ್ತಾ ಈ ಇಲಾಖೆ ಜನಗಳಿಗೆ ಕ್ರೂರವಾಗಿ ಕಾಣುತ್ತಿದೆ. ಜನಗಳ ಮನಸ್ಸಿನಲ್ಲಿ ಪೋಲೀಸ್ ಇಲಾಖೆಯೋ ಅಥವಾ ಜನಗಳಿಗೆ ಹಿಂಸೆಯನ್ನು ಕೊಡತಕ್ಕಂತಹ ಕ್ರೂರವಾದ ಇಲಾಖೆಯೋ ಎನ್ನುವ ಭಾವನೆ ವ್ಯಕ್ತವಾಗುತ್ತಿದೆ. ನಾನಾದರೂ ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೆಲವು ಗೂಢಾಚಾರರನ್ನು ತಾವು ಏರ್ಪಾಡು ಮಾಡಿ. ಈ ಇಲಾಖೆಗೆ ಬಹಳ ಪ್ರಮುಖವಾದ ಇಲಾಖೆ. ಜನಗಳಿಗೆ ಅಲ್ಪಸಂಖ್ಯಾತರಿಗೆ, ಹಿಂದುಳಿದವರ್ಗದವರಿಗೆ, ರಕ್ಷಣೆಯನ್ನು ಕೊಡತಕ್ಕಂತಹ ಇಲಾಖೆ. ಈ ಇಲಾಖೆ ವ್ಯವಸ್ಥಿತವಾಗಿ ಸರಿಯಾಗಿ ಕೆಲಸ

ಮಾಡದಿದ್ದರೆ ಅನೇಕರಿಗೆ ನೋವಾಗುತ್ತದೆ. ಬಡವರ ಬಗ್ಗೆ ನ್ಯಾಯವನ್ನು ಕೊಡುತ್ತಿಲ್ಲ. ಅನ್ಯಾಯ ವಾಗುತ್ತಿದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನ್ಯಾಯವನ್ನು ದೊರಕಿಸಿಕೊಡಿ ಎಂಬುದಾಗಿ ಅರ್ಜಿಯನ್ನು ಕೊಟ್ಟರೆ. ಇದರಿಂದ ಪೋಲೀಸ್‌ನವರಿಗೇ ಹೆಚ್ಚು ಅನುಕೂಲವಾಗುತ್ತದೆ ಕೆಲವುಕಡೆ. ಎರಡೂ ಕಡೆಯಿಂದ ಲಾಭ. ಅರ್ಜಿಕೊಟ್ಟವನಿಂದಲೂ ಲಾಭ. ಎದುರು ಪಾರ್ಟಿಯವರಿಂದಲೂ ಲಾಭ. ಈ ಮಾತನ್ನು ನಾನು ಬಹಳ ನೋವಿನಿಂದ ಹೇಳು ತ್ತಿದ್ದೇನೆ. ಬಹಳ ಸಂತೋಷಪಟ್ಟು ಈ ಮಾತನ್ನು ಹೇಳುತ್ತಿಲ್ಲ. ಕೆಲವು ಕಡೆ ನಡೆಯುತ್ತಿರತಕ್ಕ ವಿಚಾರಗಳನ್ನು ನಾನು ಪ್ರಾಮಾಣಿಕವಾಗಿ ನೋಡಿದ್ದನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಈ ರೀತಿಯಾಗ ಬಾರದು. ನ್ಯಾಯವನ್ನು ದೊರಕಿಸಿಕೊಡಬೇಕು ನ್ಯಾಯವನ್ನು ದೊರಕಿಸಿಕೊಡಿ ಅಂತ ಅರ್ಜಿಯನ್ನು ಕೊಟ್ಟವನನ್ನೂ ಹಿಂಸೆ ಮಾಡಿ, ಅವನಿಂದ ಹಣವನ್ನು ವಸೂಲಿ ಮಾಡುವುದು ಮತ್ತು ಅವನಿಗೆ ಹಿಂಸೆ ಯನ್ನು ಮಾಡತಕ್ಕಂತಹದ್ದು ನ್ಯಾಯವಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರಬಗ್ಗೆ ಗಮನಕ್ಕೆ ತೆಗೆದು ಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ನೋಡಿರಬಹುದು. ತಾವು ಕೂಡ ಅನೇಕ ಕಡೆ ನೋಡಿರ ಬಹುದು. ರಾಷ್ಟ್ರೀಯಹೆದ್ದಾರಿಗಳಲ್ಲಿ ರಾತ್ರಿ ೬ ಗಂಟೆಯಾದ ಮೇಲೆ ಕೆಲವು ಕಡೆ ಪೋಲೀಸ್‌ನವರು ನಿಂತುಕೊಂಡಿರುತ್ತಾರೆ. ಅವರಿಗೆ ತಾವು ಏನಾದರೂ ಸಂಜೆ ೬ ಗಂಟೆಯಾದ ಮೇಲೇ ನೀವು ಹೋಗಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೋಗುವಂತಹ ವೆಹಿಕಲ್ಸನ್ನು ಚೆಕ್ ಮಾಡಿ ಅಂತ ಏನಾದರೂ ಹೇಳಿ ದ್ದೀರಾ ? ಅಥವಾ ಆ ಬಗ್ಗೆ ಏನಾದರೂ ಸುತ್ತೋಲೆಗಳನ್ನು ಕಳುಹಿಸಿದ್ದೀರಾ ಎನ್ನುವುದನ್ನು ಕೇಳುವು ದಕ್ಕೆ ಬಯಸುತ್ತೇನೆ. ಏಕೆಂದರೆ ಸಂಜೆ ೬ ಗಂಟೆಯಾದ ಮೇಲೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಂತು ಕೊಂಡು ವಾಹನಗಳನ್ನು ಚೆಕ್ ಮಾಡುವಂತಹದ್ದನ್ನು ತಪ್ಪಿಸಬೇಕು. ಜನಗಳಿಗೆ ರಕ್ಷಣೆಯನ್ನು ಕೊಡ ತಕ್ಕಂತಹ ಸಮಾಜಕ್ಕೆ ನ್ಯಾಯವನ್ನು ದೊರಕಿಸಿಕೊಡತಕ್ಕ ಈ ಒಂದು ಇಲಾಖೆ ಪ್ರಾಮಾಣಿಕತನದಿಂದ ಕೆಲಸ ಮಾಡದಿದ್ದರೆ ಬಡವರಿಗೆ, ದುರ್ಬಲವರ್ಗದವರಿಗೆ ಹಾಗೂ ಹಿಂದುಳಿದವರ್ಗದವರಿಗೆ ಇವರೆಲ್ಲ ರಿಗೂ ಅನ್ಯಾಯವಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹಣವನ್ನು ತಂದುಕೊಡತಕ್ಕಂತಹ ಇಲಾಖೆ ಎಂದರೆ ವಾಣಿಜ್ಯ ತೆರಿಗೆ ಇಲಾಖೆ. ಈ ಇಲಾಖೆ ಇನ್ನೂ ಕೂಡ ಚೆನ್ನಾಗಿ ಕೆಲಸ ಮಾಡಿದ್ದೇ ಆದರೆ. ಇನ್ನೂ ೧೦೦ ಕೋಟಿ ರೂಪಾಯಿಗಳು ಹೆಚ್ಚು ಹಣ ರಾಜ್ಯದ ಬೊಕ್ಕಸಕ್ಕೆ ಬರುತ್ತದೆ ಎನ್ನುವ ಭಾವನೆ ನಮಗೆ ಬರುತ್ತದೆ. ಇದರಲ್ಲಿ ಸ್ವಲ್ಪ ಗೊಂದಲ ಇದೆ. ಅದೇನೆಂದರೆ, ಪ್ರಮೋಷನ್‌ನನ್ನು ಕೊಡುವಾಗ, ಪ್ರಮೋಟೀಸ್ ಮತ್ತು ಡೈರೆಕ್ಟರ್ ರಿಕ್ರೂಟೀಸ್, ಇವರಲ್ಲಿ ಕೆಲವು ಅಸಮಾನತೆ ಇದೆ. ಅದೇನೆಂದರೆ ೧೪–೧೫ ವರ್ಷಗಳ ಕಾಲ ಇಲಾಖೆ ಯಲ್ಲಿ ಸೇವೆ ಮಾಡುತ್ತಿರುವವರ ಮೇಲೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಆಗಿದ್ದು ಅಂತಹವರು ೫–೬ ವರ್ಷ ಗಳ ಕಾಲ ಇಲಾಖೆಯ ಸೇವೆ ಸಲ್ಲಿಸುತ್ತಿರುವವರಿಗೆ ಪ್ರಮೋಷನ್ ಅನ್ನು ಕೊಟ್ಟು ೧೪–೧೫ ವರ್ಷಗಳ ಕಾಲ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವವರ ಮೇಲೆ ತಂದು ಕೂರಿಸುವಂತಹ ಕೆಲಸ ಬಹಳ ತರಾತುರಿ ಯಿಂದ ನಡೆಯುತ್ತಿದೆ ಎಂಬ ವರ್ತಮಾನ ನನಗೆ ಬಂದಿದೆ. ಈ ರೀತಿಯಾಗಿ ಇಲಾಖೆಯಲ್ಲಿ ಪ್ರಮೋಷನ್ ಅನ್ನು ಕೊಟ್ಟರೆ ಇಲಾಖೆಯಲ್ಲಿ ಮೊದಲಿನಿಂದಲೂ ಕೆಲಸ ಮಾಡಿಕೊಂಡು ಬಂದಂತಹವರಿಗೆ ಏನಾಗು ತ್ತದೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಬೇಕಾಗಿದೆ. ಈ ಇಲಾಖೆಯಲ್ಲಿ ಈ ರೀತಿ ಪ್ರಮೋಷನ್ ಕೊಡತಕ್ಕ ತರಾತುರಿಯ ಕೆಲಸ ಏನು ನಡೆಯುತ್ತಿದೆ ಅದನ್ನು ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಿ ಸರಿಯಾದ ರೀತಿಯಲ್ಲಿ ನ್ಯಾಯಯುತವಾಗಿ ಪ್ರಮೋಷನ್ ಅನ್ನು ಕೊಡಬೇಕು. ಸುಮಾರು ೬೦ ಜನ ಪ್ರಮೋಟೀಸ್ ಮತ್ತು ೬೧ ಜನ ಡೈರೆಕ್ಟ್ ರಿಕ್ರೂಟ್‌ಮೆಂಟ್ ಆದಂತಹವರು ಇದ್ದಾರೆ. ಇದು ನಮಗೆ ಬಂದಿರತಕ್ಕಂತಹ ಮಾಹಿತಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗಮನ ಹರಿಸಬೇಕು.

ಇನ್ನು ಮೀನಾಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, ಮಾನ್ಯ ಮಂತ್ರಿಗಳು ಕರಾವಳಿ ಮೀನಿನ ಬಗ್ಗೆ ಹೆಚ್ಚು ಆಸಕ್ತಿಯಿಂದ್ದಾರೆ. ಇದರಲ್ಲಿ ಕರಾವಳಿಯ ಪ್ರದೇಶದ ಮೀನು ಮತ್ತು ಒಳ ನಾಡಿನ ಪ್ರದೇಶದ ಮೀನು ಎಂಬುದಾಗಿ ಎರಡು ಪಂಗಡಗಳಿವೆ. ಕರಾವಳಿ ಮೀನಿನಿಂದ ರಾಜ್ಯಕ್ಕೆ ಹೆಚ್ಚು ಉತ್ಪಾದನೆ ಬರುತ್ತದೆ. ಅದೇ ರೀತಿ ಒಳನಾಡು ಮೀನಿನ ಬಗ್ಗೆಯೂ ಕೂಡ ತಮ್ಮ ಗಮನ ಹರಿಸಬೇಕೆಂಬ ಮಾತನ್ನು ಹೇಳುತ್ತೇನೆ.

ಬಯಲು ಬಂದಿಖಾನೆಯ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಬಯಲು ಬಂದಿಖಾನೆ ಚೆನ್ನಾಗಿ ನಡೆಸುತ್ತಿದ್ದಾರೆ. ಇದೇ ರೀತಿ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕೂಡ ಬಯಲು ಬಂದಿಖಾನೆಯನ್ನು

ಮಾಡಿ. ಬಂದಿಯಾಗಿರುವಂತಹವರಿಗೆ ಒಳ್ಳೆಯ ರೀತಿಯಲ್ಲಿ ಅವರ ಮನಸ್ಸು ಪರಿವರ್ತನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈ ರಾಜ್ಯದಲ್ಲಿ ಈ ಬಗ್ಗೆ ನಡೆಯುತ್ತಿರತಕ್ಕಂತಹ ಒಳ್ಳೆಯ ಕಾರ್ಯವನ್ನು ಬೇರೆ ರಾಜ್ಯಗಳೂ ಅನುಸರಿಸಲಿ ಎನ್ನುವ ಮಾತನ್ನು ಹೇಳುತ್ತಾ, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೭-೦೦ ಪಿ.ಎಂ.

† ಶ್ರೀ ಪಂಪಾಪತಿ (ದಾವಣಗೆರೆ ಕ್ಷೇತ್ರ).—ಸನ್ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ ಇರತಕ್ಕ ಕಾಲಾವಕಾಶದಲ್ಲಿ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ಹೇಳುತ್ತೇನೆ. ಆರೋಗ್ಯ ಇಲಾಖೆಯ ಮಂತ್ರಿ, ಈ ಬಹಳ ದೊಡ್ಡ ಮನಸ್ಸು ಮಾಡಿ ದಾವಣಗೆರೆಯಲ್ಲಿರುವ ಜನರಲ್ ಆಸ್ಪತ್ರೆಗೆ ನರ್ಸಿಂಗ್ ತರಬೇತಿ ಶಾಲೆಯನ್ನು ಈ ಸಾರಿ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಅವರಿಗೆ ಮೊದಲನೆಯದಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರ ಜೊತೆಯಲ್ಲಿ ಬೆಂಗಳೂರು ನಗರದಲ್ಲಿ ಮಾನಸಿಕ ಆಸ್ಪತ್ರೆ ಇರುವುದರಿಂದ ತಲೆಗೆ ಪೆಟ್ಟುಬಿದ್ದವರು ಇಲ್ಲಿಗೇ ಬರಬೇಕು. ದಾವಣಗೆರೆಯಲ್ಲಿ ತಲೆಗೆ ಪೆಟ್ಟಾದರೆ ಅಂತಹವರನ್ನು ಅಲ್ಲಿಂದ ಇಲ್ಲಿಗೆ ತರಬೇಕೆಂದರೆ ಬಹಳ ಕಷ್ಟವಾಗುತ್ತದೆ.

ಅಲ್ಲಿಂದ ಬಂದಂಥವರು ಒಬ್ಬರು ಇಲ್ಲಿಯ ಆಸ್ಪತ್ರೆಯಲ್ಲಿ ಇದ್ದಾರೆ. ಇನ್ನು ಸ್ವಲ್ಪ ದಿವಸಗಳ ಕಾಲ ಅವರು ಇಲ್ಲಿಯೇ ಇರಬೇಕೆಂದು ಹೇಳಿದ್ದಾರೆ. ಅವರು ಇಲ್ಲಿರುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ಆಯಾಯ ಊರುಗಳಲ್ಲಿಯೇ ಈ ಚಿಕಿತ್ಸೆ ದೊರೆಯತಕ್ಕ ವ್ಯವಸ್ಥೆ ಮಾಡಿಕೊಟ್ಟರೆ ಒಳ್ಳೆಯದು. ಮೆದುಳಿಗೆ ಏಟು ಬಿದ್ದರೆ ಅವನ್ಕೆ ಏನು ಆಗಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅದಕ್ಕೆ ಬೇಕಾದಂಥ ಸಲಕರಣೆಗಳನ್ನು ಒದಗಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ದಾವಣಗೆರೆ ದೊಡ್ಡ ನಗರ ಅಲ್ಲಿ ಹತ್ತಿ ಗಿರಣಿಗಳು ಇವೆ ಮತ್ತು ಬೀಡಿ ಕೆಲಸ ಮಾಡತಕ್ಕವರು, ಮಂಡಕ್ಕಿ ಹುರಿಯತಕ್ಕವರಿಗೆ ಈ ಟಿ.ಬಿ. ಕಾಯಿಲೆ ಸಾಮಾನ್ಯವಾಗಿ ಹರಡತಕ್ಕದ್ದು ಅಲ್ಲಿ ಕೇವಲ ೩೦-೪೦ ಬೆಡ್ ಇರುವುದರಿಂದ ಅದು ಏನೇನೂ ಸಾಕಾಗುವುದಿಲ್ಲ. ಆದುದರಿಂದ ಕನಿಷ್ಟ ನೂರು ಬೆಡ್‌ಗಳಿರತಕ್ಕ ಆಸ್ಪತ್ರೆಯನ್ನು ತೆರೆದರೆ ಟಿ.ಬಿ. ರೋಗಿಗಳಿಗೆ ಬಹಳ ಅನುಕೂಲವಾಗುತ್ತದೆ. ಇನ್ನು ಕುಷ್ಟರೋಗದ ನಿವಾರಣೆಯ ಬಗ್ಗೆ ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಅನೇಕ ರೀತಿಯಲ್ಲಿ ಔಷಧಿಗಾಗಿ ಮತ್ತಿತರ ಖರ್ಚುಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ದಾವಣಗೆರೆ ನಗರದಲ್ಲಿ ಒಬ್ಬ ಆಯುರ್ವೇದಿಕ್ ಡಾಕ್ಟರ್ ಇದ್ದಾರೆ. ಅವರು ಕುಷ್ಟ ರೋಗವನ್ನು ಸಂಪೂರ್ಣವಾಗಿ ಗುಣಪಡಿಸುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅವರ ಹೆಸರೂ ಆಲೂರು ಶಿವಶಂಕರಪ್ಪ ಎಂದು. ಅವರನ್ನು ತಮ್ಮ ಹತ್ತಿರ ಭೇಟಿ ಮಾಡಿಸುತ್ತೇನೆ. ತಾವು ಅವರಿಗೆ ಪೇಶೆಂಟ್‌ಗಳನ್ನು ಕಳುಹಿಸಿದರೆ ಅವರು ಉತ್ತಮ ಪಡಿಸುತ್ತಾರಂತೆ. ಆದುದರಿಂದ ಇದರ ಕಡೆಗೆ ತಾವು ಲಕ್ಷ್ಯ ನೀಡಬೇಕೆಂದು ಹೇಳುತ್ತೇನೆ. ಕಡಿಮೆ ಖರ್ಚಿನಲ್ಲಿ ಅವರು ಕಾಯಿಲೆಯನ್ನು ಗುಣಪಡಿಸುವ ಹಾಗಿದ್ದರೆ ತಾವು ಅವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ದಾವಣಗೆರೆ ನಗರ ಜಿಲ್ಲಾ ಕೇಂದ್ರವನ್ನಾಗಿ ಮಾಡುವುದಕ್ಕೆ ಎಲ್ಲಾ ರೀತಿಯಲ್ಲಿ ಅರ್ಹತೆಯನ್ನು ಪಡೆದಿರತಕ್ಕ ನಗರವಾಗಿದೆ. ಆದುದರಿಂದ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಇದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಒಂದು ಜನರಲ್ ಆಸ್ಪತ್ರೆ ಇದೆ ಅಲ್ಲಿಯೇ ಒಂದು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಮಾಡಿದರೆ ಬಹಳ ಅನುಕೂಲವಾಗುತ್ತದೆ ಏತಕ್ಕೆಂದರೆ ಅಪಘಾತ ಅಥವಾ ಇನ್ನು ಯಾವುದೇ ದುರ್ಮರಣಕ್ಕೆ ತುತ್ತಾಗಿರತಕ್ಕವರು ಬಂದರೆ ಆ ಬಾಡಿಯನ್ನು ಪೋಸ್ಟ್ ಮಾರ್ಟಮ್ ಮಾಡಲು ಮಹಜರ್ ಮಾಡಲು ಪೋಲೀಸ್ ಸ್ಟೇಷನ್ನಿಗೆ ಹೇಳಿ ಕಳುಹಿಸಿ ಅಲ್ಲಿಂದ ಪೋಲೀಸಿನವರು ಬಂದು ಮಹಜರ್ ಮಾಡಲು ಬಹಳ ತಡವಾಗುತ್ತದೆ ಮತ್ತು ಅದರಿಂದ ತೊಂದರೆಯೂ ಆಗುತ್ತಿದೆ. ಆದುದರಿಂದ ಅಲ್ಲಿ ಕೂಡಲೇ ಒಂದು ಔಟ್‌ಪೋಸ್ಟ್ ಪೋಲೀಸ್ ಸ್ಟೇಷನ್ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ದಾವಣಗೆರೆ ನಗರದ ಮಧ್ಯ ಭಾಗದಲ್ಲಿ ಒಂದು ಮಹಿಳಾ ಸಂಘವಿದೆ, ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆ ಜಾಗವನ್ನು ವ್ಯಾಪಾರ ಕೇಂದ್ರಕ್ಕೆ ಕೊಡಬೇಕು ಎನ್ನುವುದರ

ಬಗ್ಗೆ ಪ್ರಯತ್ನ ನಡೆಯುತ್ತಿದೆ. ಆದುದರಿಂದ ದಯಮಾಡಿ ಅದನ್ನು ಬೇರೆಯವರಿಗೆ ಕೊಡದೇ ಅದನ್ನು ಮಹಿಳಾ ಸಂಘಕ್ಕೆ ಉಳಿಯುವ ಹಾಗೆ ನೋಡಿಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಅಂಥಾ ಜಾಗ ನಗರದ ಮಧ್ಯದಲ್ಲಿ ಒಂದು ಇಂಚೂ ಸಹ ಸಿಗುವುದಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಗಮನಿಸಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರುಗಳೆಲ್ಲಾ ಮಾತನಾಡಿ ಹೇಳಿರುವುದರಿಂದ ನಾನು ಹೆಚ್ಚಿಗೆ ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಆರೋಗ್ಯ ಮಂತ್ರಿಗಳವರು ಎಷ್ಟು ಆರೋಗ್ಯದಿಂದ ಇದ್ದಾರೋ ಅಷ್ಟು ಆರೋಗ್ಯದಿಂದ ನಮ್ಮ ಕಡೆಯ ಜನರೂ ಸಹ ಇರುವ ಹಾಗೆ ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನಾನು ಎರಡು ವರ್ಷದಿಂದ ನನ್ನ ಕ್ಷೇತ್ರದಲ್ಲಿ ಒಂದು ಆಸ್ಪತ್ರೆ ಕಟ್ಟಡವನ್ನು ಕಟ್ಟಿಸಿ ಕೊಡಿ ಎಂದು ಕೇಳುತ್ತಲೇ ಇದ್ದೇನೆ ಇನ್ನೂ ಕಟ್ಟಿಸಿ ಕೊಟ್ಟಿಲ್ಲ. ನೆಲಗೆದ್ದನ ಹಳ್ಳಿಗೆ ಈ ವರ್ಷವಾದರೂ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ, ನಮ್ಮ ಊರಿನಲ್ಲಿರತಕ್ಕ ಆಸ್ಪತ್ರೆಯಲ್ಲಿ ವಾಹನಗಳೇ ಇಲ್ಲ ಇದರಿಂದ ಏನಾದರೂ ಗರ್ಭಿಣಿ ಹೆಂಗಸರನ್ನು ತಕ್ಷಣವೇ ಬಳ್ಳಾರಿಗೋ ಅಥವಾ ಚಿತ್ರದುರ್ಗಕ್ಕೋ ಕರೆದುಕೊಂಡು ಹೋಗಬೇಕೆಂದರೆ ಒಂದು ವಾಹನವೂ ಇರುವುದಿಲ್ಲ. ಆದುದರಿಂದ ದಯವಿಟ್ಟು ಒಂದು ವಾಹನವನ್ನು ಒದಗಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಕೊಲೆ ಅಪರಾಧಗಳ ಸಂಖ್ಯೆ ಜಾಸ್ತಿಯಾಗುತ್ತಲೇ ಇವೆ. ನಿಮ್ಮ ಡಿ.ಜಿ.ಪಿ.ಯವರು ಬಹಳ ಒಳ್ಳೆಯ ದಕ್ಷ ಅಧಿಕಾರಿಗಳು ಇದ್ದಾರೆ. ಆದರೆ ಅವರ ಕೆಳಗಡೆ ಇರತಕ್ಕ ಅಧಿಕಾರಿಗಳು ಸರಿಯಾದವರು ಅಲ್ಲ. ನನ್ನ ಸ್ವಂತ ಒಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ೬ ತಿಂಗಳ ಕೆಳಗಡೆ ಒಬ್ಬ ಸಬ್ ಇನ್ಸ್‌ಪೆಕ್ಟರ್ ನನ್ನ ಕ್ಷೇತ್ರದಲ್ಲಿದ್ದ. ಅವನ ಹೆಸರು ವೀರಭದ್ರೇಗೌಡ ಎಂದು. ಅವನು ಬೇಕಾದಷ್ಟು ಸಾರಿ ಹಳ್ಳಿಗಳಲ್ಲಿ ಸುಲಿಗೆ ದರೋಡೆ ಮಾಡಿಸಿದ್ದಾನೆ. ಅವನನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿದ್ದರು ಪುನಃ ಅವನು ನನ್ನ ಕ್ಷೇತ್ರಕ್ಕೆ ಬಂದಿದ್ದಾನೆ. ಇದನ್ನು ನಾನು ಮಾಡಿಸಿದ್ದೇನೆ ಎಂದು ತಿಳಿದುಕೊಂಡು ನನ್ನ ಮೇಲಿನ ಕೋಪಕ್ಕೆ ನನ್ನ ಮಗನನ್ನು ಅರೆಸ್ಟ್ ಮಾಡಿ ಜೈಲಿಗೆ ಹಾಕಿದ್ದಾನೆ. ಇದು ಅಲ್ಲದೆ ಕೇಸ್ ಕೂಡ ಹಾಕಿದ್ದಾನೆ. ನನ್ನ ಮಗನ ಮೇಲೆ ಕೇಸ್ ಹಾಕಿದ್ದು ಅಲ್ಲದೆ ಈ ರೀತಿಯಾದ ರಾಜಕೀಯ ಮಾಡುವುದಕ್ಕೆ ಬಂದಿದ್ದಾನೆ. ಈ ಸಬ್ ಇನ್ಸ್‌ಪೆಕ್ಟರ್ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಮತ್ತು ನಮ್ಮ ಜಿಲ್ಲೆಯಿಂದ ಆಚೆಗೆ ಅವನನ್ನು ಕಳುಹಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

MR. SPEAKER.—Discussion concluded. Hon'ble Minister for Industries to reply

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪ್ರಾರಂಭದಲ್ಲಿ ಮಾನ್ಯ ಸದಸ್ಯರುಗಳಲ್ಲಿ ಕ್ಷಮೆ ಕೇಳಿ, ಸಮಯದ ಒತ್ತಡವಿರುವುದರಿಂದ ಆದಷ್ಟು ಶೀಘ್ರವಾಗಿ ನನ್ನ ಉತ್ತರವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅನೇಕ ಸದಸ್ಯರುಗಳು ಸಲಹೆಗಳನ್ನು ಸೂಚನೆಗಳನ್ನು ಮತ್ತು ಟೀಕೆಗಳನ್ನು ಮಾಡಿದ್ದಾರೆ.

(MR. DEPUTY SPEAKER In The Chair)

ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕಾರ್ಯ ರೂಪಕ್ಕೆ ತರುವುದಕ್ಕೆ ಪ್ರಾಮಾಣಿಕ ಪೂರ್ವಕವಾಗಿ ಪ್ರಯತ್ನವನ್ನು ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತಿದ್ದೇನೆ. ಕೈಗಾರಿಕಾ ನೀತಿ ಮತ್ತು ನಮ್ಮ ವಾರ್ಷಿಕ ವರದಿಯನ್ನು ಇಟ್ಟಿದ್ದೇನೆ. ಅಧ್ಯಕ್ಷರು ಕಾಲಾವಕಾಶವನ್ನು ಹೆಚ್ಚಿಗೆ ಕೊಟ್ಟರೆ ಸಾಧ್ಯವಾದಷ್ಟನ್ನು ಹೇಳುತ್ತೇನೆ. ಮತ್ತೊಂದು ದಿವಸ ಚರ್ಚೆಗೆ ಅವಕಾಶ ಮಾಡಿಕೊಟ್ಟಾಗ ಹೆಚ್ಚಿನ ವಿವರಗಳನ್ನು ಕೊಡುತ್ತೇನೆ. ಕೃಷಿ ಮತ್ತು ಕೈಗಾರಿಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ನಮ್ಮ ರಾಷ್ಟ್ರ ಮತ್ತು ನಮ್ಮ ರಾಜ್ಯ ಕೃಷಿ ಪ್ರಧಾನವಾದ ರಾಜ್ಯವಾಗಿದೆ. ಆದರೆ ಕೃಷಿಯಲ್ಲಿ ಪ್ರಗತಿಯಾಗಿ ಕೃಷಿಕರ ಮತ್ತು ಕೃಷಿ ಕಾರ್ಮಿಕರ ಆರ್ಥಿಕ ಉನ್ನತಿಯಾಗಬೇಕಾದರೆ ಕೃಷಿ ಉತ್ಪಾದನೆಯನ್ನು

ಕೈಗಾರಿಕೆ ಬೆಳಸಿಕೊಂಡು ಅದನ್ನು ಗ್ರಾಹಕರಿಗೆ ನಮ್ಮ ರಾಜ್ಯದಲ್ಲೇ ಅಲ್ಲದೆ ಹೊರರಾಜ್ಯಗಳಿಗೂ ಕೂಡ ಒದಗಿಸಿಕೊಡತಕ್ಕ ಕೆಲಸ ಮಾಡಿದಾಗ ಕೃಷಿಕರಿಗೂ ಲಾಭವಾಗುತ್ತದೆ, ಮತ್ತು ಕೈಗಾರಿಕೆ ಕೂಡ ಬೆಳೆದು ನಮ್ಮ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವಂತಾಗುತ್ತದೆ. ಒಂದು ರೀತಿಯಿಂದ ನಮ್ಮ ಔದ್ಯೋಗಿಕ ನೀತಿ ಸ್ವಾತಂತ್ರ್ಯ ಬಂದಮೇಲೆ ಯಾವ ದಿಕ್ಕಿನಲ್ಲಿ ಯಾವ ಧಾಟಿಯಲ್ಲಿ ಹೋಗಬೇಕಾಗಿತ್ತೋ ಆ ರೀತಿ ಹೋಗಿಲ್ಲ ಎಂದರೆ ಯಾರನ್ನೂ ಟೀಕೆ ಮಾಡುತ್ತೇವೆ ಎಂಬ ದೃಷ್ಟಿಯಿಂದ ತೆಗೆದುಕೊಳ್ಳಬಾರದು. ನಮ್ಮ ನಾಯಕರು ಅವರ ದೃಷ್ಟಿಕೋನದಲ್ಲಿ ಸರಿಯಾದುದನ್ನೇ ಮಾಡಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಬೃಹತ್ ಉದ್ಯಮಗಳನ್ನು ಹೆಚ್ಚಾಗಿ ಮಾಡತಕ್ಕದ್ದು ಅವಶ್ಯ. ಸಾವಿರಾರು ಕೋಟಿ ರೂಪಾಯಿ ಹಣ ತೊಡಗಿಸಿ ನೂರಾರು ಜನರಿಗೆ ಕೆಲಸ ಕೊಟ್ಟರೆ ಸಾಲದು. ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಉತ್ಪಾದನೆಯಾಗತಕ್ಕ ಕಚ್ಚಾ ಮಾಲನ್ನು, ದೊರೆಯುತಕ್ಕ ಖನಿಜಗಳನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು ಕಡಿಮೆ ಹಣ ತೊಡಗಿಸಿ ಹೆಚ್ಚು ಜನರಿಗೆ ಉದ್ಯೋಗ ಕೊಡತಕ್ಕ ದೃಷ್ಟಿ ಬರಬೇಕಾಗಿತ್ತು. ಅಂದರೆ ಕೃಷಿ ಪ್ರಧಾನವಾದ ಉದ್ಯಮಕ್ಕೆ ಪ್ರಾಧಾನ್ಯತೆ ಕೊಡಬೇಕಾಗಿತ್ತು. ಕಳೆದ ೫ನೇ ಪಂಚವಾರ್ಷಿಕ ಯೋಜನೆಯಿಂದ ಕೃಷಿಗೆ ಪ್ರಾಧಾನ್ಯತೆ ಕೊಡತಕ್ಕದ್ದು ಮತ್ತು ಕೃಷಿ ಆಧಾರಿತ ಕೈಗಾರಿಕೆಗೆ ಪ್ರಾಧಾನ್ಯತೆ ಕೊಡತಕ್ಕ ನೀತಿ ಬಂದಿದೆ. ಕೇಂದ್ರದ ಕೈಗಾರಿಕಾ ನೀತಿಯ ಚೌಕಟ್ಟಿನಲ್ಲಿ ನಮ್ಮ ರಾಜ್ಯದ ಸಂಪನ್ಮೂಲಗಳು ಮತ್ತು ಆವಶ್ಯಕತೆಗಳನ್ನು ಅರಿತುಕೊಂಡು ಹೊಸ ಕೈಗಾರಿಕಾ ನೀತಿಯನ್ನು ಜುಲೈ ೧೯೮೩ರಲ್ಲಿ ಹೊಸ ಸರ್ಕಾರ ಬಂದಮೇಲೆ ರೂಪಿಸಿದೆ. ಅದರ ವಿವರಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದು ಎಲ್ಲ ಸದಸ್ಯರಿಗೂ ಮತ್ತು ಸಾರ್ವಜನಿಕರಿಗೂ ಗೊತ್ತಿದೆ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಸಾರ್ವಜನಿಕ ರಂಗದಲ್ಲಿ ಬೃಹತ್ ಕೈಗಾರಿಕೆಗಳು ಬರಬೇಕು ಎಂದು ಹೇಳಿದರು ಅದಕ್ಕೆ ನಮ್ಮ ವಿರೋಧವಿಲ್ಲ. ಅದು ಬರಬೇಕು. ಇವತ್ತು ರಾಜ್ಯ ಸರ್ಕಾರ ತನ್ನ ಆರ್ಥಿಕ ಸಂಪನ್ಮೂಲಗಳ ಆಧಾರದ ಮೇಲೆ ಎಷ್ಟು ಹಣವನ್ನು ಇಂಥ ಕೈಗಾರಿಕೆಗಳಿಗೆ ತೊಡಗಿಸುವುದಕ್ಕೆ ಸಾಧ್ಯವೋ ಅಷ್ಟು ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತದೆ. ಆದರೆ ಸರ್ಕಾರದ ನೀತಿ ಏನೆಂದರೆ ಜಾಯಿಂಟ್ ಸೆಕ್ಟರ್‌ನಲ್ಲಿ ಕೈಗಾರಿಕೆಗಳು ಬರಬೇಕು, ಖಾಸಗಿ ವಲಯದಲ್ಲಿ ಮತ್ತು ಕೇಂದ್ರ ಸರ್ಕಾರದ ವಲಯದಲ್ಲಿ ಇಂಥ ಬೃಹತ್ ಉದ್ದಿಮೆಗಳು ಬರಬೇಕು ಎನ್ನುವ ಆಸೆ ಇದೆ. ಆದ್ದರಿಂದ ಅಲ್ಪ ಹಣವನ್ನು ಸರ್ಕಾರ ಸಹಾಯ ಮಾಡಿ ಖಾಸಗಿ ಬಂಡವಾಳವನ್ನು ಹೆಚ್ಚಾಗಿ ಉಪಯೋಗ ಮಾಡಬೇಕಾದ ಅವಶ್ಯಕತೆ ಇದೆ. ಈ ದೃಷ್ಟಿಯಿಂದ ನೀತಿಯನ್ನು ರೂಪಿಸಿದ್ದೇವೆ. ಇದರ ಜೊತೆಗೆ ಸಣ್ಣ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು ಮತ್ತು ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವ ನೀತಿ ನಮ್ಮದಾಗಿದೆ. ಆ ದಿಸೆಯಲ್ಲಿ ಅನೇಕ ಹೆಜ್ಜೆಗಳನ್ನು ನಾವು ಇಟ್ಟಿದ್ದೇವೆ. ಮಾನ್ಯ ಸದಸ್ಯರಾದ ಕೃಷ್ಣನ್ ಅವರು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಒಂದು ಮಾತನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ ಸರ್ಕಾರಿ ವಲಯದ ಉದ್ದಿಮೆಗಳಲ್ಲಿ ನಷ್ಟವಾಗುತ್ತಿದೆ ಎಂಬುದು. ಎಲ್ಲಾ ಉದ್ದಿಮೆಗಳಲ್ಲೂ ನಷ್ಟವಾಗುತ್ತಿಲ್ಲ. ಲಾಭ ಮಾಡತಕ್ಕ ಉದ್ದಿಮೆಗಳೂ ಇವೆ, ನಷ್ಟ ಆಗತಕ್ಕ ಉದ್ದಿಮೆಗಳೂ ಇವೆ. ನಾನು ಈಗ ಅವುಗಳ ಪಟ್ಟಿಯನ್ನು ಓದುವುದಕ್ಕೆ ಹೋಗುವುದಿಲ್ಲ. ಕೆಲವು ಉದ್ದಿಮೆಗಳಲ್ಲಿ ನಷ್ಟವಾಗುವುದಕ್ಕೆ ಕಾರಣಗಳಿವೆ. ಈ ಬಗ್ಗೆ ಒಂದೇ ಒಂದು ಉದಾಹರಣೆ ಕೊಟ್ಟು ಹೇಳುತ್ತೇನೆ. ಭದ್ರಾವತಿ ಉಕ್ಕಿನ ಕಾರ್ಖಾನೆ ಇದೆ. ಅಲ್ಲಿ ನಷ್ಟವಾಗುವುದಕ್ಕೆ ನಮ್ಮ ಹತೋಟಿ ಮೀರಿದಂಥ ಕಾರಣಗಳಿವೆ. ಇವತ್ತು ಭಾರತ ಸರ್ಕಾರ ಕೂಡ ಅದನ್ನು ಅರ್ಥ ಮಾಡಿಕೊಂಡಿದೆ. ಈ ವರ್ಷ ಸುಮಾರು ೨೦ ಕೋಟಿ ರೂಪಾಯಿ ನಷ್ಟವಾಗುತ್ತದೆ ಎಂಬ ಅಂದಾಜಿದೆ. ಇದಕ್ಕೆ ಕಾರಣ ಕಾರ್ಖಾನೆಯಲ್ಲಿ ಇರತಕ್ಕ ಕಾರ್ಮಿಕರಾಗಲೀ ಅಥವಾ ಅಲ್ಲಿನ ಉತ್ಪಾದನೆಯಾಗಲೀ ಅಲ್ಲ. ಇದಕ್ಕೆ ಮೂಲಕಾರಣ ಪರದೇಶದಿಂದ ಆಮದು ಮಾಡುವ ನೀತಿ. ಕೇಂದ್ರ ಸರ್ಕಾರದ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಇದೆ. ಅಲ್ಲಿ ಪ್ರತಿದಿನಕ್ಕೆ ಒಂದೂಕಾಲು ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಕೇಂದ್ರ ಸರ್ಕಾರದ ವಲಯದಲ್ಲಿರತಕ್ಕ ಉಕ್ಕಿನ ಕಾರ್ಖಾನೆಯನ್ನು ನೋಡಿದಾಗ ಅಲ್ಲಿ ನಷ್ಟವಾಗುತ್ತಿರುವುದಕ್ಕೆ ಕಾರಣ ಕಾರ್ಖಾನೆಯ ಕೆಲಸದ ತಪ್ಪಿನಿಂದಲ್ಲ. ನೀತಿಯಿಂದ ಆಗುತ್ತಿದೆ. ನಾನು ಮತ್ತು ನಮ್ಮ ಮುಖ್ಯ ಮಂತ್ರಿಗಳು ಈ ವಿಷಯವನ್ನು ಕೇಂದ್ರ ಸರ್ಕಾರದ ಮಂತ್ರಿಗಳ ಗಮನಕ್ಕೆ ತಂದು ಅವರ ಮೇಲೆ ಪ್ರಭಾವ ಬೀರತಕ್ಕ ಪ್ರಯತ್ನ ಮಾಡಿದ್ದೇವೆ. ಅವರು ಅದನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ನೀತಿಯಲ್ಲಿ ಸರಿಪಡಿಸಿಕೊಳ್ಳತಕ್ಕ ಬಗ್ಗೆ ಲೋಕಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ. ಆದ್ದರಿಂದ ಆ ಹೊಸ ನೀತಿ ಬಂದರೆ ಈ ಉದ್ಯಮಗಳಲ್ಲಿ ಆಗತಕ್ಕ ನಷ್ಟ ಕಡಿಮೆಯಾಗುತ್ತದೆ. ಮತ್ತು ಲಾಭ ಮಾಡುವ ಅವಕಾಶ ಆಗುತ್ತದೆ. ಅದೇರೀತಿ ಬೇರೆ ಬೇರೆ ಕಾರ್ಖಾನೆಗಳಲ್ಲಿ ಹಲವಾರು ಕಾರಣ

ಗಳಿಂದ ನಷ್ಟವಾಗಿದೆ. ನಮ್ಮ ಮುಂದೆ ಸರಿಯಾದ ಲೆಕ್ಕ ಇಲ್ಲದಿದ್ದರೂ ಈ ವರ್ಷದ ಕೊನೆಯಲ್ಲಿ ಲಾಭವಾಗದಿದ್ದರೂ ನಷ್ಟ ಕಡಿಮೆಯಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ಬಗ್ಗೆ ವಿವರವಾದ ಪಟ್ಟಿಯನ್ನು ಇನ್ನೊಂದು ಅವಕಾಶ ಸಿಕ್ಕಿದಾಗ ಕೊಡುವ ಪ್ರಯತ್ನ ಮಾಡುತ್ತೇನೆ. ಸರ್ಕಾರದ ಕೈಗಾರಿಕಾ ನೀತಿ ಬಗ್ಗೆ ನಾನು ಹೇಳಿದ್ದೇನೆ. ಇವುಗಳಲ್ಲಿ ಮಾರ್ಪಾಡು, ಸುಧಾರಣೆಯಾಗಬೇಕು, ನಷ್ಟ ನಿಲ್ಲಬೇಕು. ಮಿತವ್ಯಯ ಬರಬೇಕು, ಆಡಳಿತದಲ್ಲಿ ಒಂದು ರೀತಿಯ ಚುರುಕು ಬರಬೇಕು ಎನ್ನುವುದನ್ನು ಸರ್ಕಾರ ಅರಿತುಕೊಂಡಿದೆ. ನಾನು ಅಧಿಕಾರ ವಹಿಸಿಕೊಂಡಮೇಲೆ ಪ್ರಥಮ ಬಾರಿಗೆ ಎಲ್ಲ ಕೈಗಾರಿಕೆಗಳಿಂದ ವಿವರಗಳನ್ನು ತರಿಸತಕ್ಕ ಒಂದು ಹೆಜ್ಜೆಯನ್ನು ಇಟ್ಟಿದ್ದೇನೆ. ದೊಡ್ಡ ದೊಡ್ಡ ಕೈಗಾರಿಕೆಗಳ ಒಡೆಯರು, ಟಾಟಾ ಇರಬಹುದು, ಬಿರ್ಲಾ ಇರಬಹುದು ಅಥವಾ ಬೇರೆ ಬೇರೆ ಕೈಗಾರಿಕೋದ್ಯಮಿಗಳು ತಮ್ಮ ಅನೇಕ ಕೈಗಾರಿಕೆಗಳಿಂದ ಪ್ರತಿನಿತ್ಯ ನಡೆಯತಕ್ಕ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಾರೆ. ವಾರಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ಆ ವಿವರಗಳನ್ನು ಪಡೆದುಕೊಂಡು ತಪ್ಪುಗಳೇನಾದರೂ ಇದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ಮತ್ತು ಸುಧಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆ. ಸರ್ಕಾರ ಕೂಡ ಅದೇರೀತಿ ಕೈಗಾರಿಕಾ ಒಡೆಯರಂತೆ ಸರ್ಕಾರಿ ಕೈಗಾರಿಕೆಗಳಲ್ಲಿ ನಡೆಯತಕ್ಕ ಚಟುವಟಿಕೆಗಳ ಬಗ್ಗೆ ಮಾಹಿತಿ ತರಿಸತಕ್ಕ ಏರ್ಪಾಡು ಮಾಡಿದೆ. ಪ್ರತಿ ತಿಂಗಳು ಪ್ರತಿ ಕೈಗಾರಿಕೆ, ಬೋರ್ಡ್ ಅಥವಾ ಕಾರ್ಪೊರೇಷನ್‌ನಿಂದ ಮಾಹಿತಿಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಎಲ್ಲಾ ಮಾಹಿತಿಗಳೂ ಚಾಚೂತಪ್ಪದೆ ಸಮಯಕ್ಕೆ ಅನುಗುಣವಾಗಿ ಬರುವಂತೆ ಕಂಪ್ಯೂಟರೈಸ್ ಮಾಡತಕ್ಕ ಕ್ರಮ ತೆಗೆದುಕೊಂಡಿದ್ದು ಇನ್ನು ಎರಡು ಮೂರು ತಿಂಗಳಲ್ಲಿ ಅದೂ ಕೂಡ ಏರ್ಪಾಡಾಗುತ್ತದೆ. ಈ ರೀತಿ ಬಂದ ಮಾಹಿತಿಗಳನ್ನು ಕಾಲಕಾಲಕ್ಕೆ ಪರಿಶೀಲನೆ ಮಾಡತಕ್ಕ ಕ್ರಮವನ್ನು ನಾನು ಕೈಗೊಂಡಿದ್ದೇನೆ. ಆ ರೀತಿ ರೆವ್ಯೂ ಮಾಡುವುದರಿಂದ ಅನೇಕ ಅನುಕೂಲತೆಗಳಿವೆ. ಮೊದಲನೆಯದಾಗಿ ಇದರಿಂದ ಏನು ನಡೆಯುತ್ತಿದೆ, ಉತ್ಪಾದನೆ ಎಷ್ಟಾಗುತ್ತಿದೆ, ಗುರಿ ಮುಟ್ಟಿದೆಯೋ ಇಲ್ಲವೋ, ಸ್ಟಾಕ್ ಎಷ್ಟಿದೆ, ಈ ಎಲ್ಲ ವಿವರಗಳೂ ಸಿಗುತ್ತವೆ. ಇದರ ಜೊತೆಗೆ ಕೈಗಾರಿಕೆಯ ಅಧಿಕಾರಿಗಳ ತೊಂದರೆ ಕೂಡ ಗೊತ್ತಾಗುತ್ತದೆ. ಇದನ್ನೆಲ್ಲಾ ಪತ್ರವ್ಯವಹಾರದ ಮುಖಾಂತರ ಮಾಡುತ್ತಾ ಸಮಯ ಕಳೆಯುವುದಕ್ಕಿಂತ ನೇರವಾಗಿ ಚರ್ಚೆ ಮಾಡಿ ಸೂಕ್ತ ಪರಿಹಾರ ಕೊಡತಕ್ಕ ಪ್ರಯತ್ನವನ್ನೂ ನಾನು ಮಾಡಿದ್ದೇನೆ. ಇದರ ಜೊತೆಗೆ ತಪ್ಪುಗಳನ್ನು ತಿದ್ದತಕ್ಕ ಕ್ರಮ ತೆಗೆದುಕೊಂಡಿದ್ದೇನೆ. ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಇದರಿಂದ ಅವರು ಸರ್ಕಾರಕ್ಕೆ ಲೆಕ್ಕಾಚಾರ ಕೊಡತಕ್ಕ ಏರ್ಪಾಡಾಗಿದೆ. ಸರ್ಕಾರಿ ವಲಯದ ಬೋರ್ಡ್, ಕಾರ್ಪೊರೇಷನ್‌ಗಳು ಮತ್ತು ಕಂಪೆನಿಗಳ ಆದಾಯ ವೆಚ್ಚದ ಲೆಕ್ಕ ನೋಡಿದರೆ ಸರ್ಕಾರಿ ಇಲಾಖೆಯಲ್ಲಿ ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಅಲ್ಲಿ ಖರ್ಚಾಗುತ್ತಿದೆ. ಲೋಕೋಪಯೋಗಿ ಇಲಾಖೆ, ಕೃಷಿ ಇಲಾಖೆ ಈ ಇಲಾಖೆಗಳಿಗೆ ಸರ್ಕಾರ ನೇರವಾಗಿ ಸೆಕ್ರೆಟೇರಿಯೆಟ್ ಮುಖಾಂತರ ನಿರ್ಧಾರ ತೆಗೆದುಕೊಂಡು ಏನು ಹಣ ವೆಚ್ಚ ಮಾಡುತ್ತೇವೋ ಅದಕ್ಕಿಂತ ಹೆಚ್ಚಿನ ಮೊತ್ತ ಅಲ್ಲಿ ಆಗುತ್ತಿದೆ. ಕೆಲವೊಂದು ಕಾರ್ಪೊರೇಷನ್‌ಗಳ ಬಗ್ಗೆ ಅಧಿವೇಶನ ನಡೆಯುವಾಗ ಚರ್ಚೆ ಮಾಡಲಿಕ್ಕೆ ಅವುಗಳು ಒಳಪಡುವುದಿಲ್ಲ. ಕಾರ್ಪೊರೇಷನ್‌ಗಳ ರಿಪೋರ್ಟ್‌ಗಳು ಮೂರನಾಲ್ಕು ವರ್ಷ ತಡವಾಗಿ ಬರುತ್ತವೆ. ಈ ಶಾಸನಸಭೆಗೆ ಒಂದು ರೀತಿಯಿಂದ ಅವರ ವ್ಯವಹಾರಗಳ ಸ್ಕ್ರುಟಿನಿಗೆ ಒಳಪಡುವುದಿಲ್ಲ. ಈ ಒಂದು ದೃಷ್ಟಿಯಿಂದ ಎಲ್ಲಾ ಕಂಪನಿಗಳ ಖಾಸಗಿ ಮತ್ತು ಸರ್ಕಾರಿ ಯಾವುದೇ ಇರಲಿ ಎಲ್ಲಾ ಕಂಪನಿಗಳ ವಾರ್ಷಿಕ ವರದಿಯನ್ನು ಸದನಕ್ಕೆ ಕೊಡಬೇಕೆಂದು ಹೇಳಿದ್ದೇವೆ. ಕೆಲವರು ಕೊಟ್ಟಿದ್ದಾರೆ. ಕೆಲವು ಕಂಪನಿಗಳು ೧೯೮೨ರವರೆಗೆ ಕೊಟ್ಟಿದ್ದಾರೆ. ಕೆಲವರು ೧೯೮೧ರವರೆಗೆ ಕೊಟ್ಟಿದ್ದಾರೆ. ಅಪ್ ಟು ಡೇಟ್ ಕೊಟ್ಟಿಲ್ಲ. ವಾರ್ಷಿಕ ವರದಿಯನ್ನು ನಿಯಮಕ್ಕನುಗುಣವಾಗಿ ಸಭೆಯ ಮುಂದಿಡುತ್ತೇನೆ. ಆ ಒಂದು ಪ್ರಯತ್ನವನ್ನು ಮಾಡುತ್ತೇನೆಂದು ಹೇಳುತ್ತೇನೆ. ಈ ಒಂದು ದಿಶೆಯಲ್ಲಿ ಕಾರ್ಯ ಕ್ರಮವನ್ನು ಹಾಕಿಕೊಂಡ ಮೇಲೆ ನನ್ನ ಮಟ್ಟಿಗೆ ಹೇಳುವುದಾದರೆ, ಇಲಾಖೆಯಲ್ಲಿ ಅಲ್ಪ ಮಟ್ಟಿಗೆ ಚುರುಕು ಬಂದಿದೆಯೆಂದು ನಾನು ಮನವರಿಕೆ ಮಾಡಿಕೊಂಡಿದ್ದೇನೆ. ಇನ್ನು ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ತಮಗೆ ಕೊಡುತ್ತೇನೆ. ನಷ್ಟವಾಗುತ್ತಿರತಕ್ಕ ಉದ್ಯಮಗಳನ್ನು ಸರಿಯಾದ ರೀತಿಯಲ್ಲಿ ನಡೆಸಿ ಲಾಭ ಬರುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇನೆ. ಹೊಸ ಕೈಗಾರಿಕಾ ನೀತಿಯನ್ನು ನಾವು ಘೋಷಣೆ ಮಾಡಿದ್ದೇವೆ. ಹೊಸ ಕೈಗಾರಿಕಾ ನೀತಿ ಇನ್ನು ಜಾರಿಗೆ ಬಂದಿಲ್ಲ ಎನ್ನುವ ಮಾತನ್ನು ಅನೇಕ ಸದಸ್ಯರು ಹೇಳಿದ್ದಾರೆ. ಉದ್ಯಮಗಳ ಸಂಖ್ಯೆ ಕೂಡ ಕಡಿಮೆ ಎನ್ನುವ ಮಾತನ್ನು ಹೇಳಿದ್ದಾರೆ. ಅಂಕಿ ಸಂಖ್ಯೆಗಳನ್ನು ಪೂರ್ಣ ಒದಗಿಸದೆ ಇರುವುದು ತಪ್ಪು ಎಂದು ಒಪ್ಪಿಕೊಂಡರೂ ವಾರ್ಷಿ

೩೧ರವರೆಗೂ ಲೆಕ್ಕ ಸಿಗುವುದಿಲ್ಲ. ಆದಕ್ಕಾಗಿ ಕೊಟ್ಟಿರತಕ್ಕ ಅಂದಾಜಿನ ಮೇಲೆ ಕೆಲವು ವಿವರಗಳನ್ನು ನಾನು ಕೊಡುತ್ತೇನೆ. ಇವತ್ತು ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಡಿ.ಜಿ ಐ ಡಿ. ರಿಜಿಸ್ಟರ್ ಮಾಡಿರತಕ್ಕದ್ದು ೧೯೮೭-೮೮ರಲ್ಲಿ ೭೦. ೧೯೮೮-೮೯ರಲ್ಲಿ ಫೆಬ್ರುವರಿಯವರೆಗೆ ಸುಮಾರು ೮೩. ಅದೇರೀತಿ ೧೯೮೭-೮೮ರಲ್ಲಿ ೬೦ ಇಂಡಸ್ಟ್ರಿ ಲೈಸೆನ್ಸ್ ಕೊಡಲಾಗಿದೆ. ೧೯೮೮-೮೯ರ ಫೆಬ್ರುವರಿಯವರೆಗೆ ೫೦. ಲೆಟರ್ ಆಫ್ ಇನ್‌ಟೆಂಟ್ ೧೯೮೭-೮೮ರಲ್ಲಿ ೭೦ ೧೯೮೮-೮೯ರಲ್ಲಿ ಫೆಬ್ರುವರಿಯವರೆಗೆ ೬೧. ಕಳೆದಸಲ ಆಶ್ವಾಸನೆ ಕೊಟ್ಟಂತೆ ಸಿಂಗಲ್ ವಿಂಡೋ ಏಜೆನ್ಸಿ ಏರ್ಪಾಡು ಮಾಡುವ ಬಗ್ಗೆ ಈಗಾಗಲೇ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಸಿಂಗಲ್ ವಿಂಡೋ ಏಜೆನ್ಸಿಗಳು ಬಂದಿವೆ. ಒಂದೇ ಜಾಗದಲ್ಲಿ ಅಧಿಕಾರಿಗಳು ಕುಳಿತು ಅರ್ಜಿಗಳನ್ನು ವಿಲೇವಾರಿ ಮಾಡತಕ್ಕ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ರಾಜ್ಯ ಮಟ್ಟದಲ್ಲಿ ಆದಂತಹ ವಿಲೇವಾರಿಯನ್ನು ನೋಡಿದರೆ......

ಶ್ರೀ ಎಂ. ಎಸ್. ಕೃಷ್ಣನ್.— ಸಿಂಗಲ್ ವಿಂಡೋ ಏಜೆನ್ಸಿ ಸ್ಪಿಂಡಲ್ ಏಜೆನ್ಸಿ ಆಗಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ. — ಇವತ್ತು ನಿರ್ದಿಷ್ಟವಾದ ನಿರ್ಣಯವನ್ನು ರಾಜ್ಯ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಕೊಡುತ್ತೇವೆ. ಅಂದರೆ ಕೈಗಾರಿಕೋದ್ಯಮಿಗಳನ್ನು ಕರೆಯುತ್ತೇವೆ, ಅದೇ ದಿವಸ ನಿರ್ಣಯ ತೆಗೆದುಕೊಳ್ಳುತ್ತೇವೆ. ಹಣಕಾಸಿನ ಬಗ್ಗೆ, ವಿದ್ಯುಚ್ಛಕ್ತಿಯ ಬಗ್ಗೆ, ಭೂಮಿಯ ಸ್ವಾಧೀನದ ಬಗ್ಗೆ ಕೈಗಾರಿಕೆ ಸ್ಥಾಪನೆ ಮಾಡಲಿಕ್ಕೆ ಏನೇನು ಅವಶ್ಯಕತೆಗಳಿವೆ ಅವುಗಳ ಬಗ್ಗೆ ಒಂದೇ ಸಲ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಆ ನಿರ್ಣಯದ ಪರಿಣಾಮವಾಗಿ ನಾವು ರಾಜ್ಯ ಮಟ್ಟದಲ್ಲಿ ನಾವು ಏನು ಮಾಡಿದ್ದೇವೆಂಬುದು ತಮಗೆ ಗೊತ್ತಿದೆ. ನಾವು ೮ ತಿಂಗಳಲ್ಲಿ ಕಾರ್ಯ ಮಾಡಿದ್ದೇವೆ, ಅದರಲ್ಲಿ ೧೦೦೦ ಕೈಗಾರಿಕೆಗಳಿಗೆ ಕ್ಲಿಯರೆನ್ಸ್ ಕೊಟ್ಟಿದ್ದೇವೆ. ಒಟ್ಟು ಬಂಡವಾಳ ೭೫೩.೦೬ ಕೋಟಿ ರೂಪಾಯಿ.

ಇನ್ನು ಮಿನಿ ಸಿಮೆಂಟ್‌ಪ್ಲಾಂಟ್ ಬಗ್ಗೆ ಹೇಳುವುದಾದರೆ. ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕೇಂದ್ರದಲ್ಲಿ ಸುಮಾರು ೨೨ ಅರ್ಜಿಗಳು ಪೆಂಡಿಂಗ್ ಇದ್ದವು. ಅವುಗಳಲ್ಲಿ ಕೆಲವನ್ನು ತಿರಸ್ಕಾರ ಮಾಡಿದ್ದಾರೆ. ಕೇಂದ್ರದ ಕೈಗಾರಿಕಾ ಮಂತ್ರಿಗಳಾದ ಶ್ರೀ ತಿವಾರಿಯವರನ್ನು ಭೇಟಿ ಮಾಡಿ ಅವರಿಗೆ ವಿವರಿಸಿ, ರಾಜ್ಯದಲ್ಲಿರತಕ್ಕ ಖನಿಜಸಂಪತ್ತನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕಾದರೆ. ಹೆಚ್ಚು ಉತ್ಪಾದನೆ ಮಾಡಿಕೊಳ್ಳಬೇಕಾದರೆ ರಾಜ್ಯದ ಜನರಿಗೆ ಉದ್ಯೋಗ ಕೊಡಬೇಕಾದರೆ ನಮ್ಮ ರಾಜ್ಯಕ್ಕೆ ಕೈಗಾರಿಕೆಗಳನ್ನು ಕೊಡಬೇಕೆನ್ನುವ ವಾದವನ್ನು ಅವರ ಮುಂದೆ ಇಟ್ಟಾಗ ಅವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ೨೦ ಅರ್ಜಿಗಳು ಕ್ಲಿಯರ್ ಆಗಿವೆ. ಕೈಗಾರಿಕೆ ಮಾಡಲಿಕ್ಕೆ ಏನೇನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳುತ್ತಿದ್ದಾರೆ. ಹೊಸದಾಗಿ ಟೈನಿ ಸಿಮೆಂಟ್ ಪ್ಲಾಂಟ್‌ಗಳನ್ನು ಹೆಚ್ಚಾಗಿ ಕರ್ನಾಟಕದವರಿಗೆ ಕೊಡಲಾಗಿದೆ. ೨೦-೩೦ ಟನ್ ಕೆಪ್ಯಾಸಿಟಿ ಇರತಕ್ಕ ಸಿಮೆಂಟ್ ಪ್ಲಾಂಟ್‌ಗೋಸ್ಕರ ಮಿನಿ ಟೈನಿ ಸಿಮೆಂಟ್ ಪ್ಲಾಂಟ್ ಸ್ಥಾಪನೆ ಮಾಡಲಿಕ್ಕೆ ನೂರಾರು ಜನ ಅರ್ಜಿ ಹಾಕಿದ್ದಾರೆ. ಅರ್ಜಿ ಹಾಕಿರತಕ್ಕವರಿಗೆ ಸಿಮೆಂಟ್ ಪ್ಲಾಂಟ್ ಮಾಡತಕ್ಕ ಶಕ್ತಿ ಸಾಮರ್ಥ್ಯ ಬಂಡವಾಳ ಇದ್ದರೆ ಎಲ್ಲರಿಗೂ ಕೊಡತಕ್ಕ ನೀತಿಯನ್ನು ಇಟ್ಟುಕೊಂಡಿದ್ದೇವೆ. ನಾವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಕೈಬಿಟ್ಟು ಹೋದಂತಹ ಐ. ಟಿ. ಐ. ಯೂನಿಟ್ ಅನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಮೊದಲನೆಯ ಐ. ಟಿ. ಐ. ಯೂನಿಟ್ ಉತ್ತರ ಪ್ರದೇಶಕ್ಕೆ ಹೋಯಿತು. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದಲ್ಲಿ ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ ಐ. ಟಿ. ಐ. ಸೆಕೆಂಡ್ ಯೂನಿಟ್‌ನ್ನು ಬರುವಂತೆ ಮಾಡಿದ್ದಾರೆ. ಇದರ ಜೊತೆಗೆ ಜಾಯಿಂಟ್ ಸೆಕ್ಟರ್‌ನಲ್ಲಿ ೧೫ ಕೈಗಾರಿಕೆಗಳು ಬರುತ್ತವೆ. ಅವುಗಳ ಪಟ್ಟಿಯನ್ನು ಇವತ್ತು ಕೊಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಕೇಂದ್ರದಲ್ಲಿರತಕ್ಕ ಮಂತ್ರಿಗಳ ಮತ್ತು ನಮ್ಮ ಸಂಬಂಧ ಬಹಳ ಮಧುರವಾಗಿದೆ. ಕರ್ನಾಟಕ ರಾಜ್ಯದ ಕೈಗಾರಿಕಾ ದೃಷ್ಟಿಯಿಂದ ಅವರು ನಮಗೆ ಸಹಕಾರ ತೋರಿದ್ದಾರೆ ಸಹಾಯ ಮಾಡುತ್ತಿದ್ದಾರೆ ಅದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಈ ವಿಚಾರದಲ್ಲಿ ಯಾವುದೇ ರೀತಿಯ ತೊಂದರೆಗಳು ಇಲ್ಲ. ಕೆಲವು ಕೈಗಾರಿಕೆಗಳ ಬಗ್ಗೆ ಕೇಂದ್ರಕ್ಕೆ ಕಳುಹಿಸಿ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕೇಂದ್ರಕ್ಕೆ ವಂದನೆಗಳನ್ನು ಸಲ್ಲಿಸುವುದು ಸರಿ. ಆದರೆ ಕೇಂದ್ರ ಸರ್ಕಾರ ಬೇರೆ ರಾಜ್ಯಗಳಿಗೆ ಎಷ್ಟು ಸಾರ್ವಜನಿಕ ಉದ್ಯಮಗಳನ್ನು ಕೊಟ್ಟಿದೆ ? ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಎಷ್ಟು ಸಾರ್ವಜನಿಕ ಉದ್ಯಮಗಳು ಬಂದಿವೆ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಕೈಗಾರಿಕೆಗಳ ಬಗ್ಗೆ ಕೇಂದ್ರಕ್ಕೆ ಹೋದಾಗ ನಮಗೆ ಸಹಕಾರವಿದೆ ಅದರ ಬಗ್ಗೆ ನಾನು ವಂದನೆಗಳನ್ನು ಹೇಳಬೇಕಾಗಿದೆ. ಕೈಗಾರಿಕಾ ವ್ಯವಸ್ಥೆಯಲ್ಲಿ ಒಂದು ಹೊಸ ನೀತಿಯನ್ನು ಸರ್ಕಾರ ಜಾರಿಗೆ ಕೊಟ್ಟಿದೆ ಸರ್ಕಾರಿ ವಲಯದಲ್ಲಿ ರೋಸ್ಟರ್ ಸಿಸ್ಟಮ್ ಪಾಲನೆ ಮಾಡುತ್ತಿರಲಿಲ್ಲ. ಹೊಸದಾಗಿ ಕೆಲಸಕ್ಕೆ ತೆಗೆದುಕೊಳ್ಳತಕ್ಕ ಕಾಲದಲ್ಲಿ ರೋಸ್ಟರ್ ಸಿಸ್ಟಮ್ ಫಾಲೋ ಮಾಡಲು ಆದೇಶವಿದೆ ಅದರ ಪ್ರಕಾರ ಮಾಡುತ್ತಿದ್ದಾರೆ. ಅದನ್ನು ಕಾಲಕಾಲಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇನ್ನೊಂದು ಮಹತ್ವದ ವಿಚಾರ ಕನ್ನಡಿಗರಿಗೆ ಕೆಲಸ ಕೊಡತಕ್ಕ ವಿಚಾರದಲ್ಲಿ ಕಟ್ಟುನಿಟ್ಟಾದ ಆದೇಶ ನೀಡಿದ್ದೇವೆ. ಕಾರ್ಖಾನೆ ಪ್ರಾರಂಭ ಮಾಡುವಾಗ ಯಾರು ಭೂಮಿಯನ್ನು ಕಳೆದುಕೊಳ್ಳುತ್ತಾರೆ ಅಂತಹವರಿಗೆ ನೌಕರಿ ಕೊಡಬೇಕೆಂದು ತಿಳಿಸಲಾಗಿದೆ. ೧೦ ಎಕರೆ ಭೂಮಿಯನ್ನು ಯಾರು ಕಳೆದುಕೊಳ್ಳುತ್ತಾರೆ ಅಂತಹ ಕುಟುಂಬದಲ್ಲಿ ಒಬ್ಬರಿಗೆ ನೌಕರಿ ಕೊಡುವುದು ಎಂದು ಕರಾರಿನಲ್ಲಿ ಹಾಕುತ್ತಿದ್ದೇವೆ. ಕಾನೂನು ಇಲಾಖೆಯನ್ನು ಕೇಳಿ ಪರಿಶೀಲನೆ ಮಾಡಿ ಕರಾರಿನಲ್ಲಿಯೇ ಸೇರಿಸಿಬಿಡಲಾಗುತ್ತಿದೆ. ಒಂದು ಪಕ್ಷ ಅವರಿಗೆ ನೌಕರಿ ಕೊಡದಿದ್ದರೆ ಒಬ್ಬರಿಗೆ ೨೦ ಸಾವಿರ ರೂಪಾಯಿ ಪರಿಹಾರ ಕೊಡಬೇಕೆಂದು ಒಂದು ನಿಯಮವನ್ನು ಹಾಕಿದ್ದೇವೆ. ಇದರ ಬಗ್ಗೆ ಕೇಂದ್ರ ಕೈಗಾರಿಕಾ ವಲಯಾಧಿಕಾರಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ಪತ್ರ ಬರೆದಿದ್ದಾರೆ. ಪತ್ರ ಬರೆದು ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ಒತ್ತಾಯ ಮಾಡಬಹುದು. ಆದರೆ ಪರ್ಸೋನಲ್ ಆಫೀಸರ್ ಕನ್ನಡಿಗರು ಇರಬೇಕಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜಾಯಿಂಟ್ ಸೆಕ್ರೆಟರಿ ಮತ್ತು ಪ್ರವೇಟ್ ಸೆಕ್ರೆಟರಿಗಳಲ್ಲಿ ಪರ್ಸೋನಲ್ ಆಫೀಸರ್ ಕರ್ನಾಟಕದವರೇ ಇರಬೇಕೆಂದು ಕೇಂದ್ರದಲ್ಲೂ ಕೂಡ ಅದನ್ನೇ ಹೇಳು ತ್ತಿದ್ದಾರೆ.

ಇನ್ನು ಖಾದಿ ಮತ್ತು ಗ್ರಾಮೋದ್ಯೋಗದ ಬಗ್ಗೆ ನಾನು ಕಳೆದ ಸಲ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಕಾನೂನು ತಿದ್ದುಪಡಿ ಮಾಡಿ ಹೆಚ್ಚಿನ ಅಧಿಕಾರವನ್ನು ಕೊಟ್ಟಿದ್ದೇವೆ. ಈಗಾಗಲೇ ರಾಜ್ಯಮಟ್ಟದಲ್ಲಿ ಬೋರ್ಡ್ ಇದೆ. ಜಿಲ್ಲಾ ಮಟ್ಟದಲ್ಲಿ ೫ ಜನ ಬೋರ್ಡ್ ಡೈರೆಕ್ಟರ್‌ಗಳು ಇರುವಂತೆ ಕಾನೂನು ತಯಾರು ಮಾಡಲಾಗಿದೆ. ಅದನ್ನು ಮುಂದಿನ ವಾರ ಈ ಮನೆಯ ಮುಂದೆ ಇಡುತ್ತೇನೆ. ಜಿಲ್ಲಾ ಸಮಿತಿಗಳಿಗೂ ಕೂಡ ಅಧಿಕಾರವನ್ನು ಕೊಟ್ಟಿದ್ದು ಅದರ ಜೊತೆಗೆ ಅವಶ್ಯ ಸಿಬ್ಬಂದಿಯನ್ನು ಕೊಡತಕ್ಕ ನಿರ್ಣಯವನ್ನು ಮಾಡಿದ್ದೇವೆ. ಖಾದಿ ಮತ್ತು ಗ್ರಾಮೋದ್ಯಮಕ್ಕೆ ಸಹಾಯ ಮಾಡುವ ದೃಷ್ಟಿಯಿಂದ, ಮೂರ್ನಾಲ್ಕು ವರ್ಷಗಳಿಂದ ಬಟ್ಟೆಗಳು ಮಾರಾಟವಾಗಿರಲಿಲ್ಲ, ಹೀಗಾಗಿ ನೇಕಾರರಿಗೆ ಬಹಳ ತೊಂದರೆಯಾಗಿತ್ತು.

೨–೩೦ ಪಿ. ಎಂ.

ನಮ್ಮ ಸರ್ಕಾರದ ರಿಬೇಟ್ ೨೦ ಪರ್‌ಸೆಂಟಿಗೆ ಏರಿಸಿದೇವೆ. ಬೇರೆ ರಾಜ್ಯಗಳಲ್ಲಿ ೧೦ ಪರ್‌ಸೆಂಟ್ ಇದೆ. ೨.೫ ಕೋಟಿ ರೂಪಾಯಿ ಖಾದಿ ಬಟ್ಟೆ ಮಾರಾಟವಾಗಿದೆ. ಸರ್ಕಾರ ೬೦ ಲಕ್ಷ ರೂಪಾಯಿ ರಿಬೇಟ್ ಕೊಡಬೇಕಾಗುತ್ತದೆ. ಖಾದಿ ಬೋರ್ಡಿಗೆ ಹೆಚ್ಚಿನ ಸಹಾಯಧನ ಕೊಡುವ ನಿರ್ಣಯವನ್ನು ಮಾಡಿದ್ದೇವೆ. ೧೯೮೨ರಲ್ಲಿ ೨,೭೬೬ ಯೂನಿಟ್‌ಗಳಿಗೆ ೧೫೪ ಲಕ್ಷ ರೂಪಾಯಿ ಕೊಟ್ಟು ೮೯೭೭ ಜನರಿಗೆ ಸಹಾಯ ಮಾಡಿದ್ದರು. ೧೯೮೩ರಲ್ಲಿ ೧೧,೧೫೪ ಜನರಿಗೆ ಸಹಾಯವಾಗಿದೆ. ಮುಂದಿನ ವರ್ಷ ನಾವು ೭೨೧ ಲಕ್ಷ ರೂಪಾಯಿ ಸಹಾಯಧನ ಕೊಟ್ಟು ೪೪೦೦ ಜನರಿಗೆ ಸಹಾಯ ಮಾಡತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಸೂರ್ಯನಾರಾಯಣರಾವ್.—ದುರ್ವ್ಯವಹಾರದ ಬಗ್ಗೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಆಡಿಟ್ ಮಾಡಿಸತಕ್ಕದ್ದು, ಮತ್ತೆ ಎನ್‌ಕ್ವಯರಿ ಬೇಗ ಮುಗಿಸತಕ್ಕದ್ದರ ಕಡೆ ಕ್ರಮ ಕೈಗೊಳ್ಳುತ್ತೇವೆ. ಖಾದಿ ಉದ್ಯಮದಲ್ಲಿ ತೊಡಗಿರತಕ್ಕ ನೌಕರರ ಬಗ್ಗೆ ಹೇಳಿದ್ದೀರಿ. ಅವರು ನನ್ನನ್ನು ಕಂಡಿದ್ದಾರೆ, ಅವರಿಗೆ ಸರಿಯಾದ ಸಂಬಳ ಸಿಕ್ಕಬೇಕು. ಖಾದಿ ಬೋರ್ಡ್ ಕೆಲಸಗಾರರು. ಸಂಸ್ಥೆಗಳ ಕೆಲಸಗಾರರಾಗಿದ್ದಾರೆ. ಅವರಿಗೆ ನ್ಯಾಯವಾದ ಸಂಬಳ ಸಿಕ್ಕುವಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಇನ್ನು ಹ್ಯಾಂಡ್

ಲೂಮ್ ಸೆಕ್ಟರ್‌ನಲ್ಲಿ ಹೆಚ್ಚಿನ ಪ್ರಗತಿಯನ್ನು ಮಾಡಿದ್ದೇವೆ. ಒಂದು ಸಾವಿರ ನೇಕಾರರಿಗೆ ಹೆಚ್ಚಿನ ಸಹಾಯಧನವನ್ನು ಕೊಟ್ಟಿದ್ದೇವೆ. ಕಳೆದ ವರ್ಷ ನೇಕಾರರ ಆದಾಯ ಪ್ರತಿ ತಿಂಗಳು ೩೫೦ ರೂಪಾಯಿ ಇತ್ತು. ೧೯೮೩-೮೪ರಿಂದ ಪ್ರತಿ ತಿಂಗಳು ೫೦೦ ರೂಪಾಯಿ ಡೈರೆಕ್ಟ್ ಆಗಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಇನ್ನು ಎಲ್ಲಾ ನೇಕಾರರಿಗೂ ಒಂದು ಹೊಸ ಯೋಜನೆಯನ್ನು ಜಾರಿಗೆ ಮಾಡಿದ್ದೇವೆ. ಅದು ಮುಂದಿನ ವರ್ಷ ಜಾರಿಗೆ ಬರುತ್ತದೆ. ತಮಿಳುನಾಡಿನಲ್ಲಿ ಈ ಬಗ್ಗೆ ಬಹಳ ಬೆಳವಣಿಗೆಯಾಗಿದೆ, ಅಲ್ಲಿ ಟ್ರೈನಿಂಗ್ ಇನ್ಸಿಟ್ಯೂಟ್ ಚೆನ್ನಾಗಿದೆ. ತಮಿಳುನಾಡು ಕೈಮಗ್ಗದ ವಿಚಾರದಲ್ಲಿ ಬಹಳ ಮುಂದು ವರಿದಿದೆ. ಆದ್ದರಿಂದ, ನಮ್ಮ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು ಅಲ್ಲಿ ನಡೆಯತಕ್ಕ ವಿಚಾರ ಗಳನ್ನು ತಿಳಿದುಕೊಂಡು ಬರುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಮುಂದೆ ನಾವು ಕೂಡ ಹ್ಯಾಂಡ್ ಲೂಮ್ ಟೆಕ್ನಾಲಜಿ ಇನ್ಸಿಟ್ಯೂಟ್ ಪ್ರಾರಂಭ ಮಾಡುತ್ತೇವೆ. ಅದಕ್ಕೆ ೨೫ರಿಂದ ೫೦ ಲಕ್ಷ ರೂಪಾಯಿ ಖರ್ಚಾಗಬಹುದು. ಇದರ ಜೊತೆಗೆ ಅಲ್ಲಿ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳತಕ್ಕ ನಿರ್ಣಯ ಮಾಡಿದ್ದೇವೆ. ಮುಂದಿನ ವರ್ಷ ಅದು ಪ್ರಾರಂಭವಾಗುತ್ತದೆ. ಇನ್ನು ಕರಕುಶಲ ವಿಚಾರದ ಬಗ್ಗೆ ಹೇಳುವುದಾದರೆ, ಆರ್ಟಿಸಾನ್ ಟ್ರೈನಿಂಗ್ ಸೆಂಟರ್‌ಗಳನ್ನು ಮಾಡಿದ್ದೇವೆ ೧೯೮೨ರಲ್ಲಿ ೧೯೫ ಜನರಿಗೆ ಆರ್ಟಿಸಾನ್‌ಗೆ ಸಹಾಯ ಮಾಡಿದ್ದರೆ ೧೯೮೩ರಲ್ಲಿ ೪೭೭ ಜನರಿಗೆ ಸಹಾಯವನ್ನು ಮಾಡಿದ್ದೇವೆ ನಮ್ಮಲ್ಲಿರ ತಕ್ಕ ಕುಶಲಕರ್ಮಿಗಳನ್ನು ನೋಡಿದರೆ ಇನ್ನೂ ಹೆಚ್ಚಿನ ಕೆಲಸವಮಾಡಬೇಕಾಗಿದೆ. ಮಿಡಲ್‌ಮೆನ್‌ನಿಂದ ತೆಗೆದುಕೊಳ್ಳುವುದು ನಿಲ್ಲಿಸಿ ಅವರಿಂದಲೇ ಡೈರೆಕ್ಟಾಗಿ ಖರೀದಿ ಮಾಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಇನ್ನು ಹೆಚ್ಚು ಕೆಲಸ ಮಾಡಬೇಕಾಗಿರುವುದರಿಂದ ಆ ಬಗ್ಗೆ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಲಿಡ್ಕರ್ ಬಗ್ಗೆ ಒಂದುಮಾತನ್ನು ಹೇಳಬೇಕಾಗುತ್ತದೆ. ಏಕೆಂದರೆ, ಮಾನ್ಯ ಮಹೇಶ್ವರಪ್ಪ ನವರು ಈ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ೧೯೮೨-೮೩ರಲ್ಲಿ ೪೧೫ ಕ್ಯಾಬಿನ್‌ಗಳನ್ನು ಕೊಟ್ಟಿದ್ದರೆ, ೧೯೮೩-೮೪ರಲ್ಲಿ ೭೭೪ ಕ್ಯಾಬಿನ್ನುಗಳನ್ನು ಕೊಟ್ಟಿದ್ದೇವೆ. ಮುಂದೆ ಪ್ರತಿವರ್ಷ ಒಂದು ಸಾವಿರ ಕೊಡತಕ್ಕ ನಿರ್ಣಯವನ್ನು ತೆಗೆದುಕೊಂಡಿದ್ದೇವೆ, ಲಿಡ್ಕರ್‌ನಲ್ಲಿ ಕಾರ್ಮಿಕರು ಬಹಳ ಜಾಣರು ಇದ್ದಾರೆ, ಬಾಟ ಕಂಪನಿ ಟ್ರೈನಿಂಗ್ ಕೊಟ್ಟು, ಡ್ರಾಯಿಂಗ್ ಮಾಡಿ ಅವರು ತಯಾರು ಮಾಡಿದ್ದಾರೆ. ಸ್ಕೂಲು ಕಿಟ್‌ನಲ್ಲಿ ಒನ್ ಫೇರ್ ಆಫ್ ಶೂ, ಪೆನ್ಸಿಲ್ ರಬ್ಬರ್‌ನ್ನು ಇಟ್ಟು ಎಲ್ಲಾ ಮಕ್ಕಳಿಗೆ ಕೊಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದು ಮಾರ್ಕೆಟ್‌ನಲ್ಲಿ ಬೇರೆ ಕಂಪನಿಯವರು ಮಾರುವುದಕ್ಕಿಂತಲೂ ೭೦ರೂಪಾಯಿ ಕಡಿಮೆ ಇದೆ. ಈ ಸಲ ಸುಮಾರು ಸಾವಿರಾರು ಮಕ್ಕಳಿಗೆ ಇಂತಹ ಕಿಟ್‌ಗಳನ್ನು ಕೊಡತಕ್ಕ ಯೋಜನೆ ಗಳನ್ನು ಹಾಕಿಕೊಂಡಿದ್ದಾರೆ. ಮುಂದೆ ಬರತಕ್ಕ ವೆಕೇಷನ್ ಆದಮೇಲೆ ಶಾಲೆಗಳು ಪ್ರಾರಂಭವಾದಾಗ ಎಲ್ಲಾ ಸ್ಕೂಲುಗಳಿಗೂ ಒದಗಿಸತಕ್ಕ ಯೋಜನೆ ಇದೆ. ಅಲ್ಲದೆ, ಟ್ರೈನಿಂಗ್ ಸಲುವಾಗಿ ಮೂರು ವರ್ಷದ ಡಿಪ್ಲೊಮೊ ಕೋರ್ಸ್ ಜುಲೈನಲ್ಲಿ ಮಾಡುತ್ತಿದ್ದೇವೆ ಈ ವರ್ಷ ಪ್ರಾರಂಭ ಮಾಡಿದ್ದೇವೆ. ಇನ್ನು ಪೋಲೀಸ್ ಇಲಾಖೆಗೆ ಅವಶ್ಯವಿರುವ ಬೂಟುಗಳನ್ನು, ಪಾದರಕ್ಷೆಗಳನ್ನು ಲಿಡ್ಕರ್‌ನಿಂದ ಕೊಡ ತಕ್ಕ ಕಾಂಟ್ರಾಕ್ಟ್ ಮಾಡಿ ಕೊಂಡಿದ್ದೇವೆ. ಅವರಿಗೆ ಹೆಚ್ಚಿನ ರೀತಿಯ ಕೆಲಸ ಕೊಡತಕ್ಕ ಕಾರ್ಯ ಮಾಡಿದ್ದೇವೆ. ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ಬಹಳ ಆದಾಯ ಬರುತ್ತದೆ ಬೆಂಗಳೂರಿನಲ್ಲಿ ಕೊಲ್ಹಾಪುರ ಚಪ್ಪಲಿ ಶಾಪ್ ಮಾಡತಕ್ಕ ಯೋಜನೆ ಹಾಕಿಕೊಂಡು ಮಾಡಿದ್ದಾರೆ. ಮೊನ್ನೆ ಕಲ್ಕತ್ತ ಎಕ್ಸಿಬಿಷನ್‌ನಲ್ಲಿ ೭ಲಕ್ಷ ರೂಪಾಯಿ ಚಪ್ಪಲಿ ಮಾರಾಟ ಮಾಡಿದ್ದಾರೆ. ತಮಗೆ ಹೇಳಬೇಕು ಅಂದರೆ, ಒಂದೇ ಕುಟುಂಬದ ಮೂರು ಜನರು ಒಂದು ದಿವಸಕ್ಕೆ ನಾಲ್ಕುಪೇರ್ ತಯಾರು ಮಾಡು ತ್ತಾರೆ. ನಾನು ಇದನ್ನು ಬೆಂಗಳೂರಿನಲ್ಲಿ ಮಾಡಿದ್ದಾರೆಂದು ಹೇಳಿದಾಗ ನಂಬಲಿಲ್ಲ. ನಮ್ಮ ಮ್ಯಾನೇ ಜಿಂಗ್ ಡೈರೆಕ್ಟರ್ ಮುನಿಯಪ್ಪನವರು ಹೇಳಿದಾಗ ನಂಬಬೇಕಾಯಿತು. ಇವೊತ್ತು ಅವರು ಸರಿಯಾಗಿ ಕೆಲಸ ಮಾಡಿದರೆ ೫೦ ರಿಂದ ೬೦ ರೂಪಾಯಿವರೆಗೆ ಒಂದು ದಿವಸಕ್ಕೆ ಸಂಬಳ ಸಿಕ್ಕುತ್ತದೆ. ಇದನ್ನು ಜಿಲ್ಲಾಮಟ್ಟ, ತಾಲ್ಲೂಕುಮಟ್ಟ, ಗ್ರಾಮಾಂತರದ ಮಟ್ಟಗಳಿಗೆ ವಿಸ್ತರಣೆ ಮಾಡಬೇಕೆಂದು ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ಅವರಿಗೆ ಇರತಕ್ಕ ತೊಂದರೆ ಅಂದರೆ ಕಚ್ಚಾಮಾಲು ಒದಗಿಸ ತಕ್ಕದ್ದು, ಮತ್ತೆ ಮಾರ್ಕೆಟ್ ಕೊಡತಕ್ಕದ್ದು, ಈ ಎರಡಕ್ಕೂ ವ್ಯವಸ್ಥೆ ಮಾಡಿದ್ದೇವೆ. ಅನೇಕ ಡಿಪೋಗಳನ್ನು ತೆರೆದು ಅವರು ಎಷ್ಟು ಮಾಡಿದರೂ ಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಎಂಟರ್‌ಪ್ರಿನರ್ ಟ್ರೈನಿಂಗ್ ಕ್ಯಾಂಪುಗಳನ್ನು ಎಲ್ಲಾ ತಾಲ್ಲೂಕುಗಳಲ್ಲೂ ತೆರೆದು ಇಡಿಪಿ ಪ್ರೋಗ್ರಾಮ್ ನಲ್ಲಿ ಎಸ್‌ಸಿ, ಎಸ್‌ಟಿ, ಮತ್ತು ವುಮೆನ್ ಅವರಿಗ ಇದರಲ್ಲಿ ಅವಕಾಶ ಮಾಡಿಕೊಡಬೇಕೆಂದು ಮಾಡಿದ್ದೇವೆ. ಕರ್ನಾಟಕ ವುಮೆನ್ ಎಂಟರ್‌ಪ್ರಿನರ್ಸ್‌ಗೆ ಆಲ್ ಇಂಡಿಯಾ ಪ್ರೈಸ್ ಸಿಕ್ಕಿದೆ. ಮೊನ್ನೆಯ ದಿವಸ ಪ್ರಧಾನ ಮಂತ್ರಿಗಳಿಂದ ಪ್ರೈಸ್ ಸ್ವೀಕಾರ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ವುಮೆನ್ಸ್ ಡಿಕೇಡ್‌ನಲ್ಲಿ ಏನು ಮಾಡಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಅವರಿಗೆ ಸ್ಪೆಷಲ್ ಇನ್‌ಸೆಂಟೀವ್ ಕೊಟ್ಟಿದ್ದೇವೆ. ಅದಕ್ಕೂ ವ್ಯವಸ್ಥೆ ಮಾಡುತ್ತಿದ್ದೇವೆ. ಇನ್ನು ಕೆಎಸ್‌ಐ ಐಡಿಸಿ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ೨೦ ವರ್ಷದಲ್ಲಿ ಎರಡು ಸಾವಿರ ಷೆಡ್ಡುಗಳನ್ನು ೨೦ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಿದರೆ, ಒಂದೂವರೆ ವರ್ಷದಲ್ಲಿ ೧೫೬೦ ಷೆಡ್ಡುಗಳನ್ನು ೩೬.ಕೋಟಿ ರೂಪಾಯಿ ಖರ್ಚುಮಾಡಿ ಕಟ್ಟುತ್ತಿದ್ದಾರೆ. ಪ್ರತಿವರ್ಷ ಒಂದು ಸಾವಿರ ಷೆಡ್ಡುಗಳನ್ನು ಕಟ್ಟಬೇಕೆಂದು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ನಾನು ಹೋದಸಾರಿ ಹೇಳಿದ್ದೆ. ಈ ಕೈಗಾರಿಕೆ ಮಾಡತಕ್ಕವರ ತೊಂದರೆಗಳ ಬಗ್ಗೆ ಅಡ್ವೈಸರಿ ಕಮಿಟಿ ಸೆಟ್‌ಅಪ್ ಮಾಡುವುದು ಮಾಡಿದ್ದೇವೆ. ಪ್ರತಿಯೊಂದು ಇಂಡಸ್ಟ್ರಿಯಲ್ ಎಸ್ಟೇಟ್‌ಗೆ ಬೇಕಾಗತಕ್ಕ ರಾಮೆಟೀರಿಯಲ್ಸ್ ಬಗ್ಗೆ ಬೀದರ್‌ನಲ್ಲಿ ಒಂದು ರೇಟು, ಬೆಳಗಾಂನಲ್ಲಿ ಒಂದು ರೇಟು ಇತ್ತು. ಅದನ್ನು ತೆಗೆದುಹಾಕಿ, ಈ ರಾಜ್ಯದಲ್ಲಿ ರಾಮೆಟೀರಿಯಲ್ ಒಂದೇ ದರದಲ್ಲಿ ಕೊಡಬೇಕೆಂದು ಮಾಡಿದ್ದೇವೆ. ರಾಮೆಟೀರಿಯಲ್ ಸರಿಯಾಗಿ ಸಿಕ್ಕಬೇಕೆಂದು ಮಾಡಿದ್ದೇವೆ. ಇಂಡಸ್ಟ್ರಿಯಲ್ ಎಸ್ಟೇಟಿನವರು ಇಂಡೆಂಟ್ ಕೊಟ್ಟಾಗ, ಪಾಸ್ ಬುಕ್‌ನಲ್ಲಿ ಡೀಟೈಲ್ ನಮೂದು ಮಾಡತಕ್ಕದ್ದು ಇದೆ. ಇನ್ನು ಟರ್ನ್ ಓವರ್ ಬಗ್ಗೆ ಹೇಳಬೇಕೆಂದರೆ ೧೯೮೨-೮೩ರಲ್ಲಿ ೧೩.೬೭ ಕೋಟಿ ರೂಪಾಯಿ, ೧೯೮೩-೮೪ರಲ್ಲಿ ೧೪.೯೪ ಕೋಟಿ ರೂಪಾಯಿ. ಇನ್ನು ಚಿಕ್ಕ ಚಿಕ್ಕ ಕೈಗಾರಿಕೆಗಳಿಗೆ ಇರತಕ್ಕ ತೊಂದರೆ ಅಂದರೆ, ಅವರಿಗೆ ಮಾರ್ಕೆಟಿಂಗ್ ತೊಂದರೆ ಇದೆ. ಹೀಗಾಗಿ ಅವರು ನಷ್ಟವನ್ನು ಅನುಭವಿಸಬೇಕಾಗುತ್ತದೆ. ಈಗ ಕೆಎಸ್‌ಐ ಐಡಿಸಿ ಯು ಸಬ್ಸಿಡಿಯರಿ ಕಂಪನಿಯಿಂದ ನಾವು ಅನುಕೂಲ ಮಾಡಿದ್ದೇವೆ. ಮಾರ್ಕೆಟಿಂಗ್ ಸಲುವಾಗಿ ತಯಾರು ಮಾಡುವ ಎಲ್ಲಾ ವಸ್ತುಗಳನ್ನು ಕೊಂಡು ನಮ್ಮ ಬ್ರಾಂಡ್ ಹಾಕಿ ಅವಶ್ಯವಿರುವ ಜನರಿಗೆ ಒದಗಿಸತಕ್ಕ ಯೋಜನೆ ಹಾಕಿಕೊಂಡಿದ್ದೇವೆ. ಈಗಾಗಲೇ ಕಂಪನಿಯು ಬೈಲಾ ಆಗಿದೆ, ರಿಜಿಸ್ಟ್ರೇಷನ್ ಮಾತ್ರ ಉಳಿದಿದೆ.

ಆ ಮೇಲೆ ಈ ವರ್ಷ ಹೆಣ್ಣುಮಕ್ಕಳಿಗೋಸ್ಕರವಾಗಿ ಒಂದು ಎಸ್ಟೇಟ್‌ನ್ನು ಮಾಡುತ್ತಿದ್ದೇವೆ. ಪ್ರತಿ ತಾಲ್ಲೂಕಿನಲ್ಲೂ ಇಂಡಸ್ಟ್ರಿಯಲ್ ಎಸ್ಟೇಟ್‌ನ್ನು ಮಾಡತಕ್ಕ ಮಾತನ್ನು ಹೇಳಿದ್ದೆ ? ಈಗಲೂ ಸುಮಾರು ೭೫–೮೦ ಜಾಗಗಳಲ್ಲಿ ಕೊಟ್ಟಿದ್ದೇವೆ. ೬೦ ಜಾಗಗಳಲ್ಲಿ ಕೆಲಸ ಪ್ರಾರಂಭವಾಗಿದೆ. ಮತ್ತೆ ಕೆಲವು ಅಂಡರ್ ಕನ್‌ಸ್ಟ್ರಕ್ಷನ್‌ನಲ್ಲಿ ಇವೆ ಮತ್ತೆ ಉಳಿದ ತಾಲ್ಲೂಕ್‌ಗಳಲ್ಲಿ ಭೂಮಿಯನ್ನು ಗುರುತಿಸಿದ್ದೇವೆ. ೧೯೮೪–೮೫ರ ತಂತ್ರದೊಳಗೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಂಡಸ್ಟ್ರಿಯಲ್ ಎಸ್ಟೇಟ್‌ನ್ನು ಕೊಡತಕ್ಕ ವ್ಯವಸ್ಥೆ ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ, ಅದೇ ರೀತಿಯಾಗಿ ಕಾರ್ಯಗತ ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—೧ ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡುವ ಬಗ್ಗೆ ತಾವು ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ನಾವು ಒಂದು ಸಾವಿರ ಕೈಗಾರಿಕೆಗಳನ್ನು ಮಾಡಲಿಲ್ಲವೆಂದು ಕೆಲವು ಮಾನ್ಯ ಸದಸ್ಯರುಗಳು ಟೀಕೆ ಮಾಡಿ ಹೇಳಿದರು. ನಾನು ಅಭಿಮಾನದಿಂದ ಹೇಳುತ್ತೇನೆ. ಮೊದಲು ೩ ತಿಂಗಳಲ್ಲಿ ೬೫೦ ಬಂತು, ಅನಂತರ ೭೦೦ ಕ್ಕೆ ಬರುತ್ತಿದೆ. ಹೋದ ತಿಂಗಳಷ್ಟು ಹೊತ್ತಿಗೆ ಅದು ೯೦೦ಕ್ಕೆ ತಲುಪಿದೆ. ಆದುದರಿಂದ ಸಾವಿರಕ್ಕೆ ಬಂದಿಲ್ಲ ಅದನ್ನು ಒಪ್ಪುತ್ತೇನೆ. ಆದರೆ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್‌ರವರು ಕೇಳಿದರು ಎಲ್ಲಿ ಬಂದಿದೆ ಎಂದು ? ಬೇರೆ ಬೇರೆ ಭಾಗಗಳಲ್ಲಿ ಬಂದಿದೆ, ಅದು ಬೆಂಗಳೂರಿನಲ್ಲಿ ಬಂದಿಲ್ಲ ಆದುದರಿಂದ ಅವರಿಗೆ ಅದು ಕಾಣುತ್ತಿಲ್ಲ. ಇದಕ್ಕೆ ಹಣ ಎಲ್ಲಿಂದ ಬಂತು ಎಂದು ತಾವು ಕೇಳುತ್ತಿದ್ದೀರಿ. ಕೆ. ಎಸ್. ಎಫ್. ಸಿ. ಯವರು ಕೊಟ್ಟಂಥ ಹಣ ನೋಡಿದರೆ ತಮಗೆ ಗೊತ್ತಾಗುತ್ತದೆ. ೧೯೮೨–೮೩ ರಲ್ಲಿ ೪೩. ೭೮ ಕೋಟಿ ಸಹಾಯ ಮಾಡಿದ್ದರೆ ೧೯೮೩–೮೪ ರಲ್ಲಿ ಡಿಸೆಂಬರ್ ವರೆಗೆ ೪೧.೯೮ ಕೋಟಿ ಕೊಟ್ಟಿದ್ದಾರೆ ಮತ್ತೆ ಈಗಿನ ಅಂದಾಜಿನ ಪ್ರಕಾರವಾಗಿ ಅದು ೫೫ ಕೋಟಿ ಮಾರ್ಚ್ ಆಖೈರ್ ಒಳಗೆ ಆಗುತ್ತದೆ. ಅನಂತರ ಮುಂದಿನ ವರ್ಷದಲ್ಲಿ ಅದು ಸುಮಾರು ೭೦ ಕೋಟಿವರೆಗೆ ಸಹಾಯ ಮಾಡತಕ್ಕ ಒಂದು ಅಂದಾಜು ಇದೆ. ಅವರು ಕೊಟ್ಟಂಥ ಹಣದಲ್ಲಿ ವಿಶೇಷವಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ಹೋಗಿದೆ. ೬೦ ಪರ್ಸೆಂಟ್‌ನ್ನು ನಾವು ಹಿಂದುಳಿದ ಜಿಲ್ಲೆಗಳಿಗೆ ಹಂಚಿದ್ದೇವೆ. ೧೧ ಹಿಂದುಳಿದ ಜಿಲ್ಲೆಗಳಿಗೇ ಹೋಗಿದೆ. ಆ ಮೇಲೆ ಈ ನಮ್ಮ ಕೆ. ಎಸ್. ಎಫ್. ಸಿ. ರಾಷ್ಟ್ರದಲ್ಲಿಯೇ ಉತ್ತಮವಾದ ಸಂಸ್ಥೆಯಾಗಿದೆ ಎನ್ನುವ ಒಂದು ಅಭಿಪ್ರಾಯಬಂದಿದೆ ಬಹಳ ಚೆನ್ನಾಗಿ ಕೆಲಸಮಾಡಿದ್ದಾರೆ. ಈಗ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳ

ತಕ್ಕ ಕೆಲಸ ಪ್ರಾರಂಭವಾಗಿದೆ. ಮತ್ತು ಬೀದರ್‌ನಲ್ಲೂ ಸಹ ಇಂಡಸ್ಟ್ರಿಯಲ್ ಶೆಡ್‌ಗಳನ್ನು ತೆರೆಯುವುದಕ್ಕೆ ಯೋಜನೆಗಳನ್ನು ಮಾಡಿದ್ದೇವೆ. ಅಲ್ಲಿಗೂ ಸಹ ೧೫ ೧೩ ಕೋಟಿ ವೆಚ್ಚವಾಗುತ್ತದೆ. ಭೂಮಿ, ನೀರು ವಿದ್ಯುಚ್ಛಕ್ತಿ ಇನ್ನು ಮುಂತಾದ ಇನ್‌ಫ್ರಾ ಸ್ಟ್ರಕ್ಚರನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಆದುದರಿಂದ ಭೂಮಿಯನ್ನು ತೆಗೆದುಕೊಳ್ಳುತಕ್ಕ ಕೆಲಸ ಈಗ ಪ್ರಾರಂಭವಾಗಿದೆ.

ಶ್ರೀ ಗೋವಿಂದ ಪಿ ಒಡೆಯುರಾಜ್.—ಬೀದರ್‌ನಲ್ಲಿ ಬೇರೆ ರಾಜ್ಯಗಳಿಂದ ಬಂದಿರತಕ್ಕವರು ಭೂಮಿಯನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮವರೇ ಅಲ್ಲಿ ಇದ್ದಾರೆ. ಆ ಜನಕ್ಕೆ ಭೂಮಿಯನ್ನು ಕೊಡತಕ್ಕ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಲೋಕಲ್ ಜನಕ್ಕೇ ಆದ್ಯತೆ ಕೊಡುತ್ತಿದ್ದೇವೆ. ನಮ್ಮವರು ಮುಂದೆ ಬಾರದೇ ಹೋದಾಗ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ದುರಾದೃಷ್ಟವಶಾತ್ ನಮ್ಮವರು ಬರುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮವರೂ ಮುಂದೆ ಬರುತ್ತಿದ್ದಾರೆ. ಆದುದರಿಂದ ಇವತ್ತಿನ ದಿವಸ ಅದಕ್ಕೆ ಕ್ಲಿಯರೆನ್ಸ್ ಕೊಟ್ಟಿದ್ದೇವೆ. ಇದರಲ್ಲಿ ಸುಮಾರು ೫೦ ಕ್ಕಿಂತ ಹೆಚ್ಚಿಗೆ ಕನ್ನಡಿಗರು ಇದ್ದಾರೆ. ಬೆಳವಣಿಗೆಯ ಬಗ್ಗೆ ಹೇಳುವುದಾದರೆ ಮುಂದಿನ ವರ್ಷ ನಮ್ಮ ರಾಜ್ಯದಲ್ಲಿ ಕೈಗಾರಿಕೆಯಲ್ಲಿ ತೊಡಗತಕ್ಕ ಬಂಡವಾಳ ಅಂದಾಜು ೭೦೦–೮೦೦ ಕೋಟಿ. ಇದೆ. ಈಗಾಗಲೇ ಹಲವಾರು ಜನ ಲೈಸನ್ಸನ್ನು ತೆಗೆದುಕೊಳ್ಳಲು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ಇನ್ನು ಟಾ. ಟಾ. ಕಂಪನಿಯವರು ಧಾರವಾಡದಲ್ಲಿ ೭, ೮ ನೂರು ಕೋಟಿ ರೂ. ಗಳನ್ನು ಇನ್‌ವೆಸ್ಟ್ ಮಾಡತಕ್ಕದ್ದಕ್ಕೆ ಅವಕಾಶವಿದೆ. ಅವರು ಅಲ್ಲಿ ಒಂದು ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ್ನು ಪ್ರಾರಂಭ ಮಾಡುವವರಿದ್ದಾರೆ. ಮೊದಲು ಅಲ್ಲಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮಾಡತಕ್ಕದರ ಬಗ್ಗೆ ತಕರಾರು ಇತ್ತು. ಹಿಂದೆ ಒಪ್ಪಿಕೊಂಡ ಪ್ರಕಾರವಾಗಿ ಟ್ರೈನಿಂಗ್ ಕೊಡತಕ್ಕ ಕೆಲಸ ಪ್ರಾರಂಭವಾಗಿದೆ.

ಇನ್ನು ಟಿ.ವಿ. ಸೆಟ್‌ಗಳನ್ನು ಮತ್ತು ಕಲರ್ ಟಿ.ವಿ.ಗಳನ್ನು ಈಗಾಗಲೇ ನಾವು ಕಿಯಾನಿಕ್ಸ್‌ರವರ ಮುಖಾಂತರವಾಗಿ ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಹೊರಗಿನಿಂದ ಬಂದಂಥ ಕಾಂಪೊನೆಂಟ್ಸ್‌ಗಳನ್ನೆಲ್ಲಾ ಸೇರಿಸಿ ಇಲ್ಲಿ ಅಸೆಂಬಲ್ ಮಾಡಿ ಮಾರಾಟ ಮಾಡುತ್ತಿದ್ದೀರಿ. ಅಂಥಾದ್ದರಲ್ಲಿ ನಾವೇ ಮಾಡಿದ್ದೇವೆಂದು ಹೊಗಳಿಕೊಳ್ಳುತ್ತಿದ್ದೀರಿ

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಅಸೆಂಬಲ್ ಮಾಡೋಣವೆಂದು ಮೊದಲನೆ ಹೆಜ್ಜೆ ಹಾಕಿದ್ದೇವೆ, ಕೆಲವು ಕಾಂಪೊನೆಂಟ್ಸನ್ನು ಹೊರಗಡೆಯಿಂದ ತರಿಸಿಕೊಂಡೇ ಮಾಡಬೇಕಾಗಿದೆ, ನಾವು ಅದನ್ನು ಇಲ್ಲಿ ಮಾಡುತ್ತಿದ್ದೇವೆಂದು ಹೇಳುತ್ತಿಲ್ಲ. ಇನ್ನು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂ ಬಗ್ಗೆ ಟೀಕೆ ಬಂತು. ಆದರೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಆಯವ್ಯಯ ಭಾಷಣ ಮಾಡುತ್ತಾ ಹೇಳಿದ್ದಾರೆ, ಈ ಯೋಜನೆಗೆ ಬ್ಯಾಂಕ್‌ನ ಸಹಾಯದಿಂದ ಮಾಡತಕ್ಕ ಯೋಜನೆ ಎಂದು ಪ್ರಕಟಣೆ ಮಾಡಿದರು. ಇದರ ಬಗ್ಗೆ ೧೫-೮–೮೩ ರಂದು ಪ್ರಧಾನ ಮಂತ್ರಿಗಳವರೂ ಸಹ ಭಾಷಣ ಮಾಡಿದರು. ೨೭–೩–೮೩ ರಂದು ಸರ್ಕಾರ ಆಜ್ಞೆ ಹೊರಡಿಸಿದೆ. ಈ ಯೋಜನೆಯನ್ನು ನಾವು ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರವಾಗಿ ಮಾಡುತ್ತಿದ್ದೇವೆ. ಜೊತೆಗೆ ಅಕ್ಟೋಬರ್ ೨ರಂದು ಗಾಂಧೀ ಜಯಂತಿ ದಿವಸದಂದು ಪ್ರಾರಂಭ ಮಾಡಿದ್ದೇವೆ. ಪ್ರತಿ ತಾಲ್ಲೂಕಿನಲ್ಲೂ ೧೦೦೦ ಜನರನ್ನು ಆಯ್ಕೆ ಮಾಡಿ ಕೆಲಸ ಕೊಡುವುದಕ್ಕೆ ಅವಕಾಶವಿರುವುದರಿಂದ ೧೨ ಸಾವಿರದ ೫೦೦ ಜನರಿಗೆಂದು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಅದನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂದು ನಾವು ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ಮಾಡುತ್ತಿದ್ದೇವೆ ಅದೇ ತಮಿಳು ನಾಡಿನವರಿಗೆ ಹೆಚ್ಚಿಗೆ ಕೊಟ್ಟಿದ್ದಾರೆ, ಕೇರಳದವರಿಗೆ ಹೆಚ್ಚಿಗೆ ಕೊಟ್ಟಿದ್ದಾರೆ ಆದುದರಿಂದ ನಮಗೂ ಸಹ ಹೆಚ್ಚಿಗೆ ಜನರಿಗೆ ಕೊಡುವ ಹಾಗೆ ಮಾಡಬೇಕೆಂದು ಒತ್ತಾಯ ಮಾಡಿದ್ದೇವೆ. ಇದನ್ನು ಕೇಂದ್ರ ಸರ್ಕಾರದವರು ಸಹ ಒಪ್ಪುತ್ತಾರೆ ಎನ್ನತಕ್ಕ ಭರವಸೆ ಇದೆ. ನಾವು ಇಲ್ಲಿಯವರೆಗೆ ೧೫ ಸಾವಿರ ಜನರಿಗೆ ರೆಕಮೆಂಡ್ ಮಾಡಿದ್ದೇವೆ, ಬ್ಯಾಂಕ್‌ನವರು ಸಹ ಈಗಾಗಲೇ ಅಮೌಂಟ್‌ನ್ನು ರಿಲೀಜ್ ಮಾಡಿ ೩ ಸಾವಿರದ ೭೦೦ ಜನರಿಗೆ ಕೊಟ್ಟಿದ್ದಾರೆ. ಅನಂತರ ರಿಜರ್ವ್ ಬ್ಯಾಂಕ್‌ನವರ ಗೈಡಲೈನ್ಸ್ ಪ್ರಕಾರವಾಗಿಯೇ ಮಾಡುತ್ತಿದ್ದೇವೆ. ಆದುದರಿಂದ ಬ್ಯಾಂಕ್‌ಗಳ

ಮುಖಾಂತರವಾಗಿ ಸಹಾಯವನ್ನು ಒದಗಿಸತಕ್ಕ ಕೆಲಸವನ್ನು ಮಾಡಿ ಅದರಲ್ಲಿ ನಾವು ಹಿಂದೆ ಬಿದ್ದಿಲ್ಲ. ಆದುದರಿಂದ ೧೫ ಸಾವಿರ ಜನಕ್ಕೆ ರೆಕಮೆಂಡೇಷನ್ ಮಾಡಿ ಕಳುಹಿಸಿದ್ದೇವೆ. ಈ ವರ್ಷ ಅಂತ್ಯದೊಳಗೆ ೨೦ ಸಾವಿರ ಜನಕ್ಕೆ ಕೆಲಸ ಕೊಡತಕ್ಕ ವ್ಯವಸ್ಥೆ ಇದೆ. ಇನ್ನು ವಿದ್ಯಾವಂತರಿಗೆ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂನ್ನು ಹೊಸದಾಗಿ ಮಾಡಿದ್ದೇವೆ. ಅದು ಏನೆಂದರೆ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಂ ಎಂದು ಮಾಡಿದ್ದೇವೆ. ಇದರಿಂದ ಈ ವರ್ಷ ಅನೇಕ ಜನ ಲಾಭವನ್ನು ಪಡೆದುಕೊಂಡಿದ್ದಾರೆ ಇನ್ನು ಐ.ಎಸ್.ಪಿ. ಕಾಂಪೊನೆಂಟ್ ಪ್ರೋಗ್ರಾಂನ್ನು ಅನೇಕ ಕಡೆಗಳಲ್ಲಿ ಉಪಯೋಗ ಮಾಡಿಕೊಂಡಿರಲಿಲ್ಲ. ಇದು ನಾನು ಅನೇಕ ತಾಲ್ಲೂಕೆಗಳಿಗೆ ಪ್ರವಾಸ ಮಾಡಿದಾಗ ಗೊತ್ತಾಯಿತು. ೧೦ ಪರ್ಸೆಂಟ್ ಕೂಡ ಉಪಯೋಗ ಮಾಡಿಕೊಂಡಿರಲಿಲ್ಲ. ಈ ವರ್ಷ ಇದು ಪ್ರಾರಂಭವಾದ ಮೇಲೆ ೧೯೮೩-೮೪ ರಲ್ಲಿ ೧೪೦ ಲಕ್ಷ ಜನರಿಗೆ ಐ. ಎಸ್. ಪಿ. ಕಾಂಪೊನೆಂಟ್ ಪ್ರೋಗ್ರಾಂ ಪ್ರಕಾರವಾಗಿ ಎಸ್.ಸಿ. ಮತ್ತು ಎಸ್.ಟಿ ಯಾವರು ಪ್ರಯೋಜನ ಪಡೆದಿದ್ದಾರೆ. ೧೯೮೪-೮೫ ರಲ್ಲಿ ೨೦೦ ಲಕ್ಷ ಜನರಿಗೆ ಸಹಾಯವನ್ನು ಒದಗಿಸ ತಕ್ಕ ಗುರಿಯನ್ನಿಟ್ಟುಕೊಂಡಿದ್ದೇವೆ.

ಇದು ಅಲ್ಲದೆ ಇನ್ನು ಅನೇಕ ವಿಚಾರಗಳು ಇದ್ದವು. ಮುಖ್ಯವಾಗಿ ಗಮನಾರ್ಹವಾದ ವಿಚಾರ ವೆಂದರೆ ಕಾಯರ್ ಇಂಡಸ್ಟ್ರೀಸ್ ಬಗ್ಗೆ ಮಾನ್ಯ ಅನೇಕ ಸದಸ್ಯರು ಮಾತನಾಡಿದರು. ನಮ್ಮ ರಾಜ್ಯ ದಲ್ಲಿ ೯೮ ಕೋಟಿಯಷ್ಟು ತೆಂಗಿನಕಾಯಿ ಉತ್ಪಾದನೆ ಇದೆ ಎಂದು ಅಂದಾಜು ಮಾಡಲಾಗಿದೆ. ಈಗಾ ಗಲೇ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನಕಾಯಿ ಉತ್ಪಾದನೆಯಾಗತಕ್ಕಂಥ ಕೇರಳದಲ್ಲಿ ಆಲ್ ಇಂಡಿಯಾ ಕಾಯರ್ ಬೋರ್ಡ್ ಎಂದು ಇದೆ. ನಮ್ಮ ಕರ್ನಾಟಕದಲ್ಲಿ ಇದನ್ನು ಕಲ್ಪವೃಕ್ಷವೆಂದು ಕರೆಯುತ್ತೇವೆ. ಇದರ ಎಲ್ಲ ವಸ್ತುಗಳನ್ನು ಉಪಯೋಗ ಮಾಡತಕ್ಕಂಥ ಅವಕಾಶವಿರುತ್ತದೆ. ಅದಕ್ಕಾಗಿ ನಮ್ಮ ಕರ್ನಾಟಕದಲ್ಲಿ ಒಂದು ಬ್ರೌನ್ ಫೈಬರ್ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಬೇಕೆಂದು ಕಳೆದ ತಿಂಗಳಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನಮ್ಮ ರಾಜ್ಯಕ್ಕೆ ಬ್ರೌನ್ ಫೈಬರ್ ಇಂಡಸ್ಟ್ರಿಯನ್ನು ಕೊಡಲು ಪ್ಲಾನಿಂಗ್ ಕಮಿಟಿಯವರು ಒಪ್ಪಿಕೊಂಡಿದ್ದಾರೆ. ಈಗಾಗಲೇ ರಿಸರ್ಚಿಗೆ ಇನ್‌ಸ್ಟಿಟ್ಯೂಟ್ ಇನ್ ಬ್ರೌನ್ ಫೈಬರ್ ಇಂಡಸ್ಟ್ರೀ ಕೇರಳದಲ್ಲಿ ಇರುತ್ತದೆ. ಅದನ್ನು ಕರ್ನಾಟಕಕ್ಕೆ ತರತಕ್ಕಂಥ ಒಂದು ಮಾತನ್ನೂ ಕೂಡ ಹೇಳಿರುತ್ತೇನೆ. ಕೇಂದ್ರದ ಮಂತ್ರಿಗಳು ಸಹ ಒಪ್ಪಿಕೊಂಡಿರುತ್ತಾರೆ, ಸಹಕಾರಿ ರಂಗದಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ ಆದುದರಿಂದ ಕಾಯರ್ ಬೋರ್ಡ್ ಮಾಡಬೇಕೆಂದೂ ಕೂಡ ಹೇಳಿದ್ದೇನೆ. ಅದು ಇಷ್ಟರಲ್ಲಿಯೇ ಅಸ್ತಿತ್ವಕ್ಕೆ ಬರುತ್ತದೆ.

ಇನ್ನು ಎನ್‌ಜಿಇಎಫ್ ಬಗ್ಗೆ ಹೇಳುವುದಾದರೆ ಇದು ಬೆಂಗಳೂರಿನಲ್ಲಿ ಮಾತ್ರವಲ್ಲದೆ ಕರ್ನಾಟಕದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಉತ್ತಮ ಪಡಿಸಿಕೊಂಡಿದೆ. ಬೇರೆ ರಾಜ್ಯಗಳಲ್ಲಿ ಇದರ ಶಾಖೆಗಳನ್ನು ಪ್ರಾರಂಭಿಸಿದ್ದು ಅದರಿಂದ ಲಾಭದಾಯಕವಾಗಿಲ್ಲವೆಂದು ಈಗಾಗಲೇ ನಿರ್ಣಯವನ್ನು ತೆಗೆದುಕೊಳ್ಳ ಲಾಗಿದೆ. ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಹೊಸದಾಗಿ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗಿದೆ. ಚಿಕ್ಕ ಚಿಕ್ಕ ಮೋಟಾರುಗಳನ್ನು ತಯಾರು ಮಾಡತಕ್ಕಂಥ ನಮ್ಮ ರಾಜ್ಯದ ೫ ಡಿವಿ ಜನ್‌ಗಳಲ್ಲಿ ಒಂದೊಂದು ಎನ್‌ಜಿಇಎಫ್ ಶಾಖೆಯನ್ನು ಮಾಡತಕ್ಕಂಥ ನಿರ್ಣಯವನ್ನು ಮಾಡಿದ್ದೇವೆ. ರಾಷ್ಟ್ರದಲ್ಲೇ ವಿಶ್ವದಲ್ಲೇ ಹೆಸರು ಪಡೆದಿರತಕ್ಕಂಥ ಎನ್‌ಜಿಇಎಫ್ ಕಲ್ಚರ್ ಏನು ಇದೆ ಇದನ್ನು ಎಲ್ಲರೂ ಅನುಸರಿಸುತ್ತಿದ್ದಾರೆ. ಪ್ರತಿಯೊಂದು ರೆವಿನ್ಯೂ ಡಿವಿಜನ್‌ನಲ್ಲೂ ಒಂದು ಶಾಖೆಯನ್ನು ಮಾಡತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿರುತ್ತೇವೆ. ಉತ್ತರ ಕರ್ನಾಟಕದಲ್ಲಿ ಸರ್ಕಾರಿ ವಲಯದ ಯಾವುದೇ ಒಂದು ಕಾರ್ಖಾನೆ ಇಲ್ಲದಿರುವುದರಿಂದ ಅವಕ್ಕೆ ರಾಜ್ಯ ಸರ್ಕಾರದ ಮೊದಲನೆಯ ಶಾಖೆಯನ್ನು ಉತ್ತರ ಕರ್ನಾಟಕದಲ್ಲಿ ಅಂದರೆ ಮಂಗಳೂರಿನಲ್ಲಿ ಸ್ಥಾಪನೆ ಮಾಡಲು ಸರ್ಕಾರ ನಿರ್ಧರಿಸಿದೆ.

ಇನ್ನು ಎಂ.ಎಂ.ಎಲ್. ವಿಚಾರದ ಬಗ್ಗೆ ಹೇಳತಕ್ಕಂಥದ್ದು ಏನೆಂದರೆ, ಈಗಾಗಲೇ ನಮ್ಮ ಎಂ.ಎಂ.ಎಲ್. ಒಬ್ಬರು ಕಲ್ಲು ಪಾಲೀಶ್ ಮಾಡತಕ್ಕಂಥ ಒಂದು ಕಾರ್ಖಾನೆಯನ್ನು ಹಾಸನದಲ್ಲಿ ಮಾಡಿ ದ್ದಾರೆ. ಉತ್ತಮವಾದ ನೆಲೆ ಸಿಗತಕ್ಕಂಥ ಒಂದೊಂದು ರೆವಿನ್ಯೂ ಡಿವಿಜನ್‌ನಲ್ಲಿಯೂ ಒಂದೊಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ. ಎಲ್ಲ ಡಿವಿಜನ್‌ಗೂ ಇದು ಬರು ತ್ತದೆ. ಈ ರೀತಿ ಕೈಗಾರಿಕಾ ನೀತಿಯನ್ನು ನಾವು ಜುಲೈ ತಿಂಗಳಲ್ಲಿ ಘೋಷಣೆ ಮಾಡಿದ ಮೇಲೆ ಈ ದಿಸೆಯಲ್ಲಿ ಅನೇಕ ಹೆಜ್ಜೆಗಳನ್ನು ಇಟ್ಟಿದ್ದೇವೆ. ಇನ್ನೂ ತೀವ್ರಗತಿಯಿಂದ ಕಾರ್ಯಗತ ಮಾಡಬೇಕು ಎನ್ನುವುದನ್ನು ಒಪ್ಪಿಕೊಂಡು ಸರ್ಕಾರಿ ವಲಯದಲ್ಲಿ ಇರತಕ್ಕಂಥ ಕೈಗಾರಿಕೆಗಳನ್ನು ಮತ್ತು ಕಾರ್ಖಾನೆ

ಗಳನ್ನು ಸುಧಾರಣೆ ಮಾಡಬೇಕೆಂದು, ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಬದಲಾವಣೆ ಮಾಡಬೇಕಾದಂಥ ಅವಶ್ಯಕತೆ ಇದ್ದರೆ. ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗತ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತೇನೆ.

ಮತ್ತೆ ಕೊನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಮಾತನ್ನು ಹೇಳಿದರು. ಪರ್ಸನಲ್ ಅಕ್ವಿಜೆಷನ್ ಮಾಡಿದರು ಎಂದು ಹೇಳಿರುತ್ತಾರೆ. ನಾನು ಧಾರವಾಡ ಜಿಲ್ಲೆಯ ಡಿ.ಎಲ್. ಆರ್.ಸಿ. ರಿಕ್ರೂಟ್‌ಮೆಂಟ್ ಕಮಿಟಿಯ ಸದಸ್ಯನಾಗಿದ್ದೆನು. ನನ್ನ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೆ. ರಾಜೀನಾಮೆಯನ್ನು ಕೊಟ್ಟಿದ್ದಕ್ಕೆ ಅಂದಿನ ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಇರಬೇಕೆಂದು ಒತ್ತಾಯ ಮಾಡಿದರು. ಆದರೆ ಕಾರಣಾಂತರಗಳಿಂದ ನಾನು ಒಂದು ದಿವಸ ಮೀಟಿಂಗ್‌ಗೆ ಹೋಗಲು ಸಾಧ್ಯವಾಗಲಿಲ್ಲ. ಅಲ್ಲಿ ನಾನು ಇಲ್ಲದಿದ್ದಾಗ ಈ ಎಲ್ಲ ಅವ್ಯವಹಾರ ನಡೆದಿದೆ. ವಿಚಾರ ತಿಳಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದೆ. ಆ ಲಿಸ್ಟನ್ನು ಕೂಡ ಕ್ಯಾನ್ಸಲ್ ಮಾಡಬೇಕೆಂದು ಇದ್ದಾಗ್ಯೂ ಅಂದಿನ ಶಿಕ್ಷಣ ಮಂತ್ರಿಗಳು ಬಹಳ ಕಾತುರತೆಯಿಂದ ಅದನ್ನು ಪ್ರಸಿದ್ಧಪಡಿಸಿದರು. ಪ್ರಸಿದ್ಧಪಡಿಸಿದ ಮೇಲೆ ನಾನು ಏನು ಮಾಡುವುದಕ್ಕೂ ಅಧಿಕಾರ ಇರಲಿಲ್ಲ. ಇದು ಇದ್ದ ಸಂಗತಿ. ಮಾನ್ಯ ವಿರೋಧ ಪಕ್ಷದ ನಾಯಕರು ವಿವರ ಇಲ್ಲದ, ಮಾಹಿತಿ ಇಲ್ಲದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಮೇಲೆ ತಮ್ಮ ವರ್ಚಸ್ಸನ್ನು ಬೀರಿದ್ದಾರೆಂದು ಹೇಳಿದರು. ಆದುದರಿಂದ ನಾನು ವರ್ಚಸ್ಸು ಬೀರತಕ್ಕಂಥ ಕೆಲಸ ಏನು ಮಾಡಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ನಮ್ಮ ಬ್ರದರ್ ಇನ್ ಲಾ ಸೋಪ್ ಫ್ಯಾಕ್ಟರಿಯಲ್ಲಿ ಕಮೀಷನ್ ಏಜೆಂಟ್ ಆಗಿ ಇದ್ದಾರೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ, ಅದನ್ನು ಕೂಡ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಿಮ್ಮ ಬ್ರದರ್ ಇನ್ ಲಾ ಅಲ್ಲ. ಅದು ಏನೂ ಇಲ್ಲ ಬಿಡಿ.

ಶ್ರೀ ಬಿ. ಎಸ್. ಬಸವರಾಜ್.—ಮಾನ್ಯ ಸಭಾಪತಿಯವರೇ ಬಡ್ಜೆಟ್ ಸ್ಪೀಚ್‌ನಲ್ಲಿ ೧೯೭೮–೭೯ನೇ ಸಾಲಿಗೆ ಒಂದು ಕಾಯುರ್ ಬೋರ್ಡ್‌ನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದರು. ಮತ್ತೆ ಅರಸೀಕೆರೆ ತಾಲ್ಲೂಕಿನಲ್ಲಿ ಒಂದು ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಿದ್ದು ಅದು ನಡೆಯುತ್ತಿದೆ ಎಂದು ಹೇಳಿರುತ್ತಾರೆ. ಅಲ್ಲಿ ತರಬೇತಿ ಕೇಂದ್ರ ನಡೆಯುತ್ತಿಲ್ಲ. ೪೭ ಲಕ್ಷ ರೂಪಾಯಿಗಳನ್ನು ೧೯೭೮–೭೯ಕ್ಕೆ ಒಂದು ಯೂನಿಟ್‌ನ್ನು ಸ್ಥಾಪನೆ ಮಾಡಲು ಕಾಯುರ್ ಬೋರ್ಡ್‌ನವರು ತೀರ್ಮಾನ ಮಾಡಿದ್ದಾರೆಂದು ಹೇಳಿರುತ್ತೀರಿ. ಅದನ್ನು ಅರಸೀಕೆರೆಗೆ ಕೊಡಲು ಸಾಧ್ಯವೇ ಎಂದು ಕೇಳುತ್ತಿದ್ದೇನೆ,

ಶ್ರೀ ಮಲ್ಲಾರಿಗೌಡ ಪಾಟೀಲ್.—ಮಾನ್ಯ ಕೈಗಾರಿಕಾ ಸಚಿವರಲ್ಲಿ ಒಂದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ನಮ್ಮ ಭಾಗದ ಸಕ್ಕರೆ ಕಾರ್ಖಾನೆಗೆ ಬರತಕ್ಕಂಥ ಕಬ್ಬು ಬೆಳೆಗಾರರಿಗೆ ಪೂರ್ತಾ ಹಣವನ್ನು ಕೊಡುತ್ತಿಲ್ಲ. ಕಳೆದ ವರ್ಷದ್ದು ಕೊಟ್ಟಿಲ್ಲ. ಕೂಡಲೇ ಕಬ್ಬು ಬೆಳೆಗಾರರಿಗೆ ಬರಬೇಕಾದ ಬಾಕಿಯನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎನ್.ಜಿ.ಇ.ಎಫ್ ಕ.ವಿ.ಕ ಮತ್ತು ಎಂ.ಇ.ಐ. ಇವು ಮೂರು ಕಾರ್ಖಾನೆಗಳು ಸಹ ಎಲೆಕ್ಟ್ರಿಕ್ ಇನ್‌ಸ್ಟ್ರುಮೆಂಟ್ಸ್, ಮೋಟಾರ್, ಟ್ರಾನ್ಸ್‌ಫಾರ್ಮರ್ಸ್ ಸ್ವಿಚ್‌ಗೇರ್ಸ್ ಇವುಗಳನ್ನು ತಯಾರು ಮಾಡತಕ್ಕಂಥ ಈ ಮೂರು ಕಂಪನಿಗಳನ್ನು ಒಂದು ಕೋಆರ್ಡಿನೇಷನ್ ರೀತಿಯಲ್ಲಿ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಪಂಪಾಪತಿ —ದಾವಣಗೆರೆಯಲ್ಲಿ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ ಎಂದು ಇದೆ. ಇದಕ್ಕೆ ೭–೮ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿರತಕ್ಕಂಥ ಒಂದು ಚಿಕ್ಕ ಮಿಲ್. ಇದು ಮುಚ್ಚತಕ್ಕಂಥ ಪರಿಸ್ಥಿತಿಗೆ ಬಂದಿರುತ್ತದೆ. ಸರ್ಕಾರದವರು ಇದಕ್ಕೆ ಏನಾದರೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸಣ್ಣ ಕೈಗಾರಿಕಾ ಉದ್ಯಮದಾರರು ಎಲೆಕ್ಟ್ರಿಸಿಟಿ ಕೊರತೆಯಿಂದಾಗಿ ಡೀಸಲ್ ಜನರೇಟರ್‌ಗಳನ್ನು ಉಪಯೋಗಿಸಿ ತಯಾರು ಮಾಡಿದಂಥ ವಸ್ತುಗಳನ್ನು ಯಾವ ರೇಟ್‌ನಲ್ಲಿ ತೆಗೆದುಕೊಳ್ಳುತ್ತೀರಿ ? ಮತ್ತು ಕೇಂದ್ರ ಸರ್ಕಾರದವರು ಡೀಸಲ್ ಮೇಲೆ ಹಾಕಿರತಕ್ಕಂಥ ಟ್ಯಾಕ್ಸನ್ನು ಕಡಿಮೆ ಮಾಡಿ ಸಣ್ಣ ಉದ್ದಿಮೆದಾರರು ಡೀಸೆಲ್ ಜನರೇಟರ್‌ನ್ನು ಉಪಯೋಗಿಸಿ ಉದ್ಯಮ

ಗಳನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸುಮಾಡಿ ಸಹಾಯ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ವಿಐಎಸ್‌ಎಲ್‌ನಿಂದ ೨೩ಕೋಟಿ ರೂಪಾಯಿಗಳಷ್ಟು ಲಾಸ್ ಆಗಿದೆ ಎಂದು ಹೇಳಿರುತ್ತೀರಿ. ಇದರಲ್ಲಿ ಏನೋ ಮಹತ್ತರವಾದ ದೋಷ ಇರುತ್ತದೆ. ಬಡಜನರು ತಿರುಗಿ ಬಿದ್ದಿದ್ದಾರೆ. ಇಲ್ಲಿ ತಯಾರಾಗತಕ್ಕಂಥ ಕಬ್ಬಿಣಕ್ಕೆ ಚಿನ್ನಕ್ಕಿಂತ ಹೆಚ್ಚಿನ ಡಿಮ್ಯಾಂಡ್ ಇದೆ. ಇಂಥದರಲ್ಲಿ ೨೩ಕೋಟಿ ರೂಪಾಯಿ ಲಾಸ್ ಆಗಿದೆ ಎಂದರೆ, ಇಲ್ಲಿ ಅವ್ಯವಹಾರ ನಡೆದಿರಲೇಬೇಕು. ಇದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. ಹಾಗೆಯೇ ಮೈಸೂರು ಲ್ಯಾಂಪ್ಸ್ ವರ್ಕ್ಸ್‌ದಲ್ಲಿ ಕನ್ನಡಿಗರಿಗೆ ಉದ್ಯೋಗಗಳನ್ನು ದೊರಕಿಸಿ ಕೊಡುತ್ತಿಲ್ಲ. ನಮ್ಮ ರಾಜ್ಯದಲ್ಲಿ ಒಳ್ಳೊಳ್ಳೆಯ ಇಂಜಿನೀಯರ್‌ಗಳು ಇದ್ದರೂ ಕೂಡ ಅವರಿಗೆ ಅವಕಾಶ ಸಿಗುತ್ತಿಲ್ಲ ಮತ್ತೆ ಟಂಗ್‌ಸ್ಟನ್ ಘಟಕವನ್ನು ಎಕ್ಸ್‌ಪ್ಯಾನ್‌ಷನ ಮಾಡುತ್ತಿದ್ದೇವೆಂದು ಹೇಳಿರುತ್ತೀರಿ. ಅದನ್ನು ತುಮಕೂರಿನಲ್ಲಿ ಸ್ಥಾಪನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈಗ ತೆಂಗಿನಕಾಯಿ ಬೆಲೆ ಜಾಸ್ತಿಯಾಗಿದೆ. ಈಗ ಹೊರದೇಶಗಳಿಗೆ ತೆಂಗಿನಕಾಯಿ ಪುಡಿಯನ್ನು ಏನು ಕಳುಹಿಸುತ್ತಿದ್ದಾರೆ, ಅದನ್ನು ತಪ್ಪಿಸಿ ಬಡಜನರಿಗೆ ಸುಲಭ ಬೆಲೆಯಲ್ಲಿ ತೆಂಗಿನಕಾಯಿ ಸಿಗುವಂತಹ ವ್ಯವಸ್ಥೆ ಮಾಡುತ್ತೀರಾ ?

೮–೦೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ರೈತರಿಗೆ ಸಲ್ಲಬೇಕಾದ ಬಾಕಿಯ ಬಗ್ಗೆ ಹೇಳಿದ್ದಾರೆ. ಸರ್ವೇಸಾಧಾರಣವಾಗಿ ಎಲ್ಲ ಕಾರ್ಖಾನೆಗಳವರು ರೈತರಿಗೆ ಕೊಡಬೇಕಾದ ಹಣವನ್ನು ಕೊಟ್ಟಿದ್ದಾರೆ. ಸ್ವಲ್ಪ ಬಾಕಿ ಇದೆ. ಅದನ್ನೂ ಸಹ ಕೊಡಿಸುವಂತಹ ವ್ಯವಸ್ಥೆ ಮಾಡುತ್ತೇವೆ. ಡಾ. ತಿಮ್ಮೇಗೌಡರು ಕೊಟ್ಟಂತಹ ಸಲಹೆ ಕೂಡ ಈಗ ಸರ್ಕಾರದ ಪರಿಶೀಲನೆಯಲ್ಲಿದೆ. ಅದೇ ರೀತಿ ಮಾನ್ಯ ಕೃಷ್ಣನ್ ಅವರು ಎನ್.ಜಿ.ಇ.ಎಫ್. ಎಂ.ಇ.ಐ. ಹಾಗೂ ಕ.ವಿ.ಕ. ಇಲ್ಲೆಲ್ಲಾ ತಯಾರಾಗುತ್ತಿರುವ ಎಲೆಕ್ಟ್ರಿಕ್ ಉಪಕರಣಗಳ ಬಗ್ಗೆ ಒಂದು ಹೊಂದಾಣಿಕೆ ಇರಬೇಕೆಂದು ಹೇಳಿದ್ದಾರೆ, ಈ ಬಗ್ಗೆ ನಾವು ಒಂದು ನಿರ್ಣಯ ತೆಗೆದುಕೊಂಡಿದ್ದೇವೆ ಇಲ್ಲಿ ತಯಾರಾಗುವಂತಹ ವಸ್ತುಗಳ ಬಗ್ಗೆ ಒಂದು ಕೋಆರ್ಡಿನೇಷನ್ ಇರುವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಸಿ ಬೈರೇಗೌಡ.—ಕೋಲಾರದಲ್ಲಿ ನೈಲಾನ್ ಮತ್ತು ರೇಷ್ಮೆಯನ್ನು ಮಿಶ್ರ ಮಾಡಿ ಬಟ್ಟೆ ತಯಾರು ಮಾಡುವಂತಹ ಒಂದು ಬೃಹತ್ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಆಶ್ವಾಸನೆ ಕೊಟ್ಟು ಬಂದಿದ್ದಾರೆ. ಆದ್ದರಿಂದ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಈ ಕಾರ್ಖಾನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಒಂದು ನಿರ್ಣಯ ಕೈಕೊಳ್ಳುವಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂಥ ವಿಚಾರವನ್ನು ಸಹ ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ: (ಆರೋಗ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವೈದ್ಯಕೀಯ ಸೇವೆಗಳು, ಕುಟುಂಬ ಕಲ್ಯಾಣ ಯೋಜನೆ ಹಾಗೂ ಜನಾರೋಗ್ಯ ಇಲಾಖೆ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಬೆಳಿಗ್ಗೆಯಿಂದ ಇಲ್ಲಿಯವರೆಗೆ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರೇ ಎಲ್ಲ ಮಾನ್ಯ ಸದಸ್ಯರು ಮಾತನಾಡಿ ಅನೇಕ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಕಳೆದ ವರ್ಷ ಈ ಇಲಾಖೆ ಕೆಲಸ ಮಾಡಿರುವುದರ ಬಗ್ಗೆ ಬಹುತೇಕ ಮಾನ್ಯ ಸದಸ್ಯರು ತಮ್ಮ ಸಮಾಧಾನ ವ್ಯಕ್ತಪಡಿಸಿದ್ದಾರೆ; ಈ ಇಲಾಖೆ ಮತ್ತಷ್ಟು ಉತ್ತಮ ರೀತಿಯಿಂದ ಕೆಲಸ ಮಾಡಬೇಕೆಂಬ ಬಗ್ಗೆ ಕೂಡ ಕೆಲವಾರು ಸಲಹೆಗಳನ್ನು ಕೊಟ್ಟು ಮಾತನಾಡಿದ್ದಾರೆ. ಈ ಒಂದು ದೊಡ್ಡ ಇಲಾಖೆಯ ಬಗ್ಗೆ ಹೇಳತಕ್ಕಂಥ ಅನೇಕ ವಿಷಯಗಳಿದ್ದರೂ ಸಹ ಕಾಲಾವಕಾಶ ಕಡಿಮೆ ಇರುವ ಕಾರಣದಿಂದ ಹೆಚ್ಚು ಸಮಯ ತೆಗೆದುಕೊಳ್ಳದೆ ವಿರೋಧಪಕ್ಷದ ನಾಯಕರು ಮತ್ತು ಇತರೇ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಕೆಲವು ವಿಷಯಗಳ ಬಗ್ಗೆ ಮತ್ತು ನಮ್ಮ ಇಲಾಖೆ ೧೯೮೪-೮೫ನೇ ಸಾಲಿನಲ್ಲಿ ಯಾವ ದಿಕ್ಕಿನಲ್ಲಿ ಕೆಲಸ ಮಾಡಬೇಕೆಂದಿದೆ ಎಂಬ ಬಗ್ಗೆ ಹೇಳುತ್ತೇನೆ. ಬಹಳ ಮುಖ್ಯವಾಗಿ ನಮ್ಮ ಇಲಾಖೆ ಗ್ರಾಮಾಂತರ ಪ್ರದೇಶಗಳ ಜನತೆಯ ಬಗ್ಗೆ

ಬಹಳ ಅಪೇಕ್ಷೆಯನ್ನು ಇಟ್ಟುಕೊಂಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಳೆದ ವರ್ಷ ನಾನು ಈ ನಮ್ಮ ಇಲಾಖೆ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವಾಗ ಗ್ರಾಮಾಂತರ ಪ್ರದೇಶಗಳ ಜನರ ಆರೋಗ್ಯ ಸೇವೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಈ ಜನರ ಬಗ್ಗೆ ಹೆಚ್ಚಿನ ಮಹತ್ವ ಕೊಡುತ್ತೇವೆಂದು ಹೇಳಿದ್ದೆ. ಈ ಮಾತನ್ನು ಉಳಿಸಿಕೊಳ್ಳಲು ನಾವು ಹೆಚ್ಚಿನ ಒಂದು ಪ್ರಯತ್ನ ಮಾಡಿದ್ದೇವೆ. ೧೯೮೪-೮೫ನೇ ಸಾಲಿನಲ್ಲಿ ಇಡೀ ರಾಷ್ಟ್ರದಲ್ಲಿ ಯಾರೂ ಸಹ ತೆಗೆದುಕೊಳ್ಳದಿರುವಂತಹ ಕಾರ್ಯಕ್ರಮಗಳನು ನಮ್ಮ ಸರ್ಕಾರ ತೆಗೆದುಕೊಂಡಿದೆ ಎನ್ನುವಂತಹ ಮಾತನ್ನು ಸಂತೋಷದಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಎಲ್ಲ ತಾಲ್ಲೂಕ್‌ಗಳಲ್ಲಿಯೂ ಸಂಚಾರಿ ಆರೋಗ್ಯ ಘಟಕಗಳನ್ನು ಸ್ಥಾಪನೆ ಮಾಡಬೇಕೆಂದು ಕೆಲವು ಮಾನ್ಯ ಸದಸ್ಯರು ಮಾಡಿದಂಥ ಸಲಹೆಯನ್ನು ನಮ್ಮ ಸರ್ಕಾರ ತತ್ವಶಃ ಒಪ್ಪಿಕೊಂಡು ಈ ವರ್ಷ ಕೊನೆಯ ಪಕ್ಷ ೫೦ ತಾಲ್ಲೂಕ್‌ಗಳಲ್ಲಿಯಾದರೂ ಸಂಚಾರಿ ಆರೋಗ್ಯ ಘಟಕಗಳನ್ನು ಪ್ರಾರಂಭ ಮಾಡಬೇಕೆಂಬ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆಂದು ಸಂತೋಷದಿಂದ ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಔಷಧಗಳ ಒಂದು ಪ್ರಮಾಣವನ್ನು ಹೆಚ್ಚು ಮಾಡಬೇಕೆಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಕಳೆದ ಸಲ ನಾನು ಈ ಔಷಧಗಳ ವಿತರಣಾ ವ್ಯವಸ್ಥೆ ಸರಿಯಾಗಿಲ್ಲವೆಂದು ಹೇಳಿದ್ದೆ. ಈ ಒಂದು ವ್ಯವಸ್ಥೆ ಇವೊತ್ತಿಗೂ ಕೂಡ ಸರಿಹೋಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಿಂದ ಔಷಧಗಳನ್ನು ವಿತರಣೆ ಮಾಡುವಂತಹ ವ್ಯವಸ್ಥೆ ಏನಿದೆ, ಇದನ್ನು ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದ ಕೆಲವೊಂದು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ೧೯೮೩-೮೪ನೇ ಸಾಲಿನಲ್ಲಿ ೭ ಕೋಟಿ ರೂಪಾಯಿಗಳ ಔಷಧಗಳನ್ನು ಕೊಂಡುಕೊಂಡಿದ್ದರೆ ಈ ಸಲ ಹತ್ತು ಕೋಟಿ ರೂಪಾಯಿಗಳ ಔಷಧಗಳನ್ನು ಕೊಂಡುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೇವೆ. ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಘಟಕದಿಂದ ಹಿಡಿದು ಎಲ್ಲಾ ದಾದಿಯರ ಕೇಂದ್ರಗಳಲ್ಲಿಯೂ ಕೊನೆಯಪಕ್ಷ ಎರಡು ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಔಷಧಗಳನ್ನು ಒದಗಿಸುವಂತಹ ಒಂದು ಕಾರ್ಯಕ್ರಮವನ್ನು ಕೈಕೊಳ್ಳುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದ ಸುಮಾರು ೫೮ ತಾಲ್ಲೂಕ್‌ಗಳಲ್ಲಿ ತಾಲ್ಲೂಕ್ ಮಟ್ಟದ ಆಸ್ಪತ್ರೆಗಳಿಲ್ಲ. ಈ ಬಗ್ಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿದ ಪ್ರಕಾರ ಇನ್ನು ಮೂರು ವರ್ಷಗಳಲ್ಲಿ ಈ ರಾಜ್ಯದಲ್ಲಿರುವಂತಹ ಎಲ್ಲ ತಾಲ್ಲೂಕ್ ಕೇಂದ್ರಗಳಲ್ಲಿಯೂ ೩೦ ಅಥವಾ ೫೦ ಹಾಸಿಗೆಗಳು ಇರುವಂಥಹ ಸುಸಜ್ಜಿತವಾದಂಥ ಆಸ್ಪತ್ರೆಗಳನ್ನು ನಾವು ಪ್ರಾರಂಭ ಮಾಡುತ್ತೇವೆ. ೧೯೮೩-೮೪ರಲ್ಲಿ ಹತ್ತು ತಾಲ್ಲೂಕ್‌ಗಳಲ್ಲಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದ್ದೇವೆ. ೭೪ ಪ್ರಾಥಮಿಕ ಆರೋಗ್ಯ ಘಟಕಗಳನ್ನು, ೧೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ೫೦೦ ದಾದಿಯರ ಕೇಂದ್ರಗಳನ್ನು ೧೯೮೩-೮೪ರಲ್ಲಿ ಪ್ರಾರಂಭ ಮಾಡಿದ್ದೇವೆ. ೧೯೮೪-೮೫ರಲ್ಲಿಯೂ ಸಹ ಮತ್ತೆ ೫೦೦ ದಾದಿಯರ ಕೇಂದ್ರಗಳನ್ನು, ೨೫ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ೫೦ ಪ್ರಾಥಮಿಕ ಆರೋಗ್ಯ ಘಟಕಗಳನ್ನು, ೧೫ ಹೆರಿಗೆ ವಾರ್ಡ್‌ಗಳನ್ನು ಪ್ರಾರಂಭ ಮಾಡಬೇಕೆಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಜೂನ್-೧೫ರೊಳಗೆ ಇದು ಕಾರ್ಯಗತವಾಗುವ ರೀತಿಯಲ್ಲಿ ಮಾಡತಕ್ಕಂಥ ಭರವಸೆಯನ್ನು ಈ ಸದನಕ್ಕೆ ಕೊಡುತ್ತೇನೆ. ಈ ವೈದ್ಯಕೀಯ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥದ್ದು ಬಹಳ ಕಷ್ಟ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಆದರೆ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ೪ನೇ ದರ್ಜೆಯ ನೌಕರರಿಂದ ಹಿಡಿದು ವೈದ್ಯರವರೆಗೆ ಎಲ್ಲರೂ ಸಹ ಶಿಫಾರಸ್ಸನ್ನು ಮಾಡಿಸತಕ್ಕಂಥ ವ್ಯಕ್ತಿಗಳಾಗಿದ್ದಾರೆ. ಇಂತಹ ಒಂದು ಅವ್ಯವಸ್ಥೆ ಇರುವಾಗ, ಪ್ರತಿಯೊಬ್ಬರೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಸೇವೆ ಮಾಡುವಂತಹ ವ್ಯವಸ್ಥೆ ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದ್ದರೂ ಸಹ, ಇದನ್ನು ಕಾರ್ಯಗತ ಮಾಡುವುದು ಬಹಳ ಕಷ್ಟವಿದೆ ಎಂಬುದು ಆ ಭಾಗದ ಸದಸ್ಯರಿಗೆ ಮತ್ತು ಈ ಭಾಗದ ಸದಸ್ಯರಿಗೆ ಗೊತ್ತಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿಯೂ ನಾವು ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ವರ್ಷ ನಾವು ೬೦೦ ಜನ ವೈದ್ಯರನ್ನು ನೇಮಕ ಮಾಡಿಕೊಂಡು ಈಗಾಗಲೇ ಎಲ್ಲರಿಗೂ ಪೋಸ್ಟಿಂಗ್ಸ್ ಕೊಟ್ಟಿದ್ದೇವೆ. ಇನ್ನೂ ೪೦೦ ಜನ ವೈದ್ಯರ ಅಗತ್ಯ ನಮಗಿದೆ. ಆದ್ದರಿಂದ ಈ ೪೦೦ ಜನ ವೈದ್ಯರನ್ನು ಸಹ ನೇಮಕ ಮಾಡಿಕೊಂಡು ರಾಜ್ಯದ ಎಲ್ಲ ಆಸ್ಪತ್ರೆಗಳಿಗೂ ನೇಮಕ ಮಾಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ೧೯೮೦ರ ನಂತರ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೈದ್ಯರನ್ನು ನೇಮಕ ಮಾಡಿಕೊಂಡಿದ್ದೇವೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. ಇದರ ಜೊತೆಗೆ ಈ ಇಲಾಖೆಯಲ್ಲಿ ಖಾಲಿ ಇರುವಂಥ ೫ ಸಾವಿರ ಇತರೇ ವರ್ಗದ ನೌಕರರನ್ನು ಇನ್ನೂ ಭರ್ತಿ ಮಾಡಿಲ್ಲ; ೧೯೮೪-೮೫ರಲ್ಲಿ ೩ ಸಾವಿರ ನೌಕರರನ್ನು ಭರ್ತಿ ಮಾಡುವಂತಹ

ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ, ಅಷ್ಟೇ ಅಲ್ಲ, ೧೯೮೩–೮೪ರಲ್ಲಿ ೧೦೭ ವಾಹನಗಳನ್ನು ಕೊಂಡುಕೊಂಡಿದ್ದೇವೆ. ಇದರಿಂದ ಈ ಇಲಾಖೆ ಸ್ವಲ್ಪ ಲವಲವಿಕೆಯಿಂದ ಕೆಲಸ ಮಾಡಲು ಸಾಧ್ಯವಾಗಿದೆ. ಈಗ ನಮ್ಮಲ್ಲಿ ಒಂದು ಸಾವಿರ ವಾಹನಗಳಿವೆ. ಆದರೆ ಇವುಗಳಲ್ಲಿ ೩೫೦ ವಾಹನಗಳು ಮಾತ್ರ ಒಳ್ಳೆಯ ಸ್ಥಿತಿಯಲ್ಲಿದ್ದವು. ಕಳೆದ ಒಂದು ವರ್ಷದ ಅವಧಿಯಲ್ಲಿ ೬೦೦ ವಾಹನಗಳನ್ನು ಒಳ್ಳೆಯ ಸ್ಥಿತಿಗೆ ತಂದಿದ್ದೇವೆ. ಇನ್ನುಳಿದ ವಾಹನಗಳನ್ನು ಉಪಯೋಗಿಸುವುದಕ್ಕಾಗುತ್ತಿಲ್ಲ. ಕೆಲವು ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳ ಮುಂದೆ ವಾಹನಗಳು ಕೆಟ್ಟು ನಿಂತಿವೆ ಎಂದು ಸನ್ಮಾನ್ಯ ಸದಸ್ಯರಾದಂಥ ಬಣಕಾರ್ ಅವರು ಹೇಳಿದರು. ಇಂತಹ ಉಪಯೋಗಕ್ಕೆ ಬಾರದ ವಾಹನಗಳನ್ನು ಜೂನ್ ಕೊನೆಯೊಳಗೆ ವಿಲೇವಾರಿ ಮಾಡಬೇಕೆಂದು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ೧೯೮೪–೮೫ರಲ್ಲಿ ಮತ್ತೆ ೬೦ ವಾಹನಗಳನ್ನು ಕೊಂಡುಕೊಳ್ಳಬೇಕೆಂದಿದ್ದೇವೆ.

ಇನ್ನು ಇಡೀ ರಾಷ್ಟ್ರದಲ್ಲಿಯೇ ಮೊದಲನೆಯದಾಗಿ ನಮ್ಮ ರಾಜ್ಯದ ಬೀದರ್ ಜಿಲ್ಲೆಯಲ್ಲಿ ನಮ್ಮ ಇಲಾಖೆ ಯೂನಿಸೆಫ್ ವತಿಯಿಂದ ಒಂದು ಕಾರ್ಯಕ್ರಮ ತೆಗೆದುಕೊಂಡಿದೆ. ಈ ಒಂದು ಕಾರ್ಯಕ್ರಮದ ಮೂಲಕ ಅಮ್ಮಾ ಕಾಯಿಲೆ ಅಂದರೆ ಇಂಗ್ಲೀಷ್‌ನಲ್ಲಿ ಮಜಲ್ಸ್ ಎಂದು ಹೇಳುವಂತಹ ಕಾಯಿಲೆ ಮುಂದೆ ಬಾರದಿರುವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದಾರೆ, ಇದರ ವಿರುದ್ಧ ನಮ್ಮ ಅಧಿಕಾರವರ್ಗದವರು ಸೆಣಸಾಟ ಮಾಡಿದ್ದಾರೆ. ಅಲ್ಲಿರುವಂತಹ ಎಲ್ಲ ಮಕ್ಕಳಿಗೂ ಚುಚ್ಚು ಮದ್ದು ಹಾಕಿದ್ದಾರೆ. ಇದಕ್ಕೆ ಎಲ್ಲ ರೀತಿಯಿಂದ ಸಹಕಾರ ಕೊಟ್ಟು ಯೂನಿಸೆಫ್‌ನವರನ್ನು ಹಾಗೂ ನನ್ನ ಮಿತ್ರರನ್ನು ಅಭಿನಂದಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಎರಡು ಕಾಯಿಲೆಗಳು ಹಬ್ಬುತ್ತವೆ. ಅವುಗಳೆಂದರೆ ಕ್ಷಯರೋಗ ಮತ್ತು ಕುಷ್ಠರೋಗ, ಈ ಕುಷ್ಠರೋಗವನ್ನು ತೀವ್ರಗತಿಯಿಂದ ತಡೆಗಟ್ಟಬೇಕೆಂದು ಕೊಂಡು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ.

ಅನೇಕಜನ ಶಾಸಕರನ್ನೊಳಗೊಂಡಂತಹ ಒಂದು ಸಮಿತಿಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನೇಮಕ ಮಾಡಲಾಗಿದೆ. ಈ ಸಮಿತಿಯ ಆಶ್ರಯದಲ್ಲಿ ರಾಜ್ಯದಾದ್ಯಂತ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆಂದು ನಾನು ಹೇಳಬಯಸುತ್ತೇನೆ. ಇನ್ನು ಈ ಕ್ಷಯರೋಗ ಸಾಮಾನ್ಯವಾಗಿ ಬರತಕ್ಕಂಥದ್ದು ರೇಷ್ಮೆ ಉದ್ದಿಮೆಗಳು ಎಲ್ಲಿರುತ್ತವೆಯೋ ಅಲ್ಲಿ ಈ ಕಾಯಿಲೆ ಹೆಚ್ಚಾಗಿ ಬರುತ್ತದೆ. ಆದ್ದರಿಂದ ಈ ಸಮಿತಿಯವರು ರಾಜ್ಯದಲ್ಲಿ ಸಂಚಾರ ಮಾಡಿ ಸರ್ಕಾರಕ್ಕೆ ಆದಷ್ಟು ಬೇಗ ಒಂದು ವರದಿಯನ್ನು ಕೊಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಮತ್ತೆ ಅಗತ್ಯವಿರುವ ಎಲ್ಲಾ ಕಡೆಗಳಲ್ಲಿ ಕೂಡ ಮೊಬೈಲ್ ಯೂನಿಟ್‌ಗಳನ್ನು ಕೊಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ, ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೆ ಬೀಡಿ ಕಾರ್ಖಾನೆಗಳು ಎಲ್ಲಿರುತ್ತವೆಯೋ ಅಂಥ ಕಡೆಗಳಲ್ಲಿ ಕೂಡ ಈ ಕ್ಷಯ ರೋಗ ಹೆಚ್ಚಾಗಿರುತ್ತದೆ. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂಥ ಮಹಿಳಾ ಡಾಕ್ಟರ್‌ಗಳು ಇರಬಹುದು ಅಥವಾ ಬೇರೆ ಯಾವ ಡಾಕ್ಟರ್‌ಗಳೇ ಇರಬಹುದು ಅವರಿಗೆ ವಸತಿಗೃಹಗಳನ್ನು ಒದಗಿಸಿ ಕೊಡುವುದಕ್ಕೆ ಹುಡ್ಕೊ ಯೋಜನೆಯಿಂದ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಈ ಮಾತನ್ನು ನಾನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ ಇದರ ಜೊತೆಗೆ ಜೂನಿಯರ್ ಡಾಕ್ಟರ್ಸ್ ಯಾರು ಇರುತ್ತಾರೋ ಅವರಿಗೆ ೧೫೦ ರೂಪಾಯಿಗಳ ಹೆಚ್ಚು ಸ್ಟೈಪೆಂಡ್ ಕೊಡಬೇಕೆಂದು ನಮ್ಮ ಸರ್ಕಾರ ನಿರ್ಧಾರ ಮಾಡಿದೆ. ಈ ವಿಷಯವನ್ನು ನಾನು ಸದನದಲ್ಲಿ ಇವತ್ತು ಪ್ರಕಟಣೆ ಮಾಡುತ್ತಿದ್ದೇನೆ. ಆದರೇ ಯಾವುದೇರಾಜ್ಯ ಸರ್ಕಾರದವರು ಇಂಥ ಒಂದು ನಿರ್ಣಯವನ್ನು ತೆಗೆದುಕೊಂಡಿರಲಿಲ್ಲ. ಅಂಥ ಒಂದು ನಿರ್ಣಯವನ್ನು ನಮ್ಮ ಸರ್ಕಾರದವರು ತೆಗೆದು ಕೊಂಡಿದ್ದೇವೆ. ಇದಕ್ಕೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ರವರು ಕೂಡ ಒಪ್ಪಿಕೊಂಡಿದ್ದಾರೆ ಮತ್ತೆ ಮಾನ್ಯಮುಖ್ಯಮಂತ್ರಿಗಳು ಕೂಡ ಈ ಕಡೆ ಒಂದು ದಿಟ್ಟಹೆಜ್ಜೆಯನ್ನು ಇಟ್ಟಿದ್ದಾರೆ. ಇನ್ನು ಪ್ಯಾರಾ ಮೆಡಿಕಲ್ ಸ್ಟಾಂಪ್ ಅಂದರೆ ಟೀಚಿಂಗ್ ಕೊಡತಕ್ಕಂಥ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಸರ್ಕಾರ ವಿಚಾರ ವಿನಿಮಯ ಮಾಡುತ್ತಿದೆ. ಇದಕ್ಕೆ ಒಂದು ಸಮಿತಿಯನ್ನು ಸಹ ನಮ್ಮ ಸರ್ಕಾರದವರು ನೇಮಕ ಮಾಡಿದ್ದೇವೆ. ಮತ್ತೆ ಇದರ ಜೊತೆಗೆ ಈ ವರ್ಷ ರಾಜ್ಯದಲ್ಲಿರತಕ್ಕಂಥ ಎಲ್ಲಾ ಮೇಜರ್ ಆಸ್ಪತ್ರೆಗಳಾದ ವಿಕ್ಟೋರಿಯಾ, ಕೆ. ಸಿ. ಜನರಲ್ ಆಸ್ಪತ್ರೆ, ವಾಣಿ ವಿಲಾಸ್ ಆಸ್ಪತ್ರೆ ಮತ್ತೆ ಎಲ್ಲೆಲ್ಲಿ ಟೀಚಿಂಗ್ ಮೇಜರ್ ಆಸ್ಪತ್ರೆಗಳು ಇರುತ್ತವೆಯೋ ಅಲ್ಲಿಗೆ ಒಂದೊಂದು ಆಂಬ್ಯುಲೆನ್ಸ್ ವ್ಯಾನ್ ಒದಗಿಸಿಕೊಡಬೇಕೆಂದು ನಾವು ನಿರ್ಧಾರ

ಮಾಡಿದ್ದೇವೆ ಮತ್ತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರತಕ್ಕಂಥ ಜಿಲ್ಲಾ ಆಸ್ಪತ್ರೆಗಳಲ್ಲಿ ಸರಿಯಾದ ಉಪಕರಣಗಳು ಇಲ್ಲವೆಂದು ನನಗೆ ಗೊತ್ತಾಗಿದೆ ಆದ್ದರಿಂದ ಕೆಲವಾರು ಕಡೆಗಳಲ್ಲಿ ಆದರೂ ಕೂಡ ಈ ಉಪಕರಣವನ್ನು ಒದಗಿಸಿ ಕೊಡಬೇಕೆನ್ನುವ ದೃಷ್ಟಿಯಿಂದ ಸುಮಾರು ೫೫ ಲಕ್ಷ ರೂಪಾಯಿಗಳನ್ನು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಇಟ್ಟಿದ್ದೇವೆ. ಇನ್ನು ೩-೪ ತಿಂಗಳಲ್ಲಿ ಕೆಲವಾರು ಆಸ್ಪತ್ರೆಗಳಿಗೆ ಒದಗಿಸಿ ಕೊಡುತ್ತೇವೆ. ಉಳಿದ ಎಲ್ಲಾ ಆಸ್ಪತ್ರೆಗಳಿಗೂ ಕೂಡ ೧೯೮೪-೮೫ನೇ ಸಾಲಿನಲ್ಲಿ ಒದಗಿಸಿ ಕೊಡುತ್ತೇವೆ. ಈ ರೀತಿ ಯಂತ್ರೋಪಕರಣಗಳನ್ನು ನಾವು ಒದಗಿಸಿಕೊಡುವುದರಿಂದ ನಮ್ಮ ಆರೋಗ್ಯ ಇಲಾಖೆಯಲ್ಲಿ ಉತ್ತಮ ಸಾಧನೆ ಮಾಡಬಹುದೆಂದು ನಾನು ತಿಳಿದು ಕೊಂಡಿದ್ದೇನೆ. ಇನ್ನು ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಒಂದು ನರ್ಸಿಂಗ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದೇವೆ. ಇನ್ನು ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು ಆಯುರ್ವೇದಿಕ್ ಔಷಧಿಯಿಂದ ಎಲ್ಲಾ ಖಾಯಿಲೆಗಳು ಗುಣಮುಖವಾಗುತ್ತಿವೆ. ಆದ್ದರಿಂದ ತಾವು ಈ ಆಯುರ್ವೇದಿಕ್ ಔಷಧಿಗೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ರಾಜ್ಯ ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡು ನೇಚರ್ ಕ್ಯೂರ್ ಅಥವಾ ಯೋಗಾ ಕಾಲೇಜನ್ನು ಈ ವರ್ಷದಲ್ಲಿ ನಾವು ಮೈಸೂರಿನಲ್ಲಿ ಪ್ರಾರಂಭ ಮಾಡಿದ್ದೇವೆ. ಮತ್ತೆ ಸೋಮವಾರ ಪೇಟೆಯಲ್ಲಿ ಹೋಮಿಯೋಪತಿ ಕಾಲೇಜು ಸಹ ಪ್ರಾರಂಭ ಮಾಡಿದ್ದೇವೆ. ಮತ್ತೆ ನಮ್ಮ ರಾಜ್ಯದಲ್ಲಿಯೇ ಯುನಾನಿ ಔಷಧಿಯನ್ನು ತಯಾರು ಮಾಡಬೇಕೆಂದು ಈ ವರ್ಷ ಒಂದು ಬ್ಲಡ್ ಕಾರ್ಪೋರೇಷನ್ ಮಾಡಬೇಕೆಂದು ಸುಮಾರು ೫ ಲಕ್ಷರೂಪಾಯಿಗಳನ್ನು ನಮ್ಮ ಕರ್ನಾಟಕ ಸರ್ಕಾರದಿಂದ ಕೊಟ್ಟಿದ್ದೇವೆ ಇದಕ್ಕಿಂತ ಬಹಳ ಮುಖ್ಯವಾದಂಥ ಒಂದು ಅಂಶವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದಾದರೂ ಏನೆಂದರೆ ಭಾರತೀಯ ಜನನ ನಿಯಂತ್ರಣ ಕೇಂದ್ರ ಒಂದನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಸುಮಾರು ೮೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದೇವೆ. ಈ ಯೋಜನೆಯ ಕೆಳಗಡೆ ರಾಯಚೂರು ಬೀದರೆ ಗುಲ್ಬರ್ಗ ಮತ್ತು ಬೆಳಗಾಂ ಇತರೇ ಜಿಲ್ಲೆಗಳು ಕೂಡ ಸೇರಿಕೊಂಡಿವೆ ಈ ಯೋಜನೆಯನ್ನು ನಾವು ಏಪ್ರಿಲ್ ತಿಂಗಳಿಂದ ಪ್ರಾರಂಭ ಮಾಡುವವರಿದ್ದೇವೆ. ಇನ್ನು ಬೆಂಗಳೂರು ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕಂಥ ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಇದನ್ನು ನಾವು ಪ್ರತ್ಯೇಕವಾಗಿ ಮಾಡಿದ್ದೇವೆ. ಇದನ್ನು ಇನ್ನು ಉತ್ತಮ ಪಡಿಸುವುದಕ್ಕೆ ಕೇಂದ್ರ ಸರ್ಕಾರದ ಹಣವನ್ನು ಸಹ ಕೇಳಿದ್ದೇವೆ. ಮತ್ತು ಸಾರ್ವಜನಿಕರಿಂದ ವಂತಿಗೆಯನ್ನು ಸಹ ವಸೂಲು ಮಾಡುತ್ತಿದ್ದೇವೆ. ಮತ್ತೆ ಇದರ ಜೊತೆಗೆ ಅನೇಕ ವರ್ಷಗಳಿಂದ ಸಂಜಯ್ ಗಾಂಧಿ ರಿಹ್ಯಾಬಿಲಿಯೇಷನ್ ಆಕ್ಸಿಡೆಂಟ್ ಕಾಂಪ್ಲೆಕ್ಸ್ ಮಾಡಬೇಕೆಂದು ಇದ್ದರೂ ಸಹ ಅದನ್ನು ಪ್ರಾರಂಭ ಮಾಡಿರಲಿಲ್ಲ. ಆ ಒಂದು ಕೆಲಸವನ್ನು ಸಹ ನಾವು ಮಾಡುವುದಕ್ಕೆ ಸರ್ಕಾರದವರು ನಿರ್ಧಾರ ಮಾಡಿದ್ದೇವೆ. ಇನ್ನು ಸುಮಾರು ೧೫ ದಿವಸಗಳಲ್ಲಿ ಆ ಒಂದು ಕೆಲಸವನ್ನು ಸಹ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಇದಕ್ಕಿಂತ ಮುಖ್ಯವಾದಂಥ ಒಂದು ವಿಷಯವನ್ನು ನಾನು ಸದನದ ಗಮನಕ್ಕೆ ತರಬಯಸುವುದಾದರೂ ಏನೆಂದರೆ ಪೋಲಿಯೋ ಕ್ಲಿನಿಕ್ ಅನ್ನು ತೆರೆಯುವುದಕ್ಕೆ ಇದರಲ್ಲಿ ಪರಿಣತರಾದಂತಹ ಶ್ರೀಮಾನ್ ಜಾದವ್‌ರವರಿಗೆ ಅನುಕೂಲಮಾಡಿ ಕೊಟ್ಟಿದ್ದೇವೆ. ಮತ್ತು ಅವರನ್ನು ರಾಜ್ಯದ ಪೋಲಿಯೋ ಕ್ಲಿನಿಕ್ ಕನ್ಸಲ್‌ಟೆಂಟ್ ಎಂದು ಸಹ ರಾಜ್ಯ ಸರ್ಕಾರದವರು ನೇಮಕ ಮಾಡಿಕೊಂಡು ಅವರಿಗೆ ತಿಂಗಳಿಗೆ ಸುಮಾರು ೨ ಸಾವಿರ ರೂಪಾಯಿಗಳಿಂದ ಹಿಡಿದು ಮೂರು ಸಾವಿರ ರೂಪಾಯಿಗಳವರೆಗೆ ಸೌಲಭ್ಯಗಳನ್ನು ಕಲ್ಪಿಸಿ ಕೊಡುತ್ತಿದ್ದೇವೆ. ಮತ್ತೆ ಅವರು ಒಂದು ಕ್ಲಿನಿಕ್‌ನ್ನು ತೆರೆಯಲು ಸುಮಾರು ಎರಡು ಎಕರೆ ಜಮೀನನ್ನು ಸಹ ಕೊಟ್ಟು ಈ ಕ್ಲಿನಿಕ್ ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಇನ್ನು ಬೆಂಗಳೂರು ನಗರದ ವಿಮಾನ ನಿಲ್ದಾಣದಲ್ಲಿ ಹೆಚ್ಚು ಸೊಳ್ಳೆಗಳು ಇವೆಯೆಂದು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸೂರ್ಯನಾರಾಯಣರಾವ್ ಮತ್ತು ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಹೇಳುತ್ತಿದ್ದರು, ಈ ಸೊಳ್ಳೆಗಳ ಕಾಟವನ್ನು ಸಂಪೂರ್ಣವಾಗಿ ನಾಶಮಾಡಬೇಕೆಂದು ಹೇಳಿ ಒಂದು ಶಾಶ್ವತ ಪರಿಹಾರವನ್ನು ಕಂಡು ಹಿಡಿದಿದ್ದೇವೆ. ಮತ್ತೆ ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಹ ಮಾಡಿದ್ದೇವೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಕೂಡ ಧನಸಹಾಯ ನಮಗೆ ಸಿಕ್ಕಿದೆ. ಮತ್ತೆ ವಿ. ಸಿ. ಆರ್. ಸಿ. ಪಾಂಡಿಚೇರಿಯಿಂದ ನಮಗೆ ಟೆಕ್ನಿಕಲ್ ಸಹಾಯವನ್ನು ಕೊಟ್ಟಿದ್ದಾರೆ. ನಾವು ಬೆಂಗಳೂರು ನಗರದ ವಿಮಾನ ನಿಲ್ದಾಣದಲ್ಲಿರತಕ್ಕಂಥ ಸೊಳ್ಳೆಗಳ ನಿರ್ಮೂಲನ ಮಾಡಲು ಸುಮಾರು ೨೫ ಲಕ್ಷರೂಪಾಯಿಗಳನ್ನು

ಬಡ್ಜೆಟ್‌ನಲ್ಲಿ ಇಟ್ಟಿದ್ದೇವೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರತಕ್ಕಂಥ ಶಾಸಕರುಗಳಾದಂಥ ಶ್ರೀಮಾನ್ ಎಂ. ವೀರಪ್ಪಮೊಯ್ಲಿಯವರು ಮತ್ತು ಡಾಕ್ಟರ್ ವಿ. ಎಸ್. ಆಚಾರ್ಯರವರು ಮಾತನಾಡುತ್ತಾ ಹೇಳಿದರು ನಮ್ಮಕಡೆ ಮಂಗನಕಾಯಿಲೆ ಹೆಚ್ಚಾಗುತ್ತಿದೆ. ಇದಕ್ಕೆ ಮಾನ್ಯ ಮಂತ್ರಿಗಳು ಲಸಿಕೆಯನ್ನು ಕಂಡುಹಿಡಿಯಲು ಸೂಕ್ತವಾದ ಕ್ರಮವನ್ನು ಕೈಗೊಳ್ಳಲಿಲ್ಲವೆಂದು ತಿಳಿಸಿದರು. ಆದರೆ ಈ ಮಂಗನ ಕಾಯಿಲೆಗೆ ಲಸಿಕೆಯನ್ನು ತಯಾರು ಮಾಡಲು ಒಂದು ಅಂದಾಜು ಇಟ್ಟುಕೊಂಡು ಆ ಅಂದಾಜು ಪ್ರಕಾರ ೧೯೮೪ರ ನವೆಂಬರ್ ವೇಳೆಗೆ ಲಸಿಕೆ ತಯಾರು ಮಾಡಬೇಕೆಂದು ಹೇಳಿದ್ದೇವೆ ಇದರಲ್ಲಿ ಮಾನ್ಯ ಸದಸ್ಯರಿಗೆ ಯಾವುದೇ ರೀತಿಯ ಅನುಮಾನ ಬೇಡ ಈ ಲಸಿಕೆಯನ್ನು ತಯಾರು ಮಾಡಿಕೊಡಬೇಕೆಂದು ನಾವು ಪೂನಾ ಇನ್ಸಿಟ್ಯೂಟ್ ಆಫ್ ವೈರಾಲಜಿ ಅವರಿಗೆ ತಿಳಿಸಿದ್ದೇವೆ. ಅವರು ಸಹ ನವೆಂಬರ್ ೧೯೮೪ರ ವೇಳೆಗೆ ಇದನ್ನು ತಯಾರು ಮಾಡಿ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇನ್ನು ಐ. ಸಿ. ಎಂ. ಆರ್. ರವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹಂದಿಗೋಡು ಎಂಬಲ್ಲಿ ಇಂತಹ ಒಂದು ಕೇಂದ್ರವನ್ನು ತೆರೆಯಲು ಒಪ್ಪಿಕೊಂಡಿದ್ದಾರೆ. ಮತ್ತು ಅದಕ್ಕೆ ಬೇಕಾಗಿರತಕ್ಕಂಥ ಸಹಕಾರ ಮತ್ತು ಸಹಾಯ ನಮ್ಮ ರಾಜ್ಯ ಸರ್ಕಾರ ಕೊಡುವುದಕ್ಕೆ ಸಹ ಮುಂದು ಬಂದಿದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಾ

ಹೇಳಿದರು ರೀಜನಲ್ ಇನ್ಸಿಟ್ಯೂಟ್ ಆಫ್ tropical ಮೆಡಿಸನ್ಸ್ ಇದನ್ನು ಸ್ಥಾಪನೆ ಮಾಡಲು ನಾವು ಕೇಂದ್ರ ಸರ್ಕಾರದವರಲ್ಲಿ ಹಣ ಸಹಾಯವನ್ನು ಕೇಳಿದ್ದೇವೆ. ಅಲ್ಲಿಂದ ನಮಗೆ ಸ್ವಲ್ಪ ಮಟ್ಟಿಗಾದರೂ ಹಣ ಬಂದರೆ ನಾವು ಕೂಡ ನಮ್ಮ ಎಲ್ಲಾ ಸಹಕಾರವನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸಲು ಇಚ್ಛೆಪಡುತ್ತೇನೆ. ಇಂಥ ಒಂದು ಇನ್ಸಿಟ್ಯೂಟ್ ಈಗ ಇರತಕ್ಕಂಥದ್ದು ಕೇವಲ ಕಲ್ಕತ ನಗರದಲ್ಲಿ ಮಾತ್ರ. ಇನ್ನು ಡಾಕ್ಟರ್ ಅಂಬೇಡ್ಕರ್ ಮೆಡಿಕಲ್ ಕಾಲೇಜುಗಳಿಗೆ ಪರವಾನಿಗೆಯನ್ನು ಕೊಟ್ಟಿದ್ದು ನನಗೆ ಗೊತ್ತಿದೆ. ಇದನ್ನು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರು ಕೂಡ ಒಪ್ಪಿಕೊಂಡಿದ್ದಾರೆ. ಅದೇ ರೀತಿಯಲ್ಲಿ ಇವತ್ತು ಕೆಂಪೇಗೌಡ ಮೆಡಿಕಲ್ ಕಾಲೇಜುನವರಿಗೂ ಕೂಡ ಪರಿವಾನಿಗೆಯನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಸರ್ಕಾರದವರು ಯಾವುದೋ ಒಂದು ಕಾರಣಕ್ಕಾಗಿ ಕೊಟ್ಟಿದ್ದಾರೆ. ಸರ್ಕಾರದವರು ಕೊಟ್ಟಿರುವ ಉದ್ದೇಶವಾದರೂ ಏನೆಂದರೆ ವಿದ್ಯಾರ್ಥಿಗಳಿಗೆ ಕ್ಲಿನಿಕಲ್ ಫೆಸಲಿಟೀಸ್ ಸಿಗಲಿ ಎನ್ನುವ ಉದ್ದೇಶದಿಂದ ಕೊಟ್ಟಿದ್ದೇವೆ. ಇದರ ಬಗ್ಗೆ ವಿಚಾರ ವಿನಿಮಯ ಮಾಡಿ ವಿದ್ಯಾರ್ಥಿಗಳಿಗೆ ತೊಂದರೆ ಯಾಗಬಾರದೆಂದು ನಾವು ಈ ರೀತಿ ಮಾಡಿದ್ದು. ಇನ್ನು ಮಣಿಪಾಲ್ ಕಾಲೇಜು ಬಗ್ಗೆ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದಾರೆ. ಅಲ್ಲಿ ಒಂದೇ ತರಹದ ಎರಡು ಸೆಕ್ಷನ್‌ಗಳನ್ನಾಗಿ ಟ್ರೀಟ್ ಮಾಡುತ್ತಿದ್ದಾರೆಂದು. ಅಲ್ಲಿ ನಾವು ೫೦೧ ಸೀಟುಗಳನ್ನು ಫಿಕ್ಸ್ ಮಾಡಿದ್ದೆವು. ಅಷ್ಟೇ ವಿನಃ ಬದಲಾವಣೆ ಮಾಡಿಲ್ಲ. ಮತ್ತೆ ಮಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಹೆಚ್ಚು ಮಾಡಿದ್ದೇವೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಸಾರ್ವಜನಿಕ ಮುಖಂಡರ ಸಹಕಾರ ನಮಗೆ ಬಹಳ ಅಗತ್ಯವಾಗಿದೆ. ನಾವು ಎಷ್ಟೇ ದೊಡ್ಡ ಪ್ರಮಾಣದಲ್ಲಿ ಆಸ್ಪತ್ರೆಗಳನ್ನು ಮಾಡಿದರೂ, ಎಷ್ಟೇ ಸಲಕರಣೆಗಳನ್ನು ಒದಗಿಸಿದರೂ ಔಷಧಿಗಳ ಗುಣಮಟ್ಟದ ಪ್ರಮಾಣವನ್ನು ಎಷ್ಟೇ ಹೆಚ್ಚು ಮಾಡಿದರೂ ಜನಸಂಖ್ಯೆಯ ನಿಯಂತ್ರಣ ಆಗದಿದ್ದರೆ ನಾವು ಹಾಕಿಕೊಂಡಂತಹ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ನಮ್ಮ ಸರ್ಕಾರಕ್ಕೆ ಇದು ಗೊತ್ತಿದೆ ವಿಶೇಷವಾದ ಮಹತ್ವವನ್ನು ಕೊಟ್ಟು ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯಮುಖ್ಯಮಂತ್ರಿಗಳು ವಿಶೇಷವಾದ ಮಹತ್ವವನ್ನು ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಕುಟುಂಬ ಯೋಜನೆಗೆ ಒಳಗಾದವರಿಗೆ ಲಾಟರಿ ಟಿಕೇಟುಗಳನ್ನು ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಆನೇಕಲ್ ತಾಲ್ಲೂಕಿನ ಮಹದೇವಮ್ಮ ಎಂಬುವವರು ಕುಟುಂಬ ಯೋಜನೆಗೆ ಒಳಗಾದ ಮೇಲೆ ಅವರಿಗೆ ೫ ಲಾಟರಿ ಟಿಕೆಟುಗಳನ್ನು ಕೊಡಲಾಯಿತು, ನಾವು ಕೊಟ್ಟ ಟಿಕೆಟ್ಟುಗಳಲ್ಲಿ ಅವರಿಗೆ ೧೦ ಸಾವಿರ ರೂಪಾಯಿ ಬಹುಮಾನ ಬಂತು ಎಂದು ಹೇಳಲಿಕ್ಕೆ ಸಂತೋಷಪಡುತ್ತೇನೆ. ಜನತಾ ಪಕ್ಷದ ನೀತಿಯೂ ಕೂಡ ಜನರ ಸಹಕಾರವನ್ನು ಪಡೆದುಕೊಳ್ಳುವುದೇ ಆಗಿದೆ, ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡಜನರಿಗೆ ಹೆಚ್ಚಿನ ಆರೋಗ್ಯವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಸಾರ್ವಜನಿಕ ಮುಖಂಡರ ಸಹಕಾರ ಕೋರುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ನಿಮ್ಮ ಲಾಟರಿ ಟಿಕೆಟ್ ಸಿಗುತ್ತದೆಯೋ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸರ್ಕಾರ ಮತ್ತೊಂದು ನಿರ್ಧಾರವನ್ನು ತೆಗೆದುಕೊಂಡಿದೆ. ಮಾಡಿ, ಆಕ್ಲಬ್‌ನ ಮುಖಾಂತರ ಕುಟುಂಬ ಯೋಜನಾ ಚಟುವಟಿಕೆಗಳನ್ನು ಯಾವರೀತಿ ಶಾಸಕರ ಕ್ಲಬ್ ಹೆಚ್ಚು ಮಾಡಬೇಕು ಜನಗಳು ಹೆಚ್ಚಿನ ರೀತಿಯಲ್ಲಿ ಕುಟುಂಬ ಯೋಜನೆಗೆ ಒಳಗಾಗುವಂತೆ ಮಾಡುವ ನಿರ್ಧಾರವನ್ನು ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ, ಶಾಸಕರ ಕ್ಲಬ್‌ನಲ್ಲಿ ಮಾನ್ಯ ಲಕ್ಷ್ಮೀಸಾಗರ್‌ರವರಿಗೂ ಸದಸ್ಯತ್ವವನ್ನು ಕೊಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಒಂದು ಸದುಪಯೋಗವನ್ನು ಮಾನ್ಯಸದಸ್ಯರು ಪಡೆದು ಕೊಳ್ಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಇದನ್ನು ಉಪಯೋಗ ಮಾಡಿಕೊಂಡರೆ ಲೋಕ ಕಲ್ಯಾಣ ವಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾಲ್ಲೂಕುಮಟ್ಟದಲ್ಲಿ ಆರೋಗ್ಯಸಮಿತಿಗಳನ್ನು ಮಾಡುತ್ತಿದ್ದೇವೆ. ಆಯಾ ತಾಲ್ಲೂಕಿನ ಶಾಸಕರು ಆ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಆ ಸಮಿತಿಯಲ್ಲಿ ಮೂರು ಜನ ಖಾಸಗಿ ಸದಸ್ಯರುಗಳು ಇರುತ್ತಾರೆ. ಆ ತಾಲ್ಲೂಕಿನ ವೈದ್ಯಾಧಿಕಾರಿಗಳು ಸಮಿತಿಯ ಕಾರ್ಯದರ್ಶಿ ಗಳಾಗಿರುತ್ತಾರೆ. ಜನಗಳಿಗೆ ತಿಳುವಳಿಕೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಜನಗಳ ಸಂಪೂರ್ಣ ಸಹಕಾರವನ್ನು ಪಡೆಯಲಿಕ್ಕೆ ಈ ಸಮಿತಿಗಳನ್ನು ಮಾಡಿದ್ದೇವೆ. ಆ ಸಮಿತಿಗಳನ್ನು ಎಲ್ಲಾ ಕಡೆ ಇನ್ನೊಂದು ತಿಂಗಳೊಳಗೆ ರಚನೆ ಮಾಡುವವರು ಇದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಒಂದು ಇಲಾಖೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ, ಇದನ್ನು ಸರಿ ಮಾಡುವ ದೃಷ್ಟಿಯಿಂದ ೧೯೭೭ನೇ ಇಸವಿಯಲ್ಲಿ ಈ ಇಲಾಖೆಯಲ್ಲಿ ಯಾವ ರೀತಿಯ ಕೆಲಸವಾಗ ಬೇಕು ಎಂಬುವನ್ನೆಲ್ಲಾ ಸ್ಟಡಿಮಾಡಿ ಒಂದು ರಿಪೋರ್ಟನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಒಂದು ರಿಪೋರ್ಟ್ ೧೯೭೮ನೇ ಇಸವಿಯಲ್ಲಿ ಬಂದಿದೆ. ಅದರ ಬಗ್ಗೆ ಯಾರಾದರೂ ಮಾತನಾಡುತ್ತಾರೆಂದು ನಾನು ರಾತ್ರಿಯೆಲ್ಲಾ ಓದಿದ್ದೇನೆ. ಆ ವರದಿಯಲ್ಲಿ ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ರಾಜ್ಯ ಮಟ್ಟದಲ್ಲಿರತಕ್ಕ ಡೈರೆಕ್ಟರೇಟ್ ಏನಿದೆ, ಅದು ಜಿಲ್ಲಾಮಟ್ಟ ಆಗಬೇಕು ವಿಭಾಗಮಟ್ಟದಲ್ಲಿ ಆಗ ಬೇಕೆಂದು ಹೇಳಿದ್ದಾರೆ. ಅದರ ಉದ್ದೇಶ ಸಾಮಾನ್ಯ ಜನರಿಗೆ ಆರೋಗ್ಯ ಭಾಗ್ಯ ಸಿಗಬೇಕು, ಹೆಚ್ಚಿಗೆ ತಿಳುವಳಿಕೆ ಕೊಡಲಿಕ್ಕೆ ಏನೇನು ಕೆಲಸಗಳು ತಕ್ಷಣ ಆಗಬೇಕು ಎನ್ನುವುದರ ಬಗ್ಗೆ ಉತ್ತಮವಾದ ಸಲಹೆ ಗಳನ್ನು ಆ ಒಂದು ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಕೊಟ್ಟಿರತಕ್ಕ ಸಲಹೆಗಳನ್ನು ಗಮನದಲ್ಲಿಟ್ಟು ಕೊಂಡು ಹೆಚ್ಚಿನ ಉತ್ತಮ ಮಟ್ಟದಲ್ಲಿ ಕೆಲಸ ಮಾಡಲಿಕ್ಕೆ ಈ ವರ್ಷ ಪ್ರಯತ್ನಮಾಡುತ್ತೇನೆ. ನಾನು ಮಂಡಿಸಿರತಕ್ಕ ಬೇಡಿಕೆಗಳಿಗೆ ಮಾನ್ಯಸದಸ್ಯರುಗಳು ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿ ಕೊಂಡು ನನಗೆಹತ್ತು–ಹದಿನೈದು ನಿಮಿಷ ಮಾತನಾಡಲಿಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅನೇಕ ಪ್ರಶ್ನೆಗಳಿಗೆ ಮಾನ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ಬೆಳ್ತಂಗಡಿ ತಾಲ್ಲೂಕಿನಲ್ಲಿರತಕ್ಕ ಮಂಗನ ಕಾಯಿಲೆಯನ್ನು ಪರಿಹಾರ ಮಾಡಲಿಕ್ಕೆ ಹೆಚ್ಚು ಮುಂಜಾಗ್ರತೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಲಸಿಕೆಯಿಂದ ಆ ಕಾಯಿಲೆಯನ್ನು ನಿವಾರಣೆ ಮಾಡಲಿಕ್ಕೆ ಮುಂದೆ ಬರಬಹುದು. ಈಗ ಈ ಒಂದು ಕಾಯಿಲೆಯಿಂದ ನೂರಾರು ಮಂದಿ ಸತ್ತಿದ್ದಾರೆ. ಈಗ ನನ್ನ ಸಲಹೆ ಏನೆಂದರೆ ತಾವು ಮತ್ತು ಅರಣ್ಯಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಗಳನ್ನು ಕರೆದು ಒಂದು ಮೀಟಿಂಗ್ ಮಾಡಿ. ಈಗ ಲಸಿಕ ಬಗ್ಗೆ ವಿಚಾರ ಮಾಡುತ್ತಿದ್ದೀರಿ, ಆದರೆ ಅದರ ಜೊತೆಯಲ್ಲಿ ಔಷಧಿಯನ್ನು ಸ್ಪ್ರೇ ಮಾಡಿದರೆ ತಕ್ಷಣ ಈ ಕಾಯಿಲೆಯನ್ನು ನಿಲ್ಲಿಸಬಹುದು ಎನ್ನುವ ಅಭಿಪ್ರಾಯವಿದೆ. ಅದರ ಬಗ್ಗೆ ಆಲೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ಹೇಳುವುದಾದರೆ, ಅರಣ್ಯದಲ್ಲಿ ಮರ ಕಡಿಯುವುದನ್ನು ನಿಲ್ಲಿಸಬೇಕಾಗಿದೆ. ಔಷಧಿ ಸ್ಪ್ರೇ ಮಾಡಿಸಬೇಕು. ಎಮ್ಮೆ ಮತ್ತು ದನಕರುಗಳ ಮೈಮೇಲೆ ಆ ಕಾಯಿಲೆಯನ್ನು ಹರಡತಕ್ಕ ಉಣ್ಣೆಗಳು ಇವೆ ಎನ್ನತಕ್ಕ ಸೂಚನೆಗಳು ಬಂದಿವೆ. ಅದನ್ನು ಪರಿಶೀಲನೆ ಮಾಡಲಾಗುತ್ತಿದೆ. ಈ ರೋಗಕ್ಕೆ ಯಾರು ತುತ್ತಾಗಿದ್ದಾರೆ ಅಂತಹವರ ಪರಿವಾರದವರಿಗೆ ಪರಿಹಾರ ಕೊಡತಕ್ಕ ಒಳ್ಳೆಯ ಕೆಲಸವನ್ನು ಪ್ರಧಾನಮಂತ್ರಿಗಳು ಮಾಡಿದ್ದಾರೆ. ಪ್ರಧಾನ ಮಂತ್ರಿಗಳ ರಿಲೀಫ್ ಫಂಡ್‌ನಿಂದ ೪ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಮುಖ್ಯ ಮಂತ್ರಿಗಳ ಫಂಡ್ ಅಷ್ಟು ದೊಡ್ಡದು ಇಲ್ಲ. ಆದರೂ ಸತ್ತವರ ಕುಟುಂಬದವರಿಗೆ ಮುಖ್ಯಮಂತ್ರಿಗಳ ಫಂಡ್‌ನಿಂದ ನಾವು ಸ್ವಲ್ಪಮಟ್ಟಿಗೆ ಪರಿಹಾರವನ್ನು ಕೊಡುತ್ತೇವೆಂದುಹೇಳಲಿಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು.—ಮಾನ್ಯ ಆರೋಗ್ಯಮಂತ್ರಿಗಳು ಕ್ಲಾರಿಫಿಕೇಶನ್ ಕೇಳದ ಹಾಗೆ ಉತ್ತರ ಕೊಟ್ಟಿದ್ದಾರೆ. ನಿಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಏನಾದರೂ ವಿಷಯಗಳು ಇದ್ದರೆ ತಾವು ಮಂತ್ರಿಗಳ ಹತ್ತಿರ ಹೋಗಿ ಮಾತನಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾನ್ಯಸದಸ್ಯರುಗಳಲ್ಲಿ ಕಳಕಳಿಯಿಂದ ವಿನಂತಿ ಮಾಡಿ ಕೊಳ್ಳುವುದೇನೆಂದರೆ ನಾನು ೬–೩೦ಕ್ಕೆ ಮಾನ್ಯ ರಾಜ್ಯಪಾಲರನ್ನು ಭೇಟಿಮಾಡಬೇಕಾಗಿದೆ. ರಾಜ್ಯ ಪಾಲರು ೯ ಗಂಟೆಯ ಮೇಲೆ ಯಾರನ್ನೂ ಕೂಡ ಭೇಟಿ ಮಾಡುವುದಿಲ್ಲ. ಆದ್ದರಿಂದ ತಾವು ಬೇರೆ ಯಾವುದೇ ಸಂದರ್ಭದಲ್ಲಿ ಯಾವುದೇ ಪ್ರಶ್ನೆಗಳನ್ನು ಕೇಳಿ ನಾವು ಉತ್ತರ ಕೊಡುತ್ತೇವೆ.

ಶ್ರೀ ರಾಜವರ್ಧನ್ (ರಾಜ್ಯ ಮೀನುಗಾರಿಕೆ ಸಚಿವರು) —ಮಾನ್ಯ ಉಪಾಧ್ಯಕ್ಷರೆ, ಎಲ್ಲಾ ಬೇಡಿಕೆ ಗಳ ಮೇಲೆ ಮಾನ್ಯ ಸದಸ್ಯರುಗಳು ಮಾತನಾಡಿದರು. ಆದರೆ ಮೀನುಗಾರಿಕೆ ಇಲಾಖೆಯ ಮೇಲೆ ಕೇವಲ ಇಬ್ಬರು ಸದಸ್ಯರು ಮಾತ್ರ ಮಾತನಾಡಿದರು. ಅವರು ಕರಾವಳಿ ಪ್ರದೇಶದಿಂದ ಬಂದಿರತಕ್ಕ ವರು. ಮೀನುಗಾರಿಕೆ ಇಲಾಖೆಯ ಮೇಲೆ ಬಹಳಷ್ಟು ಮಾತನಾಡುತ್ತಾರೆಂದು ನಾನು ಉತ್ತರ ಕೊಡಲಿಕ್ಕೆ ತಯಾರಾಗಿ ಬಂದಿದ್ದೆ. ಈ ಒಂದು ಇಲಾಖೆ ಬಹಳ ಚಿಕ್ಕ ಇಲಾಖೆ. ಸಮಾಜದಲ್ಲಿ ಕೇವಲ ಕಡು ಬಡತನದಲ್ಲಿರತಕ್ಕ ಬಡಜನರಿಗೆ ನೇರವಾಗಿ ಅವರ ಜೀವನ ಮಟ್ಟವನ್ನು ಉತ್ತಮಗೊಳಿಸುವಂತಹ ಕಾರ್ಯಕ್ರಮಗಳು ಈ ಇಲಾಖೆಯಲ್ಲಿವೆ. ಮೀನುಗಾರರ ಅನುಕೂಲಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ ಕರಾವಳಿ ಮೀನುಗಾರರಿಗೆ ಸಂಬಂಧಪಟ್ಟಹಾಗೆ ನಾನು ಹೇಳಲಿಕ್ಕೆ ಇಷ್ಟಪಡು ತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಈಗಾಗಲೇ ಎಲ್ಲವನ್ನು ಕೇಳಿದ್ದಾರೆ. ಕರಾವಳಿ ಮೀನುಗಾರರು ಅನೇಕ ವರ್ಷಗಳಿಂದ ಇಟ್ಟಿದ್ದಂತಹ ಬೇಡಿಕೆಗಳನ್ನು ಈ ಜನತಾ ಸರ್ಕಾರ ಈಡೇರಿಸಿದೆ. ಡೀಸಲ್ ಮೇಲಿನ ಸೇಲ್ಸ್‌ಟ್ಯಾಕ್ಸನ್ನು ಮನ್ನಾ ಮಾಡಿದ್ದೇವೆ. ರೈತರಿಗೆ ಯಾವರೀತಿ ಸುಸ್ತಿಬಡ್ಡಿಯನ್ನು ಮನ್ನಾ ಮಾಡಿದ್ದೇವೆ ಅದೇರೀತಿ ಕರಾವಳಿ ಮೀನುಗಾರರಿಗೆ ಅನುಕೂಲವಾಗುವಂತೆ ಕೆಲವೊಂದು ರಿಯಾಯಿತಿಗಳನ್ನು ತೋರಿಸಿದ್ದೇವೆ. ಒಳನಾಡು ಮೀನುಗಾರರು ಸುಮಾರು ೩೦ ಸಾವಿರ ಜನ ಇದ್ದಾರೆ. ಅವರು ಕೂಡ ಬಡತನ ರೇಖೆಗಿಂತ ಕೆಳಗೆ ಇದ್ದಾರೆ. ಯಾವುದೋ ಕಾರಣಗಳಿಂದ ಅವರಿಗೆ ಇದುವರೆಗೆ ಆದ್ಯತೆಯನ್ನು ಕೊಟ್ಟಿರಲಿಲ್ಲ. ಅವರನ್ನು ಸಹ ಗಮನಿಸಬೇಕಾದ ಕರ್ತವ್ಯ ಈ ಸರ್ಕಾರಕ್ಕೆ ಇದೆ. ಮಾನ್ಯ ಆಚಾರ್ಯರವರು ಮಾತನಾಡುತ್ತಾ ಒಳಗಾಡು ಮೀನುಗಾರರಿಗೆ ಬಡ್ಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಒದಗಿಸಲಾಗಿದೆಯೆಂದು ಹೇಳಿದರು. ಅವರು ಯಾವರೀತಿ ನೋಡಿದರೋ ನನಗೆ ಗೊತ್ತಿಲ್ಲ. ಒಳನಾಡು ಮೀನುಗಾರರಿಗೆ ೧೭೯ ಲಕ್ಷ ರೂಪಾಯಿ, ಅಂದರೆ ೧ ಕೋಟಿ ೭೯ ಲಕ್ಷದ ೫೮ ಸಾವಿರ ರೂಪಾಯಿಗಳನ್ನು ಇಟ್ಟಿದ್ದರೆ, ಕರಾವಳಿ ಮೀನುಗಾರರಿಗೆ ೨ ಕೋಟಿ ೧೭ ಲಕ್ಷದ ೪೨ ಸಾವಿರ ರೂಪಾಯಿ ಗಳನ್ನು ಇಟ್ಟಿದ್ದೇವೆ ಕರಾವಳಿ ಮೀನುಗಾರರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಹಾಗೆ ಆಗಿದೆ.

೬–೩೦ ಪಿ. ಎಂ.

ನಾವು ಒಳನಾಡು ಮೀನುಗಾರರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲಾಗಲಿಲ್ಲ. ಅದಕ್ಕಾಗಿ ವಿಶ್ವಬ್ಯಾಂಕಿನ ನೆರವಿನಿಂದ ಅವರಿಗೆ ಸಹಾಯ ಮಾಡಲು ಯೋಚಿಸಿದ್ದೇವೆ. ಅವರು ನಾಲ್ಕೈದು ರಾಜ್ಯ ಗಳನ್ನು ಆರಿಸಿದ್ದಾರೆ. ಅವುಗಳಲ್ಲಿ ಕರ್ನಾಟಕ ರಾಜ್ಯವೂ ಒಂದು. ಅವರ ಟೀಮೊಂದು ಹತ್ತು ಹದಿನೈದು ದಿವಸಗಳ ಹಿಂದೆ ಬಂದಿತ್ತು. ಮೊದಲನೇ ಸುತ್ತಿನ ಮಾತುಕತೆ ಮುಗಿಸಿದ್ದೇವೆ. ವಿಶ್ವಬ್ಯಾಂಕಿನಿಂದ ೧೫ ಕೋಟಿ ನೆರವು ಪಡೆದು ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡ ಬೇಕೆಂದು ಹೇಳಿ ಈಗಾಗಲೇ ನಾವು ಅದಕ್ಕೆ ಬೇಕಾದಂಥ ಪೇಪರ್‌ಗಳನ್ನು ಸಿದ್ಧಪಡಿಸಿದ್ದೇವೆ. ಇದರಿಂದ

ಈ ಯೋಜನೆಯಲ್ಲಿ ಒಳನಾಡು ಮೀನುಗಾರರಿಗೆ ಟ್ರೈನಿಂಗ್ ಮತ್ತು ಮಾರುಕಟ್ಟೆ ಸೌಲಭ್ಯ, ಒಳ್ಳೆಯ ದರ, ವಸತಿ ಸೌಲಭ್ಯ ಒದಗಿಸಿಕೊಡುವುದು ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದಕ್ಕಾಗಿ ೧೫ ಕೋಟಿ ವೆಚ್ಚ ಆಗಬಹುದು ಮತ್ತು ಕರಾವಳಿ ಮೀನುಗಾರರಿಗೆ ಸಾಕಷ್ಟು ಆದ್ಯತೆ ಕೊಟ್ಟಿಲ್ಲವೆಂದು ದೂರುಗಳು ಬಂದಿವೆ. ಅವರು ಕೂಲಿಗಾರರಾಗಿಯೇ ಉಳಿದಿದ್ದಾರೆ. ಅವರಿಗೆ ಒದಗಿಸಲಾಗಿರುವ ಅನುಕೂಲತೆಗಳನ್ನು ಯಾರೋ ಕೆಲವರು ಮಾತ್ರ ಪಡೆದು ಇವರನ್ನು ಕೂಲಿಗಾರರನ್ನಾಗಿ ನೇಮಿಸಿಕೊಂಡು ಹಣ ಗಳಿಸುತ್ತಿದ್ದಾರೆ. ಈ ಸೌಲಭ್ಯ ಬಡವನಿಗೆ ನೇರವಾಗಿ ಸಿಗುತ್ತಿಲ್ಲವಾದ ಕಾರಣದಿಂದ ನಾನು ತಮಿಳುನಾಡಿನಲ್ಲಿ ಪ್ರವಾಸ ಮಾಡಿದ್ದೆ. ಅಲ್ಲಿ ಯಾವ ರೀತಿ ಮೀನುಗಾರರಿಗೆ ಸಹಾಯ ಕೊಡುತ್ತಿದ್ದಾರೆ ಎಂದು ಅಧ್ಯಯನ ಮಾಡಿದ್ದೇನೆ. ಅಲ್ಲಿ ಎಫ್.ಎ.ಒ.—ಟೂ ಬೋಟ್‌ನ್ನು ಮಾಡಿದ್ದಾರೆ ಅರ್ಧ ಟನ್ ಕೆಪಾಸಿಟಿಯದ್ದು ಅದು ಸರ್ಫ್ ಲ್ಯಾಂಡಿಂಗ್ ಬೋಟ್. ಯಾವ ಬೀಚ್‌ನಲ್ಲೂ ಕೂಡ ಆ ಬೋಟ್‌ನ್ನು ಲ್ಯಾಂಡ್ ಮಾಡಬಹುದು. ಅಂದರೆ, ಯಾವುದೇ ಬಂದರಾಗಲಿ ಬೀಚ್ ಲ್ಯಾಂಡ್ ಆಗಲಿ ಯಾವುದೇ ಆಗಲಿ, ಅದು ಲ್ಯಾಂಡ್ ಮಾಡುತ್ತದೆ. ಅದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅಂತಹ ದೋಣಿಯನ್ನು ನಮ್ಮ ಕರಾವಳಿ ಮಿತ್ರರಿಗೂ ತೋರಿಸಬೇಕು ಮತ್ತು ನಮ್ಮ ಮೀನುಗಾರರಿಗೆ ಅದು ನೇರವಾಗಿ ಹೋಗಬೇಕು ಎಂದು ಯೋಚಿಸಿದ್ದೇನೆ. ಅದರ ೮ ಹೆಚ್. ಪಿ. ಇಂಜಿನ್ ಕೂಡ ಸೇರಿ ಅದರ ಬೆಲೆ ಐವತ್ತು ಸಾವಿರ ರೂಪಾಯಿ ಆಗಬಹುದು ಎಂದು ಅಂದಾಜು ಮಾಡಲಾಗಿದೆ. ಇಂತಹ ದೋಣಿಯನ್ನು ಕರಾವಳಿಯ ಮೀನುಗಾರರಿಗೆ ಕೊಟ್ಟಿಲ್ಲ. ಆ ಮೀನುಗಾರ ನಾಲ್ಕೈದು ಜನರು ಇರುವ ತನ್ನ ಸಣ್ಣ ಕುಟುಂಬದ ನಿರ್ವಹಣೆಗೆ ಇದರಿಂದ ಹೆಚ್ಚಿನ ಅನುಕೂಲವಾಗಬಹುದು. ಇನ್ನೊಬ್ಬರ ಕೈಕೆಳಗೆ ಕೆಲಸ ಮಾಡಿ ಆತ ಕೂಲಿಗಾರನಾಗಿ ಉಳಿಯಬೇಕಾದ ಪ್ರಮೇಯ ಇರುವುದಿಲ್ಲ. ಈ ಯೋಚನೆಯಿಂದ ಈ ಬೋಟ್‌ನ್ನು ನಮ್ಮ ಕರಾವಳಿಯಲ್ಲಿ ಇಂಟ್ರೊಡ್ಯೂಸ್ ಮಾಡಬೇಕೆಂದು ಈಗಾಗಲೇ ಯೋಚನೆ ಮಾಡಿದ್ದೇನೆ.

ಇನ್ನು ಮಾನ್ಯ ಸದಸ್ಯರಾದ ಪ್ರತಾಪಚಂದ್ರ ಶೆಟ್ಟಿಯವರು ಮೆರಿನ್ ಫಿಶರೀಸ್ ಬಗ್ಗೆ ಹೇಳಿ ಬೇರೆ ಬೇರೆ ಕಾಲದಲ್ಲಿ ಸಮುದ್ರಕ್ಕೆ ಮೀನುಗಾರಿಕೆ ಮಾಡಿಕೊಂಡು ಬರುತ್ತಾರೆ. ಇದನ್ನು ಕ್ರಮಬದ್ಧವಾಗಿ ಮಾಡಬೇಕೆಂದು ಹೇಳಿದ್ದಾರೆ. ಇದರಿಂದ ಅನೇಕ ತೊಂದರೆಗಳು ಆಗುತ್ತವೆ, ನಿಜ. ಈಗಾಗಲೇ ನಾವು ನಮ್ಮ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಎರಡು ಬೇರೆ ಬೇರೆ ಬಿಲ್‌ಗಳನ್ನು ನಾವು ಇಂಟ್ರೊಡ್ಯೂಸ್ ಮಾಡುತ್ತಿದ್ದೇವೆ. ಅದು ಯಾವುದು ಎಂದರೆ ಮೆರೈನ್ ಫಿಶರೀಸ್ ಬಿಲ್ ಇದು ಒಂದು. ಈ ಬಿಲ್‌ನಲ್ಲಿ ದೋಣಿಗಳು ಯಾವ ತೀರದಲ್ಲಿ ಕೆಲಸ ಮಾಡಬೇಕು ಎನ್ನುವ ನಿಯಂತ್ರಣ ಇದರಲ್ಲಿ ಬರುತ್ತದೆ. ಇನ್ನೊಂದು ಟರ್ಮಿನಲ್ ಅಥೋರಿಟಿ ಬಿಲ್. ಬಂದರಿನಲ್ಲಿ ಯಾವರೀತಿ ದೋಣಿಗಳನ್ನು ಕಂಟ್ರೋಲ್ ಮಾಡಬೇಕು. ರಿಜಿಸ್ಟ್ರೇಶನ್ ಮಾಡಬೇಕು ಎಂಬುದು ಮತ್ತು ರೆಗ್ಯುಲೇಶನ್ ಈ ಬಿಲ್‌ನಲ್ಲಿ ಬರುತ್ತದೆ. ಅದಕ್ಕಾಗಿ ಹೊಸದಾಗಿ ಈ ಎರಡು ಬಿಲ್‌ಗಳನ್ನು ತರುತ್ತಿದ್ದೇವೆ. ಹೌಸಿಂಗ್ ಫೆಸಿಲಿಟಿ ಬಗ್ಗೆ ಸೈಟುಗಳನ್ನು ಈಗಾಗಲೇ ಹಂಚುತ್ತಿದ್ದೇವೆ. ಆದರೆ ಹೌಸಿಂಗ್ ಫೆಸಿಲಿಟಿಯನ್ನು ಇದೇರೀತಿ ಕೊಡಲಿಕ್ಕೆ ಆಗಲಿಲ್ಲ. ಇನ್ನು ಮುಂದೆ ಹೌಸಿಂಗ್ ಫೆಸಿಲಿಟಿಯನ್ನು ಯಾವರೀತಿ ಮಾಡಬಹುದೆಂದು ಪರಿಶೀಲನೆ ಮಾಡುತ್ತಿದ್ದೇವೆ. ಅವರ ಕುಡಿಯುವ ನೀರಿನ ಸಮಸ್ಯೆ ಸರ್ಕಾರಕ್ಕೆ ಅರಿವಾಗಿದೆ. ಸಾಮಾನ್ಯವಾಗಿ ಡ್ರಿಂಕಿಂಗ್ ವಾಟರ್ ಸ್ಕೀಮ್‌ನಲ್ಲಿ ಇದನ್ನು ಮಾಡುವಂಥ ಕಾರ್ಯಕ್ರಮ ಇದೆ. ಇನ್ನು, ರಿಸರ್ವೇಶನ್ ಇನ್ ಫಿಶರೀಸ್ ಕಾಲೇಜ್ ಬಗ್ಗೆ—ಇದು ಕೃಷಿ ವಿಶ್ವವಿದ್ಯಾನಿಲಯಕ್ಕೆ ಬರುತ್ತದೆ. ಇದು ಕೃಷಿ ಮಂತ್ರಿಗಳಿಗೆ ಬರುವ ವಿಷಯವಾದರೂ ಕೂಡ, ಈಗಾಗಲೇ ಏನು ಮನವಿಗಳು ಬಂದಿವೆ ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗುವುದು. ಫಿಶರೀಸ್ ರೋಡುಗಳನ್ನು ಮಾಡುವ ಬಗ್ಗೆ ಲೋಕೋಪಯೋಗಿ ಸಚಿವರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಫಿಶರೀಸ್ ರೋಡ್‌ಗಳನ್ನೆಲ್ಲಾ ಪಿ.ಡಬ್ಲ್ಯು.ಡಿ ಗೆ ಟ್ರಾನ್ಸ್‌ಫರ್ ಮಾಡಬೇಕು, ಅವುಗಳ ವ್ಯವಸ್ಥೆಯನ್ನು ಅವರೇ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮತ್ತು ಗಂಗೊಳ್ಳಿ ನದಿಯನ್ನು ಸರ್ವಋತು ಬಂದರನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಇದನ್ನು ಮಾಡಬೇಕಾದರೆ ಅನೇಕ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಸಧ್ಯಕ್ಕೆ ಅದನ್ನು ಮಾಡುವಂಥ ಯೋಚನೆ ನಮಗೆ ಇಲ್ಲ. ಆದರೂ ಕೂಡ ಇದನ್ನು ಮುಂದೆ ಪರಿಶೀಲನೆ ಮಾಡಲಾಗುತ್ತದೆ ಎಂದು ಹೇಳುತ್ತೇನೆ. ಡಾಕ್ಟರ್ ಆಚಾರ್ಯ ಅವರು ಎಕ್ಸೈಸ್ ಡ್ಯೂಟಿ ರಿಯಾಯ್ತಿ ಕೊಡಬೇಕೆಂದು

ಹೇಳಿದ್ದಾರೆ. ಹೌದು ನಾವು ಸೇಲ್ಸ್ ಟ್ಯಾಕ್ಸ್ ರಿಯಾಯಿತಿ ಕೊಟ್ಟರೆ ಎಕ್ಸೈಸ್ ಡ್ಯೂಟಿ ರಿಯಾಯಿತಿ ಕೊಡುತ್ತೇವೆ ಎಂದು ಅವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಇನ್ನು ಟ್ಯಾಕ್ಸ್ ರಿಡಕ್ಷನ್ ಫಾರ್ ಸ್ಪೇರ್ಸ್ ಈಗಾಗಲೇ ರಿಯಾಯಿತಿಯನ್ನು ಕೊಟ್ಟಿದ್ದಾರೆ. ನಾಲ್ಕು ಪರ್ಸೆಂಟ್‌ನಿಂದ ಎರಡು ಪರ್ಸೆಂಟ್ ರಿಡಕ್ಷನ್ ಮಾಡಿದ್ದಾರೆ. ಫಿಶರಿ ರಿಕ್ವಿಸಿಶನ್ ನಾಲ್ಕು ಪರ್ಸೆಂಟ್‌ನಿಂದ ಒಂದು ಪರ್ಸೆಂಟ್ ಮಾಡಿದ್ದಾರೆ. ಹೀಗೆ ಅನೇಕ ವಿಚಾರಗಳಿವೆ ಮಾತನಾಡುವಂಥಾದ್ದು

ಶ್ರೀ ಪಿ. ರಾಮದೇವ್.—ವಿಮಾನುಗಾರಿಕಾ ಇಲಾಖೆ ಸಣ್ಣದು. ಇದನ್ನು ಒಪ್ಪಬಹುದು.

ಶ್ರೀ ರಾಜವರ್ಧನ್.—ಆದ್ದರಿಂದ ಈ ಬೇಡಿಕೆಯನ್ನು ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿನಗಿ (ಗೃಹ ಖಾತೆಯ ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೇ, ಈ ಕಾರಾಗೃಹ ಇಲಾಖೆ ಅತ್ಯಂತ ಒಂದು ಚಿಕ್ಕ ಇಲಾಖೆ. ಈ ಚಿಕ್ಕ ಇಲಾಖೆಯ ಮೇಲೆ ಯಾವ ಸದಸ್ಯರೂ ಕೂಡ ಟೀಕೆ ಟಿಪ್ಪಣಿ ಮಾಡದೇ ಇರುವುದು ನನಗೆ ಸಂತೋಷ ಎನಿಸುತ್ತದೆ,

ಅಧ್ಯಕ್ಷರು.—ಕಾರಾಗೃಹದಲ್ಲಿ ಮುಖ್ಯ ಮಂತ್ರಿಗಳು ಇದ್ದು ಬಂದಂಥ ಜಾಗ ಅದು ಹೇಗೆ ಚಿಕ್ಕದಾಗುತ್ತದೆ ?

ಶ್ರೀ ರಮೇಶ ಸಿ. ಜಿಗಜಿನಗಿ.—ಇದು ಸಮಾಜದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದಿರತಕ್ಕಂಥ ಇಲಾಖೆ, ಸಮಾಜದಲ್ಲಿ ಒಬ್ಬ ಮನುಷ್ಯ ಹಲವಾರು ಕಾರಣಗಳಿಂದ ತಪ್ಪು ಮಾಡಿ ಕಾರಾಗೃಹಕ್ಕೆ ಹೋದ ಮೇಲೆ ಆತನನ್ನು ಇಲ್ಲಿ ಇಟ್ಟುಕೊಳ್ಳಲಾಗುತ್ತದೆ. ಈ ಇಲಾಖೆಯಲ್ಲಿ ಮುಖ್ಯವಾಗಿ ಹೇಳುವುದಾದರೆ ಬಯಲು ಬಂಧೀಖಾನೆ ಬಗ್ಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬಯಲು ಬಂಧೀಖಾನೆ ರಾಜ್ಯದಲ್ಲೇ ಅಲ್ಲ, ಇಡೀ ದೇಶದಲ್ಲೇ ಅತ್ಯಂಥ ಒಂದು ಒಳ್ಳೆಯ ಮಟ್ಟದ ಬಯಲು ಬಂಧೀಖಾನೆಯಾಗಿದೆಯೆಂದು ಡಾಕ್ಟರ್ ಮುಲ್ಲಾರವರು ಹೇಳಿದ್ದಾರೆ. ಬೆಂಗಳೂರು ನಗರದ ಪತ್ರಿಕಾ ಕರ್ತರುಗಳನ್ನು ಇಲ್ಲಿಗೆ ಕರೆದುಕೊಂಡು ಹೋದಾಗ ಅವರು ಈ ಬಯಲು ಬಂಧೀಖಾನೆ ಬಗ್ಗೆ ಮೆಚ್ಚುಗೆಯನ್ನು ಸಹ ವ್ಯಕ್ತಪಡಿಸಿದ್ದಾರೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷ ಎನಿಸುತ್ತದೆ. ಸ್ವಾಮಿ, ಹೋದಸಲದ ಅಧಿವೇಶನದಲ್ಲಿ ಕೆಲವೊಂದು ಸುಧಾರಣೆಗಳನ್ನು ಮಾಡುತ್ತೇನೆಂದು ಹೇಳಿದ್ದೆ, ಅದರ ಪ್ರಕಾರ ಬಯಲು ಬಂಧೀಖಾನೆಯಲ್ಲಿ ಟಿ. ವಿ. ಹಾಕಿಸಲಾಗಿದೆ. ಕೆಲವು ಮಾನ್ಯ ಸದಸ್ಯರುಗಳು ಹಾಗೂ ಪತ್ರಿಕೆಗಳವರು ಕೂಡ ಜೈಲಿನಲ್ಲಿರತಕ್ಕ ಖೈದಿಗಳಿಗೆ ಬೆಳಗಿನ ವೇಳೆ ಗಂಜಿ ಕೊಡುತ್ತಿದ್ದಾರೆ, ಅದಕ್ಕೆ ಬದಲಾಗಿ ಉಪಹಾರದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡಿದ್ದರು. ಈ ಸಾರಿಯಿಂದ ಇಡ್ಲಿ ಮತ್ತು ಉಪ್ಪಿಟ್ಟು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಇನ್ನು ಖೈದಿಗಳಿಗೆ ಕೊಡತಕ್ಕ ಕೂಲಿ ಬಹಳ ಕಡಿಮೆ ಎನ್ನುವ ಅಭಿಪ್ರಾಯ ಮಾನ್ಯ ಸದಸ್ಯರುಗಳಿಂದಲೂ ಹಾಗೂ ಜನತೆಯಿಂದಲೂ ಬಂದಿತ್ತು, ಅದನ್ನು ಗಮನದಲ್ಲಿಟ್ಟುಕೊಂಡು ಸ್ಕಿಲ್ಡ್ ಲೇಬರ್ಸ್‌ಗೆ ೨ ರೂಪಾಯಿನಿಂದ ೨-೫೦ ಪೈಸೆಗೆ ಏರಿಸಿದ್ದೇವೆ ನಾನ್ ಸ್ಕಿಲ್ಡ್ ಲೇಬರ್ಸ್‌ಗೆ ೧-೫೦ ಇದ್ದುದನ್ನು ೧-೭೫ ಪೈಸೆ ನಿಗದಿ ಮಾಡಿದ್ದೇವೆ ಇದರಿಂದ ಸುಮಾರು ರೂ. ೫೦,೦೦೦ ಹೆಚ್ಚಿನ ಭಾರ ಸರ್ಕಾರಕ್ಕೆ ಬರುತ್ತದೆ. ಜೈಲು ಇಲಾಖೆಯಲ್ಲಿ ಕೆಲಸ ಮಾಡತಕ್ಕ ನೌಕರ ವರ್ಗದವರಿಗೆ ವೇತನ ಶ್ರೇಣಿಯಲ್ಲಿ ಬಹಳ ತಾರತಮ್ಯ ಇದೆಯೆಂದು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಹೇಳಿದ್ದರು ಪೋಲೀಸ್ ಇಲಾಖೆ ಮತ್ತು ಕಾರಾಗೃಹ ಇಲಾಖೆಯ ವೇತನ ಶ್ರೇಣಿಯ ತಾರತಮ್ಯವನ್ನು ಸರಿಪಡಿಸುವುದಕ್ಕಾಗಿ ಆಫಿಷಿಯಲ್ ಹೈಪವರ್ ಕಮಿಟಿಗೆ ಕಳುಹಿಸಿದ್ದೇವೆ ಬಹುಶಃ ಅದು ನೆರವೇರಬಹುದುದೆಂದು ನಾನು ಆಸೆ ಪಡುತ್ತೇನೆ ಕಾರಾಗೃಹ ಇಲಾಖೆ ಚಿಕ್ಕದಾದರೂ ಚೆನ್ನಾಗಿ ಕೆಲಸ ಮಾಡುತ್ತದೆಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಇಲಾಖೆಯಲ್ಲಿ ಕರಪ್ಷನ್ ನಡೆಯುವುದಕ್ಕೆ ಅವಕಾಶ ಇಲ್ಲ. ಇಲಾಖೆಗೆ ಸಂಬಂಧಪಟ್ಟಂತೆ ಯಾವುದನ್ನು ಕೊಳ್ಳಬೇಕಾದರೂ ಸರ್ಕಾರಿ ಡಿಪೋಗಳಿಂದಲೇ ಕೊಳ್ಳುತ್ತೇವೆ. ಕಂಟ್ರಾಕ್ಟ್‌ದಾರರಿಗೆ ಕೊಡುವುದಿಲ್ಲ. ಇನ್ನು ಹೆಚ್ಚಿಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ, ಮಾನ್ಯ ಸಭೆ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು)—ಮಾನ್ಯ ಅಧ್ಯಕ್ಷರೇ, ಇವತ್ತಿನ ಬೇಡಿಕೆಗಳ ಮೇಲೆ ನಿಜವಾದಂಥ ಚರ್ಚೆಯಾಗಲಿಲ್ಲ, ಸಮಂಜಸವಾದಂಥ ಚರ್ಚೆಯಾಗಲಿಲ್ಲ. ಬಹಳ ಪ್ರಾಮುಖ್ಯವಾದುದು ಬೇರೆ ಬೇರೆ ಖಾತೆಗಳ ಬೇಡಿಕೆಗಳು ಸದನದ ಮುಂದೆ ಇದ್ದಾಗ ಮಾನ್ಯ ಸದಸ್ಯರುಗಳಿಗೆ

ಸಾಕಷ್ಟು ಸಮಯವನ್ನು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಕೊಡಬೇಕಾಗಿತ್ತು. ಅದಕ್ಕೆ ಸರಿಯಾದ ಉತ್ತರ ಕೊಡುವುದಕ್ಕೆ ಸರ್ಕಾರಕ್ಕೂ ಸಾಕಷ್ಟು ಸಮಯ ಬೇಕಾಗಿತ್ತು. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ತಮ್ಮ ಖೋಟಾವನ್ನು ತೆಗೆದುಕೊಂಡಿದ್ದಾರೆ. ಅವರಿಗೆ ತೊಂದರೆಯಾಗಲಿಲ್ಲ, ಅದೇ ಸಮಾಧಾನ ಆದರೆ, ನನ್ನ ಸಹದ್ಯೋಗಿಗಳು ತಮ್ಮ ತಮ್ಮ ಖಾತೆಯ ವಿಚಾರದಲ್ಲಿ ಸವಿಸ್ತಾರವಾದ ಮಾಹಿತಿ ಕೊಡುವುದಾಗಲೀ ಕೈಗೊಂಡಂತ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ಕೊಡುವುದಾಗಲೀ ಸಾಧ್ಯವಾಗದೇ ಇದ್ದುದಕ್ಕಾಗಿ ವಿಷಾದಪಡುತ್ತೇನೆ; ನಾನು ೫ ನಿಮಿಷದಲ್ಲಿ ಮುಗಿಸುತ್ತೇನೆ. ೯ ಗಂಟೆಗೆ ರಾಜ್ಯಪಾಲರ ಹತ್ತಿರ ಹೋಗಬೇಕಾಗಿದೆ. ಈಗ ನಾನು ಏನು ಮಾಡ ಬಹುದು ಎಂದರೆ ಈ ಸದನದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನಿತರ ಸದಸ್ಯರು ಏನೊಂದು ಅಂಕಿಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಬಂದಂಥ ದೋಷಗಳನ್ನು ತಿದ್ದಲಿಕ್ಕೆ ಸಾಧ್ಯವಿದೆ ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ತೆರಿಗೆಯ ಬೆಳವಣಿಗೆ ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ. ಎನ್ನುವ ಮಾತನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಯಾವ ಆಧಾರದ ಮೇಲೆ ಹೇಳಿದರೋ ನನಗೆ ಗೊತ್ತಿಲ್ಲ. ಈಗ ೧೯೮೩–೮೪ನೇ ವರ್ಷದ ಬಗ್ಗೆ ಹೇಳುತ್ತೇನೆ ಹೋದ ವರ್ಷ ಕ್ಕಿಂತ ಶೇಕಡ ೧೪.೭೦ ರಷ್ಟು ಬೆಳವಣಿಗೆಯಾಗಿದೆ, ರಾಷ್ಟ್ರದಲ್ಲಿ ಇದೇ ಹೆಚ್ಚು. ಇದರ ನಂತರ ಬಂದಿರ ತಕ್ಕಂಥಾದ್ದು ರಾಜಸ್ಥಾನ ೧೧.೯೯ ಅದರ ನಂತರ ಬಂದಿದ್ದು ಆಂಧ್ರಪ್ರದೇಶ ೧೧.೭೭, ಅದರ ನಂತರ ಬಂದಿದ್ದು ಕೇರಳ ೧೦-೪೮, ಹೀಗೆ ೧೦.೫೧, ೮ ಪರ್ಸೆಂಟ್, ೭.೪೯ ಪರ್ಸೆಂಟ್ ಬೇರೆ ಬೇರೆ ರಾಜ್ಯ ಗಳದ್ದು ಇದೆ. ಆದ್ದರಿಂದ ನಾವು ಏನೊಂದು ಗುರಿಯನ್ನು ಮುಟ್ಟಬೇಕಾಗಿತ್ತೋ ಅದನ್ನು ಮುಟ್ಟಿದ್ದೇವೆ ಅದನ್ನು ಮಾಡುವಂಥ ವಿಶ್ವಾಸ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸರಿಯಾದಂಥ ಮಾಹಿತಿ ಸಿಗಲಿಲ್ಲವೆಂದು ಹೇಳಬೇಕಾಗುತ್ತದೆ.

ಇನ್ನು ನಾನು ಮಾಡಿದಂಥ ಪ್ರವಾಸದ ವಿಚಾರದಲ್ಲಿ ಬಹಳ ಆಸ್ಥೆವಹಿಸಿ ಕೆಲವು ಮಾತುಗಳನ್ನು ಆಡಿದ್ದಾರೆ, ರಾಜ್ಯದೊಳಗೆ ಪ್ರವಾಸ ಮಾಡಿರುವುದಕ್ಕಿಂತ ರಾಜ್ಯದ ಹೊರಗೆ ಜಾಸ್ತಿ ಮಾಡಿದ್ದಾರೆಂದು ಹೇಳಿದ್ದಾರೆ, ರಾಜ್ಯದಲ್ಲಿ ೪೧ ದಿವಸ ಮಾಡಿದ್ದರೆ, ಹೊರಗಡೆ ೬೮ ದಿವಸ ಮಾಡಿದ್ದೇವೆ, ಮಾನ್ಯ ವಿರೋಧ ಪಕ್ಷದ ನಾಯಕರು ೧೨೧ ದಿವಸ ಎಂದು ಹೇಳಿದ್ದಾರೆ. ಅದನ್ನು ಹೇಗ ಹೇಳಿದರೋ ಗೊತ್ತಿಲ್ಲ. ಬಹುಶ ನಾನು ಇವತ್ತು ಡೆಲ್ಲಿಗೆ ಹೋದರೆ, ಒಂದು ದಿನ ಅಲ್ಲಿದ್ದು ವಾಪಸ್ಸು ಬರುತ್ತೇನೆ. ಅದನ್ನು ಬಹುಶ ಮೂರು ದಿನಗಳೆಂದು ಲೆಕ್ಕಕ್ಕೆ ತೆಗೆದುಕೊಂಡಿರಬಹುದು. ಆದರೆ ಸರ್ಕಾರೀ ಲೆಕ್ಕದ ಪ್ರಕಾರ ೬೮ ದಿವಸ ಹೊರಗಡೆ, ೪೧ ದಿವಸ ಒಳಗಡೆ ಪ್ರವಾಸ ಮಾಡಿದ್ದೇನೆ. ಯಾವುದೇ ಒಂದು ವಿಷಯವನ್ನು ವಿಚಾರ ವಿಮರ್ಶೆ ಮಾಡಬೇಕಾದರೆ ಒಂದು ವಿಷಯ ತೆಗೆದುಕೊಂಡರೆ ಅರ್ಥವಾಗುವುದಿಲ್ಲ ೧೯೮೦ ನೇ ಇಸವಿಯಲ್ಲಿ ಹಿಂದಿನ ಮುಖ್ಯ ಮಂತ್ರಿಯವರು ೯೨ ದಿವಸ ಪ್ರವಾಸ ಮಾಡಿದ್ದಾರೆ. ೮೧ನೇ ಇಸವಿಯಲ್ಲಿ ೫೫ ದಿವಸ. ೮೨ನೇ ಇಸವಿಯಲ್ಲಿ ೭೩ ದಿವಸ. ರಾಜ್ಯದ ಹೊರಗಡೆ ಪ್ರವಾಸ ಮಾಡಿದ್ದಾರೆ ನಾನು ೬೮ ದಿವಸ ಮಾಡಿದ್ದೇನೆ. ಹೊರಗಡೆ ಹೋಗ ಬೇಕಾಗುತ್ತದೆ, ಹೆಚ್ಚಿಗೆ ಡೆಲ್ಲಿಗೆ ಹೋಗ ಬೇಕಾಗುತ್ತದೆ ಕೇಂದ್ರದ ಮಂತ್ರಿಗಳ ಜೊತೆ ಕೆಲಸ ಇದ್ದಾಗ ಹೋಗುತ್ತದೆ. ಮುಖ್ಯ ಮಂತ್ರಿಗಳ ಸೆಮಿನಾರ್ ಇದ್ದಾಗ ಹೋಗಬೇಕಾಗುತ್ತದೆ. ನನ್ನ ಪ್ರವಾಸದಿಂದ ಸರ್ಕಾರದ ಮೇಲೆ ಬಿದ್ದಿರತಕ್ಕ ಹಣದ ಭಾರ ಸುಮಾರು ಒಂದು ಲಕ್ಷದ ಮೂರು ಸಾವಿರ, ಇದರಲ್ಲಿ ೪ ಸಾರಿ ಹೆಲಿ ಕ್ಯಾಪ್ಟರ್ ಉಪಯೋಗಿಸಿದ್ದಕ್ಕಾಗಿ ೮೦.೦೦೦ ಬಿದ್ದಿದೆ, ೧೯೮೦ನೇ ಇಸವಿಯಲ್ಲಿ ಹಿಂದಿನ ಮುಖ್ಯ ಮಂತ್ರಿ ಯವರು ಮಾಡಿದ ಪ್ರವಾಸದಿಂದ ಸರ್ಕಾರದ ಮೇಲೆ ಬಿದ್ದಂಥ ಭಾರ ೧೭ ಲಕ್ಷದ ನಾಲ್ಕು ಸಾವಿರ. ೧೯೮೧ನೇ ಇಸವಿಯಲ್ಲಿ ೨೮,೦೨,೧೯೬. ೧೯೮೨ನೇ ಇಸವಿಯಲ್ಲಿ ೨೧,೦೦,೦೦೦ ರೂಪಾಯಿಗಳು ನನ್ನ ಪ್ರವಾಸದ ಖರ್ಚು ಹೆಲಿಕ್ಯಾಪ್ಟರ್ ಸೇರಿಸಿ ಹೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಸದಸ್ಯರು ಜಾತೀಯತೆ ವಿಚಾರದಲ್ಲಿ ಹೇಳಿದ್ದಾರೆ. ಬೆಂಗಳೂರು ಶಹರದಲ್ಲಿ ಹರಿಜನ ಗಿರಿಜನ ಪೋಲೀಸ್ ಆಫೀಸರ್ ಯಾರೂ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸರ್ಕಲ್ ಇನ್ಸ್‌ಪೆಕ್ಟರುಗಳು. ಹರಿಜನರೊಬ್ಬರು, ಗಿರಿಜನ ರೊಬ್ಬರು ಇದ್ದಾರೆಂದು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಕಳೆದ ೧ ವರ್ಷದಲ್ಲಿ ನಾವು ಸಾಮಾಜಿಕ ನ್ಯಾಯದ ದೃಷ್ಟಿಯನ್ನಿಟ್ಟುಕೊಂಡಿದ್ದೇವೆ. ಮೊದಲನೆಯ ವರ್ಷ ಆಡಳಿತಾತ್ಮಕ ದೃಷ್ಟಿಯಿಂದ ಬೇರೆ ಬೇರೆ ಖಾತೆಗಳಲ್ಲಿ ಸ್ವಾಭಾವಿಕವಾಗಿ ಕೆಲವು ಆಫೀಸರ್‌ಗಳ ಟ್ರಾನ್ಸ್‌ಫರ್ ಹೆಚ್ಚಿನ ಸಂಖ್ಯೆಯಲ್ಲಿ ಆಗಿದೆ. ಇದನ್ನು

ಯಾವ ಸರ್ಕಾರ ಬಂದರೂ ಕೂಡ ಮಾಡುತ್ತದೆ. ಅದಕ್ಕೆ ಕಾರಣ ಹೇಳಬೇಕಾದ್ದು ಇಲ್ಲ. ಚುನಾವಣೆ ಆದಾಗ, ಆದ ಮೇಲೆ ಬೇರೆ ಬೇರೆ ಕಾರಣಗಳಿಂದ ವರ್ಗಾವಣೆ ಆಗಿರುತ್ತದೆ. ಆಫೀಸರ್‌ಗಳನ್ನು ಎಲ್ಲಿ ಇಡಬೇಕು, ಬಿಡಬೇಕು ಎನ್ನುವ ಬಗ್ಗೆ ಭಿನ್ನಾಭಿಪ್ರಾಯವಿರುತ್ತದೆ. ಆದರೆ ಆ ಕೆಲಸಗಳನ್ನು ಮಾಡಲೇ ಬೇಕಾಗಿರುತ್ತದೆ. ಈಗ ಇದರಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್‌ಗಳಲ್ಲಿ ಎಸ್.ಸಿ.ಯವರು ೩ ಎಸ್.ಟಿ.ಯವರು ೨, ಅದರಲ್ಲಿ ಒಕ್ಕಲಿಗರು ೧೦, ಕೂರುಗೀಸ್ ೭, ಲಿಂಗಾಯತ್ ೭, ಮರಾಠಿ ೨, ಕುರುಬ ೧, ಗಂಗಕುರುಬ ೧, ನಾಯುಕ್ ೧, ಇತ್ಯಾದಿ, ಇದೆ. ಒಟ್ಟು ೪೯ ರಲ್ಲಿ ಈ ರೀತಿಯಾದ ಪೊಜಿಷನ್ ಇದೆ. ನಾನು ಗೃಹ ಖಾತೆಯನ್ನು ತೆಗೆದುಕೊಂಡ ಕಾಲದಲ್ಲಿ ಅಂದರೆ ಶ್ರೀ ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಏನು ಯಾವ ಒಂದು ಜಾತಿಯವರೇ ಅತ್ಯಂತ ಹೆಚ್ಚು ಇದ್ದು, ಪ್ರಭಾವವಿದ್ದವರು ಇದ್ದರೊಳಗೆ ಆ ಇಂಬ್ಯಾಲೆನ್ಸ್ ಏನಿತ್ತೋ ಅದನ್ನು ಸರಿಪಡಿಸಿದ್ದೇನೆ. ೧೩ ಜನ ಸೆಕ್ರೆಟರಿಗಳಲ್ಲಿ ಒಂದೇ ಜಾತಿ ಯವರು ಇದ್ದರೆ ಇವತ್ತು ಆ ಸಂಖ್ಯೆ ೮-೭ಕ್ಕೇ ಇಳಿದಿದೆ. ಯಾವುದೇ ಒಂದು ವರ್ಗಕ್ಕೆ ಅನ್ಯಾಯವಾಗದೆ ಹಾಗೆ ನಾವು ನೋಡುತ್ತಿದ್ದೇವೆ. ಒಂದು ಮಾತನ್ನು ಇಲ್ಲಿ ಬಹಳ ವಿಷಾದದಿಂದ ಹೇಳುತ್ತೇನೆ. ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಮತ್ತೊಬ್ಬ ಸದಸ್ಯರು ಸಹ ಪ್ರಸ್ತಾಪ ಮಾಡಿ ಹೇಳಿದರು. ಅದು ಏನೆಂದರೆ ಡೈರೆಕ್ಟರ್ ಆಫ್ ಬ್ಯೂರೋ ಆಫ್ ಎಕಾನಮಿಕ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್‌ನವರ ಬಗ್ಗೆ ಹೇಳಿದರು. ಅಲ್ಲಿ ಏನೋ ಒಂದು ತಿಕ್ಕಾಟ ಇರಬಹುದು, ಯಾವುದೋ ಒಬ್ಬ ಅಧಿಕಾರಿಗೂ ಅವರಿಗೂ ಭಿನ್ನಾಭಿಪ್ರಾಯವಿರಬಹುದು. ಅದನ್ನು ತಂದು ಇಲ್ಲಿ ಅಸೆಂಬ್ಲಿಯಲ್ಲಿ ಹಿಂದುಮುಂದೆ ನೋಡಿ ವಿಚಾರ ಮಾಡಿನೋಡದೇ ಹೇಳಿದರು. ಆ ರೀತಿಯಾಗಿ ಹೇಳಿದರೆ ಅನ್ಯಾಯ ವಾಗುತ್ತದೆ. ಅದೇ ರೀತಿಯಾಗಿ ಅಡಿಷನಲ್ ಚೀಫ್ ಸೆಕ್ರೆಟರಿಯಾವರಿಗೆ ಬಗ್ಗೆ ಸಹ ವಿಚಾರ ಬಂತು. ಅವರಿಗೆ ಈ ಮನೆಯಲ್ಲಿ ಸತ್ಯಾಂಶವನ್ನು ಹೇಳತಕ್ಕದರ ಬಗ್ಗೆ ಅವಕಾಶವಿರುವುದಿಲ್ಲ ಆದ್ದರಿಂದ ವಿಚಾರವನ್ನು ತಿಳಿದುಕೊಳ್ಳದೇ ಇದ್ದಕ್ಕಿದ್ದ ಹಾಗೆ ಆ ರೀತಿಯಾಗಿ ಮಾತನಾಡತಕ್ಕದ್ದು ಸರಿಯಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಡಾ॥ ಆಚಾರ್ಯ ಮತ್ತಿತರ ಕೆಲವು ಸದಸ್ಯರುಗಳು ಟ್ಯಾಕ್ಸ್‌ಗಳ ವಿಚಾರವನ್ನು ಹೇಳಿದರು. ಮಾನ್ಯ ಮಾನೆಯವರು ಇದೇ ರೀತಿಯಾಗಿ ಬೆಲ್ಲಕ್ಕೆ ಈಗ ೪ ಪರ್ಸೆಂಟ್ ಸಿಂಗಲ್ ಪಾಯಿಂಟ್ ಇದೆ, ಅದನ್ನು ಕಡಿಮೆ ಮಾಡಿ ಬೇಕಾದರೆ ಮಲ್ಟಿ ಪಾಯಿಂಟ್ ೨ ಪರ್ಸೆಂಟ್ ಮಾಡಿ ಎಂದು ಹೇಳಿದರು. ಇದರ ಬಗ್ಗೆ ಗಮನ ಹರಿಸುತ್ತೇನೆ. ಇದೇ ರೀತಿಯಾಗಿ ಬೀರ್, ಇಂಡಿಯನ್ ಮ್ಯಾನುಫ್ಯಾಕ್ಚರ್ ಲಿಕ್ಕರ್ಸ್ ಮೇಲೆ ಹಾಕಿರುವ ತೆರಿಗೆಯ ಬಗ್ಗೆ ಯೋಚನೆ ಮಾಡುತ್ತೇನೆ. ಮತ್ತು ಇದಕ್ಕೆ ಸಂಬಂಧಪಟ್ಟ ಬಿಲ್ ಬಂದಾಗ ಅನೌನ್ಸ್ ಮಾಡುತ್ತೇನೆ. ಆ ಮೇಲೆ ಡಾ॥ ಆಚಾರ್ಯ ರವರು ಪ್ರತಿಯೊಂದು ತಾಲ್ಲೂಕಿಗೂ ನೂರು ಮನೆಗಳನ್ನು ಕಟ್ಟಿಸತಕ್ಕ ಯೋಜನೆ ಏನಿದೆ ಅದನ್ನು ೧೫೦ಕ್ಕೆ ಹೆಚ್ಚಿಸಬೇಕೆಂದು ಹೇಳಿದರು. ಮತ್ತು ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಹೇಳಿದರು. ಇದಕ್ಕೆ ನಮಗೆ ಕೇಂದ್ರ ಸರ್ಕಾರದವರಿಂದ ಎಷ್ಟು ಹಣ ಸಿಗುತ್ತದೆಯೋ ಅಷ್ಟನ್ನೂ ಉಪಯೋಗ ಮಾಡಿಕೊಳ್ಳುವ ಹಾಗೆ ವ್ಯವಸ್ಥೆ ಮಾಡುತ್ತೇವೆ. ಇದರ ಬಗ್ಗೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಯಾವುದೇ ರೀತಿಯಾದ ಅನುಮಾನವೂ ಬೇಡ. ಇದೇ ರೀತಿಯಾಗಿ ಉಡುಪಿ ಮತ್ತು ಸಂಕೇಶ್ವರ, ಗದಗ್, ಬೆಟಗೇರಿಗಳಲ್ಲಿ ನೀರಿನ ಬಗ್ಗೆ ಹೇಳಿದರು. ಈ ಯೋಜನೆ ಬಗ್ಗೆ ಕೂಡ ಸರ್ಕಾರ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಕೊನೆಯದಾಗಿ ಒಂದು ಮಾತನ್ನು ಬಂಗಾರಪ್ಪನವರು ಹೇಳಿದರು, ರಾಜ್ಯದಲ್ಲಿ ಅರಾಜಕತೆ ಬೆಳೆದಿದೆ. ಅರಾಜಕತೆ ಎಲ್ಲಿ ಬೆಳೆದಿದೆಂದು ನಾನು ಕೇಳುತ್ತೇನೆ. ಈಗ ಇತ್ತೀಚೆಗೆ ಆದಂಥ ಘಟನೆಯನ್ನು ಬಿಟ್ಟರೆ ಪ್ರತಿಯೊಂದರಲ್ಲೂ ಸಹ ಅಪರಾಧಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಕೆಲವು ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತದೆಂದು ಹೇಳಿದರು, ಆದರೆ ಅದರಲ್ಲಿ ಇವತ್ತಿನ ದಿವಸ ಡಿಟೆಕ್ಷನ್ ರೇಟ್ ಜಾಸ್ತಿಯಾಗಿದೆ ೭೫ ರಿಂದ ೮೦ ರವರೆಗೆ ಹೋಗಿದೆ. ಹಿಂದೆ ಅಷ್ಟು ಆಗುತ್ತಾ ಇರಲಿಲ್ಲ ಈಗ ಬೆಂಗಳೂರಿನಲ್ಲಿದ್ದ ಶಾಂತಮಯವಾದ ವಾತಾವರಣ ಕೆಟ್ಟಿದ್ದಕ್ಕೆ ಕಾರಣರು ಯಾರು ? ಮೊದಲು ಬೆಂಗಳೂರು ಬಂದ್ ಮಾಡಿದರು, ಬೆಂಗಳೂರು ಬಂದ್ ಮಾಡುವುದಕ್ಕೆ ಕಾರಣ ಏನೂ ಇರಲಿಲ್ಲ; ನಿಜವಾಗಿಯೂ ಡಾ॥ ರಾಜಕುಮಾರ್‌ರವರ ಜೊತೆಯಲ್ಲಿ ಮಾತುಕತೆ ಆಡಲು ಸಿದ್ಧನಿರುವಾಗ, ಬಂದ್ ಮಾಡತಕ್ಕದ್ದು ಅವಶ್ಯಕತೆ ಇಲ್ಲವೆಂದು ನಾನು ಈ ಮನೆಯಲ್ಲಿ ಹೇಳಿದ್ದೆ. ಮತ್ತು ಆದರಿಂದ ದುಷ್ಪರಿಣಾಮವಾಗ ಬಹುದು, ಮಾತನಾಡಬೇಡಿ ಎಂದು ಹೇಳಿದ್ದೆ, ಅದಾದ ಮೇಲೆ ಒಂದು ಸಣ್ಣ ಘಟನೆ ಆಯಿತು, ಒಬ್ಬ ಬಸ್ ಕಂಡಕ್ಟರನನ್ನು ಒಬ್ಬ ಖಾಸಗಿ ವ್ಯಕ್ತಿ ಕೊಲೆ ಮಾಡಿದ ಇದರ ಬಗ್ಗೆ ಎಷ್ಟೊಂದು ದೊಡ್ಡ ಗಲಾಟೆ ಯಾಯಿತು. ಇದರಲ್ಲೂ ಸಹ ಸರ್ಕಾರದ ಯಾವ ಕೈವಾಡವೂ ಇಲ್ಲ. ಇದಾದ ನಂತರ ಮೊನ್ನೆ

ಇದಂಥದ್ದು ಹಿನೇ ಘಟನೆ. ರಾಜಕುಮಾರ್‌ರವರ ಮೇಲೆ ಹಲ್ಲೆ ಆಯಿತು. ಅದನ್ನು ಖಂಡಿಸಿದ್ದೇವೆ. ಒಕ್ಕೊರಲಿನಿಂದ ಖಂಡಿಸಿದ್ದೇವೆ. ಅದಕ್ಕೂ ಸರ್ಕಾರಕ್ಕೂ ಏನು ಸಂಬಂಧವಿದೆ ? ಇದಾದ ಕೂಡಲೇ ಮೊನ್ನೆ ನಡೆದಂಥ ಘಟನೆಯ ಬಗ್ಗೆ ಪ್ರತಿಭಟನೆ ಮಾಡಬಹುದಾಗಿತ್ತು, ಖಂಡನೆ ಮಾಡಬಹುದಾಗಿತ್ತು, ಅದಕ್ಕೆ ನಾನಾ ಮಾರ್ಗಗಳಿವೆ. ಅದನ್ನು ಮಾಡದೇ ಇದ್ದ ಕಿದ್ದ ಹಾಗೆ ಸಾರ್ವಜನಿಕರ ಆಸ್ತಿಯನ್ನು ಹಾಳು ಮಾಡುವುದು, ಚೂರಿ ಹಾಕುವುದು ಸರಿಯೇ ? ಮುನ್ನ ಎನ್ನತಕ್ಕವನನ್ನು ದಸ್ತಗಿರಿ ಮಾಡಿದರು, ಅನಂತರ ಅವನು ಸತ್ತು ಹೋದ. ಇದರ ಬಗ್ಗೆ ನನ್ನ ಹತ್ತಿರ ಮೆಡಿಕಲ್ ರಿಪೋರ್ಟ್ ಇದೆ, ಇನ್ನು ಫೈನಲ್ ರಿಪೋರ್ಟ್ ಬಂದಿಲ್ಲ. ಈಗ ಬಂದಿರುವ ವರದಿಯ ಪ್ರಕಾರವಾಗಿ ಪೋಲೀಸಿನವರು ಹೊಡೆದಿದ್ದರಿಂದ, ಚಿತ್ರಹಿಂಸೆಯಿಂದ ಸತ್ತಿದ್ದಲ್ಲವೆಂದರೆ ಅವನ ಹೃದಯ ಎನಾರ್ಜ್ ಆಗಿದೆ. ಈಗ ನಾವು ೪ ಜನ ಆಫೀಸರ್‌ನ್ನು ಹಿಂದುಮುಂದೆ ನೋಡದೇ ಸಸ್‌ಪೆಂಡ್ ಮಾಡಿದ್ದೇವೆ. ಏನೇ ಇರಬಹುದು ಸತ್ಯಾಂಶವೇನು ಎಂಬುದು ತಿಳಿಯದೇ ವಿನಾಕಾರಣ ಸಸ್‌ಪೆಂಡ್ ಮಾಡಕೂಡದು ನಾನು ಈಗಲೇ ಹೇಳಿ ಬಿಡುತ್ತೇನೆ, ಮೆಡಿಕಲ್ ಸರ್ಟಿಫಿಕೇಟ್‌ನಲ್ಲಿ, ಪೋಸ್ಟ್ ಮಾರ್ಟಮ್ ರಿಪೋರ್ಟಿನಲ್ಲಿ ಏನಾದರೂ ಚಿತ್ರಹಿಂಸೆಯಿಂದ ಸತ್ತಿದ್ದು ಅಲ್ಲವೆಂದು ಹೇಳಿ ಬಂದರೆ ನಾವು ಈ ಪೋಲೀಸ್ ಆಫೀಸರ್‌ನ್ನು ಏನು ಸಸ್‌ಪೆಂಡ್ ಮಾಡಿದ್ದೇವೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ನಾವು ಪೋಲೀಸಿನವರ ಮೇಲೆ ಅನಾವಶ್ಯಕವಾಗಿ ಡಿಮಾರಲೈಜ್ ಆಗುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಕೂಡದು. ಈ ಘಟನೆ ಹೇಗೆ ಆಯಿತು ಎನ್ನುವ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಹೇಗೆ ಆಯಿತು ಎನ್ನುವ ಬಗ್ಗೆ ಪೇಪರ್‌ನಲ್ಲಿ ಸುಳಿವು ಬಂದಿದೆ. ಅಲ್ಲಿಗೆ ಹೋಗಿ ರಾತ್ರೋರಾತ್ರಿ ೨೫ ಸಾವಿರ ಪತ್ರಿಕೆಯನ್ನು ಯಾವ ಉದ್ದೇಶದಿಂದ ಹಂಚಿದ್ದಾರೆ ? ಸರ್ಕಾರದ ವಿರುದ್ಧ ಏನಾದರೂ ಕಂಪ್ಲೇಂಟ್ ಇದೆಯೇ ? ಎಂದರೆ ಇಲ್ಲ. ಯಾರೂ ಸಹ ಸರ್ಕಾರದ ವಿರುದ್ಧ ಕಂಪ್ಲೇಂಟ್ ಕೊಡಲಿಲ್ಲ, ಆದರೆ ಇಂಥಾ ಒಂದು ಪರಿಸ್ಥಿತಿಯನ್ನು ಉಂಟು ಮಾಡಲಿಕ್ಕೆ ಇವರ ಹಿಂದೆ ಏನೋ ಇರಬೇಕು. ಮೊನ್ನೆಯ ದಿವಸ ನಾನು ಇರಲಿಲ್ಲ, ಮಾನ್ಯ ಮೈಕಲ್ ಫರ್ನಾಂಡೀಸ್‌ರವರು ಮಾತನಾಡುತ್ತಾ ಕಾಣದ ಕೈ ಕಾಣುತ್ತಿದೆ ಅಷ್ಟೇ ಅಲ್ಲ ಕಾಣದೇ ಇಲ್ಲವೆಂದು ಹೇಳಿದ್ದಾರೆ ಆದುದರಿಂದ ನಾವು ಅಂಥವರ ವಿರುದ್ಧ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಹಿಂದುಮುಂದು ನೋಡುವುದಿಲ್ಲವೆಂದು ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಅನಾವಶ್ಯಕವಾಗಿ ಸಾರ್ವಜನಿಕರಿಗೆ ಯಾರಾದರೂ ತೊಂದರೆ ಮಾಡುವುದಕ್ಕೆ ಹೋದರೆ ಅದನ್ನು ಸಹಿಸುವುದಕ್ಕಾಗುವುದಿಲ್ಲ. ಮಾನ್ಯ ಸೂರ್ಯನಾರಾಯಣ ರಾವ್‌ರವರು ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್‌ನ ಕೆಲಸಗಾರರ ಮೇಲೆ ಹಾಕಿರತಕ್ಕ ಕಟ್ಲೆಗಳನ್ನೆಲ್ಲಾ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರು. ಜನರಲ್ ಸ್ಟ್ರೈಕ್ ಜನವರಿ ೧೯೮೨ ರಂದು ಏನು ಆಯಿತು ಆಗ ೧೩ ಕೇಸ್‌ಗಳಲ್ಲಿ ...

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರೈಲು ರೋಕೋ ಅಜಿಟೇಷನ್‌ಗೆ ಸಂಬಂಧಪಟ್ಟ ಕೇಸ್‌ಗಳನ್ನು ಸಹ ವಾಪಸ್ಸು ತೆಗೆದುಕೊಳ್ಳಿ... ...

ಶ್ರೀ ರಾಮಕೃಷ್ಣ ಹೆಗಡೆ.—ಅದು ನಮ್ಮ ಕಕ್ಷೆಯೊಳಗೆ ಬರುವುದಿಲ್ಲ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ಅವರು ಒಪ್ಪಿಕೊಂಡರೆ ಆಗುತ್ತದೆ. ಅಧ್ಯಕ್ಷರೇ, ನಾನು ಮಂಡಿಸಿರತಕ್ಕ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಂಡು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The question is :

"That the respective sums not exceeding the amount provided in the list of Demands inclusive of the sums granted on account be granted to the Government to defray the charges which will come in course of payment during the financial year ending 31st day of March, 1985 in respect of Demand Nos. 4, 7, 14, 15, 16, 17, 18, 22, 23, 24, 27, 28, 36, 37, 38, 39, 40, 41, 5 and 6."

The motion was adopted and the sums were granted.

(As ordered by the Chair, the Motion of Demands for Grants adopted by the House are reproduced below.

DEMAND NO. 4 FISHERIES

Madam/Sir, on the recommendation of the Governor, I beg to move.

" That a sum not exceeding Rs. 4;26,63,000 on Revenue Account and Rs. 1,73,35,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Fisheries ".

DEMAND NO. 7—SMALL SCALE INDUSTRIES

Madam/Sir, on the recommendation of the Governor, I beg to move.

" That a sum not exceeding Rs. 21,64,72,000 on Revenue Account and Rs. 10,35,35,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Small Scale Industries ".

DEMAND NO. 14—TAXES ON INCOME, PROFESSIONS, SALES AND OTHER SERVICES

Madam/Sir, on the recommendation of the Governor, I beg to move.

" That a sum not exceeding Rs. 30,48,70,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Taxes on Income, Professions, Sales and other Services ".

DEMAND NO. 15—INSURANCE TREASURY AND ACCOUNTS ADMINISTRATION

Madam/Sir, on the recommendation of the Governor. I beg to move.

" That a sum not exceeding Rs. 6,49 99,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Insurance Treasury and Accounts Administration ".

DEMAND NO. 16—PENSION AND RETIREMENT BENEFITS

Madam/Sir, on the recommendation of the Governor, I beg to move.

" That a sum not exceeding Rs. 1,09,25.00,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Pension and Other Retirement Benefits ".

DEMAND No. 17—LOANS TO GOVERNMENT SERVANTS AND MISCELLANEOUS LOANS

Madam/Sir, on the recommendation of the Governor, I beg to move.

" That a sum not exceeding Rs. 33,49,00,000 on Capital Account be granted to the Government te defray the charges which will come in course of payment during the financial year ending 31st day of March 1985 in respect of Loans to Government Servants and Miscellaneous Loans ".

DEMAND No. 18—MISCELLANEOUS GENERAL SERVICES

Madam/Sir, on the recommendation of the Governor, I beg to move.

" That a sum not exceeding Rs. 7,58,73,000 on Revenue Account and Rs. 2,80,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Miscellaneous General Services'.

DEMAND No. 22—TAXES ON VEHICLES

Madam/Sir, on the recommendation of the Governor, I beg to move.

" That a sum not exceeding Rs. 2,99,90,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Taxes on Vehicles ".

DEMAND No. 23—POLICE AND FIRE SERVICES

Madam/Sir, on the recommendation of the Governor, I beg to move.

" That a sum not exceeding Rs. 71,38,09,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Police and Fire Services ".

DEMAND NO. 24--JAILS

Madam/Sir, on the recommendation of the Governor, I beg to move.

" That a sum not exceeding Rs. 3,04,69,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Jails ".

DEMAND NO. 27—MEDICAL SERVICES AND FAMILY WELFARE

Madam/Sir, on the recommendation of the Governor, I beg to move.

"That a sum not exceeding Rs. 1,09,21,96,000 on Revenue Account and Rs. 1,2,00,00 on capital account be granted to the Government to defray the charges which will come in course of payment during the financial year ending 31st day of March 1985 in respect of Medical Services and Family Welfare ".

DEMAND NO. 28—PUBLIC HEALTH

Madam/Sir, on the recommendation to the Governor, I beg to move.

" That a sum not exceeding Rs. 23,25,05,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Public Health "

DEMAND NO. 36—ELECTIONS

Madam/Sir, on the recommendation of the Governor, I beg to move.

" That a sum not exceeding Rs. 2,68,00,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Elections ".

DEMAND NO. 37—GOVERNOR, MINISTERS AND PUBLIC SERVICE COMMISSION

Madam/Sir, on the recommendation of the Governor, I beg to move.

" That a sum not exceeding Rs. 86,26,000 on Revenue Account be granted to the Government to defray the charges which will come in course of payment during the financial

year ending 31st day of March 1985 in respect of Governor, Ministers and Public Service Commission ".

DEMAND No. 38—SECRETARIAT

Madam/Sir, on the recommendation of the Governor, I beg to move.

" That a sum not exceeding Rs. 7,73,42,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Secretariat ".

DEMAND No. 39—DISTRICT ADMINISTRATION

Madam/Sir, on the recommendation of the Governor, I beg to move.

" That a sum not exceeding Rs. 11,98,70,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Dsitrict Administration ".

DEMAND No. 40—MISCELLANEOUS DEMANDS OF CHIEF MINISTER

Madam/Sir, on the recommendation of the Governor, I beg to move.

" That a sum not exceeding Rs. 7 80,46,000 on Revenue Account and Rs. 2,20,14,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Miscellaneous Demands of Chief Minister ".

DEMAND No 41—DEMANDS OF PLANNING DEPARTMENT

Madam/Sir, on the recommendation of the Governor, I beg to move.

" That a sum not exceeding Rs. 10 59,84,000 on Revenue Account and Rs. 12,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Area Development District Level Sub Plan etc ".

DEMAND NO. 5—INDUSTRIES

(EXCLUDING SMALL SCALE INDUSTRIES AND SERICULTURE)

Madam/Sir, on the recommendation of the Governor, I beg to move.

"That a sum not exceeding Rs. 11,01,08,000 on Revenue Account and Rs. 10,18,00,000 on Capital Account be granted to the Government to defray the charges which will come in course of payment during the financial year ending 31st day of March 1985 in respect of Industries, (Excluding Small Scale Industries and Sericulture)".

DEMAND NO, 6—MINES AND GEOLOGY

Madam/Sir, on the recommendation of the Governor, I beg to move.

"That a sum not exceeding Rs. 5,16,43,000 on Revenue Account be granted to the Government to defray the charges which will come in course of payment during the financial year ending 31st day of March 1985 in respect of Mines and Geology".

MR. SPEAKER.—The House now stands adjourned to meet tomorrow at 9-00 A M.

The House adjourned at Three minutes past Nine of the Clock to meet again at Nine of the Clock on Friday, the 16th day of March, 1984.